ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಮಂಗಳವಾರ, 9 ಜೂನ್ 2026
ಸಂಪುಟ 16, ಸಂಚಿಕೆ 76, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital



ತಿಂಡಿ ಪೊಟ್ಟಣಕ್ಕೆ ಸುದ್ದಿ ಪತ್ರಿಕೆ ಬಳಸುವಂತಿಲ್ಲ | ೦೭
ಪಿಒಕೆ ಸಂಘರ್ಷದಲ್ಲಿ 11 ಸಾವು | ೦೭
ಆಫ್ಘನ್ ವಿರುದ್ಧ ಭಾರತಕ್ಕೆ ಬೃಹತ್ ಗೆಲುವು | ೦೮

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಪೂರ್ವಭಾದ್ರ

ದಿನದ ಮಾತು

ನೀವು ಸುಖ ಪಡುವುದು ನಿಮ್ಮ ಅರಿವಿನಿಂದ, ಉಳಿದವರನ್ನೂ ಸುಖ ಪಡುವಂತೆ ಮಾಡುವುದು ನಿಮ್ಮ ಸದ್ಗುಣಗಳಿಂದ.

▲ನಾಣ್ನುಡಿ

ಬಕ್ರೀದ್ ಮತ್ತು ವಿವಿಧ ರಾಜ್ಯಗಳ ಗೋಹತ್ಯಾ ನಿಷೇಧ ಕಾನೂನುಗಳು

ಧರಣಿ ಮಂಡಲ

•ಕೆ.ಎನ್.ಶೈಲೇಶ್ ಹೊಳ್ಳ

•ಪುಟ ೬

ಕಿರುಸುದ್ದಿ

ಸಿನಿ ತಾರೆಯರಿಂದ ಮಾಹಿತಿ ಸಂಗ್ರಹಿಸಲು ಸಿಐಡಿ ನಿರ್ಧಾರ

ಶಿವಂ ಅಸೋಸಿಯೇಟ್ಸ್ ಬಹುಕೋಟಿ ವಂಚನೆ ಪ್ರಕರಣ

•**ಬೆಳಗಾವಿ:** ಶಿವಂ ಅಸೋಸಿಯೇಟ್ಸ್ ಬಹುಕೋಟಿ ರೂಪಾಯಿ ಠೇವಣಿ ವಂಚನೆ ಪ್ರಕರಣದ ತನಿಖೆಯನ್ನು ಸಿಐಡಿ ಚುರುಕುಗೊಳಿಸಿದೆ. ಪ್ರಕರಣದ ವಿವಿಧ ಆಯಾಮಗಳ ಕುರಿತು ಪರಿಶೀಲನೆ ನಡೆಸುತ್ತಿರುವ ಅಧಿಕಾರಿಗಳು, ಹಣದ ಹರಿವು ಹಾಗೂ ಹೂಡಿಕೆದಾರರ ಹಣದ ಬಳಕೆಯ ಕುರಿತ ಮಾಹಿತಿ ಸಂಗ್ರಹಿಸಲಾಗುತ್ತಿದೆ.ಕಳೆದ ಡಿಸೆಂಬರ್ 27ರಂದು ಬೆಳಗಾವಿಯಲ್ಲಿ ನಡೆದಿದ್ದ ಕನ್ನಡ ಉತ್ಸವ ಕಾರ್ಯಕ್ರಮವೂ ತನಿಖೆಯ ವ್ಯಾಪ್ತಿಗೆ ಬಂದಿದ್ದು, ಈ ಕಾರ್ಯಕ್ರಮಕ್ಕೆ ವೆಚ್ಚವಾದ ಹಣದ ಮೂಲದ ಕುರಿತು ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ ಎನ್ನಲಾಗಿದೆ. ➡ಪುಟ ೪

ಕಾದ ಕಬ್ಬಿಣ ಸೋರಿ ಒಂಬತ್ತು ಜನ ಸಾವು

•**ವಿಶಾಖಪಟ್ಟಣಂ:** ಆಂಧ್ರಪ್ರದೇಶದ ವಿಶಾಖಪಟ್ಟಣಂನಲ್ಲಿರುವ ರಾಷ್ಟ್ರೀಯ ಇಸ್ಪಾತ್ ನಿಗಮ್ ಲಿಮಿಟೆಡ್ (ವಿಜಾಗ್ ಸ್ಟೀಲ್ ಪ್ಲಾಂಟ್)ನಲ್ಲಿ ಸೋಮವಾರ ಸಂಭವಿಸಿದ ಭೀಕರ ಕೈಗಾರಿಕಾ ದುರಂತದಲ್ಲಿ ಕನಿಷ್ಠ ಒಂಬತ್ತು ಕಾರ್ಮಿಕರು ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿದ್ದಾರೆ.

ಫಿಲಿಪ್ಪೀನ್ಸ್‌ನಲ್ಲಿ ಪ್ರಬಲ ಕಂಪನಕ್ಕೆ 32 ಮಂದಿ ಸಾವು

•ಪುಟ ೭

ನೇಪಾಳ ಗಡಿಯ ಬಳಿ ಅಭಿಷೇಕ್ ಆಪ್ತನ ಸೆರೆ

•ಪುಟ ೭

24 ಭಾರತೀಯ ನಾವಿಕರಿದ್ದ ತೈಲ ಹಡಗಿನಲ್ಲಿ ಅಗ್ನಿ ಅವಘಡ

•ಪುಟ ೭



ಸವಾಲು ಎದುರಿಸಲು ಭಾರತ ಸಮಗ್ರ ಸಿದ್ಧ

•ಪುಟ ೭

ಸುದ್ದಿ ಸಮಗ್ರ

ಮೋದಿ ಪ್ರಧಾನಿಯಾಗಿ ಜೂನ್ 10ಕ್ಕೆ ಹೊಸ ದಾಖಲೆ

ಬಡವರ ಕಲ್ಯಾಣ, ದೇಶದ ಸಮಗ್ರ ಅಭಿವೃದ್ಧಿಗೆ ಆದ್ಯತೆ



ಸವಾಲುಗಳ ನಡುವೆಯೂ ಜಗದ ಮನ್ನಣೆ ಪಡೆದ ಭಾರತ

ಹಿಂದೆಲ್ಲ ಬಡವರ ಉದ್ಧಾರ ಎಂಬುದು ಘೋಷಣೆಯಾಗಿ ಉಳಿದು ಯೋಜನೆಗಳು ಅವರಿಗೆ ತಲುಪದೆ ಇದ್ದರೆ, ಈಗ ಅವನ್ನು ಪರಿಣಾಮಕಾರಿಯಾಗಿ ತಲುಪಿಸಲು ತಂತ್ರಜ್ಞಾನದ ಮೂಲಕವೇ ಸಾಧ್ಯವಾಗಿರುವುದು ಗಮನಾರ್ಹ. 2014ರ ಮೇ 26ರಂದು ಭಾರತದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನರೇಂದ್ರ ಮೋದಿಯವರು 2019ರ ಮೇ 30ರಂದು 2ನೇ ಅವಧಿಗೆ ಅಧಿಕಾರಕ್ಕೆ ಬಂದರು. ➡ಪುಟ ೪

ನಮೋ ನೇತೃತ್ವದ ಹೊಸ ಭಾರತ

•ವಿಶೇಷ ಪುಟ ೩

•**ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿಯವರು ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡು ಜೂ.10ಕ್ಕೆ ಹೊಸ ದಾಖಲೆ ಬರೆಯುವ ಹಿನ್ನೆಲೆಯಲ್ಲಿ ಬಡವರ ಕಲ್ಯಾಣ, ಯುವ, ಮಹಿಳೆಯರಿಗೆ ಉಜ್ವಲ ಅವಕಾಶ ನೀಡಿಕೆ, ವಿಶ್ವದರ್ಜೆಯ ಮೂಲಸೌಕರ್ಯಗಳ ಅಭಿವೃದ್ಧಿ, ಭಾರತೀಯರ ಜೀವನಮಟ್ಟ ಸುಧಾರಣೆ ಸೇರಿದಂತೆ ಭಾರತದ ಸಮಗ್ರ ಅಭಿವೃದ್ಧಿಗೆ ಅವರ ಸರಕಾರ ಆದ್ಯತೆ ನೀಡಿರುವುದನ್ನು ಇಡಿ ವಿಶ್ವವೇ ಗುರುತಿಸುವಂತೆ ಮಾಡಿದೆ.

ಬ್ಯಾಂಕಿಂಗ್ ವ್ಯವಹಾರವನ್ನೇ ಕಾಣದೆ ಖಾಸಗಿ ವಲಯದ ಸಾಲ, ಬಡ್ಡಿಯ ಹೊರೆಗಳಿಂದ ನಲುಗಿಹೋಗಿದ್ದ ದೇಶದ 45 ಕೋಟಿಗೂ ಅಧಿಕ ಬಡವರಿಗೆ ಜನಧನ್ ಯೋಜನೆಯ ಮೂಲಕ ಬ್ಯಾಂಕಿಂಗ್ ಕ್ಷೇತ್ರಕ್ಕೆ ಪ್ರವೇಶ ಕಲ್ಪಿಸಿ, ನೇರ ಲಾಭ ವರ್ಗಾವಣೆ(ಡಿಬಿಟಿ) ಯೋಜನೆಯ ಮೂಲಕ ಒಂದು ರೂಪಾಯಿ ಲಂಚವಿಲ್ಲದೆ ತಮ್ಮ ಖಾತೆಗಳಿಗೇ ನೇರವಾಗಿ ಸರಕಾರದ ಯೋಜನೆಗಳ ಲಾಭ ಪಡೆಯುವಂತೆ ಮಾಡಿರುವುದು, ಸ್ವಚ್ಛ ಭಾರತ್, ಪಿಎಂ ಆವಾಜ್, ಜಲ್‌ಜೀವನ್ ಮಿಷನ್, ಆಯುಷ್ಮಾನ್ ಭಾರತ್, ದೇಶದಲ್ಲಿ ಕೋಟ್ಯಂತರ ಶೌಚಾಲಯಗಳ ನಿರ್ಮಾಣ ಮೂಲಕ ಮಹಿಳೆಯರು, ಬಡವರಿಗೆ ಘನತೆಯ ಬದುಕು ಕಲ್ಪಿಸಿಕೊಡುವ ಜೊತೆಗೆ ವೈಜ್ಞಾನಿಕ, ತಂತ್ರಜ್ಞಾನ ಕ್ಷೇತ್ರಗಳಲ್ಲೂ ಅಭೂತಪೂರ್ವ ಪ್ರಗತಿ ಸಾಧಿಸುವ ಮೂಲಕ ಯುವಜನತೆಗೆ ವಿಪುಲ ಅವಕಾಶಗಳನ್ನು ಕಲ್ಪಿಸಿಕೊಡುವ ಮೂಲಕ ಜನತೆಯ ಜೀವನಮಟ್ಟ ಸುಧಾರಣೆಗೈದ ಹಿರಿಮೆ ಮೋದಿ ಸರಕಾರದ್ದಾಗಿದೆ. ➡ಪುಟ ೪

ನೆಹರು ದಾಖಲೆ ಮುರಿಯಲಿರುವ ಮೋದಿ

4,399 ದಿನಗಳ ಆಡಳಿತದ ಐತಿಹಾಸಿಕ ಮೈಲುಗಲ್ಲು

ಇದೇ ಜೂನ್ 10ರಂದು ಮೋದಿ ಅವರು ಪ್ರಧಾನಿಯಾಗಿ ನಿರಂತರವಾಗಿ 4,399 ದಿನಗಳ ಸೇವೆ ಸಲ್ಲಿಸಿ, ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ದಾಖಲೆಯನ್ನು ಮುರಿದ ಅತ್ಯಂತ ದೀರ್ಘಾವಧಿ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿಯಾಗಿ ಹೊರಹೊಮ್ಮಲಿದ್ದಾರೆ. ಮೈಲುಗಲ್ಲುಗಳು ಸಾಮಾನ್ಯವಾಗಿ ಸಾಂಕೇತಿಕ ಮಹತ್ವ ಹೊಂದಿದ್ದರೂ, ಒಂದು ಸರ್ಕಾರದ ನಿಜವಾದ ಮೌಲ್ಯಮಾಪನ ಅದು ದೇಶವನ್ನು ಎಷ್ಟರಮಟ್ಟಿಗೆ ಬದಲಾಯಿಸಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಆ ದೃಷ್ಟಿಯಿಂದ ನೋಡಿದರೆ, ಮೋದಿ ಯುಗವು ಸ್ವತಂತ್ರ ಭಾರತದ ಇತಿಹಾಸದಲ್ಲಿ ಅತ್ಯಂತ ಪರಿಣಾಮಕಾರಿ ಹಾಗೂ ನಿರ್ಣಾಯಕ ಅವಧಿಗಳಲ್ಲೊಂದಾಗಿ ಗುರುತಿಸಿಕೊಂಡಿದೆ. ಕಳೆದ 12 ವರ್ಷಗಳಲ್ಲಿ ಭಾರತವು ಜಾಗತಿಕ ವೇದಿಕೆಯಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಿಕೊಂಡಿದ್ದು, ದೇಶದ ಆಡಳಿತ ವ್ಯವಸ್ಥೆಯಲ್ಲಿಯೂ ಮಹತ್ವದ ಪರಿವರ್ತನೆಗಳು ನಡೆದಿವೆ. ➡ಪುಟ ೪

ವಯಸ್ಸಿನ ದಾಖಲೆ ನೀಡಿದರೆ ಅವಕಾಶ

ಐಡಿ ಇದ್ದರಷ್ಟೆ ಪಬ್ ಪ್ರವೇಶ: ಗೃಹ ಸಚಿವ



•**ಬೆಂಗಳೂರು:** ಯಾವುದೇ ವ್ಯಕ್ತಿಗೆ ವಯಸ್ಸಿನ ಅಧಿಕೃತ ಪುರಾವೆ (ಐಡಿ ಕಾರ್ಡ್) ಇಲ್ಲದೆ ಪಬ್, ಬ್ರೂವರೀಸ್, ಬಾರ್, ಕ್ಲಬ್ ಅಥವಾ ಮದ್ಯ ಸರಬರಾಜು ಮಾಡುವ ಸಂಸ್ಥೆಗಳ ಒಳಗೆ ಪ್ರವೇಶ ನೀಡಬಾರದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಸೋಮವಾರ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಈ ಸೂಚನೆ ನೀಡಿದ ಅವರು, ಸಂಸ್ಥೆಗಳು ಗ್ರಾಹಕರಿಗೆ ಪ್ರವೇಶ ನೀಡುವ ಮೊದಲು ಅಥವಾ ಮದ್ಯವನ್ನು ಸರಬರಾಜು ಮಾಡುವ ಮುನ್ನ ಸರ್ಕಾರ ನೀಡಿದ ಅಧಿಕೃತ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ವಯಸ್ಸನ್ನು ದೃಢೀಕರಿಸಿಕೊಳ್ಳಬೇಕು. ಒಂದು ವೇಳೆ, ಅಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಮಾಡುವ ಅಥವಾ ಅಪ್ರಾಪ್ತರ ಮದ್ಯಪಾನಕ್ಕೆ ಪ್ರಚೋದನೆ ನೀಡುವ ಯಾವುದೇ ಸಂಸ್ಥೆಯ ವಿರುದ್ಧ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು. ➡ಪುಟ ೪

ನಿರ್ಧಾರಕ್ಕೆ ಕಾರಣ

ಬೆಂಗಳೂರಿನಲ್ಲಿ ಹದಿಹರೆಯದವರು ಮತ್ತು ಯುವಜನರಲ್ಲಿ ಹೆಚ್ಚುತ್ತಿರುವ ಮದ್ಯಪಾನ ಹಾಗೂ ಮಾದಕ ದ್ರವ್ಯಗಳ ಬಳಕೆಯ ಬಗೆಗಿನ ಆತಂಕದ ಹಿನ್ನೆಲೆಯಲ್ಲಿ ಈ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರಿನ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಕ್ರೈಸ್ಟ್ ವಿಶ್ವವಿದ್ಯಾಲಯ ಮತ್ತು ಮಣಿಪಾಲದ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಸಂಶೋಧಕರು ನಡೆಸಿದ ಸಂಶೋಧನೆಯಲ್ಲಿ ನಗರದ ಪ್ರತಿ ಮೂವರು ಹದಿಹರೆಯದವರಲ್ಲಿ ಒಬ್ಬರು ಮದ್ಯ ಅಥವಾ ತಂಬಾಕು ಬಳಕೆಯಿಂದಾಗಿ ಆರೋಗ್ಯ ಸಮಸ್ಯೆಗಳನ್ನು ಎದುರಿಸುವ ಅಪಾಯದಲ್ಲಿದ್ದಾರೆ ಎಂಬ ಆಘಾತಕಾರಿ ವಿಷಯ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಸಚಿವರು ಈ ನಿರ್ಧಾರ ಕೈಗೊಂಡಿದ್ದಾರೆ.

ಮದ್ಯ ಪೂರೈಕೆಗೂ ನಿರ್ಬಂಧ



ಪ್ರಮುಖ ನಿರ್ದೇಶನಗಳು

1. ಯಾವುದೇ ವ್ಯಕ್ತಿಗೆ ವಯಸ್ಸಿನ ಅಧಿಕೃತ ಪುರಾವೆ (ಐಡಿ ಕಾರ್ಡ್) ಇಲ್ಲದೆ ಪಬ್, ಬ್ರೂವರೀಸ್, ಬಾರ್, ಕ್ಲಬ್ ಅಥವಾ ಮದ್ಯ ಸರಬರಾಜು ಮಾಡುವ ಸಂಸ್ಥೆಗಳ ಒಳಗೆ ಪ್ರವೇಶ ನೀಡಬಾರದು.
2. ಸಂಸ್ಥೆಗಳು ಗ್ರಾಹಕರಿಗೆ ಪ್ರವೇಶ ನೀಡುವ ಮೊದಲು ಅಥವಾ ಮದ್ಯವನ್ನು ಸರಬರಾಜು ಮಾಡುವ ಮುನ್ನ ಸರ್ಕಾರ ನೀಡಿದ ಅಧಿಕೃತ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ವಯಸ್ಸನ್ನು ದೃಢೀಕರಿಸಿಕೊಳ್ಳಬೇಕು.
3. ಅಪ್ರಾಪ್ತ ವಯಸ್ಕರಿಗೆ ಮದ್ಯ ಸರಬರಾಜು ಮಾಡುವ ಅಥವಾ ಅಪ್ರಾಪ್ತರ ಮದ್ಯಪಾನಕ್ಕೆ ಪ್ರಚೋದನೆ ನೀಡುವ ಯಾವುದೇ ಸಂಸ್ಥೆ ವಿರುದ್ಧ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ➡ಪುಟ ೪

ಕೈನಿಂದ ಖರ್ಗೆ, ಖೇರಾ, ಮನ್ಸೂರ್, ಬಿಜೆಪಿಯಿಂದ ನಾಗರಾಜ್

ರಾಜ್ಯಸಭೆಗೆ ನಾಲ್ವರ ಅವಿರೋಧ ಆಯ್ಕೆ?

ಜೂ.11ಕ್ಕೆ ಫಲಿತಾಂಶ ಪ್ರಕಟ

•**ಬೆಂಗಳೂರು:** ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭೆಯ 4 ಸದಸ್ಯ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪವನ್ ಖೇರಾ ಹಾಗೂ ಮನ್ಸೂರ್ ಅಲಿ ಖಾನ್ ಹಾಗೂ ಬಿಜೆಪಿ ಅಭ್ಯರ್ಥಿ ಪ್ರೊ. ಎಂ.ನಾಗರಾಜ್ ಅವಿರೋಧವಾಗಿ ಆಯ್ಕೆಯಾಗಿ ರಾಜ್ಯಸಭೆ ಪ್ರವೇಶಿಸಲಿದ್ದಾರೆ. ವಿಧಾನಸಭೆಯಲ್ಲಿ ಶಾಸಕರ ಸಂಖ್ಯಾಬಲದಲ್ಲಿ ಕಾಂಗ್ರೆಸ್ ಪಕ್ಷದ ಮೂವರು ಅಭ್ಯರ್ಥಿಗಳು ಗೆಲ್ಲಲು ಸಾಧ್ಯವಿದೆ. ಬಿಜೆಪಿಯ ಒಬ್ಬ ಅಭ್ಯರ್ಥಿ ಗೆಲ್ಲಬಹುದಾಗಿದೆ. ಈ ಹಿನ್ನೆಲೆಯಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ಗೆಲ್ಲಲು ಸಾಧ್ಯವಾಗುವಷ್ಟು ಶಾಸಕರ ಸಂಖ್ಯಾಬಲ ಇಲ್ಲದಿರುವ ಹಿನ್ನೆಲೆ ಜೆಡಿಎಸ್ ಈ ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. ➡ಪುಟ ೪



ರಾಜ್ಯಸಭೆಗೆ ಬಿಜೆಪಿ ಅಭ್ಯರ್ಥಿಯಾಗಿ ಪ್ರೊ. ಎಂ. ನಾಗರಾಜ್ ಸೋಮವಾರ ನಾಮಪತ್ರ ಸಲ್ಲಿಸಿದರು. ಬಿ.ಎಸ್. ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ಇದ್ದರು.

5 ಸ್ಥಾನ ಗೆಲ್ಲಲು ಕೈ ರಣತಂತ್ರ •ಪುಟ ೪

ಲೋಕಸಭಾ ಸ್ಪೀಕರ್‌ಗೆ ಬೆಂಬಲ ಪತ್ರ: ಸಂಸದೆ ಕಾಕೋಲಿ

20 ಟಿಎಂಸಿ ಸಂಸದರು ಎನ್‌ಡಿಎಗೆ?

•**ಹೊಸದಿಲ್ಲಿ:** ಟಿಎಂಸಿ ವರಿಷ್ಠರಾದ ಮಮತಾ ಬ್ಯಾನರ್ಜಿ ಅವರು ಇಂಡಿ ಕೂಟದ ಸಭೆಗೆ ಹಾಜರಾಗಿ ಮತ್ತೆ ಕೂಟದ ಜತೆ ಕೈಜೋಡಿಸಲು ಯತ್ನಿಸುತ್ತಿರುವಾಗಲೇ, ಇತ್ತ ಪಶ್ಚಿಮ ಬಂಗಾಳದ 20 ಸಂಸದರು ಎನ್‌ಡಿಎ ಸೇರಲು ಬಯಸಿದ್ದು, ಈ ಬಗ್ಗೆ ಲೋಕಸಭಾಧ್ಯಕ್ಷರಿಗೆ ಪತ್ರವನ್ನೂ ಬರೆದಿರುವುದಾಗಿ ಟಿಎಂಸಿ ಸಂಸದೆ ಕಾಕೋಲಿ ಘೋಷ್ ಡಾಸ್ತಿದಾರ್ ಸೋಮವಾರ ಹೇಳಿದ್ದಾರೆ.



ಕಾಕೋಲಿದಾಸ್ ಅವರನ್ನು ಇತ್ತೀಚೆಗೆ ಟಿಎಂಸಿ ಸಚೇತಕ ಸ್ಥಾನದಿಂದ ವಜಾಗೊಳಿಸಲಾಗಿತ್ತು. ಟಿಎಂಸಿ ಸಂಸದರು ಮಮತಾ ಬ್ಯಾನರ್ಜಿ ಅವರ ಅಳಿಯ ಅಭಿಷೇಕ್ ಭಟ್ಟಾಚಾರ್ಯ ಅವರ ವಿರುದ್ಧ 60ಕ್ಕೂ ಅಧಿಕ ಟಿಎಂಸಿ ಶಾಸಕರು ತಿರುಗಿಬಿದ್ದ ಬಳಿಕ , ಮಮತಾ ಬ್ಯಾನರ್ಜಿ ಅವರು ಅಭಿಷೇಕ್ ಭಟ್ಟಾಚಾರ್ಯ ಅವರ ಅನಿಯಂತ್ರಿತ ಅಧಿಕಾರಕ್ಕೆ ಒಂದಷ್ಟು ಕತ್ತರಿ ಹಾಕಿದ್ದರು. ಆದರೆ ಅನಂತರವೂ ಭಟ್ಟಾಚಾರ್ಯ ಅವರ ನಿಕಟವರ್ತಿ ಡೆರೆಕ್ ಒಬ್ರೀನ್ ಮತ್ತು ಡೋಲಾ ಸೇನ್ ಅವರನ್ನೇ ಜಂಟಿ ಕಾರ್ಯದರ್ಶಿಗಳನ್ನಾಗಿಸಿದ್ದರು. ಇದೀಗ ಟಿಎಂಸಿ ಸಂಸದರೂ ತಿರುಗಿಬಿದ್ದಿರುವುದು ಟಿಎಂಸಿಗೆ ತೀವ್ರ ಆಘಾತವುಂಟು ಮಾಡಿದೆ.

ಸುಮಾರು 20 ತೃಣಮೂಲ ಕಾಂಗ್ರೆಸ್ ಸಂಸದರು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಔಪಚಾರಿಕವಾಗಿ ಪತ್ರ ಬರೆದು ನಾವು ಎನ್‌ಡಿಎಯ ಭಾಗವಾಗಿರಲು ಬಯಸುವುದಾಗಿ ತಿಳಿಸಿದ್ದಾರೆಂದು ಕಾಕೋಲಿದಾಸ್ ಘೋಷ್ ಸುದ್ದಿಗಾರರಿಗೆ ತಿಳಿಸಿದರು. ಇನ್ನೊಬ್ಬ ಟಿಎಂಸಿ ಸಂಸದೆ ಶರ್ಮಿಳಾ ಸರ್ಕಾರ್ ಸುದ್ದಿಜಾಲವೊಂದರ ಜತೆ ಮಾತನಾಡಿ, ನಾವು 20 ಮಂದಿ ಟಿಎಂಸಿ ಸಂಸದರು ಪ್ರತ್ಯೇಕ ಗುಂಪನ್ನು ರಚಿಸಿಕೊಂಡಿದ್ದು, ಎನ್‌ಡಿಎಗೆ ಬೆಂಬಲ ನೀಡಲಿದ್ದೇವೆ. ಕಾಕೋಲಿ ಘೋಷ್ ಅವರು ನಮ್ಮ ಮುಖ್ಯ ಸಚೇತಕರಾಗಿದ್ದು, ಶತಾಬ್ದಿ ರಾಯ್ ನಮ್ಮ ಉಪನಾಯಕ ಎಂದರು. ➡ಪುಟ ೪

ಮಧ್ಯಪ್ರಾಚ್ಯ: ಮತ್ತೆ ಸಂಘರ್ಷ

ಇಸ್ರೇಲ್-ಇರಾನ್ ದಾಳಿ-ಪ್ರತಿದಾಳಿ, ಪ್ರಾದೇಶಿಕ ಕದನ ವಿರಾಮ ಭೀತಿ

•**ದುಬೈ:** ಪೂರ್ಣ ಪ್ರಮಾಣದ ಪ್ರಾದೇಶಿಕ ಯುದ್ಧದ ಬೆದರಿಕೆಯೊಡ್ಡಿದ ಇಸ್ರೇಲ್ ಜತೆಗಿನ ದಾಳಿ ಪ್ರತಿದಾಳಿಯ ನಂತರ ಇರಾನಿನ ಮಿಲಿಟರಿ ಜಂಟಿ ಕಮಾಂಡ್ ಸೋಮವಾರ ಆಕ್ರಮಣಕಾರಿ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸುವುದಾಗಿ ಘೋಷಿಸಿದೆ.

ಅಮೆರಿಕ ಎರಡು ತಿಂಗಳ ಹಿಂದೆ ಟೆಹ್ರಾನ್‌ನೊಂದಿಗೆ ಕದನ ವಿರಾಮ ಏರ್ಪಡಿಸಿದ ನಂತರ ಉಭಯ ದೇಶಗಳ ನಡುವೆ ನಡೆದ ಮೊದಲ ನೇರ ದಾಳಿ ಇದಾಗಿದೆ. ಫೆ.28ರಂದು ಇರಾನ್ ಮೇಲಿನ ದಾಳಿಯೊಂದಿಗೆ ಅಮೆರಿಕ ಮತ್ತು ಇಸ್ರೇಲ್ ಪ್ರಾರಂಭಿಸಿದ ಈ ಯುದ್ಧ, ಜಾಗತಿಕ ಇಂಧನ ಮತ್ತು ಆಹಾರದ ಬೆಲೆಗಳನ್ನು ಹೆಚ್ಚಿಸುವ ಮೂಲಕ ಜಾಗತಿಕ ಆರ್ಥಿಕತೆಯನ್ನು ಅಲುಗಾಡಿಸಿದೆ. ಏಪ್ರಿಲ್ ತಿಂಗಳ ಕದನ ವಿರಾಮವನ್ನು ಕಾಯಂ ಶಾಂತಿ ಒಪ್ಪಂದವಾಗಿ ಪರಿವರ್ತಿಸಲು ಅಧಿಕಾರಿಗಳಿಗೆ ಸಾಧ್ಯವಾಗಿಲ್ಲ. ➡ಪುಟ ೪

ದೆಹಲಿ ಬಿಸಿಲಿಗೆ ಜಿರಳೆಗಳು ಒಣಗಿದವೇ?



ರಾಘವಾಂಕಣ
•ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com

ಕಾಕ್ರೋಚ್ ಜನತಾ ಪಾರ್ಟಿಯವರು ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಸಲು ಕರೆಕೊಟ್ಟಿದ್ದ ಜನಾಂದೋಲನ ಕೊನೆಗೂ ಯಶಸ್ವಿಯಾಗಿ ನಡೆದಿದೆ. ಈ ಪ್ರದರ್ಶನ ಹಿಂಸಾಚಾರ ಗಲಭೆ ಇತ್ಯಾದಿಗಳಿಲ್ಲದೆ ಶಾಂತಿಯುತವಾಗಿಯೇ ನಡೆಯಲಿದೆ ಎಂದು ಪಕ್ಷದ ಅಧ್ಯಕ್ಷ ಸೇರಿದಂತೆ ಹಲವಾರು ಪದಾಧಿಕಾರಿಗಳು ಕೊಟ್ಟ ಹೇಳಿಕೆಯಂತೆಯೇ, ಯಾವುದೇ ಅಹಿತಕರ ಘಟನೆಗಳಿಲ್ಲದೇ ಅತ್ಯಂತ ಶಾಂತಿಪೂರ್ವಕವಾಗಿ ನಡೆಯಿತು ಎಂಬುದು ಸಂತೋಷದ ವಿಷಯವೇ ಹೌದು. ಮಾತ್ರವಲ್ಲದೇ, ಈ ಆಂದೋಲನದ ದಿನ ದೇಶದ ಜನತೆಗೆ ಸಿಕ್ಕ ನಗೆಬುಗ್ಗೆಗಳು ಜನರ ಆರೋಗ್ಯವನ್ನು ಇನ್ನೂ ಹೆಚ್ಚಿಸಿವೆ ಎಂಬುದೇ ನನ್ನ ಅಭಿಪ್ರಾಯ. ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾದ ಹಿನ್ನೆಲೆಯಲ್ಲಿ, ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು, ಶಿಕ್ಷಣಮಂತ್ರಿಯ ರಾಜೀನಾಮೆ ಪಡೆಯುವ ಉದ್ದೇಶದಿಂದ ಪ್ರಾರಂಭವಾದ ಈ ಆಂದೋಲನ ಮತ್ತು ಪ್ರತಿಭಟನೆ ನಿಜಕ್ಕೂ ನಡೆಯಬೇಕಾದದ್ದೇ. ಆದರೆ ಇವರುಗಳು ಪ್ರತಿಭಟನೆಯ ಹೆಸರಿನಲ್ಲಿ ನಡೆಸಿದ ರಾಜಕೀಯ, ಅವರುಗಳ ಅನಾನುಭವ ಮತ್ತು ಉದ್ವೇಗದಲ್ಲಿ ಬಹುಶಃ ಸ್ವಲ್ಪ ಹೆಚ್ಚೇ ಆಯಿತು. ಇದೇ ಕಾರಣಕ್ಕೆ ಇವರುಗಳ ಮೊನ್ನೆಯ ಪ್ರತಿಭಟನೆ ಮುಚ್ಚಳ ತೆರೆದ ಎರಡೇ ಸೆಕೆಂಡಿಗೆ ಮಾಯವಾಗುವ ಗೋಲಿಸೋಡಾದ ಗುಳ್ಳೆಗಳಂತೆ ಹೇಳಹೆಸರಿಲ್ಲದಂತೆ ಕಾಣೆಯಾಯಿತು. ಮಾತ್ರವಲ್ಲ, ನೀಟ್ ಪರೀಕ್ಷೆಯ ವಿಷಯವೊಂದನ್ನು ಬಿಟ್ಟು, ನಿರುದ್ಯೋಗ,



ಎಲ್ಜಿಬಿಟಿಕ್ಯೂ, ರೈತರ ಹೋರಾಟ, ಗ್ಲೋಬಲ್ ವಾರ್ಮಿಂಗ್, ಇವಿಎಂ, ಹಿಂದೂ ಮುಸ್ಲಿಂ, ಬಾಬ್ರಿ ಮಸೀದಿ, ಕಾಶ್ಮೀರ, ಆಝಾದಿ ಸೇರಿದಂತೆ ಬೇರೆಲ್ಲಾ ವಿಷಯಗಳೂ ಚರ್ಚೆಯಾದವು. ಅಷ್ಟೆಲ್ಲಾ ಚರ್ಚೆ ಹುಟ್ಟುಹಾಕಿ, ಕೊನೆಗೂ ಇವರುಗಳು ಸಾಧಿಸಿದ್ದು ಪೂರ್ತಿ ಶೂನ್ಯವಷ್ಟೇ. ಆದರೆ ಮುಖವುಳಿಸಿಕೊಳ್ಳಲಿಕ್ಕೆ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಏಳುದಿನಗಳ ಗಡುವು ಕೊಟ್ಟು, ಜಿರಳೆಗಳು ತಮ್ಮ ಬಿಲ ಸೇರಿಕೊಂಡವು. ದೆಹಲಿಯ ಪೊಲೀಸರು ಈ ಸಂಭಾವ್ಯ ಗಲಭೆಯನ್ನು ಪಳಗಿಸಿದ ರೀತಿ ನಿಜಕ್ಕೂ ಒಂದು ಹಂತದ ಮಟ್ಟಿಗೆ ರಾಜಕೀಯದ ಮಾಸ್ಟರ್ ಕ್ಲಾಸ್ ಎನ್ನಬಹುದು. ಪ್ರತಿಭಟನೆಗೆ ಅನುಮತಿಯನ್ನೇ ಕೋರದೆ, ಲಕ್ಷಾಂತರ ಜನರನ್ನು ಸೇರಿಸಿ ಬಿಡುತ್ತೇವೆ ಎಂದು ಹೇಳಿ ಪ್ರಚಾರ ನಡೆಸಿ, ಅನುಮತಿ ಕೊಟ್ಟರೆ ಗಲಭೆ ನಡೆಸುವ, ಅನುಮತಿ ಕೊಡದಿದ್ದರೂ ಗಲಭೆ ನಡೆಸುವಂತ ಮಾಸ್ಟರ್ ಪ್ಲಾನ್ ಹಾಕಿಕೊಂಡು ಸಿಜೆಪಿಯ ಸದಸ್ಯರು ಕುಳಿತಿದ್ದರು. ಅವರ ಪ್ರಕಾರ, ಪ್ರಜಾಪ್ರಭುತ್ವದಲ್ಲಿ ಹೀಗೆಲ್ಲಾ ಅನುಮತಿ ಕೋರಬೇಕಾಗಿರುವುದೇ ದೊಡ್ಡ ದುರಂತ ಹಾಗು ತಪ್ಪಂತೆ! ಕೋರಿದರೂ, ಹತ್ತು ದಿನದ ಮುಂಚೆಯಲ್ಲ, ಕೇಳಿದ ಕೂಡಲೇ ಅನುಮತಿ ಕೊಡಬೇಕಂತೆ! ➡ಪುಟ ೩

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,60,000**(2,65,000) ಅಪರಂಜಿ ಚಿನ್ನ: **1,51,690**(1,52,730) ಆಭರಣ ಚಿನ್ನ: **1,39,050**(1,40,000) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **73,524** (719↓) ಎನ್‌ಎಸ್‌ಇ **23,123** (243↓)

$1 = ₹94.95

ಕಿರುಸುದ್ದಿ

ಗಮನ ಸೆಳೆದ ಪ್ರತಿಶೋಧ ನಾಟಕ ಪ್ರದರ್ಶನ



• **ಧಾರವಾಡ:** ಇಲ್ಲಿನ ಕರ್ನಾಟಕ ವಿದ್ಯಾವರ್ಧಕ ಸಂಘದ ನಾಡೋಜ ಡಾ.ಪಾಟೀಲ ಪುಟಪ್ಪ ಸಭಾಂಗಣದಲ್ಲಿ ಧಾರವಾಡ ರಂಗಾಯಣದ ಆಶ್ರಯದಲ್ಲಿ 'ಪ್ರತಿಶೋಧ' ನಾಟಕ ಪ್ರದರ್ಶನ ಜರುಗಿತು. ಪ್ರದರ್ಶನಕ್ಕೆ ಚಾಲನೆ ನೀಡಿದ ಕವಿಸಂ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ರಂಗಾಯಣ ಪತ್ತೆದಾರಿಕೆ ಹೊಂದಿದ ನಾಟಕ ಪ್ರದರ್ಶಿಸುವ ಮೂಲಕ ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿದೆ ಎಂದರು. ಸುಮಾರು 25 ವರ್ಷಗಳ ಹಿಂದೆ ಈ ನಾಟಕ ಪ್ರದರ್ಶನಗೊಂಡಿತ್ತು. ಇದೀಗ ಧಾರವಾಡ ರಂಗಾಯಣದಿಂದ ಹೆಚ್ಚು ಪ್ರದರ್ಶನ ಕಾಣುವ ಈ ನಾಟಕ ಯಶಸ್ವಿ ಹೊಂದಲಿ ಎಂದು ಹಾರೈಸಿದರು. ಗುರ್ಲಹೊಸೂರಿನ ರಾಜಾರಾಮಮಠದ ಪೀಠಾಧಿಪತಿ ಗಂಗಾಧರ ದೀಕ್ಷಿತರು ಸಾನ್ನಿಧ್ಯ ವಹಿಸಿದ್ದರು. ಧಾರವಾಡ ರಂಗಾಯಣ ನಿರ್ದೇಶಕರಾದ ಝುಕೀರ ನದಾಫ್ ಅಧ್ಯಕ್ಷತೆ ವಹಿಸಿದ್ದರು. ಬೆಳಗಾವಿ ಬಿಇಒ ರವಿ ಭಜಂತ್ರಿ ಮತ್ತು ರಂಗಾಯಣದ ಆಡಳಿತಾಧಿಕಾರಿ ಶಶಿಕಲಾ ಹುಡೇದ ಇದ್ದರು. ನಂತರ ಝುಕೀರ ನದಾಫ್ ನಿರ್ದೇಶನದ ಪ್ರತಿಶೋಧ ನಾಟಕ ರೆಪರ್ಟರಿ ಕಲಾವಿದರು ಪ್ರದರ್ಶಿಸಿದರು.

ಗಾಯತ್ರಿ ವಿಶ್ವಕರ್ಮ ಪೂಜೆ



• **ನವಲಗುಂದ:** ಸುಕ್ಷೇತ್ರ ನವಲಗುಂದದ ಶ್ರೀಜಗದ್ಗುರು ಅಜಾತ ನಾಗಲಿಂಗ ಮಹಾಸ್ವಾಮಿ ಮಠದಲ್ಲಿ ಅಧಿಕ ಮಾಸದ ನಿಮಿತ್ತ ಮಠ ಹಾಗೂ ಗಾಯತ್ರಿ ಮಹಿಳಾ ಮಂಡಲದ ವತಿಯಿಂದ ಗಾಯತ್ರಿ ವಿಶ್ವಕರ್ಮ ಪೂಜೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮಹಿಳಾ ಮಂಡಲದ ವತಿಯಿಂದ ಲಲಿತಾ ಸಹಸ್ರನಾಮ ಪಾರಾಯಣ, ಭಜನೆ ನಡೆಯಿತು. ಗಾಯತ್ರಿ ವಿಶ್ವಕರ್ಮ ದೇವರಿಗೆ 33 ಖಾದ್ಯಗಳಿಂದ ನೈವೇದ್ಯ ಮಾಡಲಾಯಿತು. ನಂತರ 150 ದಂಪತಿಗಳಿಗೆ ಅಪೂಪ್ ದಾನ ಮಾಡಲಾಯಿತು. ದಿವ್ಯ ಸಾನ್ನಿಧ್ಯವನ್ನು ವೀರೇಂದ್ರ ಸ್ವಾಮಿಗಳು ವಹಿಸಿದ್ದರು. ಪೂಜಾ ಕಾರ್ಯಕ್ರಮವನ್ನು ಶ್ರೀ ಸಿದ್ದಯ್ಯ ಸ್ವಾಮಿಗಳು ನಡೆಸಿಕೊಟ್ಟರು. ನಂತರ ಎಲ್ಲ ಭಕ್ತಾದಿಗಳಿಗೆ ಭೋಜನ ವ್ಯವಸ್ಥೆ ಜರುಗಿತು.

ತರಬೇತಿ ಕಾರ್ಯಾಗಾರ ಸಭೆ ಇಂದು

• **ನವಲಗುಂದ:** ನವಲಗುಂದ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ನವಲಗುಂದ, ಅಣ್ಣಿಗೇರಿ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬಿಎಲ್ಎ-1, ಬಿಎಲ್ಎ-2 ಗಳಿಗೆ ಮತದಾರರ ಪಟ್ಟಿ ಪರೀಕ್ಷರಣೆ-2026 (SIR) ಕುರಿತು ಕಾರ್ಯಾಗಾರ ಹಾಗೂ ಸಂಘಟನೆ ಕುರಿತು ಜೂ.9ರಂದು ಸಭೆ ಕರೆಯಲಾಗಿದೆ ಎಂದು ನವಲಗುಂದ ಶಾಸಕ ಹಾಗೂ ಬಿಎಲ್ಎ-1 ಎನ್.ಹೆಚ್. ಕೋನರಡ್ಡಿ ಹೇಳಿದರು. ಅಂದು ನವಲಗುಂದ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ನವಲಗುಂದ, ಅಣ್ಣಿಗೇರಿ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬಿಎಲ್ಎ-1, ಬಿಎಲ್ಎ-2 ಗಳಿಗೆ ಮತದಾರರ ಪಟ್ಟಿ ಪರೀಕ್ಷರಣೆ-2026 ಕುರಿತು ತರಬೇತುದಾರರಾಗಿ ಕೆಪಿಸಿಸಿ ವತಿಯಿಂದ ಮುತ್ತುರಾಜು ಹಾಗೂ ಸಿ.ಜಿ. ಪಾಟೀಲ ಅವರು ತರಬೇತಿ ನೀಡುವ ಕಾರ್ಯಾಗಾರ ಹಾಗೂ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಲುವಾಗಿ ಸಂಘಟನೆ ಕುರಿತು ನವಲಗುಂದ ತಳವಾರ ಪ್ಲಾಟ್‌ನಲ್ಲಿಯ ಕಚೇರಿಯಲ್ಲಿ ಜೂ.9ರಂದು ಬೆಳಿಗ್ಗೆ 11ಕ್ಕೆ ತರಬೇತಿ ಸಭೆ ಕರೆಯಲಾಗಿದ್ದು ಕಡ್ಡಾಯವಾಗಿ ಬಿಎಲ್ಎ-2 ಎಲ್ಲರೂ ಹಾಗೂ ಸಂಬಂಧಿಸಿದವರು ತಪ್ಪದೇ ಭಾಗವಹಿಸಬೇಕೆಂದು ಕೋನರಡ್ಡಿ ಮನವಿ ಮಾಡಿದ್ದಾರೆ.

ನಿಧನ ಸುದ್ದಿ

ಲಕ್ಷ್ಮೀ ಗುಳೇದ

• **ನವಲಗುಂದ:** ಪಟ್ಟಣದ ಹೆಬ್ಬಳ್ಳಿ ಪ್ಲಾಟ್ ನಿವಾಸಿ ಲಕ್ಷ್ಮೀ ಪರಶುರಾಮ ಗುಳೇದ(65) ಇವರು ನಿಧನರಾದರು. ಮೃತರಿಗೆ ಪತಿ, ಇಬ್ಬರು ಪುತ್ರರು, ಒರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಇದ್ದರು. ಪುತ್ರರಲ್ಲಿ ಮುಳುಗುಂದ ಪಪಂ ಮುಖ್ಯ ಅಧಿಕಾರಿ ಮಂಜುನಾಥ ಗುಳೇದ ಒಬ್ಬರಾಗಿದ್ದಾರೆ.





ಹುಬ್ಬಳ್ಳಿ: ಇಲ್ಲಿಯ ಜಿ.ಸಿ. ನಗರದಲ್ಲಿರುವ ಟೌನ್ ಹಾಲ್‌ನಲ್ಲಿ ರಂಗ ಭೂಮಿ ಚಟುವಟಿಕೆಗಳಿಗಾಗಿ ಮೂಲ ಸೌಕರ್ಯ ಒದಗಿಸಬೇಕು ಎಂದು ಸ್ವರ್ಣ ರಂಗಭೂಮಿ ಸಂಘ ಸೇರಿದಂತೆ ವಿವಿದ ಸಂಘಗಳು ಮಹಾನಗರ ಪಾಲಿಕೆಗೆ ಸೋಮವಾರ ಮನವಿ ಸಲ್ಲಿಸಿದವು.

ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ

• **ಹುಬ್ಬಳ್ಳಿ:** ಡಿಕೆಎಸ್ ಎಜುಕೇಶನ್ ಟ್ರಸ್ಟ್‌ನ ಚೇತನ ಕಾಲೇಜ್ ಆಫ್ ಕಾಮರ್ಸ್, ಬಿಬಿಎ ಮತ್ತು ಬಿಸಿಎ, ಹುಬ್ಬಳ್ಳಿ ವತಿಯಿಂದ ಬಿಸಿಎ ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ ವಿದಾಯ-2026 ಬೀಳ್ಕೊಡುಗೆ ಸಮಾರಂಭವನ್ನು ಭಾನುವಾರ ವಿಜೃಂಭಣೆಯಿಂದ ಜರುಗಿತು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಸದಸ್ಯ ರಾಜಣ್ಣ ಕೊರವಿ, ಶಿಕ್ಷಣವು ಜೀವನದ ಯಶಸ್ಸಿನ ಭದ್ರ ಅಡಿಪಾಯವಾಗಿದೆ. ವಿದ್ಯಾರ್ಥಿಗಳು ತಮ್ಮ ಗುರಿಯತ್ತ ನಿರಂತರ ಪರಿಶ್ರಮದೊಂದಿಗೆ ಸಾಗಿದರೆ ಉನ್ನತ ಸಾಧನೆ ಮಾಡಲು ಸಾಧ್ಯ ಎಂದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚೇತನ ಬಿಸಿನೆಸ್ ಸ್ಕೂಲ್ ನಿರ್ದೇಶಕ ಡಾ. ವಿ.ಎಂ. ಕೊರವಿ, ವಿದ್ಯಾರ್ಥಿಗಳು ಕೇವಲ ಉದ್ಯೋಗ ಪಡೆಯುವ ಗುರಿಯನ್ನು ಮಾತ್ರವಲ್ಲದೆ, ಸಮಾಜಕ್ಕೆ ಉತ್ತಮ ಕೊಡುಗೆ ನೀಡುವ ಜವಾಬ್ದಾರಿಯುತ ನಾಗರಿಕರಾಗಬೇಕು. ಆತ್ಮವಿಶ್ವಾಸ, ಶಿಸ್ತು ಮತ್ತು ಮಾನವೀಯ ಮೌಲ್ಯಗಳೇ ಯಶಸ್ಸಿನ ನಿಜವಾದ ಅಳತೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಬಿಸಿಎ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಸ್ಮರಣಿಕೆಗಳನ್ನು ವಿತರಿಸಲಾಯಿತು. ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬೆಸ್ಟ್ ಬಾಯ್ ಮತ್ತು ಬೆಸ್ಟ್ ಗರ್ಲ್ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ಪ್ರಾಂಶುಪಾಲ ಡಾ. ಅಶೋಕ್ ವಡಕಣ್ಣವರ, ಶೈಕ್ಷಣಿಕ ಸಲಹೆಗಾರರಾದ ಡಾ. ಕಿಶೋರ್ ಪಾಂಗಿ, ಅವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿ, ಉಜ್ವಲ ಭವಿಷ್ಯಕ್ಕಾಗಿ ಮಾರ್ಗದರ್ಶನ ನೀಡಿದರು. ಬಿಸಿಎ ವಿಭಾಗದ ಮುಖ್ಯಸ್ಥ ಡಾ. ಶಿಲ್ಪಾ ಕುಲಕರ್ಣಿ, ಬಿಸಿಎ ವಿಭಾಗದ ಶೈಕ್ಷಣಿಕ ನಿರ್ವಾಹಕ ಪ್ರೊ. ವೀಣಾ ಕುಂಶಿ ಇದ್ದರು.



ಹುಬ್ಬಳ್ಳಿ: ಡಿಕೆಎಸ್ ಎಜುಕೇಶನ್ ಟ್ರಸ್ಟ್‌ನ ಚೇತನ ಕಾಲೇಜ್ ಆಫ್ ಕಾಮರ್ಸ್, ಬಿಬಿಎ ಮತ್ತು ಬಿಸಿಎ, ಹುಬ್ಬಳ್ಳಿ ವತಿಯಿಂದ ಬಿಸಿಎ ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ ವಿದಾಯ-2026 ಬೀಳ್ಕೊಡುಗೆ ಸಮಾರಂಭವನ್ನು ಭಾನುವಾರ ವಿಜೃಂಭಣೆಯಿಂದ ಜರುಗಿತು.

ಪ್ರಗತಿ ಪರಿಶೀಲನಾ ಸಭೆ | ಜಿಪಂ ಮುಖ್ಯಯೋಜನಾಧಿಕಾರಿ ಸೂಚನೆ

ಮೂಲ ಸೌಕರ್ಯ ಕಲ್ಪಿಸಲು ಅಧಿಕಾರಿಗಳು ಮುತುವರ್ಜಿ ವಹಿಸಿ

• **ಹುಬ್ಬಳ್ಳಿ:** ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು, ಗ್ರಂಥಾಲಯ, ಶಿಕ್ಷಣ, ಆರೋಗ್ಯ, ರಸ್ತೆ ಅಭಿವೃದ್ಧಿ ಸೇರಿದಂತೆ ವಿವಿಧ ಮೂಲಸೌಕರ್ಯಗಳನ್ನು ಕಲ್ಪಿಸಲು ಅಧಿಕಾರಿಗಳು ಮುತುವರ್ಜಿ ವಹಿಸಿ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾ ಪಂಚಾಯತಿ ಮುಖ್ಯ ಯೋಜನಾಧಿಕಾರಿ ದೀಪಕ ಮಡಿವಾಳರ ಹೇಳಿದರು.

ತಾಲೂಕು ಆಡಳಿತ ಸೌಧದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗದಂತೆ ಕ್ರಮ ವಹಿಸಬೇಕು. ಶುದ್ದ ಕುಡಿಯುವ ನೀರಿನ ಘಟಕಗಳನ್ನು ಶೀಘ್ರದಲ್ಲೇ ದುರಸ್ತಿ ಮಾಡಿಕೊಳ್ಳಬೇಕಿದೆ ಎಂದರು.

ಶಾಲೆಗಳು ಪ್ರಾರಂಭವಾಗಿರುವುರಿಂದ ಶಾಲಾ ಮಕ್ಕಳಿಗೆ ಕುಡಿಯುವ ನೀರು ಪೂರೈಕೆ ಮಾಡಬೇಕಿದೆ. ಆ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಅಲ್ಲದೇ ಶಾಲೆಗಳು ಹಾಗೂ ಅಂಗನವಾಡಿ ಕೇಂದ್ರಗಳಲ್ಲಿನ ಶೌಚಾಲಯ ದುರಸ್ತಿಗೆ ಕ್ರಮ ವಹಿಸಬೇಕಿದೆ. ತಿರುಮಲಕೊಪ್ಪದ ಅಂಗನವಾಡಿ ಕೇಂದ್ರವನ್ನು ತೆರವುಗೊಳಿಸಿ. ಶಿಥಿಲಾವಸ್ಥೆಯಲ್ಲಿರುವ ಅಂಗನವಾಡಿ ಕೇಂದ್ರಗಳನ್ನು ತೆರವುಗೊಳಿಸಿ ಹೊಸ ಅಂಗನವಾಡಿ ಕೇಂದ್ರಗಳನ್ನು ಸ್ಥಾಪನೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಹಳೆಯ ಶಾಲಾ ಕಟ್ಟಡಗಳು ಇದ್ದಲ್ಲಿ ಅವುಗಳ ತೆರವಿಗೆ ಅಗತ್ಯ ಮಾಹಿತಿ ಒದಗಿಸಿ ತೆರವುಗೊಳಿಸಬೇಕು. ಮಳೆಗಾಲದಲ್ಲಿ ಶಿಥಿಲ ಕಟ್ಟಡಗಳು ಬೀಳುವ



ಹಂತದಲ್ಲಿರುತ್ತವೆ. ಅವುಗಳ ಪಟ್ಟಿಯನ್ನು ತಯಾರಿಸಿ ಒದಗಿಸಲು ಅಧಿಕಾರಿಗಳು ಕ್ರಮ ವಹಿಸಿ ಎಂದು ಹೇಳಿದರು.

ರೇಷ್ಮೆ ಕೃಷಿ ಬಗ್ಗೆ ಗ್ರಾಮೀಣ ಭಾಗದಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಲು ರೇಷ್ಮೆ ಇಲಾಖೆ ಮುಂದಾಗಬೇಕು. ರೇಷ್ಮೆ ಕೃಷಿ ಕುರಿತು ಪ್ರಚಾರ ಮಾಡಲು ಗ್ರಾಮ ಪಂಚಾಯತಗಳ ಸಹಾಯ ಸಹಕಾರ ತೆಗೆದುಕೊಳ್ಳಬಹುದು. ಶಾಲಾ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಟಿಕ ಆಹಾರ ವಿತರಣೆ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು.

ರೈತರಿಗೆ ಸೋಯಾ ಅವರೆ, ಹೆಸರು, ಉದ್ದು, ತೊಗರಿ, ಶೇಂಗಾ, ಮೆಕ್ಕೆಜೋಳ ಬಿತ್ತನೆ ಬೀಜ ವಿತರಣೆಯನ್ನು ಮಾಡಲಾಗುತ್ತಿದ್ದು, ಯಾವುದೇ ರೀತಿಯಲ್ಲಿ ಕೊರತೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಡಾ.ರಾಮಚಂದ್ರ ಹೊಸಮನಿ ಮಾತನಾಡಿ, ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿರುವ ಸಮಸ್ಯೆಗಳನ್ನು ಮೇಲಾಧಿಕಾರಿಗಳ ಗಮನಕ್ಕೆ ತರಬೇಕು. ರಸ್ತೆ ಅಭಿವೃದ್ಧಿ, ಚರಂಡಿ ದುರಸ್ತಿ ಸೇರಿದಂತೆ ಹಲವಾರು ಕಾರ್ಯಗಳ ಬಗ್ಗೆ ಮಾಹಿತಿ ಒದಗಿಸಬೇಕು ಎಂದು ತಿಳಿಸಿದರು.

ಹುಬ್ಬಳ್ಳಿ ಗ್ರಾಮೀಣ ತಹಶೀಲ್ದಾರ್ ಜೆ.ಬಿ.ಮಜ್ಜಗಿ ಮಾತನಾಡಿದರು.

ತಾಲೂಕು ಪಂಚಾಯತ ಸಹಾಯಕ ನಿರ್ದೇಶಕ ಚಂದ್ರಶೇಖರ ಕುರ್ತಕೋಟಿ, ತಾಲೂಕು ಪಂಚಾಯತ ಯೋಜನಾಧಿಕಾರಿ ಸಿ.ಆರ್.ಕೌಜಗೇರಿ, ನರೇಗಾ ಯೋಜನೆ ಸಹಾಯಕ ನಿರ್ದೇಶಕ ಸದಾನಂದ ಅಮರಾಪುರ, ಸಹಾಯಕ ಲೆಕ್ಕಾಧಿಕಾರಿ ಅಶೋಕ ಯತ್ತಿನಹಳ್ಳಿ, ಗ್ರೇಡ್ 2 ತಹಶೀಲ್ದಾರ್ ಶಿವಾನಂದ ಹೆಬ್ಬಳ್ಳಿ, ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ನಾಗರತ್ನಾ ಕ್ಯಾಸನೂರ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಎಂ.ಬಿ.ಸಣ್ಣೇರ ಇದ್ದರು.

ಜೈನ ಸಂತರ, ಸಾಧ್ವಿಯರ ಸುರಕ್ಷತೆಗೆ ಕ್ರಮ ಕೈಗೊಳ್ಳಿ



• **ಹುಬ್ಬಳ್ಳಿ:** ದೇಶದಾದ್ಯಂತ ಪಾದಯಾತ್ರೆ ನಡೆಸುವ ಸಂದರ್ಭದಲ್ಲಿ ಜೈನ ಸಂತರು ಹಾಗೂ ಸಾಧ್ವಿಯರು ರಸ್ತೆ ಅಪಘಾತಗಳಿಗೆ ಒಳಗಾಗಿ ಪ್ರಾಣ ಕಳೆದುಕೊಳ್ಳುತ್ತಿರುವ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಹುಬ್ಬಳ್ಳಿಯ ಸಕಲ ಜೈನ ಸಮಾಜವು ಗಂಭೀರ ಕಳವಳ ವ್ಯಕ್ತಪಡಿಸಿದೆ.

ಈ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಗಮನಕ್ಕೆ ವಿಷಯವನ್ನು ತರಲು, ಪ್ರಧಾನಮಂತ್ರಿಗಳ 15 ಸೂತ್ರಗಳ ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮ ಸಮಿತಿಯ ಸದಸ್ಯ ಮಹೇಂದ್ರ ಸಿಂಘಿ ಅವರ ನೇತೃತ್ವದಲ್ಲಿ ಧಾರವಾಡ ಜಿಲ್ಲಾಧಿಕಾರಿ ಅಧಿಕಾರಿ ಸ್ನೇಹಲ್ ಆರ್. ಅವರಿಗೆ ವಿಸ್ತೃತ ಮನವಿ ಪತ್ರ ಸಲ್ಲಿಸಲಾಯಿತು.

ದೇಶದಾದ್ಯಂತ ಪಾದಯಾತ್ರೆ ಮಾಡುವ ಜೈನ ಸಂತರು ಹಾಗೂ ಸಾಧ್ವಿಯರ ಸುರಕ್ಷತೆಗಾಗಿ ವಿಶೇಷ ಕ್ರಮಗಳನ್ನು ಕೈಗೊಳ್ಳುವುದು, ರಸ್ತೆ ಅಪಘಾತಗಳನ್ನು ತಡೆಯಲು ಅಗತ್ಯ ಭದ್ರತಾ ವ್ಯವಸ್ಥೆಗಳನ್ನು ಜಾರಿಗೊಳಿಸುವುದು ಹಾಗೂ ಅವರ ಸಂಚಾರಕ್ಕೆ ಸೂಕ್ತ ರಕ್ಷಣಾ ಕ್ರಮಗಳನ್ನು ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ.

ಗೌತಮ್ ಭುರಟ್, ಶೈಲೇಶ್ ಜೈನ್, ವಿಮಲ್ ತಾಲಿಕೋಟಿ, ಸಂತೋಷ್ ಪಾಟೀಲ್, ಸಂತೋಷ್ ಡೂಮಾವತ್, ನೀಲೇಶ್ ಜೈನ್, ವಿಮಲ್ ಮಾಂಡೋತ್, ಮನೋಜ್ ಕೋಠಾರಿ, ಅಮಿತ್ ಜೈನ್, ತರುಣ್ ಜೈನ್, ವಿಮಲ್ ಜೈನ್, ಧರ್ಮೇಂದ್ರ ಜೈನ್, ಜಿತೇಂದ್ರ ಜೈನ್, ಸುಭಾಷ್ ಡಂಕ್ ಉಪಸ್ಥಿತರಿದ್ದರು.



ಹುಬ್ಬಳ್ಳಿ: ಸರ್ವಧರ್ಮ ಸಮಾಜ ಸೇವಕ ಡಾ. ರಮೇಶ್ ಮಹಾದೇವಪ್ಪನವರ ಅವರ ಜನ್ಮದಿನವನ್ನು ಗೋಪನಕೊಪ್ಪದ ಕರ್ನಾಟಕ ಪಬ್ಲಿಕ್ ಸ್ಕೂಲ್ ವಿಶೇಷವಾಗಿ ಆಚರಿಸಲಾಯಿತು.

ಜಮೀರ್‌ಗೆ ಡಿಸಿಎಂ ಸ್ಥಾನ ನೀಡಿ: ಖಯಿಂ

• **ಕುಂದಗೋಳ:** ನೂತನ ರಾಜ್ಯ ಸಚಿವ ಸಂಪುಟದಲ್ಲಿ ಶಾಸಕ ಜಮೀರ ಅಹಮ್ಮದ ಖಾನ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನಿಡುವಂತೆ ಆಗ್ರಹಿಸಿ ತಾಲೂಕಿನ ಮುಸ್ಲಿಂ ಬಾಂಧವರು ಪರವಾಗಿ ಅಂಜುಮನ್ ಎ ಇಸ್ಲಾಂ ಕಮೀಟಿ ತಾಲೂಕ ಅಧ್ಯಕ್ಷ ಖಯಿಂ ನಾಲಬಂದ ಹೇಳಿದರು.

ಅವರು ಪಟ್ಟಣದ ಮದರಸಾದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಸಲಿಂ ಕ್ಯಾಲಕೊಂಡ, ಎಮ್.ಎಫ್.ನದಾಫ್, ಹಾರೂಬಿಡಿ, ಹುಸೇನ ಹುಬ್ಬಳ್ಳಿ ಮಾತನಾಡಿ ಸಮುದಾಯದ ಜನರ ಆಶಯಗಳಿಗೆ ತಕ್ಕಂತೆ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಇಲ್ಲವಾದರೆ ಹೋರಾಟಡುವುದಾಗಿ ಹೇಳಿದರು. ಅಲ್ಲದೆ ಅಲ್ಪಸಂಖ್ಯಾತ ಸಮುದಾಯದ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಬೇಕು. ಮೀಸಲಾತಿ, ಶಿಕ್ಷಣ, ಉದ್ಯೋಗ, ವಸತಿ, ವಿದ್ಯಾರ್ಥಿವೇತನ ಸೇರಿದಂತೆ ಮೂಲಭೂತ ಸೌಲಭ್ಯಗಳ ವಿಸ್ತರಣೆಗೆ ವಿಶೇಷ ಯೋಜನೆ ರೂಪಿಸಿ ಅನುಷ್ಠಾನಗೊಳಿಸಬೇಕೆಂದು ಅನೇಕ ಮುಖಂಡರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಗಾಳಿ ಮರೇಮ್ಮದೇವಿ ದೇವಸ್ಥಾನದ ಬಳಿ ಜಮಾಯಿಸಿದ ಮುಸ್ಲಿ ಸಮಾಜದವರು ಎಸ್‌ಐಆರ್ ಸಮರ್ಪಕವಾಗಿ ನಡೆದಿಲ್ಲ ಕೇಂದ್ರ ಸರ್ಕಾರ ಗೋ ಮಾಂಸವನ್ನು ನಿಷೇಧಿಸಿ ಪಶುವನ್ನು (ಆಕಳು) ರಾಷ್ಟ್ರೀಯ ಪ್ರಾಣಿಯಾಗಿ ಘೋಷಿಸುವಂತೆ ಶಾಸಕ ಬಿ.ಝಡ್. ಜಮೀರ್ ಅಹ್ಮದ್ ಖಾನ್ ಅವರನ್ನು ಸಚಿವ ಸ್ಥಾನದ ಜೊತೆಗೆ ಉಪಮುಖ್ಯಮಂತ್ರಿ ಮಾಡಲೇಬೇಕು ಎಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಯಿತು.

ನಂತರ ಪಟ್ಟಣದ ಗಾಳಿ ಮಾರೆಮ್ಮ ದೇವಸ್ಥಾನದಿಂದ ಕಾಳಿದಾಸ ಸರ್ಕಲ್, ಮಾರ್ಕೆಟ ರಸ್ತೆ, ಮುರ ಅಂಗಡಿ ಖುಟ್ ಮುಲಕ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿ ಬಳಿಕ ತಹಶೀಲ್ದಾರ್ ರಾಜು ಮಾವರಕರ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಅಂಜುಮನ್ ತಾಲೂಕಾಧ್ಯಕ್ಷ ಖಯುಂ ನಾಲಬಂಧ, ಮುಖಂಡರಾದ ರಾಯೆಸಾಬ್ ಕಳ್ಳಮನಿ, ಎ.ಟಿ.ಹುಬ್ಬಳ್ಳಿ, ಬಸಲೀಂ ಕ್ಯಾಲಕೊಂಡ, ಮಲಿಕ್ ಶಿರೂರ್, ಮಾಬುಲಿ ನದಾಫ್, ನಾಸಿರ್ ಬಾಣಿ. ರಫೀಕ ಶೆರೆವಾಡ, ಹಜರತಲಿ ಕರ್ಜಗಿ, ಜಾಫರಸಾಬ ಪಠಾಣ, ಎಂ.ಎಚ್. ಕಳ್ಳಿಮನಿ, ಬಾಬಾಜಾನ್ ಮಿಶ್ರಿಕೋಟಿ, ವಲಿವುಲ್ಲ ಮುಲ್ಲಾ, ಎಂ.ಎಂ. ಜಂಗ್ಲಿ, ಅಲ್ಲಾಬಕ್ಷ ಅಣ್ಣಿಗೇರಿ, ಹಜರತಲಿ ಜೋಡಮನಿ, ಎಂ.ಎಂ.ಮಾಕಾಂದಾರ, ಬಂದಗಿಸಾಬ ಬಂದಗಿಸಾಬನವ ಮತ್ತಿತರಿದ್ದರು.



ಪಿಎಲ್‌ಡಿ ಬ್ಯಾಂಕ್ ವ್ಯವಹಾರ ಮತ್ತೆ ಪ್ರಾರಂಭ



• **ಅಣ್ಣಿಗೇರಿ:** ಕೃಷಿ ರೈತಾಪಿ ವರ್ಗದವರಿಗೆ ಸ್ಥಾಪಿತ ವಾದ ಪ್ರಾಥಮಿಕ ಕೃಷಿ ಸಹಕಾರ ನಿಯಮಿತ ಗ್ರಾಮೀಣ ಬ್ಯಾಂಕ್ (ಪಿಎಲ್‌ಡಿ) ಬ್ಯಾಂಕ್ ಮೊದಲಿನಂತೆ ರೈತರಿಗೆ ವ್ಯವಹರಿಸಲು ಪ್ರಾರಂಭವಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ದೇವರಾಜ ದಾಡಿಬಾವಿ ಹೇಳಿದ್ದಾರೆ.

ಪಟ್ಟಣದ ಪಿಎಲ್‌ಡಿ ಶಾಖೆ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿ ನೆಡಸಿ ಮಾತನಾಡಿ, ಅಣ್ಣಿಗೇರಿ ತಾಲೂಕಾ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ ನಿ.ಅಣ್ಣಿಗೇರಿ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು ಬೆಳಗಾವಿ ಪ್ರಾಂತ ಬೆಳಗಾವಿ ಇವರು ಸಮಾಪನಾಧಿಕಾರಿ ಅಚಿತಾ ನೇಮಕಾತಿ ಮಾಡಿ ಆದೇಶ ಹೊರಡಿಸಿದ್ದು, ಅದರಂತೆ ಪ್ರಭಾರವನ್ನು ಪಡೆದು ಸದರ ಬ್ಯಾಂಕ್ ನ ವ್ಯವಹಾರ ಸಮಾಪನಾಧಿಕಾರಿ ಹಾಗೂ ವ್ಯವಸ್ಥಾಪಕರ ಸಹಿಯೊಂದಿಗೆ ಮಾತ್ರ ನಿರ್ವಹಿಸಲು ತಿಳಿಸಲಾಗಿತ್ತು .

ಮುಂದುವರೆದು ಸದರ ಆದೇಶಕ್ಕೆ ಮಾನ್ಯ ಉಚ್ಚನ್ಯಾಯಾಲಯ ಧಾರವಾಡ ಇಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ 104181/2026 ರಲ್ಲಿ ತಡೆಯಾಜ್ಞೆ, ಆದೇಶವಾಗಿದ್ದು ಸಮಾಪನಾಧಿಕಾರಿಗಳ ಪ್ರಭಾರವನ್ನು ಹಿಂಪಡೆದಿರುತ್ತೇನೆ ಹಾಗೂ ಬ್ಯಾಂಕ್‌ನ ಅಧ್ಯಕ್ಷರು ಹಾಗೂ ವ್ಯವಸ್ಥಾಪಕರ ಸಹಿಯೊಂದಿಗೆ ಬ್ಯಾಂಕ್‌ನ ವ್ಯವಹಾರಗಳನ್ನು ಮುಂದುವರಿಸುತ್ತೇವೆ.

ಅಷ್ಟೇ ಅಲ್ಲದೆ ಎರಡು ವರ್ಷ ದಿಂದ ಆರಂಬಿಸಿದ ಬ್ಯಾಂಕಿನ 773 ಸದಸ್ಯರ ವ್ಯವಹಾರ ಕೇವಲ 9ಲಕ್ಷ 32ಸಾವಿರ ಹೂಡಿಕೆ ರೈತರ ಷೇರು ಖಾತೆದಾರರು ಇದ್ದು, ಸುಮಾರು 4 ರಿಂದ 5 ಲಕ್ಷ ರೂಗಳನ್ನು ರೈತರಿಗೆ 25 ರಿಂದ 50 ಸಾವಿರ ವರೆಗೆ ಸಾಲ ನೀಡಿದೆ ಮತ್ತು ಬ್ಯಾಂಕಿನ ಕಾರ್ಯಾಲಯದ ಬಾಡಿಗೆ ಸಿಬ್ಬಂದಿಗಳ ಮತ್ತು ಪೀಠೋಪಕರಣಗಳನ್ನು ಖರೀದಿಸಿದೆ ಮತ್ತೆ ಇನ್ನೇನು ಸರ್ಕಾರದಿಂದ ಅನುದಾನ ಬಂದ ನಂತರ ಇನ್ನುಳಿದ ರೈತರಿಗೆ ಅನುಕೂಲಕರ ವಾಗಲಿ ಎಂದು ಈ ಬ್ಯಾಂಕನ್ನು ಸ್ಥಾಪಿಸಿದೆ. ಸುಳ್ಳು ಆರೋಪ ಇತ್ತೀಚಿಗೆ ಮಾಧ್ಯಮದಲ್ಲಿ ಹೇಳಿಕೆ ನೀಡಿದ್ದು ಸತ್ಯಕ್ಕೆ ದೂರುವಾಗಿದೆ ಎಂದು ಹೇಳಿದರು.

ಮಾಜಿ ಜಿಪಂ ಅಧ್ಯಕ್ಷ ಸುರೇಶ ಗಾಣಗೇರ ಮಾತನಾಡಿದರು. ಈ ವೇಳೆ ಬ್ಯಾಂಕಿನ ಉಪಾಧ್ಯಕ್ಷ ರೇವಣಪ್ಪ ಅಂಕಲಿ, ಸಿದ್ದನಗೌಡ ಪಾಟೀಲ್, ಬಸವರಾಜ್ ಯಳವತ್ತಿ, ಆನಂದ್ ಜಕ್ಕನಗೌಡ್ರು,ಯಲ್ಲಪ್ಪ ಅಕ್ಕಿ, ಕಲ್ಲಯ್ಯ ಪುರದನ್ನವರ ಯಲ್ಲಪ್ಪ ದುಂದೂರು,ತವಣಪ್ಪ ನಾವಳ್ಳಿ, ಮಂಜುನಾಥ್ ಹಡಪದ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳು ಬೆಳೆಸಿ

• **ಧಾರವಾಡ:** ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳು ಬಿತ್ತುವುದು ಶಿಕ್ಷಕನ ಕರ್ತವ್ಯ. ಒಳಿತು-ಕೆಡಕಿನ ಪರಿಜ್ಞಾನ ಬೆಳೆಸುವ ಜವಾಬ್ದಾರಿ ಶಿಕ್ಷಕರ ಕೈಯಲ್ಲಿದೆ ಎಂದು ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ಇಲ್ಲಿನ ಜೆಎಸ್ಸೆಸ್‌ನ ಪದವಿಪೂರ್ವ ಉಪನ್ಯಾಸಕರಿಗೆ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ, ಪ್ರೌಢಾವಸ್ಥೆಯಿಂದ ಯವ್ವನಾವಸ್ಥೆಗೆ ಬರುವ ಮಕ್ಕಳು ದುಶ್ಚಟಗಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚಿದ್ದು, ಈ ಕುರಿತು ಅರಿವು ಮೂಡಿಸಲು ತಿಳಿಸಿದರು.

ವಿದ್ಯಾರ್ಥಿಗಳಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮದ ಕುರಿತು ತಿಳುವಳಿ ನೀಡಿ, ಅವರನ್ನು ದುಶ್ಚಟಗಳಿಂದ ದೂರವಿರಲು ಪ್ರೇರೆಪಿಸಬೇಕು. ಶಿಕ್ಷಕರು ದೈಹಿಕ, ಮಾನಸಿಕವಾಗಿ ಸದೃಢರಾಗಿ ಹೊಸ ಹೊಸ ಕೌಶಲ್ಯಗಳು ಬೆಳೆಸಿಕೊಳ್ಳುವಂತೆ ಸಲಹೆ ನೀಡಿದರು.

ತರಬೇತಿದಾರ ಮಹೇಶ ಮಾಶಾಳ ಮಾತನಾಡಿ, ಉತ್ತಮ ಶಿಕ್ಷಕರು ಕೇವಲ ಪಾಠ ಮಾಡುವುದಿಲ್ಲ, ಅವರು ವಿದ್ಯಾರ್ಥಿಗಳ ಚಿಂತನಾ ಸಾಮರ್ಥ್ಯ ಮತ್ತು ದೃಷ್ಟಿಕೋನ ಅರಿತು, ಹೆಚ್ಚಿನ ಜ್ಞಾನದ ಜೊತೆ ಜೊತೆಗೆ ಮಾರ್ಗದರ್ಶನ ಮಾಡುತ್ತಾರೆ ಎಂದು ತಿಳಿಸಿದರು.

ವಿದ್ಯಾರ್ಥಿಗಳ ಆಲೋಚನೆ ಮತ್ತು ಚಿಂತನೆಗಿಂತ ಶಿಕ್ಷಕರಲ್ಲಿ ಜ್ಞಾನ ಹೆಚ್ಚಿರಬೇಕು. ತಂತ್ರಜ್ಞಾನ ಮತ್ತು ಸಮಾಜದ ಬದಲಾವಣೆಗೆ ಅನುಗುಣವಾಗಿ ಶಿಕ್ಷಕರು ತಮ್ಮ ಜ್ಞಾನವನ್ನು ನಿರಂತರವಾಗಿ ನವೀಕರಿಸಿಕೊಂಡು, ಆದರ್ಶ ಶಿಕ್ಷಕರಾಗುವಂತೆ ಕರೆ ನೀಡಿದರು.

ಜೆಎಸ್ಸೆಸ್ ಆಡಳಿತಾಧಿಕಾರಿ ಅರಿಹಂತ ಪ್ರಸಾದ ಮಾತನಾಡಿ, ಶಿಕ್ಷಕರಿಗೆ ಆಧುನಿಕ ತಂತ್ರಜ್ಞಾನ ಕುರಿತು ತರಬೇತಿ ಅವಶ್ಯ. ಭವಿಷ್ಯದ 10 ವರ್ಷದ ಬದಲಾವಣೆ ಪಠ್ಯಕ್ಕೆ ಪೂರಕ ಬೋಧನೋಪಕರಣಗಳ ಪರಿಚಯ ಮಾಡುವುದು ಅಗತ್ಯವಿದೆ ಎಂದರು.

ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾದ್ಯೆ, ಪಿಯು ಕಾಲೇಜಿನ ಪ್ರಾಚಾರ್ಯೆ ಭಾರತಿ ಶಾನಭಾಗ, ಡಾ. ಬಿ.ಎನ್.ಭಾವಿ, ಡಾ.ರವಿವರ್ಮ ಜೋಶಿ, ಸಾಜಿದ ಹುಸೇನ್, ಸುಜಾತ ಕೊಂಬಳಿ, ಪಿಯು ಕಾಲೇಜಿನ ಉಪನ್ಯಾಸಕರು ಪಾಲ್ಗೊಂಡಿದ್ದರು.



ಮುನಿಗಳ ವಿಹಾರಕ್ಕೆ ಸೂಕ್ತ ರಕ್ಷಣೆ ನೀಡಲಿ

• **ಕುಂದಗೋಳ:** ಜೈನ ಮುನಿಗಳು ವಿಹಾರ ಸಂದರ್ಭದಲ್ಲಿ ಅಪಘಾತ ಸಂಭವಿಸುತ್ತಿದ್ದು, ಮುನಿಗಳ ವಿಹಾರ ವೇಳೆಯಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸೂಕ್ತ ರಕ್ಷಣೆ ನೀಡಬೇಕೆಂದು ಆಚಾರಿ ಶ್ರೀ 108 ಪುಣ್ಯಸಾಗರ ಮುನಿ ಮಹಾರಾಜ, ಶ್ರೀ 108 ಪುರಾಣ ಸಾಗರ ಮಹಾರಾಜ ಹೇಳಿದರು.

ಕುಂದಗೋಳ ವಿಧಾನಸಭಾ ಕ್ಷೇತ್ರದ ಛಬ್ಬಿ ಗ್ರಾಮದ ಭಗವಾನ್ ಶ್ರೀ 1008 ಶಾಂತಿನಾಥ ಜೈನ್ ಸಮಾಜವು. ಛಬ್ಬಿ ನಾಡಕಚೇರಿ ಉಪ ತಹಶೀಲ್ದಾರ್ ಮುಖಾಂತರ ಪ್ರಧಾನ ಮಂತ್ರಿ, ಗೃಹ ಮಂತ್ರಿ, ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದರು.

ಮನವಿಯಲ್ಲಿ ಜೈನ ಧರ್ಮವು ಅಹಿಂಸಾ ತತ್ವವನ್ನು ಪಾಲಿಸುವ ಧರ್ಮವಾಗಿದ್ದು, ಜೈನ ಮುನಿಗಳು ಸರ್ವವನ್ನು ತ್ಯಾಗ ಮಾಡಿದವರು, ಧರ್ಮ ಜಾಗೃತಿಗಾಗಿ ದೇಶ ವ್ಯಾಪ್ತಿ ವಿಹಾರ ಕೈಗೊಳ್ಳುತ್ತಿದ್ದು ಈ ವೇಳೆ ಸರ್ಕಾರಗಳು ಮುನಿಗಳ ವಿಹಾರಕ್ಕೆ ಸೂಕ್ತ ರಕ್ಷಣೆ ನೀಡಬೇಕೆಂದು ಮನವಿಯಲ್ಲಿ ವಿವರಿಸಿದ್ದಾರೆ.

ಈ ಸಂದರ್ಭದಲ್ಲಿ ದೇವೇಂದ್ರಪ್ಪ ಕಾಗೇನವರ, ಅನಂತ ಕಲಘಟಗಿ, ವಿಜಯ ಹನುಮಕ್ಕನವರ, ವರ್ಧಮಾನ ಹುಲ್ಲಂಬಿ, ಪದ್ಮಣ್ಣ ಮನಸಲಿ, ಚಂದ್ರಪ್ಪ ನಾಗರಳ್ಳಿ, ಭಗವಂತ ಬಸಾಪುರ, ಮಹಾವೀರ ಪ್ಯಾಟಿ ಸೇರಿದಂತೆ ಅನೇಕರಿದ್ದರು.



ರೈತ ವಿರೋಧಿ ಧೋರಣೆ ಸಲ್ಲದು: ಶಂಕರ

• **ನವಲಗುಂದ:** ಪ್ರಕೃತಿ ವಿಕೋಪ ಮತ್ತು ಸರ್ಕಾರದ ಉದಾಸೀನತೆಯಿಂದಾಗಿ ರಾಜ್ಯದ ಬೆನ್ನೆಲುಬಾದ ರೈತಾಪಿ ವರ್ಗ ಇಂದು



ಸಂಪೂರ್ಣವಾಗಿ ಬೀದಿಗೆ ಬಿದ್ದಿದೆ. ಕಾಂಗ್ರೆಸ್ ಸರ್ಕಾರ ತಕ್ಷಣವೇ ತನ್ನ ಕುಂಭಕರ್ಣ ನಿದ್ರೆಯಿಂದ ಎಚ್ಚೆತ್ತು, ಸಂಕಷ್ಟದಲ್ಲಿರುವ ಅನ್ನದಾತನ ನೆರವಿಗೆ ಧಾವಿಸದಿದ್ದರೆ ಮುಂದಿನ ದಿನಗಳಲ್ಲಿ ತಕ್ಕ ಶಾಸ್ತಿ ಅನುಭವಿಸಬೇಕಾಗುತ್ತದೆ ಎಂದು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅತ್ಯಂತ ಗಂಭೀರವಾಗಿ ಎಚ್ಚರಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ರಾಜ್ಯ ಸರ್ಕಾರದ ರೈತವಿರೋಧಿ ಧೋರಣೆಯನ್ನು ತೀವ್ರವಾಗಿ ಖಂಡಿಸಿದ್ದಾರೆ.

ಬಿತ್ತನೆ ಮಾಡುವ ಆರಂಭಿಕ ಹಂತದಲ್ಲೇ ರೈತರು ಹತ್ತಾರು ಸಂಕಷ್ಟಗಳನ್ನು ಎದುರಿಸಿದ್ದರು. ಈಗ ಸುರಿದ ಭಾರಿ ಮಳೆಗೆ ಹಳ್ಳ-ಕೊಳ್ಳಗಳ ಪಕ್ಕದಲ್ಲಿರುವ ಜಮೀನುಗಳು ಜಲಾವೃತಗೊಂಡು, ರೈತರು ಸಾಲಸೋಲ ಮಾಡಿ ಬಿತ್ತಿದ್ದ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿ ಅನ್ನದಾತ ಹತಾಶನಾಗಿದ್ದಾನೆ. ಆದರೆ, ಸರ್ಕಾರಕ್ಕೆ ಮಾತ್ರ ಇದ್ಯಾವುದೂ ಕಣ್ಣಿಗೆ ಕಾಣಿಸುತ್ತಿಲ್ಲ ಎಂದು ಮುನೇನಕೊಪ್ಪ ಆತಂಕ ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಭಾಗದಲ್ಲಿ ನೂರಾರು ಬಡವರ ಮನೆಗಳು ಕುಸಿದು ಬಿದ್ದಿವೆ. ಇನ್ನು ಹಲವು ಮನೆಗಳಿಗೆ ನೀರು ನುಗ್ಗಿ, ಜನರು ನಿರಾಶ್ರಿತರಾಗಿದ್ದಾರೆ. ಕುಡಿಯಲು ನೀರಿಲ್ಲದೆ, ಇರಲು ಸೂರಿಲ್ಲದೆ ಜನಸಾಮಾನ್ಯರು ನರಕಯಾತನೆ ಅನುಭವಿಸುತ್ತಿದ್ದಾರೆ. ಸರ್ಕಾರ ತಕ್ಷಣವೇ ಯುದ್ಧೋಪಾದಿಯಲ್ಲಿ ಕಾರ್ಯಾಚರಣೆ ನಡೆಸಿ, ಸಂತ್ರಸ್ತರಿಗೆ ತುರ್ತು ಪರಿಹಾರ ವಿತರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಅನ್ನದಾತನ ಒಡಲ ಆಕ್ರೋಶ ಮತ್ತು ಕಣ್ಣೀರಿನ ಶಾಪ ಈ ಸರ್ಕಾರವನ್ನು ಸುಡದೆ ಬಿಡದು. ಇನ್ನಾದರೂ ರಾಜಕೀಯ ಬಿಟ್ಟು, ತಕ್ಷಣವೇ ಪರಿಹಾರ ಕಾರ್ಯಕ್ಕೆ ಕೈಗೊಳ್ಳಿ ಎಂದು ಎಚ್ಚರಿಕೆ ನೀಡಿದ್ದಾರೆ.

ಎಸ್‌ಡಿಎಂನಲ್ಲಿ ಸೈಕಲ್ ರ್‍ಯಾಲಿ

• **ಧಾರವಾಡ:** ಇಲ್ಲಿನ ಎಸ್‌ಡಿಎಂ ವಿಶ್ವವಿದ್ಯಾಲಯ ಹಾಗೂ ಹುಬ್ಬಳ್ಳಿ ಬೈಸಿಕಲ್ ಕ್ಲಬ್‌ನಿಂದ ವಿಶ್ವ ಬೈಸಿಕಲ್ ದಿನ, ವಿಶ್ವ ಪರಿಸರ ದಿನಾಚರಣೆ ಹಾಗೂ ಕ್ಲಬ್‌ನ 10ನೇ ವಾರ್ಷಿಕೋತ್ಸವ ಸೋಮವಾರ ಆಚರಿಸಲಾಯಿತು.

ಎಸ್‌ಡಿಎಂ ವಿವಿಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ನಡೆದ 10 ಕಿ.ಮೀ ಸೈಕಲ್ ರ್‍ಯಾಲಿಯಲ್ಲಿ ಜನರಿಗೆ ಆರೋಗ್ಯ-ಪರಿಸರದ ಬಗ್ಗೆ ಜಾಗೃತಿ ಮೂಡಿಸಲಾಯಿತು. ಸುಮಾರು 120 ಕ್ಲಬ್ ಸದಸ್ಯರು ಪಾಲ್ಗೊಂಡಿದ್ದರು. ಭಾರತದ ಮೊದಲ ಕ್ಯಾನ್ಸರ್ ಮುಕ್ತ ಸಾಧಕ ಟ್ರಯಾಥ್ಲೆಟ್ ಮತ್ತು ಐರನ್‌ಮ್ಯಾನ್ ಪ್ರಶಸ್ತಿ ವಿಜೇತ ಡಾ.ಮಯೂರ ಶಿವಾಲ್ಕರ್ ಜಾಥಾಕೆ ಚಾಲನೆ ನೀಡಿ, ವಿಜೇತರಿಗೆ ಪ್ರಶಸ್ತಿ ಮತ್ತು ಬಹುಮಾನ ಕೂಡ ವಿತರಿಸಿದರು.

ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ಡಾ.ವಿಜಯ ಕುಲಕರ್ಣಿ, ಅಧೀಕ್ಷಕ ಡಾ. ಕಿರಣ ಹೆಗಡೆ, ಡಾ.ಮಹಾಂತೇಶ ಮಟ್ಟಿ, ಕ್ಲಬ್ ಅಧ್ಯಕ್ಷ ಶೆಟ್ಟೆಪ್ಪ ಪಿರಂಗಿ, ಡಾ. ವೈಷ್ಣವಿ, ಡಾ.ಅನಘಾ, ಶಿವಾನಂದ ದಂಡವತಿಮಠ ಇದ್ದರು.



ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಿ



• **ಹುಬ್ಬಳ್ಳಿ:** ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಶಿಕ್ಷಕರು, ಪಾಲಕರು, ಎಸ್‌ಡಿಎಂಸಿ ಸದಸ್ಯರು ಹಾಗೂ ಗ್ರಾಮಸ್ಥರ ಪಾತ್ರ ಬಹಳ ಅವಶ್ಯಕತೆ ಇದೆ ಎಂದು ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮೋಹನ ಅಸುಂಡಿ ತಿಳಿಸಿದರು.

ಸೋಮವಾರ ಬಿಡನಾಳದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಎಲ್‌ಕೆಜಿ ಹಾಗೂ ಯುಕೆಜಿ ವಿದ್ಯಾರ್ಥಿಗಳ ಲಾಟರಿ ಎತ್ತುವ ಮೂಲಕ ಆಯ್ಕೆ ಮಾಡುವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ಬಿಡನಾಳ ಗ್ರಾಮದ ಶಾಲೆ ಅತ್ಯಾಧುನಿಕ ಸೌಲಭ್ಯಗಳ ಹೊಂದಿದ್ದು, ಈ ಭಾಗದ ಬಡ ಮಕ್ಕಳ ಶಿಕ್ಷಣಕ್ಕೆ ದಾರಿದೀಪವಾಗಲಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಇಸಿಒ ವನಿತಾ ಮಾತನಾಡಿ, ಬಿಡನಾಳ ಪಬ್ಲಿಕ್ ಶಾಲೆಯೂ ಶಹರದಲ್ಲಿ ಅತ್ಯುತ್ತಮ ಸರ್ಕಾರಿ ಶಾಲೆಯಾಗಿದೆ. ಇಡೀ ರಾಜ್ಯದಲ್ಲಿ ಅತೀ ಹೆಚ್ಚು ದಾಖಲಾತಿಯನ್ನು ಹೊಂದುವ ಶಾಲೆಯಾಗಿದೆ. ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುವ ಈ ದಿನಗಳಲ್ಲಿ ಇಲ್ಲಿ ಲಾಟರಿ ಮೂಲಕ ದಾಖಲಾತಿ ಮಾಡಿಕೊಳ್ಳುತ್ತಿರುವುದು ವಿಶೇಷ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ 78 ವಿದ್ಯಾರ್ಥಿಗಳಲ್ಲಿ 30 ವಿದ್ಯಾರ್ಥಿಗಳನ್ನು ಒಂದನೇ ತರಗತಿ ಆಂಗ್ಲ ಮಾಧ್ಯಮಕ್ಕೆ ಆಯ್ಕೆ ಮಾಡಲಾಯಿತು. ಉಳಿದ ಮಕ್ಕಳನ್ನು ಕನ್ನಡ ಮಾಧ್ಯಮಕ್ಕೆ ದಾಖಲಿಸಿಕೊಳ್ಳಲಾಗಿದೆ.

ಎಸ್‌ಡಿಎಂಸಿ ಉಪಾಧ್ಯಕ್ಷ ಜಮಾಲಸಾಬ ನದಾಫ, ಸದಸ್ಯ ಶರಣಯ್ಯ ಹಿರೇಮಠ, ಮಂಜುನಾಥಗೋಂದಕರ, ಮಂಜುನಾಥ, ಸಿದ್ದಪ್ಪ ಮೀಶಿ, ಸಂತೋಷ ಬಳ್ಳಾರಿ, ರೇಷ್ಮಾ ನದಾಫ ಹಾಗೂ ಶಾಲಾ ಶಿಕ್ಷಕರು ಇದ್ದರು.

ನಮೋ ನೇತೃತ್ವದ ನವ ಭಾರತ

ಭಾರತದ ಮೊದಲ ಪ್ರಧಾನಿ ನೆಹರು ಮತ್ತು ಮೋದಿ ಯುಗ: ಎರಡು ಕಾಲಘಟ್ಟಗಳ ನಡುವಿನ ಅಜಗಜಾಂತರ



ಭಾರತದ ರಾಜಕೀಯ ಇತಿಹಾಸದಲ್ಲಿ ಜೂ.10 ಒಂದು ಸುವರ್ಣ ಅಕ್ಷರಗಳಲ್ಲಿ ಬರೆಯುವಂತಹ ದಿನ. ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರ ಹೆಸರಲ್ಲಿದ್ದ ಸತತವಾಗಿ ಸುದೀರ್ಘ ಅವಧಿಗೆ ದೇಶವನ್ನು ಮುನ್ನಡೆಸಿದ ಪ್ರಜಾಸತ್ತಾತ್ಮಕ ಪ್ರಧಾನಿ ಎಂಬ ದಾಖಲೆಯನ್ನು ದಾಟಿ ಮುನ್ನಡೆಯಲಿದ್ದಾರೆ. ಈ ಮೈಲಿಗಲ್ಲು ಸ್ವಾಭಾವಿಕವಾಗಿಯೇ ಇಬ್ಬರು ನಾಯಕರ ಆಡಳಿತ ಶೈಲಿ, ಸಿದ್ಧಾಂತ, ಹೋರಾಟ ಹಾಗೂ ಸಾಮ್ಯತೆಗಳನ್ನು ಚರ್ಚಿಸುವಂತೆ ಮಾಡಿದೆ. ಆ ಕುರಿತ ವಿವರ ಇಲ್ಲಿದೆ.

ಒಂದು ದೇಶದ ಇತಿಹಾಸದ ಪುಟಗಳನ್ನು ತಿರುವಿಹಾಕುವಾಗ, ಆಯಾ ಕಾಲಘಟ್ಟದಲ್ಲಿ ಪ್ರಧಾನಿಯಾರಾಗಿದ್ದರು ಎನ್ನುವುದಕ್ಕಿಂತ ಆ ಪ್ರಧಾನಿ ಯಾವ ರಾಜಕೀಯ, ಸಾಮಾಜಿಕ ಮತ್ತು ಜಾಗತಿಕ ವಾತಾವರಣದಲ್ಲಿ ಆಡಳಿತ ನಡೆಸಿದರು ಎನ್ನುವುದು ಅತ್ಯಂತ ಮುಖ್ಯವಾಗುತ್ತದೆ. ನಾಯಕನೊಬ್ಬನ ಸಾಧನೆ ಅಥವಾ ವೈಫಲ್ಯವನ್ನು ಅಳೆಯುವ ಮುನ್ನ, ಆ ನಾಯಕ ಭದ್ರವಾಗಿ ನಿಂತ ನೆಲವನ್ನು, ಅವನ ಸುತ್ತ ಬೀಸುತ್ತಿದ್ದ ಬಿರುಗಾಳಿಯ ತೀವ್ರತೆಯನ್ನು ಮತ್ತು ಅವನ ಹೆಗಲ ಮೇಲೆ ತೂಗುತ್ತಿದ್ದ ಸವಾಲುಗಳ ಆಕಾಶವನ್ನು ಅಳೆಯಬೇಕಾಗುತ್ತದೆ.

ಜವಾಹರಲಾಲ್ ನೆಹರು ಮತ್ತು ನರೇಂದ್ರ ಮೋದಿಯವರನ್ನು ಭಾರತದ ರಾಜಕೀಯ ಇತಿಹಾಸ ಸತತ ಮೂರು ಬಾರಿ ದೇಶದ ಚುಕ್ಕಾಣಿ ಹಿಡಿಯುವ ಅಪರೂಪದ ಐತಿಹಾಸಿಕ ಗೌರವಕ್ಕೆ ಪಾತ್ರವಾಗಿಸಿದೆ. ಹೀಗಾಗಿ ಇಂದಿನ ಸಾರ್ವಜನಿಕ ಹಾಗೂ ಬೌದ್ಧಿಕ ಚರ್ಚೆಗಳಲ್ಲಿ ಇವರಿಬ್ಬರನ್ನೂ ಪಕ್ಕಪಕ್ಕದಲ್ಲಿಟ್ಟು ಹೋಲಿಸುವ, ವಿಶ್ಲೇಷಿಸುವುದು ತೀರಾ ಸಾಮಾನ್ಯ. ಆದರೆ, ಆ ಹೋಲಿಕೆ ವೈಜ್ಞಾನಿಕವಾಗಿ ಮತ್ತು ಬೌದ್ಧಿಕವಾಗಿ ಪ್ರಾಮಾಣಿಕವಾಗಿರಬೇಕಾದರೆ, ಮೊದಲು ಇಬ್ಬರೂ ಆಡಳಿತ ನಡೆಸಿದ ಕಾಲಘಟ್ಟಗಳ ನಡುವಿನ ಅಂತರನ್ನು ಅರ್ಥಮಾಡಿಕೊಳ್ಳಬೇಕು. ಆ ಅಂತರ ಸಣ್ಣದೇನಲ್ಲ, ಅದು ನಿಜಕ್ಕೂ ಅಜಗಜಾಂತರ.

ನೆಹರು ಪ್ರಧಾನಿಯಾದದ್ದು 1947ರಲ್ಲಿ. ಒಂದು ಹೊಸ ರಾಷ್ಟ್ರ ಬ್ರಿಟಿಷ್ ದಾಸ್ಯದಿಂದ ಬಿಡುಗಡೆಯಾದ ಕಾಲ. ಅದೇ ನರೇಂದ್ರ ಮೋದಿ ಪ್ರಧಾನಿಯಾದದ್ದು 2014ರಲ್ಲಿ, ಈಗಾಗಲೇ ದಶಕಗಳ ಇತಿಹಾಸವಿರುವ ಹಳೆಯ ರಾಷ್ಟ್ರವೊಂದು ತನ್ನ ಮುಂದಿನ ಶತಮಾನದ ಜಾಗತಿಕ ನಾಯಕತ್ವವನ್ನು ಊಹಿಸಿಕೊಳ್ಳುತ್ತಿದ್ದ ಮಹತ್ವಾಕಾಂಕ್ಷೆಯ ಸಂದರ್ಭದಲ್ಲಿ. ಒಬ್ಬರು ಶೂನ್ಯದಿಂದ ಆಡಳಿತದ ಅಡಿಪಾಯ ಹಾಕಬೇಕಿತ್ತು, ಇನ್ನೊಬ್ಬರು ಈಗಾಗಲೇ ಸಿದ್ಧವಿರುವ ಬೃಹತ್ ಭವನವನ್ನು ಜಾಗತಿಕ ಆರ್ಥಿಕ, ರಾಜತಾಂತ್ರಿಕ ಉದ್ವಿಗ್ನಗಳ ನಡುವೆ ಧೃತಿಗೆಡದೆ ಮುನ್ನಡೆಸಬೇಕಿದೆ. ಇದು ಕೇವಲ ಎಪ್ಪತ್ತು ವರ್ಷಗಳ ತಾಂತ್ರಿಕ ಅಂತರವಲ್ಲ, ಇದು ಎರಡು ಸಂಪೂರ್ಣ ಭಿನ್ನ ಪ್ರಪಂಚಗಳ ನಡುವಿನ ಸ್ಥಿತ್ಯಂತರ.

ಕಾಲಘಟ್ಟಗಳ ನಡುವಿನ ವ್ಯತ್ಯಾಸ






1947ರ ಭಾರತ ಮತ್ತು 2014ರ ನಂತರದ ಭಾರತ... ಇವೆರಡೂ ಕೇವಲ ಎಪ್ಪತ್ತು ವರ್ಷಗಳ ಅಂತರದ ದೇಶಗಳಲ್ಲ, ಇವು ಎರಡು ಭಿನ್ನ ಪ್ರಪಂಚಗಳು. ನೆಹರೂ ಪಾಲಿಗೆ ಎದುರಾಳಿಗಳಿಲ್ಲದ ರಾಜಕೀಯ ಮುಕ್ತ ಬಯಲಿನಲ್ಲಿ ಶೂನ್ಯದಿಂದ ಸಂಸ್ಥೆಗಳನ್ನು ಕಟ್ಟುವ ಐತಿಹಾಸಿಕ ಭಾರವಿತ್ತಾದರೆ, ಮೋದಿಯವರ ಪಾಲಿಗೆ ಪ್ರತಿ ಇಂಚಿಗೂ ಹೋರಾಡಬೇಕಾದ ಮುಳ್ಳಿನ ಕಣದಲ್ಲಿ ಜಾಗತಿಕ ಬಿಕ್ಕಟ್ಟು ಹಾಗೂ ಇಪ್ಪತ್ತನಾಲ್ಕು ಗಂಟೆಯ ಕಣ್ಗಾವಲಿನ ನಡುವೆ ದೇಶವನ್ನು ಮುನ್ನಡೆಸುವ ಅನಿವಾರ್ಯತೆಯಿದೆ. ಇದು ಯಾರು ಶ್ರೇಷ್ಠ ಎನ್ನುವ ಸರಳೀಕೃತ ಚರ್ಚೆಯಲ್ಲ, ಬದಲಿಗೆ ಭಾರತೀಯ ಪ್ರಜಾಪ್ರಭುತ್ವ ತಾನು ಬೆಳೆದು ಬಂದ ಹಾದಿಯಾಗಿದೆ.



2014 ಮೇ 26




2019 ಮೇ 30



2024 ಜೂನ್ 09

ಶೂನ್ಯದಿಂದ ಆರಂಭಿಸಿದ ಯುಗ



ನೆಹರು ಕಾಲವನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಆಗಿನ ಭಾರತದ ಚಿತ್ರವನ್ನು ಮನಸ್ಸಿನಲ್ಲಿ ಎಳೆಯಬೇಕು. ಮುರಿದ ವಿಭಜನೆಯ ಗಾಯಗಳಿಂದ ರಕ್ತ ಸುರಿಯುತ್ತಿತ್ತು. ಲಕ್ಷಾಂತರ ನಿರಾಶ್ರಿತರು ಗಡಿಯ ಎರಡೂ ಕಡೆ ಸಾಗುತ್ತಿದ್ದರು. ಐದು ನೂರಕ್ಕೂ ಹೆಚ್ಚು ರಾಜಸಂಸ್ಥಾನಗಳನ್ನು ಒಂದು ಬಾವುಟದ ಕೆಳಗೆ ತರುವ ಸವಾಲಿತ್ತು. ಶೇ.12ರಷ್ಟು ಮಂದಿ ಮಾತ್ರ ಅಕ್ಷರಸ್ಥರಾಗಿದ್ದರು. ಕೈಗಾರಿಕೆ ಎಂದರೆ ಕೆಲವೇ ಗಿರಣಿಗಳು, ತಂತ್ರಜ್ಞಾನ ಎಂದರೆ ವಿದೇಶಿ ಆಮದು. ಇಂಥ ನೆಲದ ಮೇಲೆ ನಿಂತ ನೆಹರು ಮಾಡಬೇಕಿದ್ದದ್ದು ಸ್ಪಷ್ಟವಾಗಿತ್ತು. ಅದು ಒಂದು ರಾಷ್ಟ್ರವನ್ನು, ಒಂದು ರಾಜ್ಯವ್ಯವಸ್ಥೆಯನ್ನು, ಒಂದು ಆರ್ಥಿಕ ತಳಪಾಯವನ್ನು ಮೊದಲಿನಿಂದ ಕಟ್ಟುವುದು.

ಆ ಕಾಲದ ದೊಡ್ಡ ಅನುಕೂಲ ಎಂದರೆ ಹೊಸ ರಾಷ್ಟ್ರದ ಆ ಹುಮ್ಮಸ್ಸು. ಸ್ವಾತಂತ್ರ್ಯ ಹೋರಾಟದ ಕಿಚ್ಚು ಇನ್ನೂ ಆರಿರಲಿಲ್ಲ. ಜನರಿಗೆ ತ್ಯಾಗದ ಅರ್ಥ ಗೊತ್ತಿತ್ತು, ಕಾಯುವ ತಾಳ್ಮೆ ಇತ್ತು. ನೆಹರು ಅಣೆಕಟ್ಟುಗಳನ್ನು ಆಧುನಿಕ ಭಾರತದ ದೇವಾಲಯಗಳು ಎಂದಾಗ ಜನ ನಂಬಿದರು. ಭಾಕ್ರಾ-ನಂಗಲ್, ಭಿಲಾಯ್, ಐಐಟಿ, ಐಸಿಎಆರ್, ಬಾಹ್ಯಾಕಾಶ ಮತ್ತು ಪರಮಾಣು ಸಂಶೋಧನೆಯ ಸಂಸ್ಥೆಗಳೆಲ್ಲ ಆ ಕಾಲದ ಕನಸುಗಳ ಇಟ್ಟಿಗೆಗಳು. ಆದರೆ, ಆ ಯುಗದ ಅತಿ ದೊಡ್ಡ ಸೌಲಭ್ಯ ಬೇರೆಯೇ ಇತ್ತು. ಅದು ಕಾಲದ ನಿಧಾನಗತಿ. ಒಂದು ತಪ್ಪು ತೀರ್ಮಾನ ಮಾರನೆಯ ದಿನ ಜಗತ್ತಿನ ಮುಂದೆ ಬರುತ್ತಿರಲಿಲ್ಲ. ವಿಮರ್ಶೆ ಪತ್ರಿಕೆಯ ಸಂಪಾದಕೀಯದಲ್ಲಿ, ಸಂಸತ್ತಿನ ಚರ್ಚೆಯಲ್ಲಿ ಮಾತ್ರ ಇರುತ್ತಿತ್ತು. ವಾರಗಳ ನಂತರ ನಿರ್ಧಾರ ತೆಗೆದುಕೊಳ್ಳಲು ಸಮಯವಿತ್ತು, ತಿದ್ದಿಕೊಳ್ಳಲು ಅವಕಾಶವಿತ್ತು.

ಇದರ ಅರ್ಥ ನೆಹರು ಕಾಲ ಸವಾಲುರಹಿತವಾಗಿತ್ತು ಎಂದಲ್ಲ. 1962ರ ಚೀನಾ ಯುದ್ಧದ ಸೋಲು ಆ ಯುಗದ ಆತ್ಮವಿಶ್ವಾಸವನ್ನೇ ಅಲ್ಲಾಡಿಸಿತ್ತು. ಆಹಾರದ ಕೊರತೆ, ವಿದೇಶಿ ನೆರವಿನ ಮೇಲಿನ ಅವಲಂಬನೆ, ಭಾಷಾವಾರು ರಾಜ್ಯ ರಚನೆಯ ಬಿರುಗಾಳಿ ಸೇರಿ ಹಲವು ಸಮಸ್ಯೆಗಳಿದ್ದವು. ಆದರೆ ಆ ಸವಾಲುಗಳ ಸ್ವರೂಪವೇ ಬೇರೆ. ಅವು ಒಂದೊಂದಾಗಿ ಬರುತ್ತಿದ್ದವು. ಒಂದನ್ನು ನಿಭಾಯಿಸಿ ಮುಂದಿನದಕ್ಕೆ ಸಿದ್ಧವಾಗುವ ವ್ಯವಧಾನವಿತ್ತು. ಇಡೀ ಜಗತ್ತು ಕ್ಷಣಕ್ಷಣಕ್ಕೆ ಮೇಲೆ ಕಣ್ಣಿಟ್ಟು ಕೂತಿರಲಿಲ್ಲ.

ಎಲ್ಲವೂ ಒಟ್ಟಿಗೆ ಎರಗುವ ಯುಗ

ಇದಕ್ಕೆ ತದ್ವಿರುದ್ಧ ಮೋದಿ ಯುಗ. ಇಲ್ಲಿ ಸವಾಲುಗಳು ಸಾಲಾಗಿ ಬರುವುದಿಲ್ಲ, ಎಲ್ಲವೂ ಒಟ್ಟಿಗೆ ಮುಗಿಬೀಳುತ್ತವೆ. ಒಂದು ಬಿಕ್ಕಟ್ಟಿಗೆ ಉತ್ತರ ಹುಡುಕುತ್ತಿರುವಾಗಲೇ ಮತ್ತೆರಡು ಬಾಗಿಲು ಬಡಿಯುತ್ತವೆ. ನೆಹರುಗೆ ಒಂದು ಯುದ್ಧ ಎದುರಾದರೆ, ಮೋದಿ ಕಾಲದಲ್ಲಿ ಗಡಿಯ ಎರಡೂ ಮೂರೂ ಕಡೆ ಏಕಕಾಲಕ್ಕೆ ಒತ್ತಡ. ಪಶ್ಚಿಮದಲ್ಲಿ ಪಾಕಿಸ್ತಾನದಿಂದ 2016ರ ಉರಿ, 2019ರ ಪುಲ್ವಾಮಾ-ಬಾಲಾಕೋಟ್ ಮತ್ತು 2025ರ ಆಪರೇಷನ್ ಸಿಂದೂರ ಸಂಘರ್ಷ. ಉತ್ತರದಲ್ಲಿ ಚೀನಾದಿಂದ 2017ರ ಡೋಕ್ಲಾಮ್ ಬಿಕ್ಕಟ್ಟು, 2020ರ ಗಲ್ವಾನ್ ರಕ್ತಪಾತ. ಗಡಿಯಲ್ಲಿ ಶಾಂತಿಯೆಂಬುದು ಇಂದು ಸದಾ ಪರೀಕ್ಷೆಗೆ ಒಡ್ಡಿರುವ ಪದ. ಜತೆಗೆ ಜಾಗತಿಕ ಮಟ್ಟದಲ್ಲಿ ರಷ್ಯಾ-ಉಕ್ರೇನ್ ಮತ್ತು ಪಶ್ಚಿಮ ಏಷ್ಯಾದ ಯುದ್ಧಗಳಿಂದ ತೈಲ ಬೆಲೆ ಹೆಚ್ಚಳ, ಗೋಧಿ ರಫ್ತು, ರಸಗೊಬ್ಬರದ ಅಭಾವ. ಇದರ ನಡುವೆ ಬಂದದ್ದು ಶತಮಾನದಲ್ಲಿ ಒಮ್ಮೆ ಬರುವ ಮಹಾಮಾರಿ ಕೊರೋನಾ ವೈರಾಣು. ನೆಹರು ಯುಗಕ್ಕೆ ಇಂಥ ಒಂದು ಬಿಕ್ಕಟ್ಟಿನ ಊಹೆಯೂ ಇರಲಿಲ್ಲ. 130 ಕೋಟಿ ಜನರ ದೇಶವನ್ನು ಕೆಲವೇ ಗಂಟೆಗಳ ಸೂಚನೆಯಲ್ಲಿ ಸ್ತಬ್ಧಗೊಳಿಸಬೇಕಾದ ಪರಿಸ್ಥಿತಿ. ವಲಸೆ ಕಾರ್ಮಿಕರು ನೂರಾರು ಮೈಲಿ ನಡೆದ ಹೃದಯವಿದ್ರಾವಕ ದೃಶ್ಯಗಳು, ಆಮ್ಲಜನಕದ ಕೊರತೆ, ಸ್ಮಶಾನಗಳಲ್ಲಿ ಸಾಲು ಶವಗಳು. ಎರಡನೇ ಅಲೆಯ ಆ ಭೀಕರ ದಿನಗಳು ಆಡಳಿತದ ಮೇಲೆ ಶಾಶ್ವತ ಗಾಯವನ್ನು ಬಿಟ್ಟವು. ಆದರೆ ಇದೇ ಬಿಕ್ಕಟ್ಟಿನ ನಡುವೆ ದೇಶ ತನ್ನದೇ ಲಸಿಕೆಯನ್ನು ಅಭಿವೃದ್ಧಿಪಡಿಸಿ, 200 ಕೋಟಿಗೂ ಹೆಚ್ಚು ಡೋಸ್ ಹಾಕಿ, ಡಿಜಿಟಲ್ ತಂತ್ರಜ್ಞಾನದ ಮೂಲಕ ನಿರ್ವಹಿಸಿದ್ದು, ಆ ಕಾಲದ ಸಂಕೀರ್ಣತೆಯ ಇನ್ನೊಂದು ಮುಖ. ಒಂದೇ ಸವಾಲಿನಲ್ಲಿ ಆಳ ದುರಂತ ಮತ್ತು ದೊಡ್ಡ ಸಾಧನೆಯೆಂಬ ಎರಡೂ ಜೊತೆಯಾಗಿ ನಡೆಯುವುದು ಈ ಯುಗದ ಲಕ್ಷಣ.


ಆರ್ಥಿಕತೆಯ ಮೇಲೆ ಬೀಳುವ ಪ್ರಹಾರಗಳೂ ಇಂದು ಬೇರೆ ಸ್ವರೂಪದ್ದು. ನೆಹರು ಕಾಲದಲ್ಲಿ ಆರ್ಥಿಕ ಬಿಕ್ಕಟ್ಟು ಎಂದರೆ ಮುಖ್ಯವಾಗಿ ಆಂತರಿಕವಾದವುಗಳಾದ ಆಹಾರ ಉತ್ಪಾದನೆ, ಕೈಗಾರಿಕೆಯ ಕೊರತೆ. ಇಂದು ಭಾರತ ಜಾಗತಿಕ ಆರ್ಥಿಕತೆಯ ಅವಿಭಾಜ್ಯ ಭಾಗ. ಅಮೆರಿಕದ ಬಡ್ಡಿದರ ಏರಿದರೆ ಮುಂಬೈ ಷೇರುಪೇಟೆ ತಲ್ಲಣವಾಗುತ್ತದೆ. ಸುಂಕ ಯುದ್ಧ, ಪೂರೈಕೆ ಸರಪಳಿಯ ಅಡಚಣೆ, ಡಾಲರ್ ಮುಂದೆ ರೂಪಾಯಿಯ ಮೌಲ್ಯ ಕುಸಿತ ಎಂಬಂತಹ ಜಾಗತಿಕ ಸಮಸ್ಯೆಗಳು ದಿಲ್ಲಿಯ ನಿಯಂತ್ರಣದಲ್ಲಿ ಇಲ್ಲದ ಶಕ್ತಿಗಳಿಂದ ಬರುತ್ತವೆ. ನೋಟು ಅಮಾನ್ಯೀಕರಣ, ಜಿಎಸ್‌ಟಿ ಜಾರಿಯಂಥ ಆಂತರಿಕ ಆಘಾತಗಳ ಜೊತೆಗೆ ಈ ಬಾಹ್ಯ ಸಮಸ್ಯೆಗಳನ್ನೂ ಏಕಕಾಲಕ್ಕೆ ನಿಭಾಯಿಸಬೇಕಾದ ಸ್ಥಿತಿ. ಇದು ಒಂದು ಮುಚ್ಚಿದ, ಸ್ವಾವಲಂಬಿ ಆರ್ಥಿಕತೆಯ ಕಾಲವಲ್ಲ, ಎಲ್ಲ ಬಾಗಿಲೂ ತೆರೆದಿರುವ, ಎಲ್ಲ ಗಾಳಿಯೂ ಒಳಬರುವ ಕಾಲ.

ಇಪ್ಪತ್ತನಾಲ್ಕು ಗಂಟೆಯ ಕಣ್ಗಾವಲು

ಆದರೆ, ಮೋದಿ ಯುಗದ ಅತಿ ದೊಡ್ಡ ಮತ್ತು ಅತಿ ಹೊಸ ಸವಾಲು ಯುದ್ಧವೂ ಅಲ್ಲ, ಮಹಾಮಾರಿಯೂ ಅಲ್ಲ, ಅದು ನಿರಂತರ ಕಣ್ಗಾವಲು. ನೆಹರು ತೆಗೆದುಕೊಂಡ ಒಂದು ತೀರ್ಮಾನ ಜನರ ಕಣ್ಣಿಗೆ ಬೀಳಲು ದಿನಗಳು ಬೇಕಾಗುತ್ತಿದ್ದವು. ಇಂದು ಮೋದಿ ಆಡುವ ಒಂದು ವಾಕ್ಯ ಸೆಕೆಂಡುಗಳಲ್ಲಿ ಕೋಟ್ಯಂತರ ಮೊಬೈಲ್ ಪರದೆಗಳ ಮೇಲೆ ಮೂಡುತ್ತದೆ, ಅದೇ ಕ್ಷಣ ಸಾವಿರ ಕೋನಗಳಿಂದ ವಿಶ್ಲೇಷಣೆಗೆ, ವ್ಯಂಗ್ಯಚಿತ್ರಕ್ಕೆ, ಸಮರ್ಥನೆಗೆ, ಆಕ್ರೋಶಕ್ಕೆ ಒಳಗಾಗುತ್ತದೆ. ಸಾಮಾಜಿಕ ಜಾಲತಾಣಗಳು, 24X7 ಸುದ್ದಿವಾಹಿನಿಗಳು, ತ್ವರಿತ ಸಮೀಕ್ಷೆಗಳ ಈ ಯುಗದಲ್ಲಿ ಪ್ರತಿ ತೀರ್ಮಾನವೂ ತಕ್ಷಣದ ತೀರ್ಪಿಗೆ ಒಳಪಡುತ್ತದೆ. ತಿದ್ದಿಕೊಳ್ಳುವ ವ್ಯವಧಾನವಿಲ್ಲ, ಮೌನವಾಗಿರುವ ಐಷಾರಾಮವಿಲ್ಲ.

ಈ ಕಣ್ಗಾವಲು ಬರೀ ರಾಜಕೀಯ ಒತ್ತಡವಲ್ಲ, ಅದು ಆಡಳಿತದ ಶೈಲಿಯನ್ನೇ ಬದಲಿಸುತ್ತದೆ. ನೆಹರು ತಮ್ಮ ಧೋರಣೆಯನ್ನು ದೀರ್ಘ ಪತ್ರಗಳಲ್ಲಿ, ಸಂಸತ್ತಿನ ಭಾಷಣಗಳಲ್ಲಿ ನಿಧಾನವಾಗಿ ರೂಪಿಸಬಹುದಿತ್ತು. ಮೋದಿ ಯುಗದ ನಾಯಕ ಒಂದೇ ದಿನದಲ್ಲಿ ಜನಸಾಮಾನ್ಯನಿಗೆ, ಷೇರು ಮಾರುಕಟ್ಟೆಗೆ, ವಿದೇಶಿ ಬಂಡವಾಳಗಾರನಿಗೆ, ಗಡಿಯ ಸೈನಿಕನಿಗೆ ಮತ್ತು ಜಾಗತಿಕ ರಾಜತಂತ್ರ ಸೇರಿ ಎಲ್ಲರಿಗೂ ಏಕಕಾಲಕ್ಕೆ ಸಂದೇಶ ನೀಡಬೇಕು. ಅಭಿಪ್ರಾಯವೆಂಬುದು ಇಂದು ಗಂಟೆಗೊಮ್ಮೆ ಬದಲಾಗುವ ಹವಾಮಾನ. ಇಂಥ ಪರಿಸ್ಥಿತಿಯಲ್ಲಿ ಆಡಳಿತ ನಡೆಸುವುದು, ಆ ಆಡಳಿತದ ನಿರೂಪಣೆಯನ್ನು ನಿಯಂತ್ರಿಸುವುದಾಗಿದೆ. ಇದು ನೆಹರು ಕಾಲದ ಯಾವ ಪ್ರಧಾನಿಯೂ ಊಹಿಸಲಾಗದ ಸವಾಲು.

ಜತೆಗೆ ಒಕ್ಕೂಟ ವ್ಯವಸ್ಥೆಯ ಸ್ವರೂಪವೂ ಬದಲಾಗಿದೆ. ನೆಹರು ಕಾಲದಲ್ಲಿ ಬಹುತೇಕ ರಾಜ್ಯಗಳಲ್ಲಿ ಒಂದೇ ಪಕ್ಷದ ಆಡಳಿತವಿತ್ತು, ಸಮನ್ವಯ ಸುಲಭವಿತ್ತು. ಇಂದು ವಿವಿಧ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ಸರ್ಕಾರಗಳು, ಪ್ರಾದೇಶಿಕ ಅಸ್ಮಿತೆಯ ಒತ್ತಾಯಗಳು, ತೆರಿಗೆ ಹಂಚಿಕೆಯ ತಿಕ್ಕಾಟಗಳು ಸೇರಿದಂತೆ ಒಕ್ಕೂಟ ತತ್ತ್ವ ಸದಾ ಪರೀಕ್ಷೆಗೆ ಒಳಪಡುತ್ತಿದೆ. ಪ್ರತಿ ರಾಷ್ಟ್ರೀಯ ತೀರ್ಮಾನವೂ ಮೂವತ್ತಕ್ಕೂ ಹೆಚ್ಚು ಭಿನ್ನ ರಾಜಕೀಯ ಧ್ವನಿಗಳ ಜಾಲವನ್ನು ದಾಟಿ ಬರಬೇಕು. ಇದು ಪ್ರಜಾಪ್ರಭುತ್ವದ ಆಳ ಬೆಳೆದದ್ದರ ಸಂಕೇತ, ಆದರೆ ಆಡಳಿತಗಾರನಿಗೆ ಇದು ನಿತ್ಯದ ಪರೀಕ್ಷೆ.



ಕಾಲವನ್ನು ಮರೆತ ಹೋಲಿಕೆ ಅಸ್ಪಷ್ಟ

ಈ ಎಲ್ಲ ಕಾರಣಗಳಿಂದ, ನೆಹರು ಮತ್ತು ಮೋದಿಯವರ ಸಾಧನೆ-ವೈಫಲ್ಯಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವುದು ಬೌದ್ಧಿಕವಾಗಿ ಅಪ್ರಾಮಾಣಿಕ. ಇಬ್ಬರ ಜವಾಬ್ದಾರಿಗಳೇ ಬೇರೆ. ನೆಹರುಗೆ ಕಟ್ಟುವ ಭಾರ, ಮೋದಿಗೆ ಉಳಿಸಿಕೊಂಡು ಬೆಳೆಸುವ ಭಾರ. ಶೂನ್ಯದಿಂದ ಒಂದು ಸಂಸ್ಥೆ ಕಟ್ಟುವುದಕ್ಕೂ, ಈಗಾಗಲೇ ಇರುವ ಬೃಹತ್ ಸಂಸ್ಥೆಯನ್ನು ಬಿರುಗಾಳಿಯ ನಡುವೆ ಮುನ್ನಡೆಸುವುದಕ್ಕೂ ಬೇಕಾದ ಕೌಶಲ ಬೇರೆ. ನೆಹರು ಕಾಲದ ಪ್ರಧಾನಿಗೆ ತಾಳ್ಮೆ, ದೂರದೃಷ್ಟಿ ಮತ್ತು ಸ್ಥಿರತೆ ಮುಖ್ಯವಾಗಿತ್ತು. ಮೋದಿ ಕಾಲದ ಪ್ರಧಾನಿಗೆ ವೇಗ, ಏಕಕಾಲಿಕ ನಿರ್ವಹಣೆ ಮತ್ತು ಸಾರ್ವಜನಿಕ ನಿರೂಪಣೆಯ ಮೇಲಿನ ಹಿಡಿತ ಅನಿವಾರ್ಯ.

ನ್ಯಾಯಯುತವಾಗಿ ಹೇಳಬೇಕೆಂದರೆ, ಆಯಾ ಕಾಲಕ್ಕೆ ಆಯಾ ಸವಾಲುಗಳ ತೂಕವಿದೆ. ನೆಹರು ತಪ್ಪು ಮಾಡಿದಾಗ ಅದನ್ನು ಸರಿಪಡಿಸಲು ಕಾಲವಿತ್ತು, ಜನರ ತಾಳ್ಮೆಯಿತ್ತು, ಜಾಗತಿಕ ಒತ್ತಡ ಕಡಿಮೆಯಿತ್ತು. ಮೋದಿ ಒಂದು ತಪ್ಪು ಮಾಡಿದರೆ ಮರುಕ್ಷಣವೇ ಜಗತ್ತಿನ ಮುಂದೆ ತೆರೆದುಕೊಳ್ಳುತ್ತದೆ, ಮಾರುಕಟ್ಟೆ ಪ್ರತಿಕ್ರಿಯಿಸುತ್ತದೆ, ಗಡಿಯ ಆಚೆ ಶತ್ರು ಗಮನಿಸುತ್ತಾನೆ. ಒಂದು ಕಾಲ ಕಡಿಮೆ ಸಾಧನಗಳ, ಆದರೆ ಹೆಚ್ಚು ವ್ಯವಧಾನದ ಯುಗ, ಇನ್ನೊಂದು ಹೆಚ್ಚು ಸಾಧನಗಳ, ಆದರೆ, ಶೂನ್ಯ ವ್ಯವಧಾನದ ಯುಗ. ಒಂದು ಕಡೆ ಇಡೀ ರಾಷ್ಟ್ರವನ್ನು ಕಟ್ಟುವ ಭಾರ, ಇನ್ನೊಂದು ಕಡೆ ಯುದ್ಧ, ಮಹಾಮಾರಿ, ಆರ್ಥಿಕ ಪ್ರಹಾರ, ನಿರಂತರ ಕಣ್ಗಾವಲು. ಎಲ್ಲವೂ ಒಟ್ಟಿಗೆ ಬಡಿಯುವ ಭಾರ.

ಆದ್ದರಿಂದ ಯಾರು ಶ್ರೇಷ್ಠ ಎಂಬ ಪ್ರಶ್ನೆ ತಪ್ಪಾದದ್ದು. ಆಯಾ ಕಾಲ ಆ ನಾಯಕನ ಮುಂದೆ ಯಾವ ಪರೀಕ್ಷೆಯನ್ನು ಇಟ್ಟಿತು, ಮತ್ತು ಆ ಪರೀಕ್ಷೆಯನ್ನು ಆ ನಾಯಕ ಹೇಗೆ ಎದುರಿಸಿದ ಎಂಬುದು ಮುಖ್ಯ. ನೆಹರು ತಮ್ಮ ಕಾಲದ ಪರೀಕ್ಷೆಯನ್ನು ತಮ್ಮದೇ ಮಿತಿ-ಶಕ್ತಿಗಳೊಂದಿಗೆ ಎದುರಿಸಿದರು. ಮೋದಿ ತಮ್ಮ ಕಾಲದಲ್ಲಿ ಹೆಚ್ಚು ಕ್ರೂರವಾದ, ಹೆಚ್ಚು ವೇಗದ, ಹೆಚ್ಚು ನಿಷ್ಠುರವಾದ ಪರೀಕ್ಷೆಯನ್ನು ಎದುರಿಸುತ್ತಿದ್ದಾರೆ. ಇತಿಹಾಸ ಇಬ್ಬರನ್ನೂ ತೀರ್ಮಾನಿಸುತ್ತದೆ. ಆದರೆ ಆ ತೀರ್ಮಾನ ನ್ಯಾಯಯುತವಾಗಬೇಕಾದರೆ, ಮೊದಲು ಎರಡು ಕಾಲಗಳ ನಡುವಿನ ಆ ಅಜಗಜಾಂತರವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಕಾಲವನ್ನು ಮರೆತ ಹೋಲಿಕೆ, ಎಷ್ಟೇ ಚಾಣಾಕ್ಷವಾದರೂ ಅದು ಸುಳ್ಳಿನ ಸೋದರಿ.

ಎರಡು ಯುಗಗಳ ಹಾದಿ ಮತ್ತು ಸ್ವರೂಪ

ಆಯಾಮ	ನೆಹರು ಯುಗ (1947 - 1964)	ಮೋದಿ ಯುಗ (2014ರಿಂದ ಪ್ರಸ್ತುತ)
ಆರಂಭದ ನೆಲ	**ತೆರೆದ ಬಯಲು (ಗ್ರೀನ್‌ಫೀಲ್ಡ್):** ಬ್ರಿಟಿಷರು ಬಿಟ್ಟುಹೋದ ಖಾಲಿ ಬಿಳಿ ಹಾಳೆಯ ಮೇಲೆ ಶೂನ್ಯದಿಂದ ರಾಷ್ಟ್ರ ನಿರ್ಮಾಣ ಮಾಡುವ ಭಾರ.	**ಕಿಕ್ಕಿರಿದ ಕಣ (ಬ್ರೌನ್ ಫೀಲ್ಡ್):** ಆರು ದಶಕಗಳ ಕಾಲ ಆಳವಾಗಿ ಬೇರೂರಿದ್ದ ರಾಜಕೀಯ ಮತ್ತು ಸಾಂಸ್ಥಿಕ ವ್ಯವಸ್ಥೆಯನ್ನು ಮರುರೂಪಿಸುವ ಸವಾಲು.
ರಾಜಕೀಯ ಪ್ರತಿಸ್ಪರ್ಧೆ	**ಏಕಪಕ್ಷ ಪ್ರಾಬಲ್ಯ:** ಕಾಂಗ್ರೆಸ್‌ಗೆ ಸರಿಸಮನಾದ ಎದುರಾಳಿಗಳಿರಲಿಲ್ಲ. ಸ್ವಾತಂತ್ರ್ಯದ ಪ್ರಭಾವಳಿಯೇ ಶ್ರೀರಕ್ಷೆಯಾಗಿತ್ತು.	**ತೀವ್ರ ಜಿದ್ದಾಜಿದ್ದಿ:** ಪ್ರಬಲ ಪ್ರಾದೇಶಿಕ ಶಕ್ತಿಗಳು, ಸಂಘಟಿತ ಪ್ರತಿಪಕ್ಷಗಳು ಮತ್ತು ಪ್ರತಿ ಹಂತದಲ್ಲೂ ಕಠಿಣ ರಾಜಕೀಯ ಹೋರಾಟ.
ಅಧಿಕಾರದ ಸ್ವರೂಪ	**ವಾರಸುದಾರಿಕೆ:** ರಾಷ್ಟ್ರೀಯ ಚಳವಳಿ ಮತ್ತು ಮಹಾತ್ಮ ಗಾಂಧಿಯವರ ಪರಂಪರೆಯಿಂದ ಲಭಿಸಿದ ಸ್ವಾಭಾವಿಕ ನಾಯಕತ್ವ.	**ಸ್ವಯಂ ಗಳಿಸಿದ್ದು:** ತಳಮಟ್ಟದ ಸಂಘಟನೆಯಿಂದ ಮೆಟ್ಟಿಲೇರಿ, ತೀವ್ರ ಟೀಕೆ-ಪರೀಕ್ಷೆಗಳನ್ನು ದಾಟಿ ಗೆದ್ದುಕೊಂಡ ಅಧಿಕಾರ.
ಮಾಧ್ಯಮ ಮತ್ತು ಬೌದ್ಧಿಕ ವಲಯ	**ಅನುಕೂಲಕರ ವಾತಾವರಣ:** ರೂಪುಗೊಳ್ಳುತ್ತಿದ್ದ ಮಾಧ್ಯಮಗಳು, ಹೆಚ್ಚಾಗಿ ನೆಹರು ಅವರ ಉದಾರವಾದಿ ಧೋರಣೆಗೆ ಪೂರಕವಾಗಿದ್ದ ಬೌದ್ಧಿಕ ವರ್ಗ.	**ತೀಕ್ಷ್ಣ ಕಣ್ಗಾವಲು:** 24X7 ಸುದ್ದಿವಾಹಿನಿಗಳು, ವಿಭಜಿತ ಬೌದ್ಧಿಕ ವಲಯ ಮತ್ತು ತಕ್ಷಣದ ತೀರ್ಪು ನೀಡುವ ಸಾರ್ವಜನಿಕ ವೇದಿಕೆಗಳು.
ಆರ್ಥಿಕ ಮತ್ತು ತಾಂತ್ರಿಕ ಕ್ಷೇತ್ರ	**ಸಾಂಪ್ರದಾಯಿಕ ಬಿತ್ತನೆ:** ಅಣೆಕಟ್ಟು, ಭಾರೀ ಕೈಗಾರಿಕೆಗಳು, ಕೃಷಿ ಸಂಶೋಧನೆ ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಸ್ಥಾಪನೆ.	**ಡಿಜಿಟಲ್ ಕ್ರಾಂತಿ:** ಯುಪಿಐ, ನವೋದ್ಯಮ ಆರ್ಥಿಕತೆ, ಹಸಿರು ಇಂಧನ, ಸೆಮಿಕಂಡಕ್ಟರ್ ಮತ್ತು ಜಾಗತಿಕ ಸಂಪರ್ಕ ಕೊಂಡಿಗಳಲ್ಲಿ ಭಾರತದ ಪಾತ್ರ.
ಪ್ರಮುಖ ಸವಾಲು	ಸಂಸ್ಥೆಗಳನ್ನು ಶೂನ್ಯದಿಂದ ಕಟ್ಟುವುದು ಮತ್ತು ವೈವಿಧ್ಯಮಯ ದೇಶವನ್ನು ಒಗ್ಗೂಡಿಸುವುದು.	ಜಾಗತಿಕ ಬಿಕ್ಕಟ್ಟುಗಳ ನಡುವೆ ದೇಶದ ಆರ್ಥಿಕತೆಯನ್ನು ಎತ್ತಿಹಿಡಿಯುವುದು ಮತ್ತು ಸ್ಥಾಪಿತ ವ್ಯವಸ್ಥೆಯ ಜಡತ್ವವನ್ನು ನಿವಾರಿಸುವುದು.

ಇಂದಿನಿಂದ ಖಾಸಗಿ ಸರ್ವೀಸ್ ಬಸ್‌ಗಳ ಪ್ರಯಾಣ ದುಬಾರಿ!

• ಉಡುಪಿ: ನಿರಂತರ ಡೀಸೆಲ್ ದರ ಏರಿಕೆ ಹಾಗೂ ವಾಹನ ನಿರ್ವಹಣಾ ವೆಚ್ಚಗಳು ಹೆಚ್ಚಾಗಿರುವುದರಿಂದ ರಾಜ್ಯಾದ್ಯಂತ ಚಾಲನೆಯಲ್ಲಿರುವ ಎಲ್ಲಾ ಖಾಸಗಿ ಡೇ ಸರ್ವೀಸ್ (ಮಜಲು ವಾಹನ) ಬಸ್‌ಗಳ ಪ್ರಯಾಣ ದರವನ್ನು ಪರಿಷ್ಕರಿಸಲಾಗಿದ್ದು, ಜೂನ್ 9ರಿಂದ (ಇಂದಿನಿಂದ) ಹೊಸ ದರ ಜಾರಿಗೆ ಬರಲಿದೆ ಎಂದು ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಕುಯಿಲಾಡಿ ಸುರೇಶ್ ನಾಯಕ್ ತಿಳಿಸಿದ್ದಾರೆ.


ಉಡುಪಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕೂಟದ ವ್ಯಾಪ್ತಿಯಲ್ಲಿ ರಾಜ್ಯಾದ್ಯಂತ ಸುಮಾರು 5,300 ಬಸ್‌ಗಳು ಕಾರ್ಯಾಚರಣೆ ನಡೆಸುತ್ತಿವೆ.

> ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯಿಂದಾಗಿ ಕರ್ನಾಟಕ ರಾಜ್ಯ ಬಸ್ ಮಾಲೀಕರ ಒಕ್ಕೂಟವು ಈಗಾಗಲೇ ಶೇ.20ರಷ್ಟು ಪ್ರಯಾಣ ದರ ಏರಿಕೆ ಮಾಡಿದೆ. ಹಾಗಾಗಿ ನಮ್ಮ ಸಂಘದಿಂದ ಬಸ್ ದರ ಏರಿಕೆ ಮಾಡುತ್ತಿಲ್ಲ.
> ■ **ನಟರಾಜ ಶರ್ಮ**, ಕರ್ನಾಟಕ ರಾಜ್ಯ ಬಸ್ ಮಾಲೀಕರ ಸಂಘದ ಅಧ್ಯಕ್ಷ

ಕಳೆದ ಒಂದು ವರ್ಷದಲ್ಲಿ ರಾಜ್ಯ ಸರ್ಕಾರ ಒಮ್ಮೆ ಡೀಸೆಲ್ ದರವನ್ನು 3 ರೂ. ಹೆಚ್ಚಿಸಿದ್ದರೆ, ಕೇಂದ್ರ ಸರ್ಕಾರ ನಾಲ್ಕು ಬಾರಿ ಒಟ್ಟು 8.17 ರೂಪಾಯಿಯಷ್ಟು ಇಂಧನ ದರ ಏರಿಕೆ ಮಾಡಿದೆ. ಇದರೊಂದಿಗೆ ಬಸ್ ಬಿಡಿಭಾಗಗಳು, ಟೈರ್ ಹಾಗೂ ರಿಸೋಲಿಂಗ್ ವೆಚ್ಚ, ಟೋಲ್ ಶುಲ್ಕ, ನೌಕರರ ಸಂಬಳ ಮತ್ತು ಸರ್ಕಾರದ ತೆರಿಗೆ ಸೇರಿದಂತೆ ದೈನಂದಿನ ನಿರ್ವಹಣಾ ವೆಚ್ಚಗಳು ಗಣನೀಯವಾಗಿ ಏರಿಕೆಯಾಗಿವೆ.

ಈ ನಷ್ಟವನ್ನು ಸರಿದೂಗಿಸಲು ಬಸ್ ಟಿಕೆಟ್ ದರವನ್ನು ಶೇ. 5 ರಿಂದ 8 ರವರೆಗೆ ಹೆಚ್ಚಿಸುವುದು ಅನಿವಾರ್ಯವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ರಾಮಬಾಣ



20 ಟಿಎಂಸಿ ಸಂಸದರು ಎನ್‌ಡಿಎಗೆ?

ಪುಟ ೧➡ ಪಕ್ಷಾಧ್ಯಕ್ಷರು ನಮ್ಮ ಮೇಲೆ ಏಕಪಕ್ಷೀಯವಾಗಿ ಸರ್ವಾಧಿಕಾರಿ ವರ್ತನೆ ತೋರಿದ್ದಾಗಿ ಅವರು ಆರೋಪಿಸಿದರು. ಈ ಹಿಂದೆ ಉಚ್ಚಾಟಿತ ಟಿಎಂಸಿ ಶಾಸಕ ರಿತಬ್ರತ ಬ್ಯಾನರ್ಜಿ ಅವರ ನೇತೃತ್ವದಲ್ಲಿ 58 ಟಿಎಂಸಿ ಶಾಸಕರು ಪ್ರತ್ಯೇಕ ಗುಂಪು ರಚಿಸಿಕೊಂಡಿದ್ದು, ತಮ್ಮದೇ ನಿಜವಾದ ತೃಣಮೂಲ ಕಾಂಗ್ರೆಸ್ ಎಂದು ಹೇಳಿದ್ದರು. ಅವರು ವಿಧಾನಸಭೆಯಲ್ಲಿ ಶೋಭನ್‌ದೇವ್ ಚಟರ್ಜಿ ಅವರನ್ನು ವಿಪಕ್ಷ ನಾಯಕನಾಗಿ ಆಯ್ಕೆ ಮಾಡಿಕೊಂಡಿದ್ದರು. ಮೂರನೇ ಎರಡಕ್ಕಿಂತ ಹೆಚ್ಚಿನ ಶಾಸಕರ ನಿಲುವನ್ನು ಒಪ್ಪಬೇಕಾಗಿ ಬಂದಿದ್ದ ವಿಧಾನಸಭಾಧ್ಯಕ್ಷರು ಈ ಗುಂಪಿಗೆ ಮನ್ನಣೆ ನೀಡಿದ್ದರು. ಚುನಾವಣಾ ಪೂರ್ವದಲ್ಲಿ ವಿವಾದಾತ್ಮಕ ಐ-ಪಿಎಸಿ ರಾಜಕೀಯ ಸಲಹಾ ಸಂಸ್ಥೆಯನ್ನು ಟಿಎಂಸಿ ಆಯ್ಕೆ ಮಾಡಿಕೊಂಡಲ್ಲಿಂದಲೇ ಪಕ್ಷದಲ್ಲಿ ಅಸಮಾಧಾನ ಉಂಟಾಗಿದ್ದು, ಪಕ್ಷದ ಸಂಸದರು ಈ ಬಗ್ಗೆ ಆಕ್ಷೇಪಿಸಿದ್ದರು. ಇದಕ್ಕೂ ಮುನ್ನ ಅವರು ಬಿಜೆಪಿ ನಾಯಕ ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿ ತಮ್ಮ ಬಣದ ನಿರ್ಧಾರವನ್ನು ಅವರಿಗೆ ತಿಳಿಸಿದ್ದರು. ನಾವು ಪಕ್ಷದ ಸಂಸದರು ಸುದೀರ್ಘ ಸಮಾಲೋಚನೆಯ ಬಳಿಕ ಎನ್‌ಡಿಎ ಬೆಂಬಲಿಸುವ ತೀರ್ಮಾನಕ್ಕೆ ಬಂದಿರುವುದಾಗಿ ಅವರು ಹೇಳಿದರು. ಪಶ್ಚಿಮ ಬಂಗಾಲದಲ್ಲಿ ಪಕ್ಷದ ಉನ್ನತ ನಾಯಕರು, ಸಂಸದರು ಹಾಗೂ ಶಾಸಕರಲ್ಲದೆ ಇದೀಗ 2ನೇ ಹಂತದ ನಾಯಕರು ಹಾಗೂ ಸುಮಾರು 100 ಕೌನ್ಸಿಲರ್‌ಗಳು ಕೂಡ ಟಿಎಂಸಿಗೆ ರಾಜೀನಾಮೆ ನೀಡಿದ್ದಾರೆ.

ನೀರಿನಲ್ಲಿ ಕೊಚ್ಚಿ ಹೋದ ಬೈಕ್‌ಗಳು

• ಬೆಳಗಾವಿ: ಜಿಲ್ಲೆಯ ಬೈಲಹೊಂಗಲ ಪಟ್ಟಣದಲ್ಲಿ ಸೋಮವಾರ ಮಧ್ಯಾಹ್ನ ಸುರಿದ ಧಾರಾಕಾರ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಮೇಘ ಸ್ಫೋಟದಂತೆಯೇ ಸುರಿದ ಭಾರೀ ಮಳೆಯಿಂದ ನಗರದಲ್ಲಿನ ರಸ್ತೆಗಳು ನದಿಗಳಂತೆ ಹರಿದು, ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ನಿರಂತರ ಮಳೆಯ ಪರಿಣಾಮ ಬಸ್ ನಿಲ್ದಾಣದ ಸುತ್ತಮುತ್ತಲೂ ಹಾಗೂ ಪ್ರಮುಖ ರಸ್ತೆಗಳಲ್ಲಿ ಅಪಾರ ಪ್ರಮಾಣದ ನೀರು ಹರಿದಿದ್ದು, ನಿಲ್ಲಿಸಿದ್ದ ಕೆಲವು ಬೈಕ್‌ಗಳು ನೀರಿನ ಸೆಳೆತಕ್ಕೆ ಕೊಚ್ಚಿ ಹೋಗಿವೆ. ವಾಹನ ಸವಾರರು ತಮ್ಮ ವಾಹನಗಳನ್ನು ರಕ್ಷಿಸಲು ಪರದಾಡಿದ ಘಟನೆಗಳು ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗಿರುವ ದೃಶ್ಯಗಳು ಭಯ ಹುಟ್ಟಿಸುತ್ತಿವೆ ಎಂದು ಜನತೆಯು ಮಾತನಾಡಿಕೊಳ್ಳುತ್ತಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ನಮ್ಮ ಆಚಾರ ವಿಚಾರಗಳನ್ನು ತಿಳಿಸುವ,ನಾವು ಬಳಸುವ ವಸ್ತುಗಳನ್ನು ಹೇಳಲು, ನಿಮ್ಮ ಭಾವನೆಗಳನ್ನು ತಿಳಿಸಲು ಭಾರತೀಯ ಭಾಷೆಗಳೇ ಬೇಕು - **ಕಲ್ಲಡ್ಕ ಪ್ರಭಾಕರ ಭಟ್**

- ಮೊದಲು ನಮ್ಮ ಭಾವನೆಗಳನ್ನೇ ಬದಲಾಯಿಸಬೇಕಾಗಿದೆ ಅಂತ ಅನಿಸುತ್ತಿದೆ.ನಮ್ಮ ದೇಶದ ಉಡುಗೆ ತೊಡುಗೆ, ಆಚಾರ ವಿಚಾರಗಳೆಲ್ಲವೂ ತೀರಾ ಕನಿಷ್ಠ, ಪರದೇಶದ ವಿಚಾರಗಳೆಲ್ಲವೂ ಭಾರೀ ಶ್ರೇಷ್ಠ ಎಂಬ ಮೂರ್ಖತನವನ್ನೇ ಆಧುನಿಕತೆ ಅಂತ ಮೆರೆಯುತ್ತಾ ನಮ್ಮದನ್ನು ಮರೆಯುತ್ತಿದ್ದೇವೆ!

ದಿನ ಭವಿಷ್ಯ

ಮೇಷ
ಉತ್ಸಾಹ ನಾಶ. ಪ್ರತಿ ಹೆಜ್ಜೆ ಎಚ್ಚರದಿಂದ ಇಡಿ. ಕ್ಲಿಷ್ಟಕರ ಪರಿಸ್ಥಿತಿ ಎದುರಿಸುವಿರಿ. ಮನೆಯ ಬಿಗು ಪರಿಸ್ಥಿತಿ ತಿಳಿಗೊಳಿಸಿ. ವೆಚ್ಚ ಅಧಿಕದ ಚಿಂತೆ.

ವೃಷಭ
ಹಣದ ವಿಚಾರ ಸದ್ಯಕ್ಕೆ ಬಿಡಿ, ದೈನಂದಿನ ಬದುಕಲ್ಲಿ ಉತ್ಸಾಹ ತುಂಬುವ ವಿಷಯಕ್ಕೆ ಪ್ರಾಮುಖ್ಯತೆ ಕೊಡಿ. ಸಂಘರ್ಷ ತಪ್ಪಿಸಿರಿ.

ಮಿಥುನ
ವಿಶೇಷ ಘಟಿಸದ ಸಾಮಾನ್ಯ ದಿನ. ವೃತ್ತಿ ಸಂಬಂಧ ಪ್ರಯಾಣ ಸಾಧ್ಯತೆ. ಕೌಟುಂಬಿಕ ಸಮಸ್ಯೆ ಪರಿಹಾರ ಕಾಣದೆ ಚಿಂತೆ ಉಳಿದೀತು.

ಕಟಕ
ಒತ್ತಡದ ಬದುಕಿಂದ ತುಸು ಹೊರಬಂದು ಜೀವನ ಆನಂದಿಸಲು ಗಮನ ಕೊಡಿ. ಆತ್ಮೀಯರ ಸಂಗದಲ್ಲಿ ಕಾಲ ಕಳೆಯಿರಿ. ಖರ್ಚು ಕಡಿಮೆ ಮಾಡಿ.

ಸಿಂಹ
ನಿಮ್ಮ ಕೆಲಸದಲ್ಲಿ ಬದಲಾವಣೆ ಬಂದೀತು ನಿರೀಕ್ಷೆಗಿಂತ ಅಧಿಕ ಕಾರ್ಯ. ಒತ್ತಡ ಅಧಿಕ. ಆದರೂ ದಿನದಂತ್ಯಕ್ಕೆ ಸಮಾಧಾನ ಪಡುವಿರಿ.

ಕನ್ಯಾ
ಬಳಲಿಕೆ, ಒತ್ತಡ ಇಂದು ಕಾಡಬಹುದು. ವೃತ್ತಿಯಲ್ಲೂ, ಖಾಸಗಿ ಬದುಕಲ್ಲೂ ಅನುಚಿತ ಬೆಳವಣಿಗೆ ಕಾಣುವಿರಿ.

ತುಲಾ
ಗಾಬರಿ ಪಡಿಸುವ ಪ್ರಸಂಗ ಉಂಟಾದೀತು. ವಸ್ತು ಕಳವಿನ ಸಾಧ್ಯತೆ ಇದೆ. ಅಜೀರ್ಣ ಸಂಬಂಧಿ ಹೊಟ್ಟೆ ಸಮಸ್ಯೆ. ಸಮಚಿತ್ತದಿಂದ ವ್ಯವಹರಿಸಿ.

ವೃಶ್ಚಿಕ
ನಿಮ್ಮ ಅಂಜಿಕೆ, ಚಿಂತೆಗಳ ಬಗ್ಗೆ ಮುಕ್ತ ವಿಮರ್ಶೆ ನಡೆಸಿ. ಅದರ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿರಿ. ಪಲಾಯನ ಮಾಡದಿರಿ.

ಧನು
ಕಾರ್ಯ ಅಪೂರ್ಣ. ಪ್ರಮುಖ ಕಾರ್ಯ ಕೈಗೆತ್ತಿಕೊಳ್ಳದಿರಿ. ಆಪ್ತ ಸಂಬಂಧದಲ್ಲಿ ಒಡಕು. ಸಮಾಧಾನದ ನಡೆ ಅತ್ಯವಶ್ಯ.

ಮಕರ
ವಿವಾದ ಸೃಷ್ಟಿಸುವ ವಿಷಯದಿಂದ ದೂರವಿರಿ. ಪ್ರಮುಖ ಸಭೆ ಮುಂದೂಡಿ. ವೃತ್ತಿ ಸಂಬಂಧಿತ ವ್ಯವಹಾರ ಕಷ್ಟಕ್ಕೆ ಸಿಲುಕಬಹುದು.

ಕುಂಭ
ಫಲಪ್ರದ ದಿನವಲ್ಲ. ಎಲ್ಲರ ಜತೆ ಬೆರೆಯದೆ ಏಕಾಂಗಿಯಾಗಿರಲು ಬಯಸುವಿರಿ. ಆತ್ಮೀಯರ ಸಂಗಡ ಕಾಲ ಕಳೆಯಿರಿ. ಹುರುಪು ತುಂಬಿಕೊಳ್ಳಿ.

ಮೀನ
ನಿಮ್ಮ ಸಮಸ್ಯೆ ಮುಗಿಯುತ್ತಿಲ್ಲ ಎಂಬ ಚಿಂತೆ ಕಾಡುವುದು. ಸ್ವಲ್ಪ ದಿನ ಕಾಯಿರಿ, ಬಳಿಕ ಎಲ್ಲ ಸರಿಯಾಗಲಿದೆ.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30
ಅದೃಷ್ಟ ಸಂಖ್ಯೆ: 5,0,3,9

ಐದು ಸ್ಥಾನ ಗೆಲ್ಲಲು ಕೈ ರಣತಂತ್ರ | ಚುನಾವಣೆ ಪೈಪೋಟಿ ಖಾತ್ರಿ

ಮೇಲ್ಮನೆ ಕದನ ಕುತೂಹಲ

• ಬೆಂಗಳೂರು: ವಿಧಾನ ಪರಿಷತ್‌ಗೆ ಕಾಂಗ್ರೆಸ್‌ನಿಂದ ವಿನಯ್ ಕಾರ್ತಿಕ್ ಐದನೇ ಅಭ್ಯರ್ಥಿ ಕಣಕ್ಕೆ ಇಳಿದಿರುವುದರಿಂದ ಚುನಾವಣೆ ತುರುಸಿನ ಪೈಪೋಟಿಯಾಗುವುದು ಖಾತ್ರಿಯಾಗಿದೆ.

ಶಾಸಕರ ಸಂಖ್ಯಾಬಲದ ಆಧಾರದ ಮೇಲೆ ಕಾಂಗ್ರೆಸ್ ನಾಲ್ಕು, ಮತ್ತು ಬಿಜೆಪಿ ಎರಡು ಸ್ಥಾನಗಳನ್ನು ಅನಾಯಸವಾಗಿ ಗೆಲ್ಲಬಹುದಾಗಿದೆ. ಇನ್ನೊಂದು ಸ್ಥಾನಕ್ಕೆ ಎನ್‌ಡಿಎ ಮೈತ್ರಿ ಕೂಟದಿಂದ ಗೋವಿಂದಾ ರಾಜು ಅವರು ನಾಮಪತ್ರ ಸಲ್ಲಿಸಿದ್ದು, ಹೆಚ್ಚುವರಿ ಮತಗಳನ್ನು ಸೆಳೆಯಲು ಕಾಂಗ್ರೆಸ್ ತಂತ್ರ ರೂಪಿಸಿದೆ. ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್, ತಿಪ್ಪಣ್ಣ ಕಮಕನೂರ, ಪಿ.ವಿ. ಮೋಹನ್, ಶಿವಣ್ಣ ಮಳವಳ್ಳಿ ಮತ್ತು ವಿನಯ್ ಕಾರ್ತಿಕ್ ಸ್ಪರ್ಧಿಸಿದ್ದು, ಬಿಜೆಪಿಯಿಂದ ರಘು ಕೌಟಿಲ್ಯ ಮತ್ತು ಲಿಂಗರಾಜ್ ಪಾಟೀಲ ಕಣದಲ್ಲಿದ್ದಾರೆ. ಗೋವಿಂದರಾಜು ಮೈತ್ರಿ ಕೂಟದ ಅಭ್ಯರ್ಥಿಯಾಗಿದ್ದಾರೆ.ಮಂಗಳವಾರನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರಗಳು ಸೂಕ್ತವಾಗಿದ್ದಲ್ಲಿ ಚುನಾವಣೆ ಕಣ ರಂಗೇರಲಿದೆ.



> **ಕಾಂಗ್ರೆಸ್‌ಗೆ ಗೆಲುವು?**
> ಒಂದು ಸ್ಥಾನಕ್ಕೆ 28 ಮತಗಳು ಬೇಕಿದ್ದು ಕಾಂಗ್ರೆಸ್‌ನ 134 ಸ್ಥಾನಗಳ ಪೈಕಿ, ಇಬ್ಬರು ಪಕ್ಷೇತರರ ಬೆಂಬಲ ಇದ್ದು, ಸ್ಪೀಕರ್ ಸೇರಿದಂತೆ ಎಸ್‌ಕೆಪಿ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಸೇರಿದರೆ ಒಟ್ಟು ಒಟ್ಟು 138 ಮತಗಳಾಗಲಿದ್ದು, ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಿವರಾಮ್ ಹೆಬ್ಬಾರ್ ಮತ್ತು ಎಸ್.ಟಿ ಸೋಮಶೇಖರ್ ಮತ ನೀಡಿದರೆ ಕಾಂಗ್ರೆಸ್ 5ನೇ ಅಭ್ಯರ್ಥಿ ಗೆಲುವು ಸುಲಭವಾಗಲಿದೆ. ಇದರ ಜತೆಗೆ ಜೆಡಿಎಸ್‌ನ ಕೆಲವು ಶಾಸಕರನ್ನು ಸಂಪರ್ಕ ಮಾಡಲಾಗಿದ್ದು, ಅಡ್ಡಮತದಾನ ಆದಲ್ಲಿ ಗೆಲವು ಖಚಿತವಾಗಲಿದೆ.

62 ಸ್ಥಾನಗಳನ್ನು ಹೊಂದಿರುವ ಬಿಜೆಪಿಗೆ ಜನಾರ್ದನ್ ರೆಡ್ಡಿ ಅವರ ಬೆಂಬಲ ಸೇರಿ 63 ಆಗಲಿದೆ, ಯತ್ನಾಳ, ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಅವರನ್ನು ಪಕ್ಷದದಿಂದ ಉಚ್ಚಾಟಿಸಲಾಗಿದ್ದು, ಎಲ್ಲಾ ಪಕ್ಷದಿಂದ ಇವರುಗಳ ಮತಗಳನ್ನು ಸೆಳೆಯುವ ಯತ್ನಗಳು ನಡೆದಿವೆ. 18 ಸ್ಥಾನಗಳನ್ನು ಹೊಂದಿರುವ ಜೆಡಿಎಸ್ ಬಿಜೆಪಿಯ ಹೆಚ್ಚುವರಿ ಮತಗಳನ್ನು ಪಡೆದರೂ ಗೆಲುವು ಕಷ್ಟವಾಗಿದ್ದು, ಜೆಡಿಎಸ್ ಕೂಡಾ ಬಿಜೆಪಿ ಉಚ್ಚಾಟಿತ ಮೂವರು ಶಾಸಕರ ಮತಗಳು ಅವಶ್ಯಕವಾಗಿವೆ.

ಕಾಂಗ್ರೆಸ್‌ನ 5ನೇ ಅಭ್ಯರ್ಥಿಯ ನಾಮಪತ್ರ ಸಲ್ಲಿಸಿದ್ದರಿಂದ ವಿಧಾನ ಪರಿಷತ್‌ಗೆ ಚುನಾವಣೆ ನಡೆಯುವುದು ಪಕ್ಕಾ, ಜೂ.11ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ. ಕಣದಲ್ಲಿರುವ ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆಯುವುದು ಬಹುತೇಕ ಅನುಮಾನವಾಗಿದ್ದು, ಚುನಾವಣಾ ಚಟುವಟಿಕೆಗಳು ಜೋರಾಗಲಿವೆ.

ಪರಂಗೆ ಡಿಸಿಎಂ ಸ್ಥಾನ ಸಿಕ್ಕಿದ್ದು ತೃಪ್ತಿಯಿದೆ: ಜಾರಕಿಹೊಳಿ

ಪಕ್ಷದಲ್ಲಿ ಯಾರಿಗೂ ಅನ್ಯಾಯವಾಗಿಲ್ಲ

• ಬೆಳಗಾವಿ: ಪಕ್ಷದಲ್ಲಿ ಯಾರಿಗೂ ಅನ್ಯಾಯವಾಗಿಲ್ಲ, ಎಲ್ಲರಿಗೂ ಒಂದೇ ಬಾರಿಗೆ ಎಲ್ಲವೂ ಸಿಗಲು ಸಾಧ್ಯವಿಲ್ಲ. ಡಿಸಿಎಂ ಜಿ.ಪರಮೇಶ್ವರ ನಮ್ಮವರೇ. ಹೈಕಮಾಂಡ್ ಅವರಿಗೆ ಜವಾಬ್ದಾರಿ ನೀಡಿದೆ. ಅಷ್ಟಕ್ಕೇ ನಾವು ತೃಪ್ತಿಪಡಬೇಕು ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸೋಮವಾರ ಬೆಳಗಾವಿ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಡಿಸಿಎಂ ಮತ್ತು ಕೆಪಿಸಿಸಿ ಅಧ್ಯಕ್ಷಸ್ಥಾನ ಕೈ ತಪ್ಪಿದ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಒಬ್ಬರಿಗೆ ಒಂದು ಸ್ಥಾನ ಎನ್ನುವ ಕಾರಣದಿಂದ ಅಧ್ಯಕ್ಷ ಸ್ಥಾನ ಸಿಗಲಿಲ್ಲ, ಈ ಹಿಂದೆ ಇಂತಹ ಪರಿಸ್ಥಿತಿ ಇರಲಿಲ್ಲ, ಆದರೆ, ಈಗ ಪಕ್ಷದ ಆದೇಶವನ್ನು ಪ್ರತಿಯೊಬ್ಬರೂ ಪಾಲಿಸಲೇಬೇಕು ಎಂದು ತಿಳಿಸಿದರು.



ಜಿ.ಪರಮೇಶ್ವರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ದೊರೆಯುವಲ್ಲಿ ಸಿದ್ದರಾಮಯ್ಯನವರಪ್ರಯತ್ನ ಮತ್ತು ಬೆಂಬಲ ಪ್ರಮುಖ ಕಾರಣ. ಸಿದ್ದರಾಮಯ್ಯನವರು ತಮ್ಮ ಒಡನಾಡಿಗಳು, ಪಕ್ಷದ ಹಿರಿಯ ನಾಯಕರಿಗೆ ಸೂಕ್ತ ಸ್ಥಾನಮಾನ ಕೊಡಿಸಲು ಸದಾಶ್ರಮಿಸಿದ್ದಾರೆ ಎಂಬುದನ್ನು ಒತ್ತಿ ಹೇಳಿದರು. ಸಿದ್ಧಾಂತದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದಾಗ ಮಾತ್ರ ಜನಸಾಮಾನ್ಯರ ಮನಸ್ಸಿನಲ್ಲಿ ಜನನಾಯಕರಾಗಿ ಬೆಳೆಯಲು ಸಾಧ್ಯ ಎಂದರು.

ಬೆಳಗಾವಿಗೆ ಇನ್ನೊಂದು ಸಚಿವ ಸ್ಥಾನ ಖಚಿತ

ಬೆಳಗಾವಿಗೆ ಮತ್ತೊಂದು ಸಚಿವ ಸ್ಥಾನ ಸಿಗುವ ಕುರಿತು ದೃಢ ವಿಶ್ವಾಸ ವ್ಯಕ್ತಪಡಿಸಿದರು. ಬೆಳಗಾವಿ ದೊಡ್ಡ ಜಿಲ್ಲೆಯಾಗಿದ್ದು, ಇಲ್ಲಿನ ರಾಜಕೀಯ ಪ್ರಾತಿನಿಧ್ಯವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಜಿಲ್ಲೆಗೆ ಇನ್ನೊಂದು ಸಚಿವ ಸ್ಥಾನ ನೀಡಬೇಕು ಎಂಬ ಬೇಡಿಕೆಯ ಕುರಿತು ನಾನು ಈಗಾಗಲೇ ಪಕ್ಷದ ವರಿಷ್ಠರೊಂದಿಗೆ ಮಾತನಾಡಿದ್ದೇನೆ. ಬೆಳಗಾವಿಗೆ ಮತ್ತೊಂದು ಸಚಿವ ಸ್ಥಾನ ಸಿಕ್ಕೇ ಸಿಗುತ್ತದೆ ಎಂಬ ಸಂಪೂರ್ಣ ಭರವಸೆ ನನಗಿದೆ ಎಂದರು.

ಬಡವರ ಕಲ್ಯಾಣ, ದೇಶದ ಸಮಗ್ರ ಅಭಿವೃದ್ಧಿಗೆ ಆದ್ಯತೆ

ಪುಟ ೧➡ ಭಾರತ ಈ 12 ವರ್ಷಗಳಲ್ಲಿ ಒಂದು ಮಹತ್ವದ ಪರಿವರ್ತನೆ ಕಂಡಿದ್ದು, ಬಡವರು ಮತ್ತು ದುರ್ಬಲ ವರ್ಗದವರ ಕಲ್ಯಾಣವನ್ನು ಸರಕಾರದ ಪರಮಾದ್ಯತೆಯನ್ನಾಗಿ ಮಾಡಲಾಗಿದೆ. ಅಂತ್ಯೋದಯ ತತ್ತ್ವದ ಪ್ರೇರಣೆಯೊಂದಿಗೆ 80 ಕೋಟಿ ಬಡವರಿಗೆ ಉಚಿತ ಅಕ್ಕಿ ವಿತರಣೆಯ ಮೂಲಕ ದೇಶದಲ್ಲಿ ಹಸಿವೆಯಿಂದ ಜನರು ನಲುಗದಂತೆ ನೋಡಿಕೊಳ್ಳುವ ಜೊತೆಗೆ, ದಶಕಗಳಿಂದ ಹಿಂದೆ ಬಿದ್ದ ಜನರಿಗೂ ಅಭಿವೃದ್ಧಿ ಯೋಜನೆಗಳು ತಲುಪುವಂತೆ ಮಾಡಲು ಜನರ ಸಹಭಾಗಿತ್ವಕ್ಕೆ ಒತ್ತು ನೀಡಲಾಗಿದೆ ಎಂಬುದನ್ನು ಮೋದಿಯವರು ಬೊಟ್ಟು ಮಾಡಿದ್ದಾರೆ.

ಹಿಂದೆಲ್ಲ ತಂತ್ರಜ್ಞಾನ ಎಂದರೆ ಶ್ರೀಮಂತರಿಗೆ, ಬಡವರಿಗೇನು ಎಂಬ ಪ್ರಶ್ನೆಗಳಿದ್ದರೆ, ಇಂದು ಅದೇ ತಂತ್ರಜ್ಞಾನವನ್ನು ಬಡವರ ಜೀವನಮಟ್ಟ ಸುಧಾರಣೆಗೆ ಬಳಸಿ ಅವರಿಗೂ ಉತ್ತಮ ಗುಣಮಟ್ಟದ ಜೀವನ ನಡೆಸುವಂತೆ ಮಾಡಲು ಸರಕಾರ ಮುಂದಾಗಿರುವುದಕ್ಕೆ ನೇರ ಲಾಭ ವರ್ಗಾವಣೆ ಮತ್ತು ಡಿಜಿಟಲ್ ವೇದಿಕೆಗಳು ತಾಜಾ ನಿದರ್ಶನವಾಗಿದೆ.

ಇದರಿಂದ ಸರಕಾರದ ಯೋಜನೆಗಳು ಯಾವುದೇ ಲಂಚರುಷುವತ್ತುಗಳಿಲ್ಲದೆ ಪಾರದರ್ಶಕ ನೆಲೆಯಲ್ಲಿ ಜನರಿಗೆ ತಲುಪುವಂತೆ ಮಾಡಲಾಗಿದೆ. ಇದರಿಂದಾಗಿ ಸರಕಾರದ ಹಣ ಸೋರಿಕೆಯಾಗುವುದನ್ನು ತಡೆಗಟ್ಟಲು, ದಕ್ಷತೆ ಹೆಚ್ಚಿಸಲು ಮತ್ತು ಆಡಳಿತದ ಬಗ್ಗೆ ಜನತೆಯಲ್ಲಿ ವಿಶ್ವಾಸ, ನಂಬಿಕೆ ಬಲಗೊಳಿಸಲು ನೆರವಾಗಿದೆ ಎಂದು ಮೋದಿಯವರು ತಿಳಿಸಿದ್ದಾರೆ.

ಗರೀಬ್ ಕಲ್ಯಾಣ ಎಂಬುದು ಬರಿಯ ಘೋಷಣೆಯಾಗಿರದೆ ಇಂದು ಅದು ಮಾನವ ಸಬಲೀಕರಣದತ್ತ ಸಾಮೂಹಿಕ ಚಳವಳಿಯಾಗಿ ಮೂಡಿಬಂದಿದ್ದು, ಇದು ನಮ್ಮ ವಿಕಸಿತ ಭಾರತ್ ಕನಸನ್ನು ನನಸಾಗಿಸಲು ನೆರವಾಗಲಿದೆ ಎಂದಿದ್ದಾರೆ. ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರದ 12 ವರ್ಷಗಳು ಖಂಡಿತವಾಗಿಯೂ ಬಡವರ ಕಲ್ಯಾಣಕ್ಕೆ ಸಮರ್ಪಿತವಾಗಿದೆ ಎಂದು ಬಿಜೆಪಿ, ಎನ್‌ಡಿಎ ನಾಯಕರು ವಿಶ್ಲೇಷಿಸಿದ್ದಾರೆ. ಭಾರತದಲ್ಲಿ ಸರಕಾರದ ಸಾಧನೆಗಳ ಬಗ್ಗೆ ಚರ್ಚಿಸುವಾಗಲೆಲ್ಲ ಬಡವರ ಕಲ್ಯಾಣಕ್ಕೆ ಆದ್ಯತೆ ನೀಡುತ್ತಾ ಬರಲಾಗಿದೆ.

ಕಳೆದ 12 ವರ್ಷಗಳಲ್ಲಿ ಕೇಂದ್ರ ಸರಕಾರವು, ಪಿಎಂ ಗರೀಬ್ ಕಲ್ಯಾಣ್ ಅನ್ನ ಯೋಜನೆಯ ಮೂಲಕ ಬಡವರ ಅಭಿವೃದ್ಧಿಯನ್ನು ತನ್ನ ಪ್ರಾಥಮಿಕ ಆದ್ಯತೆಯಾಗಿ ಗುರುತಿಸಿ ಕೊಂಡಿತ್ತು. ಹಸಿವೆ ಮುಕ್ತ ಸಮಾಜ-ದೇಶ ನಿರ್ಮಾಣದಲ್ಲಿ ಘೋಷಣೆಗಳಿಂದಾಚೆಗೆ ನಿಜವಾಗಿಯೂ ಸಾಕಾರಗೊಳಿಸಿರುವುದು, ಸರಕಾರದ ಈ ನಿಟ್ಟಿನ ಹಲವು ಯೋಜನೆಗಳಿಂದ ಗ್ರಾಮೀಣ ಜನರ ಬದುಕಿನಲ್ಲಿ ಪರಿವರ್ತನೆಯೊಂದನ್ನು ತರಲು ಸಾಧ್ಯವಾಗಿರುವುದು ಗಮನಾರ್ಹವೆಂದು ಈ ಕುರಿತ ವಿಶ್ಲೇಷಣೆಯಲ್ಲಿ ವಿವರಿಸಲಾಗಿದೆ.

ನೆಹರು ದಾಖಲೆ ಮುರಿಯಲಿರುವ ಪ್ರಧಾನಿ ನರೇಂದ್ರ ಮೋದಿ

ಪುಟ ೧➡ **ಹೀಗಾಗಿ ಮೋದಿ ಅವರ 4,399 ದಿನಗಳ ಆಡಳಿತವು ಕೇವಲ ಒಂದು ದಾಖಲೆಯಲ್ಲ, ಆಧುನಿಕ ಭಾರತದ ರೂಪಾಂತರದ ಪ್ರಮುಖ ಅಧ್ಯಾಯವಾಗಿಯೂ ಪರಿಗಣಿಸಲಾಗುತ್ತಿದೆ.**

ಸವಾಲುಗಳ ನಡುವೆಯೂ ಜಗದ ಮನ್ನಣೆ ಪಡೆದ ಭಾರತ

ಪುಟ ೧➡ **2024ರ ಸಂಸದೀಯ ಚುನಾವಣೆಯಲ್ಲಿ 3ನೇ ಬಾರಿಗೆ ಅಧಿಕಾರಕ್ಕೆ ಬಂದ ಮೋದಿಯವರು ವಿಪಕ್ಷಗಳಿಂದ ಸತತ ಅಡ್ಡಿ, ಆತಂಕಗಳನ್ನು ಎದುರಿಸುವ ಜೊತೆಗೆ ಬಾಹ್ಯ ಪ್ರೇರಿತ ಸವಾಲುಗಳಿಗೆ ಎದೆಯೊಡ್ಡುತ್ತಲೇ ದೇಶವನ್ನು ಆತ್ಮನಿರ್ಭರತೆಯೆಡೆಗೆ ಒಯ್ಯಲು ನಿರಂತರ ಶ್ರಮಿಸುತ್ತಿದ್ದಾರೆ. ನರೇಂದ್ರ ಮೋದಿ ಸರಕಾರವನ್ನು ಅಸ್ಥಿರಗೊಳಿಸಲು ಆಂತರಿಕವಾಗಿ ಮತ್ತು ಬಾಹ್ಯ ನೆಲೆಗಳಿಂದ ನಡೆಯುತ್ತಿರುವ ಸತತ ಸಂಚು -ಪಿತೂರಿಗಳು ನಡೆಯುತ್ತಿರುವ ನಡುವೆಯೂ ದೇಶದ ಜನತೆ ಮೋದಿಯವರಲ್ಲಿ ವಿಶ್ವಾಸ ಇಟ್ಟಿದ್ದಾರೆ. ಹಾಗೆಯೇ ಚುನಾವಣಾ ಆಯೋಗದ ವಿಶ್ವಾಸಾರ್ಹತೆಗೇ ಧಕ್ಕೆ ಉಂಟು ಮಾಡುವ ಸತತ ಯತ್ನಗಳ ನಡುವೆಯೂ ದೇಶದಲ್ಲಿ ಮತಗಟ್ಟೆ ವಂಚನೆ, ಬೂತ್ ವಶೀಕರಣ, ಬೆದರಿಕೆ, ಹಿಂಸೆಗಳನ್ನು ತಡೆದು ನಿರ್ಭಾಥದಲ್ಲಿ ಪ್ರಜಾತಂತ್ರ ವ್ಯವಸ್ಥೆಯನ್ನು ಬಲಪಡಿಸುವ ಹೆಜ್ಜೆಗಳು, ವಿಶ್ವದೆಲ್ಲೆಡೆ ಭಾರತ-ಭಾರತೀಯರಿಗೆ ಮನ್ನಣೆ ಲಭಿಸುತ್ತಿರುವುದು ಗಮನ ಸೆಳೆಯುವ ಅಂಶವೆಂದು ವಿಶ್ಲೇಷಿಸಲಾಗಿದೆ.**

ರಾಜ್ಯಸಭೆಗೆ ನಾಲ್ವರ ಅವಿರೋಧ ಆಯ್ಕೆ?

ಪುಟ ೧➡ ಎನ್‌ಡಿಎ ಮೈತ್ರಿಕೂಟದಲ್ಲಿ ಜೆಡಿಎಸ್ ಇರುವುದರಿಂದ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನೇ ಬೆಂಬಲಿಸಲಿದೆ. ರಾಜ್ಯಸಭೆ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಕೊಡಗಿನ ಬೋಜಣ್ಣ ಸೋಮಯ್ಯ ಅವರು ಉಮೇದುವಾರಿಕೆ ಸಲ್ಲಿಸಿದ್ದಾರೆ. ಇವರ ನಾಮಪತ್ರಕ್ಕೆ ಸೂಚಕರ ಸಹಿ ಇಲ್ಲದಿರುವ ಹಿನ್ನೆಲೆಯಲ್ಲಿ ಬಹುತೇಕ ತಿರಸ್ಕೃತವಾಗಲಿದೆ. ಹೀಗಾಗಿ, ಅಂತಿಮವಾಗಿ ಚುನಾವಣಾ ಕಣದಲ್ಲಿ ಉಳಿಯುವ ಕಾಂಗ್ರೆಸ್‌ನ ಮೂವರು ಹಾಗೂ ಬಿಜೆಪಿಯ ಒಬ್ಬ ಅಭ್ಯರ್ಥಿ ಚುನಾಯಿತರಾಗಲಿದ್ದಾರೆ. ಮಂಗಳವಾರ ನಾಮಪತ್ರಗಳ ಪರಿಶೀಲನೆ ನಡೆದು ಸಿಂಧುವಾದ ನಾಮಪತ್ರಗಳನ್ನು ಪ್ರಕಟಿಸಲಾಗುತ್ತದೆ. ಉಮೇದುವಾರಿಕೆ ವಾಪಸ್ ಪಡೆಯಲು ಜೂ.11ರವರೆಗೆ ಅವಕಾಶವಿದೆ. ಅಂದು ಮಧ್ಯಾಹ್ನ 3 ಗಂಟೆಯ ನಂತರ ಅಂತಿಮವಾಗಿ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುತ್ತದೆ. ಚುನಾವಣಾ ಕಣದಲ್ಲಿ ಕಾಂಗ್ರೆಸ್‌ನ ಮೂವರು, ಬಿಜೆಪಿಯ ಒಬ್ಬ ಉಳಿಯುವುದರಿಂದ ಚುನಾವಣಾಧಿಕಾರಿ ಅವಿರೋಧವಾಗಿ ಆಯ್ಕೆಯಾಗಿರುವುದನ್ನು ಪ್ರಕಟಿಸಲಿದ್ದಾರೆ. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿಯ ಈರಣ್ಣ ಕಡಾಡಿ, ನಾರಾಯಣ ಕೊರಗಪ್ಪ ಅವರು ರಾಜ್ಯಸಭೆ ಸದಸ್ಯ ಸ್ಥಾನದಿಂದ ಜೂ.25ರಂದು ನಿವೃತ್ತಿಯಾಗಲಿದ್ದಾರೆ. ಇವರ ನಿವೃತ್ತಿಯಿಂದ ತೆರವಾಗುವ ರಾಜ್ಯಸಭಾ ಸದಸ್ಯ ಸ್ಥಾನಗಳಿಗೆ ಚುನಾವಣಾ ಪ್ರಕ್ರಿಯೆ ನಡೆಯುತ್ತಿದೆ.



ಬಿಜೆಪಿ ಅಭ್ಯರ್ಥಿಗಳಿಂದ ನಾಮಪತ್ರ

• ಬೆಂಗಳೂರು: ರಾಜ್ಯಸಭೆ ಮತ್ತು ವಿಧಾನಪರಿಷತ್ ಚುನಾವಣೆಗಳಿಗೆ ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಸೋಮವಾರ ಬಿಜೆಪಿ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ. ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಪ್ರೊ. ಎಂ.ನಾಗರಾಜ್ ಹಾಗೂ ವಿಧಾನ ಪರಿಷತ್ ಸ್ಥಾನಗಳಿಗೆ ಪಕ್ಷದ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್ ಮತ್ತು ರಘು ಕೌಟಿಲ್ಯ ಅವರು ಚುನಾವಣಾಧಿಕಾರಿ ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು. ಈ ವೇಳೆ ಪಕ್ಷದ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ, ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಮತ್ತು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್, ವಿಧಾನಸಭೆಯ ಪ್ರತಿಪಕ್ಷ ಮುಖ್ಯ ಸಚೇತಕ ದೊಡ್ಡನಗೌಡ ಜಿ. ಪಾಟೀಲ್, ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದು ಅಭ್ಯರ್ಥಿಗಳಿಗೆ ಶುಭ ಹಾರೈಸಿದರು.

> ರಾಜಕಾರಣದಲ್ಲಿ ಚದುರಂಗದ ಆಟ ಆಡುವಾಗ ಯಾರಾದರೂ ಯಾವ ರೀತಿ ಕಾಯಿ ನಡೆಸುತ್ತಾರೆ ಎಂದು ಹೇಳುತ್ತಾರೆಯೇ? ಯಾರೂ ಹೇಳುವುದಿಲ್ಲ.
> ■ **ಡಿ.ಕೆ. ಶಿವಕುಮಾರ್**, ಸಿಎಂ

ಐಡಿ ಇದ್ದರಷ್ಟೆ ಪಬ್ ಪ್ರವೇಶ: ಗೃಹ ಸಚಿವ

ಪುಟ ೧➡ **ಅಪ್ರಾಪ್ತರಿಗೆ ಮದ್ಯ ಪೂರೈಸುವ ಸಂಸ್ಥೆಗೆ ನೊಟೀಸ್ ನೀಡಿ:** ಅಪ್ರಾಪ್ತ ವಯಸ್ಕರ ಪ್ರವೇಶವನ್ನು ಕಟ್ಟುನಿಟ್ಟಾಗಿ ತಡೆಯಲು ಮತ್ತು ಮದ್ಯ ಸರಬರಾಜು ಮಾಡುವುದನ್ನು ನಿಷೇಧಿಸಲು ಬೆಂಗಳೂರಿನ ಎಲ್ಲಾ ಪಬ್‌ಗಳು, ಬ್ರೂವರೀಸ್, ಬಾರ್‌ಗಳು, ಕ್ಲಬ್‌ಗಳು, ಲಾಂಜ್‌ಗಳು, ರೆಸ್ಟೋರೆಂಟ್‌ಗಳು ಹಾಗೂ ಮದ್ಯ ಸರಬರಾಜು ಮಾಡುವ ಇತರ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡುವಂತೆ ಸಚಿವ ಪ್ರಿಯಾಂಕ್ ಖರ್ಗೆ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಪ್ರವೇಶ ದ್ವಾರದಲ್ಲೇ ಐಡಿ ಕಾರ್ಡ್ ಪರಿಶೀಲಿಸಿ: ಮದ್ಯ ಸರಬರಾಜು ಮಾಡುವ ಎಲ್ಲಾ ಸಂಸ್ಥೆಗಳು ಪ್ರವೇಶ ದ್ವಾರದಲ್ಲಿ ಮತ್ತು ಮದ್ಯವನ್ನು ನೀಡುವ ಮೊದಲು ಕಟ್ಟುನಿಟ್ಟಾದ ವಯಸ್ಸಿನ ಪರಿಶೀಲನಾ ನಿಯಮಗಳನ್ನು ಜಾರಿಗೆ ತರಬೇಕು ಎಂದು ಆದೇಶಿಸಿದ್ದಾರೆ. ಅಲ್ಲದೆ, ಸಂಸ್ಥೆಯ ಆವರಣದೊಳಗೆ ನಡೆಯುವ ನಿಯಮ ಉಲ್ಲಂಘನೆಗಳಿಗೆ ಆಯಾ ಸಂಸ್ಥೆಯ ಮಾಲೀಕರು, ವ್ಯವಸ್ಥಾಪಕರು, ಪರವಾನಗಿದಾರರು ಮತ್ತು ಕಾರ್ಯಕ್ರಮದ ಆಯೋಜಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಪ್ರಮುಖ ನಿರ್ದೇಶನಗಳು

ಪುಟ ೧➡ **4. ಸಂಸ್ಥೆಯ ಆವರಣದೊಳಗೆ ನಡೆಯುವ ನಿಯಮ ಉಲ್ಲಂಘನೆಗಳಿಗೆ ಆಯಾ ಸಂಸ್ಥೆಯ ಮಾಲೀಕರು, ವ್ಯವಸ್ಥಾಪಕರು, ಪರವಾನಗಿದಾರರು ಮತ್ತು ಕಾರ್ಯಕ್ರಮದ ಆಯೋಜಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ.**

5. **ಪ್ರವೇಶ ದ್ವಾರದ ಸಿಸಿಟಿವಿ ಕ್ಯಾಮೆರಾಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು, ತನಿಖೆಯ ಸಮಯದಲ್ಲಿ ನಿಯಮ ಪಾಲನೆಯನ್ನು ಪರಿಶೀಲಿಸಲು ಸಿಸಿಟಿವಿ ದೃಶ್ಯಾವಳಿಗಳನ್ನು ನಿಗದಿತ ಅವಧಿಯವರೆಗೆ ಸುರಕ್ಷಿತವಾಗಿ ಸಂಗ್ರಹಿಸಿಡಬೇಕು.**

6. **ಅಪ್ರಾಪ್ತ ವಯಸ್ಕರು ಮದ್ಯ, ತಂಬಾಕು, ಮಾದಕ ದ್ರವ್ಯಗಳಿಗೆ ಬಲಿಯಾಗುವುದನ್ನು ತಡೆಯಲು ಪೊಲೀಸರು ಶಿಕ್ಷಣ ಸಂಸ್ಥೆಗಳು, ಪೋಷಕರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ನಾಗರಿಕ ಗುಂಪುಗಳೊಂದಿಗೆ ಜಂಟಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.**



> ಅಪ್ರಾಪ್ತ ವಯಸ್ಕರ ಮದ್ಯಪಾನಕ್ಕೆ ಪ್ರೋತ್ಸಾಹ ನೀಡುವ ಅಥವಾ ಅದಕ್ಕೆ ಕಾರಣವಾಗುವ ಸಂಸ್ಥೆಗಳ ವಿರುದ್ಧ ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳುವುದಿಲ್ಲ ಮತ್ತು ಶೂನ್ಯ ಸಹಿಷ್ಣುತೆ ನೀತಿಯನ್ನು ಅಳವಡಿಸಿಕೊಳ್ಳಲಿದೆ.
> ■ **ಪ್ರಿಯಾಂಕ್ ಖರ್ಗೆ**, ಗೃಹ ಸಚಿವ

ಸಿನಿ ತಾರೆಯರಿಂದ ಮಾಹಿತಿ ಸಂಗ್ರಹಿಸಲು ಸಿಐಡಿ ನಿರ್ಧಾರ

ಪುಟ ೧➡ ಕಾರ್ಯಕ್ರಮದಲ್ಲಿ ಕನ್ನಡ ಚಿತ್ರರಂಗದ ಹಲವು ನಟ-ನಟಿಯರು ಭಾಗವಹಿಸಿದ್ದರು. ಸಿಐಡಿ ತನಿಖೆಯ ಭಾಗವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕೆಲ ಕಲಾವಿದರಿಂದ ಮಾಹಿತಿ ಪಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಆದರೆ, ನಟ-ನಟಿಯರಿಗೆ ಈಗಾಗಲೇ ನೋಟಿಸ್ ಜಾರಿ ಮಾಡಲಾಗಿದೆ ಎಂಬುದಕ್ಕೆ ಅಧಿಕೃತ ದೃಢೀಕರಣ ಲಭ್ಯವಾಗಿಲ್ಲ. ಶಿವಂ ಅಸೋಸಿಯೇಟ್ಸ್ ವಿರುದ್ಧ ಸಾವಿರಾರು ಹೂಡಿಕೆದಾರರಿಂದ ಹಣ ಸಂಗ್ರಹಿಸಿ ವಂಚನೆ ನಡೆಸಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಪ್ರಕರಣದ ತನಿಖೆ ಮುಂದುವರಿದಿದೆ. ತನಿಖೆಯ ಪ್ರಗತಿಯೊಂದಿಗೆ ಇನ್ನಷ್ಟು ಮಾಹಿತಿ ಬಹಿರಂಗವಾಗುವ ಸಾಧ್ಯತೆಯಿದ್ದು, ಇನ್ನು ಈ ಪ್ರಕರಣದಲ್ಲಿ ಯಾರು, ಯಾರು ಭಾಗಿಯಾಗಿದ್ದಾರೆ ಎಂಬುದು ತನಿಖೆಯ ಬಳಿಕ ತಿಳಿದುಬರಲಿದೆ.

ಮಧ್ಯಪ್ರಾಚ್ಯ: ಮತ್ತೆ ಸಂಘರ್ಷ

ಪುಟ ೧➡ ಕದನ ವಿರಾಮದ ಅವಧಿಯಲ್ಲಿ ಇರಾನ್ ಹಾರ್ಮುಜ್ ಜಲಸಂಧಿಯ ಮೇಲಿನ ತನ್ನ ನಿಯಂತ್ರಣವನ್ನು ಮುಂದುವರಿಸಿದೆ. ಇಸ್ರೇಲ್ ಲೆಬನಾನ್‌ನಲ್ಲಿ ಇರಾನ್ ಮಿತ್ರಪಡೆಯಾದ ಹಿಜ್ಬುಲ್ಲಾ ಮೇಲೆ ದಾಳಿ ಮುಂದುವರಿಸಿದೆ. ಸೋಮವಾರ ಯೆಮೆನ್‌ನ ಹೌತಿ ಬಂಡುಕೋರರು ಇಸ್ರೇಲ್ ಮೇಲೆ ಗುಂಡು ಹಾರಿಸುವ ಮೂಲಕ ಕೆಂಪು ಸಮುದ್ರದಲ್ಲಿ ಇಸ್ರೇಲ್‌ಗೆ ಸಂಬಂಧಿಸಿದ ಹಡಗುಗಳನ್ನು ಗುರಿಯಾಗಿಸುವುದಾಗಿ ಎಚ್ಚರಿಸಿದ್ದಾರೆ.

ಇರಾನ್ ವೈಮಾನಿಕ ವಲಯ ಬಂದ್: ಇರಾನ್ ಸೋಮವಾರ ಇಸ್ರೇಲ್‌ನ ಎರಡು ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿದ್ದು, ಇಸ್ರೇಲ್ ಮತ್ತು ಜೋರ್ಡಾನ್‌ನಲ್ಲಿ ಸೈರನ್‌ಗಳು ಮೊಳಗಿವೆ. ಇದಕ್ಕೆ ಪ್ರತಿಕ್ರಿಯೆಯಾಗಿ ಇಸ್ರೇಲ್ ಮಧ್ಯ ಮತ್ತು ಪಶ್ಚಿಮ ಇರಾನ್ ಮೇಲೆ ದಾಳಿ ನಡೆಸಿ, ಕ್ಷಿಪಣಿ ಲಾಂಚರ್‌ಗಳು ಮತ್ತು ಮಹ್‌ಶಹರ್‌ನಲ್ಲಿರುವ ಪೆಟ್ರೋಕೆಮಿಕಲ್ ಕಾರ್ಖಾನೆಯನ್ನು ಧ್ವಂಸಗೊಳಿಸಿದೆ. ಈ ದಾಳಿಯ ಬೆನ್ನಲ್ಲೇ ಇರಾನ್ ಟೆಹ್ರಾನ್‌ನ ಇಮಾಮ್ ಖೊಮೇನಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಲಿನ ವೈಮಾನಿಕ ವಲಯವನ್ನು ಮುಚ್ಚಿದೆ.

ಟ್ರಂಪ್- ನೆತನ್ಯಾಹು ಭಿನ್ನಾಭಿಪ್ರಾಯ?: ಈ ಕದನ ವಿರಾಮವನ್ನು ಉಳಿಸಲು ಈಜಿಪ್ಟ್, ಸೌದಿ ಅರೇಬಿಯಾ, ಟರ್ಕಿ, ಪಾಕಿಸ್ತಾನ ಮತ್ತು ಕತಾರ್ ರಾಜತಾಂತ್ರಿಕ ಪ್ರಯತ್ನಗಳನ್ನು ನಡೆಸುತ್ತಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಕ್ಷಣವೇ ದಾಳಿಗಳನ್ನು ನಿಲ್ಲಿಸುವಂತೆ ಕರೆನೀಡಿದ್ದು, ಮಾತುಕತೆಗಳು ಜಾರಿಯಲ್ಲಿವೆ ಎಂದು ಹೇಳಿದ್ದಾರೆ. ಸೋಮವಾರಕ್ಕೆ ಈ ಸಂಘರ್ಷ ನೂರು ದಿನಗಳನ್ನು ಪೂರೈಸಿದೆ. ಆದರೆ ವಿವಿಧ ಕಾರಣಗಳಿಂದ ಟ್ರಂಪ್ ಮತ್ತು ನೆತನ್ಯಾಹು ನಡುವೆ ಭಿನ್ನಾಭಿಪ್ರಾಯಗಳು ಹೆಚ್ಚುತ್ತಿರುವುದು ಕಂಡುಬಂದಿದೆ.

ಉಕ್ರೇನ್ ಪರಮಾಣು ಶೇಖರಣಾ ಸ್ಥಾವರಕ್ಕೆ ರಷ್ಯಾ ದಾಳಿ

• ಕೀವ್: ಉಕ್ರೇನ್‌ನ ಚೊರ್ನೋಬಿಲ್ ವಿದ್ಯುತ್ ಸ್ಥಾವರದ ಬಳಿ ಪರಮಾಣು ಇಂಧನ ಶೇಖರಣಾ ಸ್ಥಾವರವನ್ನು ರಷ್ಯಾದ ಪಡೆಗಳು ಗುರಿಯಾಗಿಸಿ ದಾಳಿ ನಡೆಸಿವೆ ಎಂದು ಅಧ್ಯಕ್ಷ ವ್ಲಾಡಿಮಿರ್ ಝೆಲೆನ್ಸ್ಕಿ ಹೇಳಿದ್ದಾರೆ. ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (ಐಎಇಎ) ಪ್ರಕಾರ, ದಾಳಿಯು ದೊಡ್ಡ ಪ್ರಮಾಣದ ಪರಮಾಣು ವಸ್ತುಗಳನ್ನು ಸಂಗ್ರಹಿಸಲಾಗಿರುವ ಸ್ಥಳದಿಂದ ಮೀಟರ್‌ಗಳಷ್ಟು ದೂರದಲ್ಲಿರುವ ಇಂಧನ ಸ್ಥಾವರ ಕಟ್ಟಡವನ್ನು ಗಮನಾರ್ಹವಾಗಿ ಹಾನಿಗೊಳಿಸಿದೆ.

ತಕ್ಷಣ ಇರಾನ್ ಬಿಡಲು ಭಾರತೀಯರಿಗೆ ಸೂಚನೆ

• ಹೊಸದಿಲ್ಲಿ: ಪರಿಸ್ಥಿತಿ ಹದಗೆಡುತ್ತಿರುವ ಹಿನ್ನೆಲೆಯಲ್ಲಿ ಕೂಡಲೇ ಇರಾನ್ ತೊರೆಯುವಂತೆ ಭಾರತೀಯರಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಈ ಪ್ರದೇಶದ ಇತ್ತೀಚಿನ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಈ ಸಲಹೆ ನೀಡಲಾಗಿದೆ. ತುರ್ತು ಸಲಹೆಯಲ್ಲಿ, ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಇರಾನ್‌ಗೆ ಪ್ರಯಾಣಿಸುವುದನ್ನು ತಪ್ಪಿಸಲು ಎಲ್ಲಾ ಭಾರತೀಯ ಪ್ರಜೆಗಳಿಗೆ ಮತ್ತೆ ತಿಳಿಸಿದೆ. ಅಂತೆಯೇ ಪ್ರಸ್ತುತ ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳು ಲಭ್ಯವಿರುವ ಸಾರಿಗೆ ವಿಧಾನಗಳ ಮೂಲಕ ದೇಶವನ್ನು ಕೂಡಲೇ ತೊರೆಯುವಂತೆ ಸೂಚಿಸಲಾಗಿದೆ.

ಮೂರು ಬಾರಿ ಸಿಎಂ ಸ್ಥಾನ ಕೈತಪ್ಪಿದಕ್ಕೆ ಡಿಸಿಎಂ ಭಾವುಕ

• **ತುಮಕೂರು:** ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಇತ್ತೀಚೆಗೆ ತುಮಕೂರಿನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾವುಕರಾಗಿ ಮಾತನಾಡಿದ್ದು, ಮುಖ್ಯಮಂತ್ರಿ ಸ್ಥಾನವು



ಮೂರು ಬಾರಿ ಕೈತಪ್ಪಿದ ಕುರಿತು ನೋವು ತೋಡಿಕೊಂಡಿದ್ದಾರೆ. ಇದು ತಮ್ಮ ಬಹುಕಾಲದ ಕನಸಾಗಿದ್ದು, ರಾಜಕೀಯ ಸನ್ನಿವೇಶಗಳಿಂದಾಗಿ ಕೈಗೂಡಿಲ್ಲ ಎಂದು ಹೇಳಿದ್ದಾರೆ.

ಹಳೆ ನೆನಪುಗಳನ್ನು ಹಂಚಿಕೊಂಡ ಅವರು, 2013ರ ಚುನಾವಣೆಯಲ್ಲಿ ನಾನು ಸೋತಿದ್ದರಿಂದ ಮುಖ್ಯಮಂತ್ರಿ ಹುದ್ದೆ ಕೈತಪ್ಪಿತು. ಅಂದು ನಾನು ಗೆದ್ದಿದ್ದರೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗುತ್ತಿರಲಿಲ್ಲ ಎಂದು ಹೇಳಿದ್ದಾರೆ. ಮುಂದುವರಿದು, 2018ರಲ್ಲಿ ಕಾಂಗ್ರೆಸ್ 80 ಸ್ಥಾನಗಳನ್ನು ಗೆದ್ದಿದ್ದರೂ ಮೈತ್ರಿ ಸರ್ಕಾರದಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾದರು. ಅವತ್ತು ನನ್ನನ್ನೂ ಮುಖ್ಯಮಂತ್ರಿ ಮಾಡಬಹುದಿತ್ತು, ಆದರೆ ಆ ಅವಕಾಶ ಸಿಗಲಿಲ್ಲ ಎಂದು ಬೇಸರದಿಂದ ನುಡಿದಿದ್ದಾರೆ.

ಇನ್ನು 2026ರ ಪ್ರಸ್ತುತ ರಾಜಕೀಯ ವಿದ್ಯಮಾನಗಳಲ್ಲೂ ತಮಗೆ ಸಿಎಂ ಹುದ್ದೆಯ ನಿರೀಕ್ಷೆ ಇತ್ತು, ಆದರೆ ವಿವಿಧ ರಾಜಕೀಯ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ ಎಂದು ಪರಮೇಶ್ವರ್ ಹೇಳಿದ್ದಾರೆ. ಹೈಕಮಾಂಡ್ ಜತೆಗಿನ ಚರ್ಚೆಯನ್ನು ಸ್ಮರಿಸಿದ ಅವರು, ನನಗೆ ಸಂಸ್ಥೆಯ ಶ್ರೇಯೋಭಿವೃದ್ಧಿ ಮುಖ್ಯ. ಕೊಡಲು ಸಾಧ್ಯವಿಲ್ಲ ಅಂದರೆ ನೇರವಾಗಿ ಹೇಳಿ, ನನಗೆ ಬಹಳ ದೊಡ್ಡ ಕೆಲಸಗಳಿವೆ, ನಾನು ವಾಪಸ್ ಹೋಗ್ತೀನಿ ಎಂದು ಹೇಳಿದ್ದೆ. ಕೊನೆಗೆ ಪಕ್ಷ ನನಗೆ ಉಪಮುಖ್ಯಮಂತ್ರಿ ಹುದ್ದೆಯ ಜವಾಬ್ದಾರಿ ನೀಡಿದೆ ಎಂದರು. ಸದ್ಯ ತಮಗೆ ಸಿಕ್ಕಿರುವ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆಯಿಂದ ನಿಭಾಯಿಸುವುದಾಗಿ ಹೇಳಿದ ಪರಮೇಶ್ವರ್, ಜನರು ನಮ್ಮನ್ನು ಸೂಕ್ಷ್ಮವಾಗಿ ನೋಡುತ್ತಾರೆ. ಆದ್ದರಿಂದ ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳುತ್ತೇನೆ ಎಂದು ಮಾರ್ಮಿಕವಾಗಿ ನುಡಿದರು.

ಸಿಎಂಗೆ ಅಭಿನಂದನೆ



ಡಾಲರ್ಸ್ ಕಾಲೋನಿಯಲ್ಲಿರುವ ಮಾಜಿ ಸಿಎಂ ಸದಾನಂದಗೌಡ ಅವರ ನಿವಾಸಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಸಂಜೆ ಭೇಟಿ ನೀಡಿ ಆಶೀರ್ವಾದ ಪಡೆದರು. ಈ ವೇಳೆ ಪತ್ನಿ ಡಾಟಿ ಸದಾನಂದಗೌಡ ಹಾಗೂ ಕುಟುಂಬದ ಸದಸ್ಯರು ಇದ್ದರು

ಮತಪತ್ರ ತಿರುಚಿದ ಆರೋಪ: ಮಧ್ಯಂತರ ತಡೆ ವಿಸ್ತರಿಸಿದ ಹೈ

• **ಬೆಂಗಳೂರು:** ಬಿಜೆಪಿಯ ಶೃಂಗೇರಿ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರು ಮತಪತ್ರ ತಿದ್ದಲು ಸಾಧ್ಯ? ಚುನಾವಣಾ ಆಯೋಗವು ಹಾಕಿದ್ದ



ಬೀಗವನ್ನು ಒಡೆದು ಮತಗಳನ್ನು ತಿದ್ದುಪಡಿ ಮಾಡಿ ಬಂದರೇ? ಅಂದರೆ ಚುನಾವಣಾ ಆಯೋಗದ ಭದ್ರತೆಯು ಉಪಯೋಗವಿಲ್ಲ ಎನ್ನುತ್ತೀರಾ ಎಂದು ಹೈಕೋರ್ಟ್ ದೂರುದಾರರನ್ನು ಮೌಖಿಕವಾಗಿ ಪ್ರಶ್ನಿಸಿತು.

ಅಂಚೆ ಮತಗಳ ಮರು ಎಣಿಕೆ ವೇಳೆ ಮತಪತ್ರಗಳನ್ನು ತಿರುಚಿದ ಆರೋಪಸಂಬಂಧ ಕಾಂಗ್ರೆಸ್ ಏಜೆಂಟ್ ಸುಧೀರ್ ಕುಮಾರ್ ಮುರೊಳ್ಳಿ ನೀಡಿದ ದೂರು ಆಧರಿಸಿ ಚಿಕ್ಕಮಗಳೂರು ಟೌನ್ ಪೊಲೀಸ್ ಠಾಣೆಯಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಎಫ್ಐಆರ್ ರದ್ದುಪಡಿಸಲು ಕೋರಿ ಡಿ.ಎನ್. ಜೀವರಾಜ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.

ಈ ವೇಳೆ ಅರ್ಜಿ ಪರಿಶೀಲಿಸಿದ ಪೀಠವು ಅರ್ಜಿದಾರರ ಮೇಲಿನ ಆರೋಪವೇನು? ಎಂದು ದೂರುದಾರರ ಪರ ವಕೀಲರನ್ನು ಪ್ರಶ್ನಿಸಿತು. ದೂರುದಾರರ ಪರ ವಕೀಲರು, ಮತಪತ್ರಗಳನ್ನು ತಿರುಚಲಾಗಿದೆ ಎಂದರು. ಆಗ ಪೀಠವು ಮತದಾನದ ಬಳಿಕ ಮತಪತ್ರಗಳು ಯಾರ ವಶದಲ್ಲಿತ್ತು? ಕೇಳಿತು.

ದೂರುದಾರರ ಪರ ವಕೀಲರು ಚುನಾವಣಾ ಆಯೋಗದ ವಶದಲ್ಲಿ ಎಂದರು. ಅದಕ್ಕೆ ಪೀಠವು ಮತಪತ್ರ ಚುನಾವಣಾ ಆಯೋಗದ ವಶದಲ್ಲಿರಬೇಕಾದರೆ, ಅವುಗಳನ್ನ ಜೀವರಾಜ್ ಹೇಗೆ ತಿದ್ದಲು ಸಾಧ್ಯ? ಚುನಾವಣಾ ಆಯೋಗವು ಹಾಕಿದ್ದ ಬೀಗವನ್ನು ಒಡೆದು ಮತಗಳನ್ನು ತಿದ್ದುಪಡಿ ಮಾಡಿ ಬಂದರೇ? ಅಂದರೆ ಚುನಾವಣಾ ಆಯೋಗದ ಭದ್ರತೆಯು ಉಪಯೋಗವಿಲ್ಲ ಎನ್ನುತ್ತೀರಾ? ಎಂದು ದೂರುದಾರರ ಪರ ವಕೀಲರನ್ನು ಪ್ರಶ್ನಿಸಿತು. ನಂತರ ಅರ್ಜಿದಾರರ ವಿರುದ್ಧದ ಎಫ್ಐಆರ್‌ಗೆ ನೀಡಿರುವ ಮಧ್ಯಂತರ ತಡೆಯನ್ನು ಜು.3ರವರೆಗೆ ವಿಸ್ತರಿಸಿ ವಿಚಾರಣೆ ಮುಂದೂಡಿತು.

ಕಿರುಸುದ್ದಿ

ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ನಿಧನ

• **ಬೆಂಗಳೂರು:** ಎಐಸಿಸಿ ಕಾರ್ಯದರ್ಶಿ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸೂರಜ್ ಹೆಗ್ಡೆ ಅವರು ಭಾನುವಾರ ರಾತ್ರಿ ನಿಧನರಾಗಿದ್ದಾರೆ. ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗ್ಡೆ ಅವರು ತೀವ್ರ ಹೃದಯ ಸ್ತಂಭನದಿಂದ ಬೆಂಗಳೂರಿನ ಎಂ.ಎಸ್ ರಾಯಮ್ಯ ಆಸ್ಪತ್ರೆಗೆ ದಾಖಲಾಗಿದ್ದರು. ಭಾನುವಾರ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರುಳೆದಿದ್ದಾರೆ. ಕಾಂಗ್ರೆಸ್‌ನಲ್ಲಿ ಹಲವು ಹುದ್ದೆಗಳನ್ನು ನಿರ್ವಹಿಸಿದ್ದ ಸೂರಜ್ ಹೆಗ್ಡೆ ಅವರ ಅಕಾಲಿಕ ನಿಧನಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಸೇರಿದಂತೆ ಹಲವು ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ. ಸೋಮವಾರ ಬೆಳಗ್ಗೆ ಸೂರಜ್ ಹೆಗ್ಡೆ ಅವರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂತಿಮ ನಮನ ಸಲ್ಲಿಸಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಸೂರಜ್ ಹೆಗ್ಡೆ ಅವರ ಎಂ.ಎಸ್ ರಾಮಯ್ಯ ಆಸ್ಪತ್ರೆ ಬಳಿಯ ನಿವಾಸಕ್ಕೆ ರಾತ್ರಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಂತಿಮ ನಮನ ಸಲ್ಲಿಸಲಿದರು.

ಡಿಕೆಶಿ ಅಂತಿಮ ನಮನ: ಸೂರಜ್ ಹೆಗ್ಡೆ ಅವರ ಕುಟುಂಬದ ದುಃಖ ನೋಡಲು ಆಗುತ್ತಿಲ್ಲ, ಅವರ ತಂದೆ ಕೂಡ ಒಬ್ಬ ಹಿರಿಯ ದೊಡ್ಡ ರಾಜಕಾರಣಿ. ವೈಯಕ್ತಿಕವಾಗಿ ನಮ್ಮೆಲ್ಲರಿಗೂ ಕೂಡ ಬಹಳ ದುಃಖ ಉಂಟಾಗಿದೆ. ಪಕ್ಷದ ಹಾಗೂ ಸರ್ಕಾರದ ಪರವಾಗಿ ಗೌರವ ನಮನ ಸಲ್ಲಿಸುತ್ತೇನೆ. ಕರ್ನಾಟಕ ಸರ್ಕಾರ ಅವರಿಗೆ ಸರ್ಕಾರಿ ಗೌರವದೊಂದಿಗೆ ಅಂತಿಮ ನಮನ ಸಲ್ಲಿಸಲಾಗುವುದು. ಅವರ ಕುಟುಂಬದವರು ಅಂತಿಮ ಕಾರ್ಯ ಯಾವಾಗ ತೀರ್ಮಾನ ಮಾಡುತ್ತಾರೋ ಆಗ ಗೌರವವನ್ನು ಕೊಡುತ್ತೇವೆ. ಈ ವಿಚಾರವಾಗಿ ನಾನು ಈಗಾಗಲೇ ಮುಖ್ಯ ಕಾರ್ಯದರ್ಶಿಗಳಿಗೆ ಆದೇಶ ತಿಳಿಸಿದ್ದೇನೆ. ಅವರ ಅಂತ್ಯಕ್ರಿಯೆಯಲ್ಲಿ ನಾನು ಕೂಡ ಭಾಗಿಯಾಗುತ್ತೇನೆ ಎಂದರು.

ಬಿಡದಿ ಟೌನ್‌ಶಿಪ್ ವಿಚಾರ ಸಿಎಂ ಸಮರ್ಪಕ ಉತ್ತರ ನೀಡಲಿ

• **ರಾಮನಗರ:** ಬಿಡದಿ ಟೌನ್‌ಶಿಪ್ ವಿಚಾರವಾಗಿ ಈ ಭಾರಿ ಅಧಿವೇಶನದಲ್ಲಿ ಚರ್ಚಿಸಲಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಂದ ಸರಿಯಾದ ಉತ್ತರ ಲಭಿಸದಿದ್ದರೇ, ಅಧಿವೇಶನದಲ್ಲಿ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುತ್ತದೆ ಎಂದು ವಿಜಯಪುರ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು. ಬಿಡದಿ ಟೌನ್‌ಶಿಪ್ ವಿರೋಧಿಸಿ ಸ್ಥಳೀಯ ರೈತರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದರು. ಅಧಿವೇಶನದಲ್ಲಿ ನಡೆಸುವ ಪ್ರತಿಭಟನೆಗೆ ಬಿಡದಿ ರೈತರು ಸಹ ಸಹಕಾರ ನೀಡಬೇಕು. ಸಾವಿರಾರು ಮಂದಿ ಆಗಮಿಸಿ, ಸರ್ಕಾರದ ನಡೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಬೇಕು ಎಂದು ಮನವಿ ಮಾಡಿದರು.

ಅನುಮಾನಾಸ್ಪದ ವಸ್ತು ಸ್ಫೋಟ: ಮೂವರಿಗೆ ಗಾಯ

• **ವಿಜಯಪುರ:** ಅನುಮಾನಾಸ್ಪದ ವಸ್ತು ಸ್ಫೋಟಗೊಂಡು ಮೂವರಿಗೆ ಗಂಭೀರ ಗಾಯವಾಗಿರುವ ಘಟನೆ ಜಿಲ್ಲೆ ಬಬಲೇಶ್ವರ ತಾಲೂಕಿನ ಮಮದಾಪೂರ ಗ್ರಾಮದಲ್ಲಿ ನಡೆದಿದೆ. ಪಾನ್‌ಶಾಪ್ ಅಂಗಡಿಯಲ್ಲಿ ಅನುಮಾನಾಸ್ಪದ ವಸ್ತು ಸ್ಫೋಟಗೊಂಡಿದ್ದು, ಮೂವರು ಗಂಭೀರ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಗಂಭೀರವಾಗಿ ಗಾಯಗೊಂಡವರ ಹೆಸರು ಹಾಗೂ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಸ್ಥಳಕ್ಕೆ ಪೊಲೀಸರು ಹಾಗೂ ಅಗ್ನಿ ಶಾಮಕ ಸಿಬ್ಬಂದಿ ಭೇಟಿ ಪರಿಶೀಲನೆ ನಡೆಸಿದ್ದಾರೆ. ಬಬಲೇಶ್ವರ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ವರ್ಷಾಂತ್ಯದೊಳಗೆ ಪಂಚಾಯ್ತಿಗಳಿಗೆ ಚುನಾವಣೆ: ಸಚಿವ ಈಶ್ವರ ಖಂಡ್ರೆ


ಖಾಲಿ ಹುದ್ದೆಗಳ ಭರ್ತಿ

• **ಬೆಂಗಳೂರು:** ಅಧಿಕಾರ ವಿಕೇಂದ್ರೀಕರಣ ದಿ. ರಾಜೀವ್ ಗಾಂಧಿ ಅವರ ಕಲ್ಪನೆಯಾಗಿದ್ದು, ಈ ವರ್ಷಾಂತ್ಯದೊಳಗೆ ಎಲ್ಲ ಪಂಚಾಯ್ತಿಗಳಿಗೆ ಚುನಾವಣೆ ನಡೆಸಲು ಕ್ರಮವಹಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಸೋಮವಾರ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಮುಂದಿನ 8 ವಾರಗಳಲ್ಲಿ ಕ್ಷೇತ್ರ ಪುನರ್ವಿಂಗಡಣೆ ಕಾರ್ಯ ಹಾಗೂ ಮೀಸಲಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ನಂತರ ರಾಜ್ಯ ಚುನಾವಣೆ ಆಯೋಗ ಚುನಾವಣೆ ಪ್ರಕ್ರಿಯೆ ನಡೆಸಲಿದೆ ಎಂದರು.

ಇಲಾಖೆಯಲ್ಲಿ ಎ ವರ್ಗದ 268, ಬಿ ವರ್ಗದ 1079, ಸಿ ವರ್ಗದ 5294, ಡಿ ವರ್ಗದ 2129 ಹುದ್ದೆಗಳು ಖಾಲಿ ಇದ್ದು, ಈ ಪೈಕಿ ಎಲ್ಲ ವರ್ಗದ ಹುದ್ದೆಗಳ ಪೈಕಿ 4 ಸಾವಿರ ಹುದ್ದೆಗಳ ಭರ್ತಿಗೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 25,540 ಮಂಜೂರಾದ ಹುದ್ದೆಗಳಿದ್ದು, ಈ ಪೈಕಿ ಖಾಲಿ ಇರುವ 8,770 ಹುದ್ದೆ ಪೈಕಿ 4 ಸಾವಿರ ಹುದ್ದೆ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಖಂಡ್ರೆ ತಿಳಿಸಿದರು.

ಕರ್ನಾಟಕ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಈ ಎಲ್ಲ ಹುದ್ದೆಗಳನ್ನು ಪಾರದರ್ಶಕವಾಗಿ ಭರ್ತಿ ಮಾಡಲು ಸೂಚಿಸಲಾಗಿದೆ ಎಂದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳ ಭರ್ತಿಗೂ ಕ್ರಮ ವಹಿಸುವಂತೆ ಸೂಚನೆ ನೀಡಿರುವುದಾಗಿ ಖಂಡ್ರೆ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಇಲಾಖೆಯ ಕಾರ್ಯದರ್ಶಿ ಗಳಾದ ಸಮೀರ್ ಶುಕ್ಲ, ರಂದೀಪ್ ಡಿ., ಪಂಚಾಯತ್ ರಾಜ್ ಆಯುಕ್ತೆ ಡಾ.ಕೆ. ಅರುಂಧತಿ, ಕೆಆರ್‌ಐಡಿಎಲ್ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಗೌಡ, ಕುಡಿಯುವ ನೀರು ಪೂರೈಕೆ ವಿಭಾಗದ ಆಯುಕ್ತರಾದ ಫೌಜಿಯಾ ತರುನ್ನುಂ ಮತ್ತಿತರರು ಪಾಲ್ಗೊಂಡಿದ್ದರು.



ಕಲುಷಿತ ನೀರು ಸರಬರಾಜಾಗದಂತೆ ಕಟ್ಟೆಚ್ಚರ ವಹಿಸಿ

ಗ್ರಾಮೀಣ ಕರ್ನಾಟಕದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವುದು ಎಲ್ಲ ಪಂಚಾಯಿತಿಗಳ ಆದ್ಯ ಕರ್ತವ್ಯವಾಗಿದ್ದು, ಯಾವುದೇ ಕಾರಣಕ್ಕೂ ಕಲುಷಿತ ನೀರು ಸರಬರಾಜಾಗದಂತೆ ಎಚ್ಚರ ವಹಿಸಲು ಖಂಡ್ರೆ ಸೂಚಿಸಿದರು. ಕಲುಷಿತ ನೀರು ಸೇವನೆಯಿಂದ ಮುಗ್ಧ ಜನರು ಮೃತಪಟ್ಟ ಘಟನೆಗಳು ಹಲವೆಡೆ ನಡೆದಿವೆ. ಇಂತಹ ಘಟನೆ ಮರುಕಳಿಸದಂತೆ ನೀರಿನ ಪರೀಕ್ಷೆಯನ್ನು ಎನ್.ಎ.ಬಿ.ಎಲ್. ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ನಿಯಮಿತವಾಗಿ ಮಾಡಬೇಕು. ಪಂಚಾಯ್ತಿಗಳಿಂದ ಪೂರೈಕೆ ಮಾಡುವ ಕುಡಿಯುವ ನೀರಿನಲ್ಲಿ ಯಾವುದೇ ಲೋಪ ಆಗದಂತೆ ಬಹು ಹಂತದ ಪರಿಶೀಲನೆ ನಡೆಸಲು ಸೂಚಿಸಿರುವುದಾಗಿ ತಿಳಿಸಿದರು.

> ಮನ್‌ರೇಗಾ ಸಂಯೋಜನೆಯಲ್ಲಿ ಸಾಮಾಜಿಕ ಅರಣ್ಯಕ್ಕೆ ಆರ್ಥಿಕ ನೆರವು ಒದಗಿಸಲಾಗಿದ್ದು, ರಸ್ತೆ ಬದಿಯಲ್ಲಿ ಮತ್ತು ನೆಡುತೋಪುಗಳಲ್ಲಿ ಬೆಳೆಸಲಾಗಿರುವ ಸಸಿಗಳ ಜಿಯೋ ಟ್ಯಾಗ್ ಮಾಡಿ, ಆಡಿಟ್ ಮಾಡಲು ಸೂಚಿಸಿದ್ದೇನೆ.
>
> ■ **ಈಶ್ವರ ಖಂಡ್ರೆ**, ಸಚಿವ

ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಪ್ರಾಯ

ಸಮರ್ಥ ಅಭ್ಯರ್ಥಿಗಳ ಆಯ್ಕೆಯಿಂದ ಸಂತಸ

• **ಬೆಂಗಳೂರು:** ಪಕ್ಷದ ವರಿಷ್ಠರು ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆಗೆ ಸಮರ್ಥ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿದ್ದಾರೆ. ಈ ಆಯ್ಕೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಸಂತಸ ತಂದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಪ್ರಾಯ ಪಟ್ಟಿದ್ದಾರೆ.



ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿ, ರಾಜ್ಯಸಭೆಗೆ ಪ್ರೊ.ಎಂ.ನಾಗರಾಜ್ ಅವರನ್ನು ಹಾಗೂ ವಿಧಾನ ಪರಿಷತ್‌ಗೆ ಲಿಂಗರಾಜ್ ಪಾಟೀಲ್, ರಘು ಕೌಟಿಲ್ಯ ಅವರ ಹೆಸರನ್ನು ಘೋಷಣೆ ಮಾಡಲಾಗಿದೆ. ಈ ಎಲ್ಲಾ ಮುಖಂಡರು ಪಕ್ಷದ ಸಂಘಟನೆಗೆ ವಿವಿಧ ರೀತಿಯಲ್ಲಿ ತೊಡಗಿಸಿಕೊಂಡಿದ್ದವರು ಎಂದರು.

ಮುಂದೆ ಸುಮಲತಾಗೆ ಸೂಕ್ತ ಸ್ಥಾನಮಾನ: ರಾಜ್ಯಸಭೆಗೆ ಸುಮಲತಾ ಅಂಬರೀಷ್ ಅವರ ಹೆಸರು ಪ್ರಸ್ತಾಪವಾಗಿತ್ತು. ಈ ಹಿಂದೆ ಮಂಡ್ಯದಿಂದ ಅವರು ಸ್ವತಂತ್ರ ಸ್ಪರ್ಧೆ ಮಾಡಿದ್ದಾಗ ಬಿಜೆಪಿ ಬೆಂಬಲ ನೀಡಿತ್ತು. ಒಳ್ಳೆಯ ಅಂತರದಿಂದ ಗೆಲುವು ಸಾಧಿಸಿದ್ದರು ಎಂದು ಹೇಳಿದರು.

ರಾಜ್ಯಸಭೆಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಹೆಸರು ಪ್ರಸ್ತಾಪ ಕುರಿತ ಪ್ರಶ್ನೆಗೆ ಉತ್ತರಿಸಿ, ದೇವೇಗೌಡರು ಮೋದಿ ಅವರ ಕೈ ಬಲಪಡಿಸಿದ್ದಾರೆ. ಎನ್‌ಡಿಎಗೆ ಬೆಂಬಲ ನೀಡಿದ್ದಾರೆ. ಅವರ ಬಗ್ಗೆ ಪಕ್ಷಕ್ಕೆ ಅಪಾರ ಗೌರವವಿದೆ. ರಾಜ್ಯಸಭೆಗೆ ಅವರನ್ನು ಕಳುಹಿಸುವ ಬಗ್ಗೆ ರಾಜ್ಯಮಟ್ಟದಲ್ಲಿ ಯಾವುದೇ ರೀತಿಯ ಚರ್ಚೆ ನಡೆದಿರಲಿಲ್ಲ. ಇತ್ತೀಚಿನ ರಾಜಕೀಯ ಸ್ಥಿತಿಗತಿ ನೀಡಿ ಸೂಕ್ತ ಅಭ್ಯರ್ಥಿಗೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂದರು.

ಸವಾಲಾದ ಖಾತೆ ಹಂಚಿಕೆ

ಸಿಎಂ ಅವರಿಗೆ ಖಾತೆ ಹಂಚಿಕೆಯೇ ಸವಾಲಾಗಿದೆ. ಮೂರು ವರ್ಷ ಅಭಿವೃದ್ಧಿ ಏನೂ ಮಾಡಿಲ್ಲ. ಇನ್ನಾದರೂ ಖಾತೆಗಳಿಗೆ ಕ್ಯಾತೆ ಬಿಟ್ಟು ಕೆಲಸ ಮಾಡಲಿ. ಮುಖ್ಯಮಂತ್ರಿಗಳು ಬದಲಾಗಿದ್ದಾರೆ. ಆದರೆ, ಈ ಸರ್ಕಾರದಿಂದ ಅಭಿವೃದ್ಧಿ ನಿರೀಕ್ಷೆ ಮಾಡಲಾಗದು. ಸಾಲದ ಹೊರೆ ಹತ್ತು ಲಕ್ಷ ಕೋಟಿ ರೂ.ಗೆ ಬಂದಿದೆ. ಸಂಪುಟ ಪೂರ್ಣ ಪ್ರಮಾಣದಲ್ಲಿ ರಚನೆಯಾಗಿಲ್ಲ. ಜಿಲ್ಲಾ ಉಸ್ತುವಾರಿ ಹಂಚಿಕೆ ಆಗಿಲ್ಲ ಎಂದರು.

ಎಚ್ಡಿಡಿಗೆ ಸಿಗದ ರಾಜ್ಯಸಭೆ ಸ್ಥಾನ: ಕೈ ಟೀಕೆ

• **ಬೆಂಗಳೂರು:** ಎನ್‌ಡಿಎ ಮೈತ್ರಿ ಕೂಟದಿಂದ ರಾಜ್ಯಸಭೆಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರಿಗೆ ಅವಕಾಶ ಸಿಗದಿರುವುದನ್ನು ಕಾಂಗ್ರೆಸ್ ಟೀಕಿಸಿದ್ದು, ಇದು ಕನ್ನಡಿಗರಿಗೆ ಮಾಡಿದ ದ್ರೋಹ ಎಂದು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ.

ಎನ್‌ಡಿಎ ಮೈತ್ರಿ ಕೂಟದಿಂದ ಎಚ್.ಡಿ. ದೇವೇಗೌಡರಿಗೆ ರಾಜ್ಯಸಭೆಗೆ ಸಿಗಲಿದೆ ಎಂಬ ಚರ್ಚೆಗಳು ಜೋರಾಗಿದ್ದವು, ಇದರ ಜತೆಗೆ ಬಿಜೆಪಿಯಿಂದಲೂ ಹಲವು ನಾಯಕರ ಹೆಸರು ಗಳು ಕೇಳಿ ಬಂದಿದ್ದವು, ಕೊನೆಯದಾಗಿ ಬಿಜೆಪಿ ಪ್ರೊ. ನಾಗರಾಜ ಅಭ್ಯರ್ಥಿಯಾಗಿ ಘೋಷಣೆ ಮಾಡಿಕೊಂಡಿರುವುದನ್ನು ಕಾಂಗ್ರೆಸ್ ಅಸ್ತ್ರ ಮಾಡಿಕೊಂಡಿದ್ದು, ಎಚ್.ಡಿ ಕುಮಾರಸ್ವಾಮಿ ಮತ್ತು ಬಿಜೆಪಿಯ ಮೇಲೆ ಮುಗಿಬಿದ್ದಿದ್ದಾರೆ.

ಬಿಜೆಪಿ ಮತ್ತು ಅದರ ನಾಯಕತ್ವವು ಜೆಡಿಎಸ್‌ಗೆ ಪದೇ ಪದೇ ಮಾಡುತ್ತಿರುವ ಅವಮಾನವನ್ನು ಸಚಿವ ಸ್ಥಾನ ಉಳಿಸಿಕೊಳ್ಳುವ ಉದ್ದೇಶದಿಂದ ಎಚ್.ಡಿ.ಕುಮಾರಸ್ವಾಮಿ ನಿರಂತರವಾಗಿ ಸಹಿಸಿಕೊಳ್ಳುತ್ತಿರುವುದು ಆಶ್ಚರ್ಯಕರವೂ, ಕಣ್ಣು ತೆರೆಸುವಂತದ್ದೂ ಆಗಿದೆ. ಈ ಅವಮಾನವನ್ನೂ ಒಪ್ಪಿಕೊಳ್ಳುವುದು ಪರಮಾವಧಿಯ ರಾಜಕೀಯ ಶರಣಾಗತಿಯಾಗಿದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದ್ದಾರೆ.

2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಜಿ.ಎಸ್ ಬಸವರಾಜು ಅವರು ದೇವೇಗೌಡರನ್ನು ಸೋಲಿಸಿದ್ದರು. ಬಳಿಕ, ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ, ಮಾಜಿ ಪ್ರಧಾನಮಂತ್ರಿಯ ಸ್ಥಾನಮಾನಕ್ಕೆ ಗೌರವ ನೀಡಿ ಕಾಂಗ್ರೆಸ್ ಪಕ್ಷ ಹಾಗೂ ಸೋನಿಯಾ ಗಾಂಧಿಯವರು ದೇವೇಗೌಡರನ್ನು ರಾಜ್ಯಸಭೆಗೆ ಆಯ್ಕೆ ಮಾಡಲು ಬೆಂಬಲ ನೀಡಿದ್ದರು. ಈಗ ದೇವೇಗೌಡರಿಗೆ ರಾಜ್ಯಸಭೆಗೆ ಅವಕಾಶ ನಿರಾಕರಿಸಿ, ತನ್ನ ಪಕ್ಷದ ಪದಾಧಿಕಾರಿಯನ್ನೇ ಆಯ್ಕೆ ಮಾಡಿದೆ ಎಂದಿದ್ದಾರೆ.

ಸುರ್ಜೇವಾಲಗೆ ತಿರುಗೇಟು

ಸುರ್ಜೇವಾಲ ಅವರ ಹೇಳಿಕೆ ತಿರುಗೇಟು ನೀಡಿರುವ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು,



ಜೆಡಿಎಸ್ ಬಗ್ಗೆ ಮಾತನಾಡುವ ಮುನ್ನ ಕಾಂಗ್ರೆಸ್‌ನ ಕರಾಳ ಇತಿಹಾಸವನ್ನು ಒಮ್ಮೆ ನೆನಪಿಸಿಕೊಳ್ಳಿ, 1997ರಲ್ಲಿ ಕುತಂತ್ರದಿಂದ ದೇವೇಗೌಡರನ್ನು ಅವರನ್ನು ಪ್ರಧಾನಿ ಸ್ಥಾನದಿಂದ ಕೆಳಗಿಳಿಸಿದ್ದು, ನೀವು ಕಾಂಗ್ರೆಸ್ ಪಕ್ಷ ಮಾಡಿದ ಈ ಮಹಾದ್ರೋಹವನ್ನು ಕಳೆದ 30 ವರ್ಷದಿಂದ ಕನ್ನಡಿಗರು ಪ್ರಶ್ನಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.



> ದೇವೇಗೌಡರ ಸಹಾಯದಿಂದ ಸಂಸತ್ತಿನಲ್ಲಿ ಬಿಜೆಪಿ ಬಿಲ್ ಪಾಸ್ ಮಾಡಿಕೊಂಡಿತು. ಆದರೆ, ಈಗ ಅವರಿಗೆ ಅಪಮಾನ ಮಾಡಿದೆ.
>
> ■ **ಬಿ.ಕೆ. ಹರಿಪ್ರಸಾದ್**, ಕೆಪಿಸಿಸಿ ಅಧ್ಯಕ್ಷ

ಬಿಜೆಪಿ ಅಭ್ಯರ್ಥಿಗಳಿಂದ ಉಮೇದುವಾರಿಕೆ

• **ಬೆಂಗಳೂರು:** ರಾಜ್ಯಸಭೆ ಮತ್ತು ವಿಧಾನ ಪರಿಷತ್ ಚುನಾವಣೆಗಳಿಗೆ ನಾಮಪತ್ರ ಸಲ್ಲಿಕೆಗೆ ಕೊನೆ ದಿನವಾದ ಸೋಮವಾರ ಬಿಜೆಪಿ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದ್ದಾರೆ.

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಪ್ರೊ. ಎಂ.ನಾಗರಾಜ್ ಹಾಗೂ ವಿಧಾನ ಪರಿಷತ್ ಸ್ಥಾನಗಳಿಗೆ ಪಕ್ಷದ ಅಭ್ಯರ್ಥಿಗಳಾದ ಲಿಂಗರಾಜ್ ಪಾಟೀಲ್ ಮತ್ತು ರಘು ಕೌಟಿಲ್ಯ ಅವರು ಚುನಾವಣಾಧಿಕಾರಿ ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು. ಈ ವೇಳೆ ಪಕ್ಷದ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜ ಯೇಂದ್ರ, ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ, ಶಾಸಕ ಡಾ. ಸಿ.ಎನ್.ಅಶ್ವತ್ಥ ನಾರಾಯಣ, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್, ವಿಧಾನಸಭೆಯ ಪ್ರತಿಪಕ್ಷ ಮುಖ್ಯ ಸಚೇತಕ ದೊಡ್ಡನಗೌಡ ಜಿ. ಪಾಟೀಲ್, ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದು ಅಭ್ಯರ್ಥಿಗಳಿಗೆ ಶುಭ ಹಾರೈಸಿದರು.

ಪ್ರೊ. ಎಂ. ನಾಗರಾಜ್: ಶಿಕ್ಷಣ ಮತ್ತು ರಾಜಕೀಯ ಕ್ಷೇತ್ರದಲ್ಲಿ ಸುದೀರ್ಘ ಅನುಭವ ಹೊಂದಿರುವ ಪ್ರೊ. ಎಂ. ನಾಗರಾಜ್ ಅವರು ಕರ್ನಾಟಕ ಬಿಜೆಪಿಯ ಹಿರಿಯ ಮುಖಂಡರು. ಮೂಲತಃ ಧಾರವಾಡದವರಾದ ನಾಗರಾಜ್, ಶೈಕ್ಷಣಿಕ ವಲಯದಿಂದ ಬಂದವರಾಗಿದ್ದು, ದೀರ್ಘಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮತ್ತು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಸಂಘಟನೆಗಳ ಸಕ್ರಿಯ ಕಾರ್ಯಕರ್ತರಾಗಿ ಗುರುತಿಸಿಕೊಂಡಿದ್ದಾರೆ. ತರುವಾಯ ಭಾರತೀಯ ಜನತಾ ಪಕ್ಷದ ಮೂಲಕ ಸಕ್ರಿಯ ರಾಜಕೀಯಕ್ಕೆ ಪ್ರವೇಶಿಸಿದರು.

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರಾಗಿಯೂ ಸೇವೆ ಸಲ್ಲಿಸಿದ ಆಡಳಿತಾತ್ಮಕ ಅನುಭವ ಇವರಿಗಿದೆ. ಜನಸಂಘದ ಸ್ಥಾಪಕ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಜನ್ಮ ಶತಮಾನೋತ್ಸವ ವರ್ಷದ ನಿಮಿತ್ತ ಪ್ರತಿ ಜಿಲ್ಲೆಯಲ್ಲೂ ಬಿಜೆಪಿಯ ಸ್ವಂತ ಕಾರ್ಯಾಲಯ ನಿರ್ಮಿಸುವ ಅಮಿತ್ ಶಾ ಅವರ ಕನಸಿನ ಯೋಜನೆಯಲ್ಲಿ ಭವನ ನಿರ್ಮಾಣ ಸಮಿತಿಗೆ ಕರ್ನಾಟಕದ ಸಂಚಾಲಕರಾಗಿಯೂ ಕೆಲಸ ಮಾಡಿದ್ದಾರೆ.



ಲಿಂಗರಾಜ ಪಾಟೀಲ್: ಹುಬ್ಬಳ್ಳಿಯವರಾದ ಲಿಂಗರಾಜ ಪಾಟೀಲ್ ಅವರು ಸುಮಾರು ಮೂರುವರೆ ದಶಕಗಳಿಂದ ಬಿಜೆಪಿಯಲ್ಲಿ ಕಾರ್ಯಕರ್ತರಾಗಿ, ಪಕ್ಷದ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ. ರಾಜ್ಯ ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದರು.

ರಘು ಕೌಟಿಲ್ಯ: ಮೈಸೂರಿನ ರಘು ಕೌಟಿಲ್ಯ ಅವರು ಕಾಯಕ ಸಮುದಾಯದ ಪರ ಹೋರಾಟದಲ್ಲಿ ಗುರುತಿಸಿ ಕೊಂಡವರು. ಬಿಜೆಪಿ ರಾಜ್ಯ ಸಹ ವಕ್ತಾರರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷರಾಗಿದ್ದಾರೆ. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಸರ್ಕಾರಿ ಯೋಜನೆಗಳಿಗೆ ಒಳಪಟ್ಟ ಖಾಸಗಿ ಆಸ್ಪತ್ರೆಗಳು ನಿಯಮ ಉಲ್ಲಂಘಿಸುವಂತಿಲ್ಲ

ನಿಯಮ ಮೀರಿದರೆ ಅನುಮತಿ ರದ್ದು: ಖಾದರ್

• **ಮಂಗಳೂರು:** ರಾಜ್ಯದ ಜನರಿಗೆ ಅತ್ಯುತ್ತಮ ಆರೋಗ್ಯ ಸೇವೆಯನ್ನು ನೀಡುವ ವಾತಾವರಣ ನಿರ್ಮಿಸಬೇಕಾಗಿದೆ. ಆಯುಷ್ಮಾನ್ ಸೇರಿದಂತೆ ಸರಕಾರಿ ಯೋಜನೆಗಳಿಗೆ ಒಳಪಟ್ಟ ಖಾಸಗಿ ಆಸ್ಪತ್ರೆಗಳು ಜನಸಾಮಾನ್ಯರಿಗೆ ನೀಡಿರುವ ಸೌಕರ್ಯ ನೀಡದೆ ನಿಯಮ ಉಲ್ಲಂಘಿಸಿದರೆ, ದುರುಪಯೋಗಪಡಿಸಿದರೆ ಅವರಿಗೆ ನೀಡಿರುವ ಅನುಮತಿ ರದ್ದುಪಡಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ. ಖಾದರ್ ತಿಳಿಸಿದರು.

ಆರೋಗ್ಯ ಸಚಿವ ಬಳಿಕ ಅವರು ಆರೋಗ್ಯ ಇಲಾಖೆ ದಕ ಜಿಲ್ಲಾ ಮಟ್ಟದ ಪ್ರಥಮ ಸಭೆಯನ್ನು ಪಡೀಲ್‌ನ ಪ್ರಜಾಸೌಧದಲ್ಲಿ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಸೋಮವಾರ ಅವರು ಮಾತನಾಡಿದರು. ಈ ಕಾರ್ಯದಲ್ಲಿ ವಿಫಲರಾಗುವ ಆರೋಗ್ಯ ಮಿತ್ರರ ವಿರುದ್ಧವೇ ಇಲಾಖೆಯಿಂದ ಕ್ರಮ ವಹಿಸಲಾಗುವುದು ಎಂದರು. ಜನಸಾಮಾನ್ಯರಿಗೂ ಅತ್ಯುತ್ತಮ ಆರೋಗ್ಯ ವ್ಯವಸ್ಥೆ ಲಭ್ಯವಾಗುವುದನ್ನು ಖಾತರಿ ಪಡಿಸುವುದಕ್ಕಾಗಿ ಆರೋಗ್ಯ ಮಿತ್ರರನ್ನು ನೇಮಕ ಮಾಡಲಾಗಿದೆ. ಅವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು. ಇದರ ಜತೆಯಲ್ಲೇ ಅಗತ್ಯ ಕೆಲವೊಂದು ಯೋಜನೆಗಳನ್ನು ಜಾರಿಗೊಳಿಸುವುದು ಹಾಗೂ ಅನಗತ್ಯ ಕಾರ್ಯಕ್ರಮಗಳನ್ನು ಕೈಬಿಡುವ ಬಗ್ಗೆಯೂ ಮುಂದಿನ ದಿನಗಳಲ್ಲಿ ರಾಜ್ಯವ್ಯಾಪಿಯಾಗಿ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದರು.



> ಆಯುಷ್ಮಾನ್ ಕರ್ನಾಟಕ ಯೋಜನೆಯಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವ ರೋಗಿಗಳಿಂದ ಖಾಸಗಿ ಆಸ್ಪತ್ರೆಗಳು ಹಣ ಪಡೆಯಬಾರದು. ಒಂದು ವೇಳೆ ಹೆಚ್ಚುವರಿ ಶುಲ್ಕ ಪಡೆದರೆ ಆರೋಗ್ಯ ಮಿತ್ರರು ಈ ಬಗ್ಗೆ ಗಮನ ಹರಿಸಿ ಮೇಲಿನ ಅಧಿಕಾರಿಗಳ ಮೂಲಕ ಉಚಿತ ಚಿಕಿತ್ಸೆಗೆ ಕ್ರಮ ವಹಿಸಬೇಕು.
>
> ■ **ಯು.ಟಿ. ಖಾದರ್**, ಸಚಿವ

ಹಿಂದೆ ನಾನು ಆರೋಗ್ಯ ಸಚಿವನಾಗಿದ್ದ ವೇಳೆ ಆರೋಗ್ಯ ಕರ್ನಾಟಕದಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತವಾಗಿ ಹಾಗೂ ಎಪಿಎಲ್‌ನವರಿಗೆ ಶೇ. 70ರಷ್ಟು ಉಚಿತ, ಶೇ.30ರಷ್ಟು ವೆಚ್ಚ ರೋಗಿ ಭರಿಸುವ ವ್ಯವಸ್ಥೆ ಇತ್ತು. ಬಳಿಕ ಅದೀಗ ಶೇ. 70ರಷ್ಟು ರೋಗಿ ಭರಿಸುತ್ತಿದ್ದು, ಶೇ.30 ಸರಕಾರ ಎಂಬಂತಾಗಿದೆ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಲಾಗುವುದು. ಎಪಿಎಲ್ ಹಾಗೂ ಬಿಪಿಎಲ್‌ನವರಿಗೆ ಕಡಿಮೆ ದರದಲ್ಲಿ ಚಿಕಿತ್ಸೆ ಒದಗಿಸುವ ಬಗ್ಗೆ ರೂಪುರೇಷೆ ಮಾಡಲಾಗುವುದು ಎಂದು ಹೇಳಿದರು.

ವೈದ್ಯರು ಸರಕಾರಿ ಆಸ್ಪತ್ರೆಗಳಲ್ಲಿ ಸೇವೆ ಮಾಡಲು ಆಕರ್ಷಿಸುವ ಹಾಗೂ ಪ್ರೇರಣೆ ನೀಡುವ ಯೋಜನೆಗಳನ್ನು ಹಮ್ಮಿಕೊಳ್ಳುವ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚಿಸಿ ಕ್ರಮ ವಹಿಸಲಾಗುವುದು. ಸರಕಾರ ಯೋಜನೆಗಳು ಸಮರ್ಪಕವಾಗಿ ನಿರ್ವಹಣೆಯಾಗಬೇಕಾದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯವಸ್ಥೆ ಉತ್ತಮವಾಗಿರಬೇಕು. ಅದಕ್ಕಾಗಿ ಜಿಲ್ಲಾ ಮಟ್ಟದ ವಿವಿಧ ಹಂತಗಳ ಅಧಿಕಾರಿ, ಸಿಬ್ಬಂದಿಯಿಂದ ಸಮಸ್ಯೆಯನ್ನು ಅರಿತುಕೊಳ್ಳಲಾಗಿದೆ. ಹಲವಾರು ಸಮಸ್ಯೆಗಳು ಗಮನಕ್ಕೆ ಬಂದಿವೆ. ಸಮಸ್ಯೆ ಬಗೆಹರಿಸದೆ ಯೋಜನೆಗಳನ್ನು ಜನರಿಗೆ ತಲುಪಿಸಲು ಸಾಧ್ಯವಾಗದು. ಅದಕ್ಕಾಗಿ ಸರಕಾರಿ ಆಸ್ಪತ್ರೆಗಳಿಗೆ ವೈದ್ಯರನ್ನು ನೇಮಕ ಮಾಡಬೇಕಿದೆ ಎಂದರು.

ಗುತ್ತಿಗೆ ಆಧಾರದಲ್ಲಿ ನೇಮಕ ಆದ ವೈದ್ಯರು ಮೂರು ವರ್ಷ ಸೇವೆ ಸಲ್ಲಿಸಿದರೆ ಅವರನ್ನು ಖಾಯಂಗೊಳಿಸುವ ಪದ್ಧತಿ ಹಿಂದೆ ಮಾಡಲಾಗಿತ್ತು. ಇದರಿಂದ ಉದ್ಯೋಗ ಭದ್ರತೆಯ ಕಾರಣದಿಂದ ಹೆಚ್ಚಿನ ವೈದ್ಯರ ನೇಮಕವಾಗುತ್ತಿತ್ತು. ಆದರೆ ಅದೀಗ ಬದಲಾಗಿದೆ. ಅದನ್ನು ಮರು ಪರಿಶೀಲಿಸಲಾಗುವುದು ಎಂದು ಸಚಿವ ಯು.ಟಿ.ಖಾದರ್ ಹೇಳಿದರು. ಸಚಿವ ಕೃಷ್ಣ ಬೈರೇಗೌಡ ಅವರು ತಮಗೆ ನೀಡಲಾದ ಖಾತೆ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯದ ಬಗ್ಗೆ ಪ್ರತಿಕ್ರಿಯಿಸಿದ ಖಾದರ್, ಎಲ್ಲಾ ಗೊಂದಲವನ್ನು ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷರು ಸರಿ ಮಾಡುತ್ತಾರೆ ಎಂದರು.

ಶಕ್ತಿಗೆ ಬರಲಿದೆ ಸ್ಮಾರ್ಟ್‌ಕಾರ್ಡ್: ಸಚಿವ

• **ಬೆಂಗಳೂರು:** ರಾಜ್ಯದ ಮಹಿಳೆಯರಿಗೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಮಹಿಳೆಯರಿಗೆ ಸ್ಮಾರ್ಟ್‌ಕಾರ್ಡ್ ಹಾಗೂ ಪುರುಷರಿಗೆ ಮೆಟ್ರೊ ಕಾರ್ಡ್ ರೀತಿಯಲ್ಲಿ ಹಣ ಪಾವತಿಸಿ ಸ್ಮಾರ್ಟ್ ಕಾರ್ಡ್‌ನ್ನು ಪಡೆದುಕೊಳ್ಳಬಹುದಾಗಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ಹೇಳಿದರು.

ನೂತನ ಸಾರಿಗೆ ಸಚಿವರಾಗಿ ಸೋಮವಾರ ವಿಧಾನಸೌಧದ ಕೊಠಡಿಯಲ್ಲಿ ಅಧಿಕಾರ ಸ್ವೀಕರಿಸಿದ ಬಳಿಕ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ ಮತ್ತು ವಾಯುವ್ಯ ಸಾರಿಗೆ ನಿಗಮಗಳ ಮುಖ್ಯಸ್ಥರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಇಲಾಖೆಗಳ ಬಗ್ಗೆ ಮಾಹಿತಿ ಪಡೆದರು.

ಈ ವೇಳೆ ಮಾತನಾಡಿದ ಸಚಿವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿಗಳ ಮೂಲಕ ಜನತೆಯ ಬದುಕು ಹಸನಾಗುವಂತೆ ಮಾಡಲಾಗಿದೆ. ಶಕ್ತಿ ಯೋಜನೆಯನ್ನು ಕೋಟ್ಯಂತರ ಮಹಿಳೆಯರು ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈ ಯೋಜನೆ ಜಾರಿಯಾದ ಬಳಿಕ ಪ್ರಯಾಣಿಕರ ಸಂಖ್ಯೆಯಲ್ಲಿ ಶೇ.40 ರಷ್ಟು ಹೆಚ್ಚಳವಾಗಿದೆ ಎಂದರು.

ಶಕ್ತಿ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡುವ ಉದ್ದೇಶದಿಂದ ರಾಜ್ಯದ ಮಹಿಳೆಯರಿಗೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಸ್ಮಾರ್ಟ್‌ಕಾರ್ಡ್‌ಗಳನ್ನು ವಿತರಣೆ ಮಾಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ರಾಜ್ಯದ ಮೂರು ಕೋಟಿಗೂ ಅಧಿಕ ಜನರಿಗೆ ಈ ಸ್ಮಾರ್ಟ್‌ಕಾರ್ಡನ್ನು ವಿತರಿಸುವ ನಿರೀಕ್ಷೆಯಿದೆ. ಮಹಿಳೆಯರಿಗೆ ಉಚಿತವಾಗಿ ಸ್ಮಾಟ್ ಕಾರ್ಡ್ ಸಿಗಲಿದ್ದು, ಪುರುಷರು ಮೆಟ್ರೊ ಕಾರ್ಡ್ ರೀತಿಯಲ್ಲಿ ಹಣ ಪಾವತಿಸಿ ಸ್ಮಾರ್ಟ್ ಕಾರ್ಡನ್ನು ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದರು.

1000 ಬಸ್ ಖರೀದಿ

ರಾಜ್ಯ ಸರ್ಕಾರದ ಅನುದಾನದಲ್ಲಿ 1000 ಸಾವಿರ ಬಸ್‌ಗಳನ್ನು ಖರೀದಿಸಲಾಗುತ್ತದೆ.



ಇದೇ ವೇಳೆ, ಕೇಂದ್ರ ಸರ್ಕಾರದ ಅನುದಾನದಲ್ಲಿ 4 ಸಾವಿರ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ನಿರ್ಧರಿಸಲಾಗಿದೆ. ಹಂತಹಂತವಾಗಿ ಬಸ್‌ಗಳನ್ನು ಖರೀದಿಸಿ ನಾಲ್ಕೂ ನಿಗಮಗಳಿಗೆ ಹಂಚಿಕೆ ಮಾಡಲಾಗುತ್ತದೆ ಎಂದು ಹೇಳಿದರು.

ಸಂಪಾದಕೀಯ

ಸತ್ವವಿಲ್ಲದ ವಿಪಕ್ಷ ಒಕ್ಕೂಟ

ವಿಪರ್ಯಾಸ ನೋಡಿ, ಬಿಜೆಪಿ ವಿರುದ್ಧವಾಗಿ ಒಗ್ಗಟ್ಟಿನ ಪ್ರದರ್ಶನ ನೀಡಬೇಕು ಎಂದು ಪ್ರತಿಪಾದಿಸುವ ಇಂಡಿಯಾ ಒಕ್ಕೂಟವು ತಾನೇ ಒಗ್ಗಟ್ಟು ಕಳೆದುಕೊಂಡು ಸತ್ವಹೀನವಾಗುತ್ತಿದೆ. ಅದೂ ಸಾಲದೆಂಬಂತೆ ಇಂಡಿ ಕೂಟದ ಪ್ರಬಲ ಪಕ್ಷಗಳೂ ತಮ್ಮೊಳಗೇ ಛಿದ್ರಗೊಳ್ಳುತ್ತಾ ಸಾಗುತ್ತಿವೆ. ಸೋಮವಾರ ಇಂಡಿಕೂಟದ 20ಕ್ಕೂ ಹೆಚ್ಚು ವಿರೋಧ ಪಕ್ಷಗಳು ದಿಲ್ಲಿಯಲ್ಲಿ ಸಭೆ ಸೇರಿ ಚರ್ಚಿಸಿದವಾದರೂ ಅವರೊಳಗಿನ ವೈರುಧ್ಯ, ಕೆಲವು ಪಕ್ಷಗಳು ಎದುರಿಸುತ್ತಿರುವ ಆಂತರಿಕ ಸಂಘರ್ಷಗಳು ಈ ಸಭೆಯನ್ನು ಮಂಕುಗೊಳಿಸಿದವು. ಕಾಂಗ್ರೆಸಿನ ವಿಶ್ವಾಸದ್ರೋಹವನ್ನು ವಿರೋಧಿಸಿ ಡಿಎಂಕೆ



ಸಭೆಗೇ ಹಾಜರಾಗಲಿಲ್ಲ, ಆಪ್ ಕೂಡಾ ಸಭೆಯಿಂದ ದೂರವುಳಿಯಿತು. ಕೇರಳ ಚುನಾವಣೆಯ ವೇಳೆ ಕಾಂಗ್ರೆಸ್ ಹೊರಿಸಿದ ಆರೋಪಗಳಿಂದ ಕೆಂಡವಾಗಿರುವ ಎಡಪಕ್ಷಗಳು ಕೂಡಾ ಇಂಡಿಯಾ ಒಕ್ಕೂಟವನ್ನು ಟೀಕಿಸುವ ಮೂಲಕ ಬಿರುಕಿನ ಸಂಕೇತ ನೀಡಿವೆ. ಜೆಎಂಎಂ ಕೂಡಾ ರಾಜ್ಯಸಭಾ ಚುನಾವಣೆಗೆ ಸಂಬಂಧಿಸಿ ಕಾಂಗ್ರೆಸಿನ ವರ್ತನೆಯಿಂದ ಆಕ್ರೋಶಗೊಂಡಿದೆ.

ಇದೇವೇಳೆ, ಪಶ್ಚಿಮ ಬಂಗಾಳದಲ್ಲಿ ಸೋತು ಸುಣ್ಣವಾಗಿರುವ ಮಮತಾ ಬ್ಯಾನರ್ಜಿಯವರು ಇಂಡಿಯಾ ಒಕ್ಕೂಟವನ್ನು ಬಲಪಡಿಸುವ ನಿಟ್ಟಿನಲ್ಲಿ ತಮ್ಮ ಶ್ರಮ ಹಾಕುತ್ತಿದ್ದಾರಾದರೂ ಅವರ ಕಾಲಕೆಳಗೆ ಅವರದೇ ಪಕ್ಷ ಛಿದ್ರವಾಗುತ್ತಿರುವುದು ಇಂಡಿ ಒಕ್ಕೂಟದಲ್ಲೂ ಅವರ ಪರಿಸ್ಥಿತಿಯನ್ನು ದುರ್ಬಲಗೊಳಿಸಿದೆ. ಅತ್ತ ಅವರು ವಿಪಕ್ಷ ಒಕ್ಕೂಟದ ಸಭೆಯಲ್ಲಿ ಭಾಗವಹಿಸಿದ್ದರೆ ಇತ್ತ ಅವರ ಪಕ್ಷದ ಮುಖ್ಯ ಸಚೇತಕ ಹಾಗೂ ರಾಜ್ಯಸಭಾ ಸದಸ್ಯ ಸುಖೇಂದು ಶೇಖರ ರಾಯ್ ಪಕ್ಷಕ್ಕೆ ರಾಜೀನಾಮೆ ನೀಡಿದ ಬೆಳವಣಿಗೆ ನಡೆಯಿತು.

ನಂತರದ ಬೆಳವಣಿಗೆಯಲ್ಲಿ 10ಕ್ಕೂ ಅಧಿಕ ಟಿಎಂಸಿ ಸಂಸತ್ ಸದಸ್ಯರು ದಿಲ್ಲಿಗೆ ಬಂದಿದ್ದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರನ್ನು ಭೇಟಿಯಾಗುವ ಮೂಲಕ ಟಿಎಂಸಿಯ ಸಂಸತ್‌ಸದಸ್ಯರು ಕೂಡಾ ಬಂಡಾಯವೇಳುವ ಸಂಕೇತ ತೋರಿದರು. ಅದರ ಬೆನ್ನಿಗೇ ಸುಮಾರು 20 ಸಂಸತ್‌ಸದಸ್ಯರು ಎನ್‌ಡಿಎ ಕೂಟವನ್ನು ಸೇರುವ ಇಂಗಿತ ವ್ಯಕ್ತಪಡಿಸುತ್ತಿದ್ದಾರೆಂದೂ ವರದಿಯಾಗಿದೆ. ಈಗಾಗಲೆ ಪಶ್ಚಿಮ ಬಂಗಾಳದಲ್ಲಿ ಶಾಸಕರ ಬಂಡಾಯದಿಂದ ಸೊರಗಿರುವ ಟಿಎಂಸಿಗೆ ಇದು ಇನ್ನಷ್ಟು ದೊಡ್ಡ ಹೊಡೆತ ನೀಡಬಹುದು.

ಈ ಮಧ್ಯೆ ಇಂಡಿಯಾ ಒಕ್ಕೂಟದ ನಾಯಕತ್ವ ವಹಿಸುವ ಕುರಿತಂತೆ ಕೂಡಾ ಗೊಂದಲ ಮನೆ ಮಾಡಿದೆ. ತಮ್ಮ ಪಕ್ಷಕ್ಕೇ ಗೆಲುವು ತಂದುಕೊಡದ ರಾಹುಲ್ ಗಾಂಧಿಯ ನಾಯಕತ್ವವನ್ನು ಬಹುತೇಕರು ಒಪ್ಪುತ್ತಿಲ್ಲ. ಒಂದು ಕಾಲದಲ್ಲಿ ಮಮತಾ ನಾಯಕತ್ವವನ್ನು ಬೆಂಬಲಿಸಿದ್ದವರೆಲ್ಲ ಈಗ ಟಿಎಂಸಿ ಸ್ಥಿತಿ ಕಂಡು ಹಿಂಸರಿದಿದ್ದಾರೆ. ಒಮ್ಮೆ ಕೇಜ್ರಿವಾಲ್‌ರನ್ನು ಮುಂದೆ ಮಾಡಲಾಗಿತ್ತಾದರೂ ಅವರೂ ಈಗ ಮೂಲೆಗುಂಪಾಗಿದ್ದಾರೆ. ಒಟ್ಟಿನಲ್ಲಿ ಇಂಡಿಯಾ ಒಕ್ಕೂಟವೆಂಬುದು ಸತ್ವವಿಲ್ಲದ ಪಕ್ಷಗಳ ಒಕ್ಕೂಟವೇ ಹೊರತು ಎನ್‌ಡಿಎಗೆ ಪ್ರಬಲ ಪರ್ಯಾಯವಾಗುವ ಪ್ರಶ್ನೆ ದೂರವೇ ಉಳಿದಿದೆ.

ದೆಹಲಿ ಬಿಸಿಲಿಗೆ ಜಿರಳೆಗಳು ಒಣಗಿದವೇ?

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com



ಪುಟ ೧ ➡ ಯಾರು ಬೇಕಾದರೂ, ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ನಡೆಸಬಹುದು ಎಂಬ ಹಗಲುಗನಸಿನ ಆದರ್ಶವನ್ನು ಮುಂದಿಟ್ಟುಕೊಂಡು ತಲೆಬುಡವಿಲ್ಲದ ಮಾತಾಡುತ್ತಾ, ಎಲ್ಲಾ ಮಾಧ್ಯಮಗಳನ್ನು ಕರೆಸಿಕೊಂಡು ಕುಳಿತಿದ್ದ ಈ ಹುಡುಗರಿಗೆ ಆಶ್ಚರ್ಯವಾಗುವಂತೆ, ತಮ್ಮ ಬಳಿ ಕೋರಿಕೆ ಹಿಡಿದು ಬಂದವರಿಗೆ ಹೆಚ್ಚಿನ ಪ್ರಶ್ನೆಯನ್ನೇನೂ ಕೇಳದೆ ದೆಹಲಿ ಪೊಲೀಸರು ಅನುಮತಿ ಪತ್ರವನ್ನು ಕೈಗಿತ್ತರು. ಅನುಮತಿ ಸಿಗದಿದ್ದರೆ ಗಲಭೆ ಮಾಡುವ ಸಾಧ್ಯತೆಯನ್ನೇ ಇಲ್ಲವಾಗಿಸಿದರು. ಅನುಮತಿ ಸಿಕ್ಕಿದರೆ ಗಲಭೆ ಮಾಡಿಸುವ ಇನ್ನೊಂದು ಸಾಧ್ಯತೆಯನ್ನು ಇಲ್ಲವಾಗಿಸಲು, ಸಮವಸ್ತ್ರಧರಿಸದ ಹಾಗು ಮಫ್ತಿಯಲ್ಲಿರುವ ಸಾಮಾನ್ಯ ಪೊಲೀಸ್ ತುಕಡಿಗಳೊಂದಿಗೆ ಹಿಂದೆಂದೂ ಉಪಯೋಗಿಸದ ಹೊಸ ತಂತ್ರವೊಂದನ್ನು ಬಳಸಲಾಯ್ತು. ಅದೇನೆಂದರೆ, ಪ್ರತಿಭಟನೆಯ ದಿನ ಮಾಧ್ಯಮ ಪ್ರತಿನಿಧಿಗಳಲ್ಲದೆ ದೆಹಲಿ ಪೊಲೀಸರು ಕೂಡ ಕೈಯಲ್ಲಿ ಕ್ಯಾಮರಾ ಮತ್ತು ಡ್ರೋನ್‌ಗಳನ್ನು ಹಿಡಿದು, ಬಾಡಿ ಕ್ಯಾಮ್‌ಗಳನ್ನೂ ಧರಿಸಿ, ಪ್ರತಿಯೊಬ್ಬ ಪ್ರತಿಭಟನಾಕಾರನ ಮುಖಗಳನ್ನು ಸೆರೆಹಿಡಿದರು. ಒಂದೊಮ್ಮೆ ಗಲಭೆ ನಡೆದರೆ ಯಾರ್ಯಾರನ್ನು ಹೆಡೆಮುರಿ ಕಟ್ಟಬೇಕು ಎನ್ನುವುದು ಇದರಿಂದ ಸುಲಭವಾಯ್ತು. ನಿಜಕ್ಕೂ ನೀಟ್ ಅವ್ಯವಹಾರದ ಬಗ್ಗೆ ಮಾತ್ರವೇ ಪ್ರತಿಭಟಿಸಲು ಬಂದಿದ್ದ ವಿದ್ಯಾರ್ಥಿಗಳು ಪೊಲೀಸರ ಈ ನಡೆಗಳಿಂದ, ಯಾರಾದರೂ ಗಲಭೆ ಪ್ರಾರಂಭಿಸಿದರೆ ಅದರಿಂದ ತಮ್ಮ ಮುಂದಿನ ಭವಿಷ್ಯಕ್ಕೆ ಆಗಬಹುದಾದ ಪರಿಣಾಮಗಳನ್ನು ಊಹಿಸಿಕೊಂಡು ಪ್ರತಿಭಟನೆಯಿಂದ ದೂರವೇ ಉಳಿದರು.

ಇದೆಲ್ಲದರ ಜೊತೆಗೆ ಯೂಟ್ಯೂಬರ್‌ಗಳು ಮತ್ತು ಇನ್‌ಫ್ಲುಯೆನ್ಸರುಗಳು ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರ ಜೊತೆ ನಡೆಸಿದ ಸಂವಾದಗಳು ಮತ್ತು ಸಂದರ್ಶನಗಳು, ಇಡೀ ಪ್ರತಿಭಟನೆ ಎಷ್ಟು ಟೊಳ್ಳು ಅಂತಲೂ ನಿರೂಪಿಸಿದರು. ನೀಟ್ ಪರೀಕ್ಷೆ ಅಂದರೆ ಏನಂತಲೂ ಗೊತ್ತಿಲ್ಲದ ಒಂಬತ್ತನೇ ತರಗತಿಯಲ್ಲಿ ಓದುತ್ತಿದ್ದ ಒಂದು ಹುಡುಗಿಯಂತೂ 'ನಾನಿಲ್ಲಿ ಇಸ್ರೇಲ್-ಅಮೆರಿಕಾ ನಡುವೆ ನಡೆಯುತ್ತಿರುವ ಯುದ್ಧದ ವಿರುದ್ಧ ಪ್ರತಿಭಟಿಸಲು ಬಂದಿದ್ದೇನೆ' ಎಂದಳು. ಇನ್ನೊಬ್ಬಳು 'ಸರ್ಕಾರಿ ಶಾಲೆಗಳು ಮುಚ್ಚುತ್ತಿವೆ. ಅದರ ವಿರುದ್ಧ ಪ್ರತಿಭಟನೆಗೆ ಬಂದಿದ್ದೀನಿ' ಎಂದಳು.

ಮತ್ತೊಬ್ಬ ಮಹಾಶಯ 'ಇವಿಎಂ ಹ್ಯಾಕ್ ಮಾಡಿ ತೋರಿಸುತ್ತೇನೆ' ಎಂದು ಕುಳಿತಿದ್ದ. ಇನ್ನೊಬ್ಬ 'ನನ್ನ ಮೊಬೈಲ್ ಮತ್ತು ಚಿನ್ನದ ಚೈನ್ ಕಳುವಾಗಿದೆ. ಹುಡುಕಿಕೊಡಿ' ಎಂದು ಅಳುತ್ತಿದ್ದ. ಉದ್ದದ ಫ್ರಾಕ್, ಲಂಗ ದಾವಣಿ ಮತ್ತು ಸೀರೆಗಳನ್ನು ಧರಿಸಿದ್ದ ಪುರುಷ ಮಹಾಶಯರು ಅಝಾದಿ ಅಝಾದಿ ಎಂದು ನರ್ತಿಸುತ್ತಿದ್ದರು. ಪ್ಯಾಂಟ್ ಮತ್ತು ಚಡ್ಡಿ ಧರಿಸಿರುವ ಹುಡುಗಿಯರು ಪ್ಯಾಲೆಸ್ತೀನಿಗೆ ಜಿಂದಾಬಾದ್ ಕೂಗುತ್ತಿದ್ದರು. ಸಮಾನತೆಯ ಕೂಗು ಎತ್ತಿದ್ದ ಮೂವತ್ತರ ಹರೆಯದ ಜೆನ್ ಝೀ ಪ್ರತಿನಿಧಿಗಳಿಗೆ ಅರವತ್ತೈದರ ಅಜ್ಜನೊಬ್ಬ ಗಾಳಿ ಹಾಕುತ್ತಾ ನಿಂತಿದ್ದ, ಅಮೆರಿಕಾದಿಂದ ಆಮದಾಗಿದ್ದ ಸಿಜೆಪಿಯ ಅಧ್ಯಕ್ಷನಂತೂ ದೆಹಲಿಯ ಬಿಸಿ ತಾಳಲಾರದೆ ಅವರ ಪ್ರತಿಭಟನೆಯ ರೀತಿಯಲ್ಲಿ ಕುಸಿದೇ ಬಿದ್ದ. ಒಟ್ಟಿನಲ್ಲಿ ನಿಜಕ್ಕೂ ಅರ್ಥಪೂರ್ಣ ರೀತಿಯಲ್ಲಿ ನಡೆಯಬೇಕಾಗಿದ್ದ ಪ್ರತಿಭಟನೆಯೊಂದು, ಇಪ್ಪತ್ತು ಲಕ್ಷಕ್ಕೂ ಹೆಚ್ಚು ಆನ್ಲೈನ್ ಬೆಂಬಲಿಗರಿದ್ದ ಪ್ರತಿಭಟನೆಯೊಂದು, ಇಪ್ಪತ್ತು ಸಾವಿರ ಜನರನ್ನೂ ಜಂತರ್ ಮಂತರ್‌ನಲ್ಲಿ ಸೇರಿಸಲಾಗದೇ ಕಮರಿಯೇ ಹೋಯಿತು. ಈ ಪ್ರತಿಭಟನಾಕಾರರು ತಮ್ಮ ತಪ್ಪುಗಳಿಂದ ಪಾಠ ಕಲಿತು, ಇನ್ನೊಮ್ಮೆ ಬೇರೆಯದೇ ರೂಪದಲ್ಲಿ ಅಥವಾ ದೇಶಾದ್ಯಂತ ಏಕಕಾಲದಲ್ಲಿ ತಲೆಯೆತ್ತುವುದನ್ನು ಅಲ್ಲಗಳೆಯಲಾಗುವುದಿಲ್ಲವಾದರೂ, ಈ ಪಾರ್ಟಿ ತನ್ನ ನಂಬಿಕೆಯನ್ನು ಮತ್ತು ಈ ಪ್ರತಿಭಟನೆ ತನ್ನ ಮೊನಚನ್ನು ಸದ್ಯಕ್ಕೆ ಕಳೆದುಕೊಂಡಿರುವುದಂತೂ ಹೌದು.

ಹಾಗಾದರೆ ಈ ಪ್ರತಿಭಟನೆಯೇ ತಪ್ಪೇ? ಇದು ಕೇವಲ ಬಿಜೆಪಿ ವಿರೋಧಿಗಳ ರಾಜಕೀಯವೇ? ಖಂಡಿತಾ ಈ ಪ್ರತಿಭಟನೆ ತಪ್ಪಲ್ಲ, ಧರ್ಮೇಂದ್ರ ಪ್ರಧಾನ್ ಸಾರ್ವಜನಿಕವಾಗಿ ಛೀಮಾರಿ ಹಾಕಿಸಿಕೊಳ್ಳುತ್ತಿರುವುದು ಇದೇನೂ ಮೊದಲನೇ ಬಾರಿಗಲ್ಲ, ನಮ್ಮ ಭವಿಷ್ಯದ ಪ್ರಜೆಗಳನ್ನು ರೂಪಿಸುವಂತಹ ಗುರುತರ ಜವಾಬ್ದಾರಿಯಿರುವ ಈ ಹುದ್ದೆಗೆ ಆದೆಷ್ಟು ಪರ್ಫೆಕ್ಟ್ ಇರುವ ವ್ಯಕ್ತಿ ಬೇಕು. ಇನ್ನು ಈ ರಾಜೀನಾಮೆಯ ಬೇಡಿಕೆಗೆ ಬಂದರೆ, ವೈಯಕ್ತಿಕವಾಗಿ ನನಗಂತೂ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಕೊಡಬೇಕೇ? ಎನ್ನುವುದು ರಾಜಕೀಯ ಪ್ರೇರಿತ ಪ್ರಶ್ನೆಯಷ್ಟೇ. ಕಾಂಗ್ರೆಸ್ ಮತ್ತು ಸಿಜೆಪಿಯಂತವರು ರಾಜೀನಾಮೆಗೆ ಆಗ್ರಹಿಸುತ್ತಿರುವುದು ಮೋದಿಯವರನ್ನು ಮಣಿಸುವ ಸೇಡಿನ ಲೆಕ್ಕಾಚಾರದಲ್ಲೇ ಹೊರತು, ನೀಟ್ ಪತ್ರಿಕೆಯ ಸೋರಿಕೆಯಿಂದ ನೊಂದ ವಿದ್ಯಾರ್ಥಿಗಳ ಮೇಲಿನ ಕಕ್ಕುಲತೆಗಲ್ಲ ಎನ್ನುವುದು ಆದಾಗಲೇ ಕಂಡುಬರುತ್ತಿದೆ. ಇಲ್ಲಿ ಸರಿಹೋಗಬೇಕಾದದ್ದು ದುರ್ಬಲ ವ್ಯವಸ್ಥೆಯಷ್ಟೇ ಹೊರತು, ಪ್ರಧಾನ್ ಒಂದು ದುರ್ಬಲ ಮಂತ್ರಿಯ ಮುಖ ಮಾತ್ರ. ಹಾಗು ಸರ್ಕಾರ ದುರ್ಬಲ ವ್ಯವಸ್ಥೆಯನ್ನು ಸರಿಮಾಡಬೇಕಾಗಿದೆಯೇ ಹೊರತು, ದುರ್ಬಲ ಮಂತ್ರಿಯನ್ನು ಹೊರಗಟ್ಟಿದರೆ ಅದರಿಂದ ಯಾವ ಹೆಚ್ಚಿನ ಸಕಾರಾತ್ಮಕ ಪರಿಣಾಮವೂ ಉಂಟಾಗದು. ಮಾತ್ರವಲ್ಲ, ರಾಜಕೀಯ ಒಳಸುಳಿಯ ದೃಷ್ಟಿಯಿಂದ ನೋಡಿದರೂ ಕೂಡ, ನಡೆದ ಅವಘಡಕ್ಕೆ ಮಂತ್ರಿಯೊಬ್ಬನನ್ನು ಹೊಣೆಮಾಡುವ ಹಾಗೂ ಅವನ ಅಥವಾ ಅವಳ ರಾಜೀನಾಮೆ ಪಡೆಯುವ ಹೊಸ ಪದ್ಧತಿಗೆ ನಾಂದಿ ಹಾಡುವತ್ತ ಬಿಜೆಪಿ ಹೆಜ್ಜೆ ಹಾಕಲಾರದು. ಯಾಕೆಂದರೆ ಸಾಂವಿಧಾನಿಕವಾಗಿ ಜಾರಿಗೆ ಬಂದ ನಿಯಮವೊಂದನ್ನು ಹೇಗಾದರೂ ಬದಲಿಸಬಹುದು. ಆದರೆ ಮಂತ್ರಿಯನ್ನು ಬಲಿಕೊಡುವ ಪದ್ಧತಿ ಒಮ್ಮೆ ಜಾರಿಗೆ ಬಂದರೆ ಮತ್ತೆ ಬದಲಿಸಲಾಗದು. ಇವತ್ತು ಪ್ರಧಾನ್ ಅವರನ್ನು ತೆಗೆದರೆ, ಬಿಜೆಪಿ ತಾನಾಗಿಯೇ 'ಆಯಾ ಸಚಿವಾಲಯದಲ್ಲಿ ನಡೆದ ತಪ್ಪಿಗೆ ಆ ಮಂತ್ರಿಯೇ ಹೊಣೆ ಹಾಗೂ ಆ ತಪ್ಪಿಗೆ ಅವರನ್ನು ಕೆಲಸದಿಂದ ತೆಗೆಯಲಾಗುತ್ತದೆ' ಎಂಬ ಅಲಿಖಿತ ನಿಯಮವನ್ನು ಬರೆದಂತಾಗುತ್ತದೆ. ನಾಳೆ ರೂಪಾಯಿ ಅಪಮೌಲ್ಯದ ನೆಪ ಹಿಡಿದು ನಿರ್ಮಲಾ ಅವರ ತಲೆದಂಡಕ್ಕೆ ಆಗ್ರಹಪಡಲಾಗುತ್ತದೆ. ಪೆಟ್ರೋಲ್ ಮತ್ತು ಗ್ಯಾಸ್ ಕೊರತೆಗೆ ಹರ್ದೀಪ್ ಪುರಿಯವರ ರಾಜೀನಾಮೆಗೆ ಗಲಭೆ ಪ್ರಾರಂಭವಾಗುತ್ತದೆ. ಮಾತ್ರವಲ್ಲ ವಿರೋಧ ಪಕ್ಷಗಳು ಮುಂದಿನ ದಿನಗಳಲ್ಲಿ ಇದನ್ನೇ ಖಾಯಂ ಅಜೆಂಡಾ ಮಾಡಿಕೊಂಡು ಬಿಡುತ್ತವೆ. ಆದ್ದರಿಂದ, ಪ್ರಧಾನ್ ಅವರ ತಲೆದಂಡ ಕೊಡಲಾಗುತ್ತದೆ ಎಂಬ ಯಾವ ನಂಬಿಕೆಯೂ ನನಗಿಲ್ಲ, ಆದರೆ, ಈ ಜಿರಳೆಗಳ ಗಲಾಟೆಯಿಂದ ಯಾವ ಉಪಯೋಗವೂ ಇದೆ ಎಂಬ ನಂಬಿಕೆಯೂ ನನಗಿಲ್ಲ, ಆದ್ದರಿಂದ, ಯಾರನ್ನೂ ಕೆಲಸದಿಂದ ತೆಗೆಯದೇ, ಮೋದಿಯವರ ಸರ್ಕಾರ ಈಗ ನಡೆದಿರುವ ತಪ್ಪನ್ನು ಒಪ್ಪಿಕೊಂಡು, ಇಂತಹ ಘಟನೆಗಳು ಮರುಕಳಿಸದಂತೆ ಯಾವ ನಿಯಮಾವಳಿಗಳನ್ನು ಜಾರಿಗೊಳಿಸುವ ಹೆಜ್ಜೆಗಳನ್ನು ಇಡಲಿದೆ ಎಂಬುದು ಕುತೂಹಲಕಾರಿ ವಿಚಾರ. ಅಂತಹದೊಂದು ನಿಯಮಾವಳಿಯನ್ನು ಜಾರಿಗೆ ತಂದು, ಆನಂತರ ಸಚಿವಾಲಯದಲ್ಲಿ ಬದಲಾವಣೆ ಮಾಡಿದರೆ, ಈ ಸರ್ಕಾರ ನಿಜಕ್ಕೂ ತಪ್ಪುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಗಂಭೀರವಾಗಿ ಯೋಚಿಸಿದೆ ಎಂಬ ನಂಬಿಕೆಯನ್ನಾದರೂ ಉಳಿಸಿಕೊಳ್ಳಬಹುದು.

ಇನ್ನು ಈ ಜೆನ್-ಝೀಗಳ ವಿಚಾರಕ್ಕೆ ಬಂದರೆ, ಯೋಚಿಸುವ ಶಕ್ತಿಯೇ ಇಲ್ಲದ ಇವರನ್ನು ವಿದೇಶೀ ಶಕ್ತಿಗಳು ದಾಳಗಳನ್ನಾಗಿ ಬಳಸಿಕೊಳ್ಳುತ್ತಿವೆ ಎಂಬುದಂತೂ ಬಾಂಗ್ಲಾದೇಶ, ನೇಪಾಳ, ಇಂಡೋನೇಷ್ಯಗಳಲ್ಲಿ ನಡೆದ ರಾಜಕೀಯ ವಿಕೋಪಗಳಿಂದ ಸರ್ವವಿದಿತವಾಗಿದೆ. ಹೊಸ ರೀತಿಯ ಸಮಸ್ಯೆಗಳಿಗೆ, ಹೊಸ ರೀತಿಯ ಪರಿಹಾರಗಳೇ ಬೇಕು. ರಾಜಕೀಯದಲ್ಲಿ ಅನುಭವಿಗಳಾದರೂ ಸಹ ಹಳೆಯ ಯೋಚನಾಲಹರಿಗೇ ಜೋತುಬಿದ್ದಿರುವ ಹಳೆಯ ಪಕ್ಷಗಳು ಇವರನ್ನು ಹೇಗೆ ನಿರ್ವಹಿಸುತ್ತವೆ ಎಂಬುದು ಕೂಡ ಕುತೂಹಲದ ವಿಚಾರ.

ಮೊನ್ನೆಯಷ್ಟೇ ನನ್ನ ಮಗಳು ಅಪ್ಪಾ, ಜೆನ್-ಝೀ ಗಳಿಗೆ ಆ ಝೆಡ್ ಅಕ್ಷರವನ್ನೇ ಏಕೆ ಬಳಸುತ್ತಾರೆ ಎಂದು ಕೇಳಿದಾಗ, ಬೇರೆಲ್ಲ ಇತಿಹಾಸ ವಿವರಿಸುವುದು ಬಿಟ್ಟು ನಾನು ಝೆಡ್ ಹೇಗೆ ಅಕ್ಷರಮಾಲೆಯ ಕೊನೆಯ ಅಕ್ಷರವೋ, ಹಾಗೆಯೇ ಈ ಜೆನ್-ಝೀಗಳು ಮನುಕುಲದ ಕೊನೆಯ ಪೀಳಿಗೆಯಾಗುವ ಎಲ್ಲ ಲಕ್ಷಣಗಳನ್ನೂ ಹೊಂದಿದ್ದಾರೆ. ಇವರನ್ನೇ ನಂಬಿಕೊಂಡರೆ, ಇವರನ್ನು ತಿದಿಯುವ ಎಚ್ಚರವನ್ನು ನಾವು ಬೆಳೆಸಿಕೊಳ್ಳದೇ ಹೋದರೆ ನಮ್ಮ ಕಥೆ ಆ ಇಂಗ್ಲಿಷ್ ಅಕ್ಷರಮಾಲೆಯಂತೆಯೇ ಕೊನೆಯಾಗುವುದೇ ಹೌದು. ಅದಕ್ಕೇ ಆ ಅಕ್ಷರವನ್ನು ಸರಿಯಾಗಿಯೇ ಇಟ್ಟಿದ್ದಾರೆ ಎಂದೆ. ಮನುಕುಲ ಕೊನೆಯಾಗುತ್ತಾ? ಹಾಗಾದರೆ ನಮ್ಮ ಕಥೆಯೇನು? ಎಂದಳು. ಈ ಝೀಗಳ ಹಳವಂಡಗಳನ್ನು ನೋಡಿದ ಮೇಲೆ, ಅವರನ್ನು ತಿವಿದ ಮೇಲೆ, ನಿಮ್ಮನ್ನು ಸರಿಯಾಗಿ ಬೆಳೆಸುವುದು ನಮ್ಮ ಮುಖ್ಯ ಜವಾಬ್ದಾರಿಯಾಗುತ್ತದೆ. ನಿಮ್ಮನ್ನೆಲ್ಲಾ ಸರಿಯಾಗಿ ಬೆಳೆಸಿದ ಮೇಲೆ, ಮನುಕುಲಕ್ಕೆ ಹೊಸದೊಂದು ಹುಟ್ಟು ಸಿಗುವ ಸಾಧ್ಯತೆಯಿರುವುದರಿಂದ ನೀವು ಝೆನ್-ಎ ಕಣೇ ಮಗಳೇ. ನಿಮ್ಮಿಂದ ಹಳೆಯ ಮತ್ತು ಹೊಸ ಜಗತ್ತಿನ ಮಿಸಳಭಾಜಿಯಾಗಿ. ಮನುಕುಲದ ಹೊಸ ಶಕೆಯ ಪ್ರಾರಂಭ ಆಗಬೇಕು ನೋಡು ಎಂದೆ. ಎಷ್ಟು ಅರ್ಥವಾಯ್ತೋ ಗೊತ್ತಿಲ್ಲ.

ಬಕ್ರೀದ್ ಮತ್ತು ವಿವಿಧ ರಾಜ್ಯಗಳ ಗೋಹತ್ಯಾ ನಿಷೇಧ ಕಾನೂನುಗಳು

ಧರಣಿ ಮಂಡಲ
• ಕೆ.ಎಸ್. ಶೈಲೇಶ್ ಹೊಳ್ಳ
shyleshholla@gmail.com



ಈ ವರ್ಷದ ಬಕ್ರೀದ್‌ನಲ್ಲಿ ಪ್ರತಿ ವರ್ಷದಂತೆ ಅಲ್ಲದಿದ್ದರೂ ಸ್ವಲ್ಪ ಮಟ್ಟಿಗಾದರೂ ಗೋವುಗಳ ರಕ್ತ ಕಡಿಮೆ ಹರಿದಿತ್ತು. ಇದಕ್ಕೆ ಆಯಾ ರಾಜ್ಯ ಸರ್ಕಾರಗಳು ಪ್ರಾಣಿಬಲಿ ತಡೆಗೆ ಸಂಬಂಧಿಸಿದಂತೆ ತಕ್ಕ ಮಟ್ಟಿನ ವ್ಯವಸ್ಥೆಯನ್ನು ಮಾಡಿದ್ದು ಒಂದು ಕಾರಣವಾದರೆ, ಜನರಲ್ಲಿ ಗೋವಿನ ಬಗ್ಗೆ ಜಾಗೃತಿ ಮೂಡುತ್ತಿರುವುದು ಮತ್ತೊಂದು ಕಾರಣವಾಗಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲೆಲ್ಲಾ ಜಾನುವಾರು ಮಾರಾಟ ಮತ್ತು ಹತ್ಯೆಗೆ ಸಂಬಂಧಿಸಿದ ನಿಯಮಗಳನ್ನು ಬಿಗಿಗೊಳಿಸಲಾಗಿತ್ತು. ದೇಶದಲ್ಲಿ ಆಡು, ಕುರಿ ಮತ್ತು ಒಂಟೆಗಳನ್ನು ಸಾಮಾನ್ಯವಾಗಿ ಬಲಿ ನೀಡಲಾಗುತ್ತದೆಯಾದರೂ, ಕೆಲವು ರಾಜ್ಯಗಳು ಮುಂದಾಗಲಿರುವ ಧಾರ್ಮಿಕ ಸೂಕ್ಷ್ಮತೆಯನ್ನು ಗಮನದಲ್ಲಿಟ್ಟುಕೊಂಡು ಗೋಹತ್ಯೆಯ ಮೇಲೆ ಭಾಗಶಃ ನಿಷೇಧವನ್ನು ವಿಧಿಸಿದ್ದವು. ಜಾನುವಾರುಗಳ ದುಡಿಮೆಯ ಶಕ್ತಿ, ವಯಸ್ಸು ಮತ್ತು ಹಾಲು ಕೊಡುವ ಸಾಮರ್ಥ್ಯಕ್ಕೆ ಅನುಗುಣವಾಗಿ ದೃಢೀಕರಣ ಪತ್ರದೊಂದಿಗೆ ಅವುಗಳ ಹತ್ಯೆಗೂ ಕೆಲವೊಂದು ರಾಜ್ಯಗಳು ಅನುಮತಿಸಿದ್ದವು. ಬಹುತೇಕ ಬಿಜೆಪಿ ಅಧಿಕಾರವಿರುವ ರಾಜ್ಯಗಳಲ್ಲಿ ಗೋಹತ್ಯೆಯ ಮೇಲೆ ಕಟ್ಟುನಿಟ್ಟಾದ ನಿರ್ಬಂಧಗಳು ಅಥವಾ ಸಂಪೂರ್ಣ ನಿಷೇಧವಿತ್ತು. ಇನ್ನು ಕೆಲ ಈಶಾನ್ಯ ಮತ್ತು ದಕ್ಷಿಣ ರಾಜ್ಯಗಳಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹತ್ಯೆಗೆ ಕೆಲವು ನಿರ್ಬಂಧಗಳೊಂದಿಗೆ ಅನುಮತಿಯನ್ನು ನೀಡಲಾಗಿತ್ತು.

ಇದೇ ಕಾರಣಕ್ಕೆ ಈ ವರ್ಷ ಮೊದಲ ಬಾರಿಗೆ ಕೆಲ ಮುಲ್ಲಾ ಮೌಲ್ವಿಗಳು ಮುಂದಾಗಲಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ರಸ್ತೆಗಿಳಿದು ಗೋವಿಗೆ ರಾಷ್ಟ್ರೀಯ ಪ್ರಾಣಿಯ ಸ್ಥಾನಮಾನವನ್ನು ನೀಡಬೇಕೆಂದು ಒತ್ತಾಯಿಸುವುದರೊಂದಿಗೆ ಗೋವನ್ನು ಈ ಬಾರಿ ಕುರ್ಬಾನಿ ಕೊಡಬಾರದು ಎಂಬುದಾಗಿಲ್ಲಾ ಹೇಳಲು ಪ್ರಾರಂಭಿಸಿದ್ದರು. ಇನ್ನು ಕೆಲ ಮುಸ್ಲಿಂ ಸಂಘಟನೆಗಳು ಮತ್ತು ಧರ್ಮಗುರುಗಳು ಕುರ್ಬಾನಿ ಆಚರಣೆಯನ್ನು ಆಯಾ ರಾಜ್ಯದ ಕಾನೂನಿನ ಅನ್ವಯ ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಒತ್ತಾಯಿಸಿದ್ದವು. ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿನ ಮುಸ್ಲಿಂ ಮುಖಂಡರು ಮತ್ತು ಈದ್ಗಾ ಸಮಿತಿಗಳು ಮುಸ್ಲಿಂ ಸಮುದಾಯಕ್ಕೆ ಗೋವುಗಳ ಬಲಿಯನ್ನು ಸಂಪೂರ್ಣವಾಗಿ ನಿಲ್ಲಿಸುವಂತೆ ಮನವಿ ಮಾಡಿದ್ದವು. ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿನ ಮುಸ್ಲಿಂ ಸಂಘಟನೆಗಳು ಕೋಮು ಸಾಮರಸ್ಯವನ್ನು ಕಾಪಾಡಿಕೊಳ್ಳಲು ಗೋಹತ್ಯೆ ಮಾಡದಂತೆ ಮತ್ತು ಕಾನೂನನ್ನು ಪಾಲಿಸುವಂತೆ ಸಮುದಾಯಕ್ಕೆ ಮನವಿ ಮಾಡಿತ್ತು. ಜಮಿಯತ್ ಉಲಮಾ-ಇ-ಹಿಂದ್ ಮುಖ್ಯಸ್ಥ ಮೌಲಾನಾ ಅರ್ಷದ್ ಮದನಿ ಸ್ಥಳೀಯ ಕಾನೂನುಗಳ ಅಡಿಯಲ್ಲಿ ನಿಷೇಧಿಸಲಾದ ಪ್ರಾಣಿಗಳನ್ನು ಬಲಿ ನೀಡದಂತೆ ಸಮುದಾಯಕ್ಕೆ ಮನವಿ ಮಾಡಿದ್ದರು ಮತ್ತು ಸಾಮಾಜಿಕ ಮಾಧ್ಯಮದಲ್ಲಿ ವಧೆ ಮಾಡಲಾದ ಪ್ರಾಣಿಗಳ ಚಿತ್ರಗಳನ್ನು ಹಂಚಿಕೊಳ್ಳದಂತೆ ಸಲಹೆ ನೀಡಿದ್ದರು. ಇವರು ಇನ್ನಿತರ ಮುಸ್ಲಿಂ ಮುಖಂಡರೊಂದಿಗೆ ಸೇರಿಕೊಂಡು ಗೋವಿಗೆ ರಾಷ್ಟ್ರೀಯ ಪ್ರಾಣಿ ಸ್ಥಾನಮಾನ ನೀಡಬೇಕೆಂದು ಒತ್ತಾಯಿಸಿದ್ದರು.

ಪ್ರತಿವರ್ಷ ಮುಸ್ಲಿಮರು ಬಕ್ರೀದ್‌ಗೆ ಪ್ರಾಣಿ ಬಲಿ ಕೊಡಲು ತಯಾರಿ ನಡೆಸುತ್ತಿದ್ದಂತೆ, ಆಡಳಿತ ರೂಢ ಸರ್ಕಾರಗಳು ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಸಾಮಾನ್ಯ. ಇದರೊಂದಿಗೆ ಸ್ಥಳೀಯ ಜಾನುವಾರು ಹತ್ಯೆ ನಿಷೇಧ ಮತ್ತು ಪ್ರಾಣಿ ಬಲಿ ತಡೆ ಕಾನೂನಿನ ನಿಯಮಗಳನ್ನು ಜಾರಿಗೊಳಿಸಿ ನಿಗಾವಹಿಸಲು ಪ್ರಾರಂಭಿಸುತ್ತವೆ. ಹೀಗೆ ತೆಗೆದುಕೊಳ್ಳುವ ಕಾನೂನಿನ ನಿಯಮಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತವೆ. ದೆಹಲಿ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಹರಿಯಾಣ, ಮಧ್ಯಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಗೋವಿನ ಬಲಿಯ ಮೇಲೆ ಸಂಪೂರ್ಣ ನಿಷೇಧವಿದ್ದರೆ, ಕೇರಳ, ಈಶಾನ್ಯದ ಕೆಲವು ರಾಜ್ಯಗಳು ಗೋಹತ್ಯೆಗೆ ಅನುಮತಿಯನ್ನು ನೀಡುತ್ತವೆ.

ಮಹಾರಾಷ್ಟ್ರ ತನ್ನ 1976ರ ಮಹಾರಾಷ್ಟ್ರ ಪ್ರಾಣಿ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಪ್ರಾಣಿಗಳ ಹತ್ಯೆಯನ್ನು ನಿಯಂತ್ರಿಸುತ್ತಾ, ಗೋವುಗಳ ಹತ್ಯೆಯನ್ನು ನಿಷೇಧಿಸಿದೆ. ಈ ಕಾಯ್ದೆಗೆ 2015ರಲ್ಲಿ ತಿದ್ದುಪಡಿಯನ್ನು ತಂದು ಎತ್ತುಗಳ ವಧೆಯನ್ನು ಸಹ ನಿಷೇಧಿಸುತ್ತಾ, ಗೋವಂಶದ ಬಲಿಯನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಹಾಗೆಯೇ ಗೋಮಾಂಸದ ಸಂಗ್ರಹ, ಮಾರಾಟ ಮತ್ತು ಸಾಗಿಸುವುದನ್ನು ಅಪರಾಧಕೃತ್ಯವೆಂದು ಘೋಷಿಸುತ್ತಾ, ಉಲ್ಲಂಘಿಸಿದಲ್ಲಿ ಐದು ವರ್ಷಗಳ ವರೆಗೆ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸುವ ಅವಕಾಶವನ್ನು ಕಲ್ಪಿಸಿದೆ. ಎಮ್ಮೆಗಳ ಹತ್ಯೆಗೆ ಸ್ಥಳೀಯ ಅಧಿಕಾರಿಗಳ ಪ್ರಮಾಣಪತ್ರದೊಂದಿಗೆ ಅನುಮತಿಯನ್ನು ನೀಡಿದೆ.

ಪಶ್ಚಿಮ ಬಂಗಾಳದ ನೂತನ ಸರ್ಕಾರ 14 ವರ್ಷಕ್ಕಿಂತ ಮೇಲ್ಪಟ್ಟ ಅಥವಾ ಕೆಲಸ ಮಾಡಲು ಅಥವಾ ಸಂತಾನೋತ್ಪತ್ತಿಗೆ ಅನರ್ಹವೆಂದು ಘೋಷಿಸಲಾದ ಜಾನುವಾರುಗಳನ್ನು ಮಾತ್ರ ವಧೆಗೆ ಬಳಸಬಹುದು ಎಂಬ ಆದೇಶವನ್ನು ಹೊರಡಿಸಿದೆ. ಇದಕ್ಕೆ ಸಂಬಂಧಿಸಿದಂತೆ ಫಿಟ್‌ನೆಸ್ ಪ್ರಮಾಣಪತ್ರವನ್ನು ಕಡ್ಡಾಯಗೊಳಿಸಿದೆ. ಹಾಗೆಯೇ ಸಾರ್ವಜನಿಕವಾಗಿ ಜಾನುವಾರುಗಳ ಹತ್ಯೆಯನ್ನು ಮಾಡುವಂತಿಲ್ಲ ಮತ್ತು ಅಧಿಕೃತ ಕಸಾಯಿಖಾನೆಗಳಲ್ಲಿ ಮಾತ್ರ ನಿರ್ದಿಷ್ಟ ಸೂಚನೆಗಳೊಂದಿಗೆ ಹತ್ಯೆಯನ್ನು ಅನುಮತಿಸಿದೆ. ಧಾರ್ಮಿಕ ಆಚರಣೆಗಳನ್ನು ಗುರಿಯಾಗಿಸುವ ಬದಲು ಅಕ್ರಮ ಜಾನುವಾರು ಕಳ್ಳಸಾಗಣೆ ಮತ್ತು ಅನಧಿಕೃತ ಹತ್ಯೆಯನ್ನು ತಡೆಯುವುದು ಸರ್ಕಾರದ ಮೂಲ ಉದ್ದೇಶವಾಗಿದೆ.

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ- 2020ರ ಅಡಿಯಲ್ಲಿ ಎಲ್ಲಾ ವಯಸ್ಸಿನ ಹಸುಗಳು, ಎತ್ತುಗಳು ಮತ್ತು 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಮ್ಮೆಗಳ ವಧೆಯನ್ನು ನಿಷೇಧಿಸಿದೆ. ಕಾನೂನುಬದ್ಧವಾಗಿ ಎಮ್ಮೆ ವಧೆಗೆ ಸಹ ಪಶುವೈದ್ಯಕೀಯ ಪ್ರಮಾಣೀಕರಣ ಮತ್ತು ಅಧಿಕೃತ ಅನುಮತಿಯನ್ನು ಕಡ್ಡಾಯಗೊಳಿಸಿದೆ. ತಮಿಳುನಾಡು ಪ್ರಾಣಿ ಸಂರಕ್ಷಣಾ ಕಾಯ್ದೆ, 1958ರ ಅಡಿಯಲ್ಲಿ ಜಾನುವಾರು ಹತ್ಯೆಯನ್ನು ತುಲನಾತ್ಮಕವಾಗಿ ಅನುಸರಿಸುತ್ತಾ, ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಿಲ್ಲ, ಪಶುವೈದ್ಯಕೀಯ ಅಧಿಕಾರಿಗಳಿಂದ ವಧೆಗೆ ಯೋಗ್ಯ ಪ್ರಮಾಣ ಪತ್ರವನ್ನು ಪಡೆದ ನಂತರವೇ ವಧೆಯನ್ನು ಅನುಮತಿಸಲಾಗಿದೆ. ಸಂತಾನೋತ್ಪತ್ತಿ, ಡ್ರಾಫ್ಟ್ ಅಥವಾ ಕೃಷಿ ಬಳಕೆಗೆ ಶಾಶ್ವತವಾಗಿ ಅನರ್ಹವೆಂದು ಪರಿಗಣಿಸಲಾದ ಪ್ರಾಣಿಗಳಿಗೆ ಸಾಮಾನ್ಯವಾಗಿ ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಎಮ್ಮೆಗಳು, ಮೇಕೆಗಳು ಮತ್ತು ಕುರಿಗಳನ್ನು ಸಾಮಾನ್ಯವಾಗಿ ಇಲ್ಲಿ ಕುರ್ಬಾನಿಗಾಗಿ ಬಳಸಲಾಗುತ್ತದೆ. ಇನ್ನು ಆಂಧ್ರಪ್ರದೇಶ ಮತ್ತು ತೆಲಂಗಾಣವು ಆಂಧ್ರ ಪ್ರದೇಶ ಗೋಹತ್ಯೆ ನಿಷೇಧ ಮತ್ತು ಪ್ರಾಣಿ ಸಂರಕ್ಷಣಾ ಕಾಯ್ದೆ, 1977ರ ನಿಬಂಧನೆಗಳನ್ನು ಜಾರಿಗೊಳಿಸುವುದನ್ನು ಮುಂದುವರೆಸಿದೆ. ಇಲ್ಲಿಯ ಕಾನೂನು ಹಸುಗಳು ಮತ್ತು ಕರುಗಳ ವಧೆಯನ್ನು ನಿಷೇಧಿಸುತ್ತದೆ, ಆದರೆ ಎತ್ತುಗಳನ್ನು ಕೃಷಿ ಅಥವಾ ಸಂತಾನೋತ್ಪತ್ತಿ ಉದ್ದೇಶಗಳಿಗೆ ಶಾಶ್ವತವಾಗಿ ಅನರ್ಹವೆಂದು ಘೋಷಿಸಿದ ನಂತರವೇ ವಧೆ ಮಾಡಬಹುದಾಗಿದೆ. ಕೆಲವೊಂದು ಪರಿಸ್ಥಿತಿಗಳಲ್ಲಿ ವಯಸ್ಕ ಎಮ್ಮೆಗಳ ವಧೆಯನ್ನು ಅನುಮತಿಸಲಾಗಿದೆ.

ಗೋಹತ್ಯೆಯ ಮೇಲೆ ಸಂಪೂರ್ಣ ನಿಷೇಧವಿಲ್ಲದ ಏಕೈಕ ದಕ್ಷಿಣದ ರಾಜ್ಯವಾಗಿ ಕೇರಳ ಕಂಡುಬರುತ್ತದೆ. ಇಲ್ಲಿ ಗೋಹತ್ಯೆ ಮತ್ತು ಗೋಮಾಂಸ ಸೇವನೆ ರಾಜ್ಯದಾದ್ಯಂತ ಕಾನೂನುಬದ್ಧವಾಗಿದೆ. ಗೋಹತ್ಯೆ ವಿರೋಧಿ ಶಾಸನಕ್ಕಿಂತ ಹೆಚ್ಚಾಗಿ ಪುರಸಭೆಯ ಕಾನೂನುಗಳು, ಪರವಾನಗಿ ಪಡೆದ ಕಸಾಯಿಖಾನೆಗಳು ಮತ್ತು ಸಾರ್ವಜನಿಕ ಆರೋಗ್ಯ ನಿಯಮಗಳ ಮೂಲಕ ವಧೆಯನ್ನು ನಿಯಂತ್ರಿಸಲಾಗುತ್ತದೆ. ಇನ್ನು ಅಸ್ಸಾಂಗೆ ಹೋಲಿಸಿದರೆ, ಇತರ ಈಶಾನ್ಯ ರಾಜ್ಯಗಳು ಗೋಹತ್ಯೆಯ ಮೇಲಿನ ನಿಯಮಗಳ ವಿಷಯದಲ್ಲಿ ತುಸು ಭಿನ್ನವಾಗಿರುವುದು ಕಂಡುಬರುತ್ತದೆ. ಮೇಘಾಲಯ, ನಾಗಾಲ್ಯಾಂಡ್ ಮತ್ತು ಮಿಜೋರಾಂಗಳಲ್ಲಿ ಗೋಹತ್ಯೆಗೆ ಸಂಪೂರ್ಣ ನಿಷೇಧವಿಲ್ಲದೆ ಜಾನುವಾರು ವಧೆ ಮತ್ತು ಗೋಮಾಂಸ ಸೇವನೆಯನ್ನು ಅನುಮತಿಸಿದೆ. ಈ ಕ್ರಿಶ್ಚಿಯನ್ ಬಹುಸಂಖ್ಯಾತ ರಾಜ್ಯಗಳು ದೇಶಾದ್ಯಂತ ಹಿಂದೆ ಗೋಹತ್ಯೆಗೆ ನಿರ್ಬಂಧಿಸುವುದನ್ನು ತೀವ್ರವಾಗಿ ವಿರೋಧಿಸಿದ್ದವು. ಈ ರಾಜ್ಯಗಳ ಪ್ರಕಾರ ಗೋಮಾಂಸ ಎಂಬುದು ಸ್ಥಳೀಯ ಆಹಾರ ಸಂಸ್ಕೃತಿಯ ಮತ್ತು ಬುಡಕಟ್ಟು ಸಂಪ್ರದಾಯದ ಅವಿಭಾಜ್ಯ ಅಂಗವಾಗಿದೆ. ಅರುಣಾಚಲ ಪ್ರದೇಶ ಮತ್ತು ತ್ರಿಪುರ ರಾಜ್ಯಗಳು ಜಾನುವಾರು ವಧೆಯ ಮೇಲೆ ಸಂಪೂರ್ಣ ನಿಷೇಧವನ್ನು ಜಾರಿಗೊಳಿಸಿಲ್ಲ, ಮಣಿಪುರ ಸಂಪೂರ್ಣ ಗೋಹತ್ಯೆಯ ಪರ ಹಾಗೂ ವಿರುದ್ಧವು ಇಲ್ಲದ ಸ್ಥಿತಿಯನ್ನು ಅನುಸರಿಸುತ್ತಿದೆ. ಮೈತೈ ಹಿಂದೂಗಳು ಹೆಚ್ಚಿರುವ ಸ್ಥಳಗಳಲ್ಲಿ ಪ್ರಮುಖವಾಗಿ ಇಂಫಾಲ್ ಕಣಿವೆಯಲ್ಲಿ ಧಾರ್ಮಿಕ ಸೂಕ್ಷ್ಮತೆಯ ದೃಷ್ಟಿಯಿಂದ ಜಾನುವಾರು ವಧೆಯನ್ನು ನಿರ್ಬಂಧಿಸಿದೆ. ಆದರೆ ಬುಡಕಟ್ಟು ಕ್ರಿಶ್ಚಿಯನ್ ಸಮುದಾಯಗಳು ಪ್ರಾಬಲ್ಯ ಹೊಂದಿರುವ ಬೆಟ್ಟದ ಜಿಲ್ಲೆಗಳಲ್ಲಿ ಗೋಮಾಂಸ ಸೇವನೆಯು ಸಾಮಾನ್ಯವಾಗಿದೆ.

ಬಕ್ರೀದ್ ಸಮಯದಲ್ಲಿ ಭಾಗಶಃ ಭಾರತದಾದ್ಯಂತ ಗೋಹತ್ಯೆಯನ್ನು ಆಯಾ ರಾಜ್ಯಗಳ ಸ್ಥಳೀಯ ಕಾನೂನಿನ ಅಡಿಯಲ್ಲಿಯೇ ನಿಷೇಧಿಸುವ ಪ್ರಯತ್ನಗಳಾಗುತ್ತವೆ. ಬಹುತೇಕ ರಾಜ್ಯಗಳು ಸ್ಥಳೀಯವಾಗಿ ಗೋವಂಶದ ಹತ್ಯೆಯನ್ನು ನಿಷೇಧಿಸುವ ಕಾನೂನನ್ನು ಒಳಗೊಂಡಿದ್ದರೆ, ಇನ್ನು ಕೆಲ ರಾಜ್ಯಗಳು ಗೋಹತ್ಯೆ ತಡೆಯಲು ಯಾವುದೇ ಕಾಯ್ದೆ ಕಾನೂನನ್ನು ಇಂದಿಗೂ ರಚಿಸಿಕೊಂಡಿಲ್ಲ, ಇನ್ನು ಕೆಲವೊಂದು ರಾಜ್ಯಗಳು ಯಾವುದೇ ಧಾರ್ಮಿಕ ಹಬ್ಬಗಳಲ್ಲಿ ಕುರಿ, ಒಂಟೆ, ಗೋವಂಶ ಸೇರಿದಂತೆ ಯಾವುದೇ ಪ್ರಾಣಿಗಳನ್ನು ಬಲಿ ಕೊಡುವುದನ್ನು ಕಡ್ಡಾಯವಾಗಿ ಸ್ಥಳೀಯ ಹಾಗೂ ಕೇಂದ್ರೀಯ ಕಾನೂನಿನ ಮೂಲಕ ನಿಯಂತ್ರಿಸುವುದರೊಂದಿಗೆ ಅಧಿಕೃತ ಕಸಾಯಿಖಾನೆಗಳಲ್ಲಿ ಮಾತ್ರ ಕೆಲವೊಂದು ನಿರ್ಬಂಧಗಳೊಂದಿಗೆ ಹತ್ಯೆ ಮಾಡಲು ಅನುಮತಿಸಿವೆ. ಆದರಲ್ಲೂ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಪ್ರಾಣಿಯ ಹತ್ಯೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಿವೆ.

ಅದೃಷ್ಟವಿದ್ದಂತೆಯೇ ಫಲ

ಸಮುದ್ರಮಥನಾಲ್ಲೇಭೆ ಹರಿರ್ಲಕ್ಷ್ಮೀಂ ಹರೋ ವಿಷಮ್ ।
ಭಾಗ್ಯಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಮ್ ॥

ದೇವಾಸುರರು ಸಮುದ್ರವನ್ನು ಕಡೆದಾಗ ವಿಷ್ಣು ಲಕ್ಷ್ಮಿಯನ್ನೂ, ಶಿವ ವಿಷವನ್ನೂ ಪಡೆದರು. ಆದುದರಿಂದ ಅದೃಷ್ಟವಿದ್ದಂತೆಯೇ ಫಲಪ್ರಾಪ್ತಿ. ವಿದ್ಯೆ ಮತ್ತು ಪುರುಷ ಪ್ರಯತ್ನಗಳು ಪ್ರಯೋಜನಕ್ಕೆ ಬರಲಾರವು - ಎಂಬುದು ಶ್ಲೋಕಾರ್ಥ.

ಪ್ರಕೃತದಲ್ಲಿ ಈ ಸುಭಾಷಿತ ಪುರಾಣದ ಘಟನೆಯೊಂದನ್ನು ದೃಷ್ಟಾಂತವನ್ನಾಗಿ ಶಾಶ್ವತವಾದ ಮೌಲ್ಯವೊಂದನ್ನು ನಿರೂಪಿಸುತ್ತದೆ.

ದೇವತೆಗಳು ಹಾಗೂ ಅಸುರರು ಒಟ್ಟಾಗಿ ಸಮುದ್ರ ಮಥನ ಮಾಡಿದ ಘಟನೆಯನ್ನು ಕೇಳಿದ್ದೇವೆ. 'ಸಮುದ್ರಮಥನ' ಎಂಬ ಯಕ್ಷಗಾನವನ್ನಾದರೂ ನೋಡಿರ ಬಹುದು. ದೂರ್ವಾಸರ ಶಾಪದ ಪರಿಣಾಮವಾಗಿ ಇಂದ್ರನು ದೇವಲೋಕದ ತನ್ನೆಲ್ಲ ಸಂಪತ್ತುಗಳನ್ನೂ ಕಳೆದುಕೊಳ್ಳುತ್ತಾನೆ. ಆ ಸಂಪತ್ತುಗಳನ್ನು ಪುನರಪಿ ಪಡೆಯಲು ಮಹಾವಿಷ್ಣುವಿನ ಸಲಹೆಯಂತೆ ಸಮುದ್ರ ವನ್ನು ಕಡೆಯಲು ಮುಂದಾಗುತ್ತಾರೆ. ಮಂದರ ಪರ್ವತವನ್ನು ಕಡಗೋಲಾಗಿ, ವಾಸುಕಿಯನ್ನು ಹಗ್ಗವನ್ನಾಗಿ ದೇವ-



ಶ್ಲೋಕ ಸಾಗರ
• ಡಾ. ಸೋಂದಾ ಭಾಸ್ಕರ ಭಟ್

ದಾನವರು ಸಮುದ್ರ ಮಥನ ನಡೆಸುತ್ತಾರೆ. ಆಗ ನೀರಿನಲ್ಲಿ ಕರಗಿಹೋದ ಅಥವಾ ಮುಳುಗಿಹೋದ ಒಂದೊಂದೇ ವಸ್ತುಗಳು ಮೇಲಕ್ಕೆ ಬರಲಾರಂಭಿಸಿದವು. ಮಥನ ಕ್ರಿಯೆ ನಡೆದಾಗ ಸಮುದ್ರದ ಆಳದಿಂದ ಹಾಲಾಹಲವು ಬರಲು ಅದನ್ನು ಶಿವನು ಸ್ವೀಕರಿಸಿದ ವಿಷಕಂಠನಾದ.

ಮಥನಕ್ರಿಯೆ ಮುಂದುವರಿಯಲು ಕಡಲಿನ ಒಡಲಿನಿಂದ ಸಂಪತ್ತಿನ ಒಡತಿ ಲಕ್ಷ್ಮಿ ಮೇಲೆ ಬಂದಳು. ಅವಳನ್ನು ವಿಷ್ಣುವು ಪಡೆದನು. ಲಕ್ಷ್ಮೀಪತಿಯಾದನು. ಕಥೆಯು ಇನ್ನೂ ಮುಂದುವರಿಯುತ್ತದೆ. ಇರಲಿ. ಅದೃಷ್ಟದಂತೆಯೇ ಫಲದ ಪ್ರಾಪ್ತಿಯಾಗುತ್ತದೆ. ಶಿವನ ಅದೃಷ್ಟದಲ್ಲಿ ವಿಷವಿತ್ತು. ವಿಷ್ಣುವಿನ ಅದೃಷ್ಟದಲ್ಲಿ ಲಕ್ಷ್ಮಿಯಿತ್ತು. ಅದೃಷ್ಟವನ್ನು ಬದಲಾಯಿಸಲು ಸಾಧ್ಯವಾಗು ವುದಿಲ್ಲ. ಅದನ್ನು ಅನುಭವಿಸಲೇಬೇಕು. ಕೆಡುಕಾದಾಗ ಅದೃಷ್ಟವನ್ನು ದೂಷಿಸದೇ ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಬೇಕು. ಯಾರ ಅದೃಷ್ಟ ಹೇಗಿದೆಯೆಂಬುದು ಹೇಳಲು ಸಾಧ್ಯವಿಲ್ಲ. ಇದರ ಮುಂದೆ ಪ್ರಯತ್ನ ವಿಫಲವೂ ಆಗುತ್ತದೆ. ಚೆನ್ನಾಗಿ ಓದಿದವನೊಬ್ಬ ಪರೀಕ್ಷೆಯ ಸಮಯದಲ್ಲಿ ಅನಾರೋಗ್ಯದಿಂದ ಪರೀಕ್ಷೆಗೆ ಹಾಜರಾಗುವುದಕ್ಕೂ ಆಗದೇ ಅನುತ್ತೀರ್ಣನಾಗಬಲ್ಲ. ಏನೂ ಓದದವನು ಒಳ್ಳೆಯ ಅಂಕದೊಂದಿಗೆ ಉತ್ತೀರ್ಣನಾಗಬಲ್ಲ.

ಅದೃಷ್ಟದ ಮುಂದೆ ಯಾವುದೂ ಇಲ್ಲ, ವಿದ್ಯೆ, ಪುರುಷ ಪ್ರಯತ್ನ ಇವುಗಳೆಲ್ಲವೂ ಗೌಣವೆನಿಸುತ್ತವೆ. ಯಾವುದೇ ರಂಗದಲ್ಲಿ ಯಶಸ್ಸನ್ನು ಪಡೆಯಲು ಅದೃಷ್ಟ ಮೊದಲು ಬೇಕು. ವಿದ್ಯೆಯಿದ್ದವರೂ ಚೆನ್ನಾಗಿರುವ ಉದ್ಯೋಗ ಪಡೆಯದಿರಬಹುದು ಅಥವಾ ಅಷ್ಟೇ ವಿಧದಲ್ಲಿ ಪ್ರಯತ್ನಪಟ್ಟರೂ ಎಣಿಸಿದ ಯಶಸ್ಸು ಸಿಗದಿರಬಹುದು. ಆಗೆಲ್ಲ ಅದೃಷ್ಟ ಕೈಕೊಟ್ಟಿದೆ ಎನ್ನುತ್ತೇವೆ. ಅದೃಷ್ಟವಂತನಾಗುವುದಕ್ಕೂ ಪೂರ್ವಜನ್ಮದ ಪುಣ್ಯ ಸಂಚಯನವಿರಬೇಕು. ಒಳ್ಳೆಯ ಯೋಚನೆ, ಮನೋಭಾವ ಇರಬೇಕು. ಈ ಎಲ್ಲ ಬಗೆಯ ಒಳ್ಳೆಯತನವೇ ನಮ್ಮನ್ನು ಮೇಲೆತ್ತುವುದು.

ಮನ ಮೋಹಿಸುವ ಮಾಧುರ್ಯದ ಒಡತಿ ಸುಮನ್ ಕಲ್ಯಾಣ್‌ಪುರ್

ಸುಮನ್ ಕಲ್ಯಾಣಪುರ್ ತಮ್ಮ ಹಾಡುಗಳ ರೂಪದಲ್ಲಿ ಎಂದೆಂದಿಗೂ ನಮ್ಮೊಂದಿಗೆ ಇರುತ್ತಾರೆ.

▸ ಚಿದಂಬರ ಕಾಕತ್ಕರ್ ಮಂಗಳೂರು

ಚಿತ್ರಸಂಗೀತದ ಸ್ವರ್ಣಯುಗವನ್ನು ಶ್ರೀಮಂತಗೊಳಿಸಿದವರಲ್ಲಿ ಓರ್ವರಾದ ಗಾಯಕಿ ಸುಮನ್ ಕಲ್ಯಾಣ್‌ಪುರ್ ಮದುವೆಗೆ ಮುನ್ನ ಸುಮನ್ ಹೆಮ್ಮಾಡಿ ಆಗಿದ್ದವರು. ಬ್ಯಾಂಕ್ ನೌಕರಿ ನಿಮಿತ್ತ ಢಾಕಾದಲ್ಲಿ ನೆಲೆಸಿದ್ದ ಅವರ ತಂದೆ ಶಂಕರ ರಾವ್ ಮೂಲತಃ ಕುಂದಾಪುರ ಸಮೀಪದ ಹೆಮ್ಮಾಡಿಯವರು. 1937ರಲ್ಲಿ ಸುಮನ್ ಜನಿಸಿದ ಕೆಲವು ವರ್ಷಗಳ ನಂತರ ಅವರ ಕುಟುಂಬ ಮುಂಬಯಿಗೆ ಸ್ಥಳಾಂತರಗೊಂಡಿತು. ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ್ದ ಸುಮನ್ ಹೈಸ್ಕೂಲ್ ಶಿಕ್ಷಣದ ನಂತರ ಪ್ರಸಿದ್ಧ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಸೇರಿದರು. ಗಾಯನದಲ್ಲೂ ಆಸಕ್ತಿ ಹೊಂದಿದ್ದ ಅವರು ಶಾಸ್ತ್ರೀಯ ಸಂಗೀತ ತರಬೇತಿಯನ್ನೂ ಪಡೆದರು. ಸಮಾರಂಭವೊಂದರಲ್ಲಿ ಹಾಡುತ್ತಿದ್ದಾಗ ಮುಖ್ಯ ಅತಿಥಿಯಾಗಿದ್ದ ತಲತ್ ಮಹಮೂದ್ ಇವರ ಪ್ರತಿಭೆಯನ್ನು ಗುರುತಿಸಿ HMVಗೆ ಪರಿಚಯಿಸಿದರು. ಆ ಮೇಲೆ ಆಕಾಶವಾಣಿಯಲ್ಲೂ ಹಾಡತೊಡಗಿದ ಅವರಿಗೆ ಮರಾಠಿ ಚಿತ್ರ ಶುಕ್ರಾಚಿ ಚಾಂದಣಿಯಲ್ಲಿ ಹಾಡುವ ಅವಕಾಶ ದೊರೆಯಿತು. ಅದರ ಹಾಡುಗಳಿಂದ ಆಕರ್ಷಿತರಾದ ಶೇಖ್ ಮುಖ್ತಾರ್‌ರವರು 'ಮಂಗೂ' ಎಂಬ ಹೆಸರಿನ ತಮ್ಮ ಚಿತ್ರಕ್ಕಾಗಿ ಮಹಮ್ಮದ್ ಶಫಿ ಅವರ ಸಂಗೀತ ನಿರ್ದೇಶನದಲ್ಲಿ ಮೂರು ಹಾಡುಗಳನ್ನು ಹಾಡಿಸಿದರು. ಆದರೆ ಕಾರಣಾಂತರದಿಂದ ಮಹಮ್ಮದ್ ಶಫಿ ಆ ಚಿತ್ರವನ್ನು ಬಿಡಬೇಕಾಗಿ ಬಂತು. ಅವರ ಜಾಗಕ್ಕೆ ಬಂದ ಓ.ಪಿ. ನಯ್ಯರ್ ಸುಮನ್ ಅವರ ಒಂದು ಹಾಡನ್ನು ಮಾತ್ರ ಉಳಿಸಿಕೊಂಡರು. ನಂತರ ಸುಮನ್ ನೌಷಾದ್ ಸಂಗೀತ ನಿರ್ದೇಶನವಿದ್ದ ದರ್ವಾಜಾ ಚಿತ್ರಕ್ಕೆ ಹಾಡಿದರು. ಕ್ರಮೇಣ ಅವರಿಗೆ ಒಂದರ ಹಿಂದೆ ಒಂದು ಅವಕಾಶಗಳು ಬರತೊಡಗಿದವು.



ಸುಮನ್ ಹೆಮ್ಮಾಡಿ 1958ರಲ್ಲಿ ಮುಂಬಯಿಯ ಉದ್ಯಮಿ ರಮಾನಂದ ಕಲ್ಯಾಣ್‌ಪುರ್ ಅವರನ್ನು ವಿವಾಹವಾದ ಮೇಲೆ ಸುಮನ್ ಕಲ್ಯಾಣ್‌ಪುರ್ ಆದರು.

50-60ರ ದಶಕಗಳಲ್ಲಿ ಸುಮನ್ ಕಲ್ಯಾಣಪುರ್ ಮತ್ತು ಲತಾ ಮಂಗೇಶ್ಕರ್ ಅವರ ಧ್ವನಿ ಮತ್ತು ಹಾಡುವ ಶೈಲಿಗಳು ಬಹುವಾಗಿ ಹೋಲುತ್ತಿದ್ದವು. ಶಂಕರ್ ಜೈಕಿಶನ್ ಅವರಿಂದ ಲಕ್ಷ್ಮೀಪ್ಯಾರೆವರೆಗೆ, ಸಲಿಲ್ ಚೌಧರಿಯಿಂದ ನೌಷಾದ್ ವರೆಗೆ ಎಲ್ಲರ ಅಚ್ಚುಮೆಚ್ಚಿನವರಾಗಿದ್ದ ಇವರು ಹೆಚ್ಚಿನ ರಿಹರ್ಸಲ್ ಇಲ್ಲದೆ ಸ್ಟುಡಿಯೊದಲ್ಲೇ ಹಾಡನ್ನು ಒಂದೆರಡು ಸಲ ಕೇಳಿ ರೆಕಾರ್ಡಿಂಗಿಗೆ ತಯಾರಾಗುತ್ತಿದ್ದರಂತೆ. ಲತಾ ಮಂಗೇಷ್ಕರ್ ಮುಂಚೂಣಿಯಲ್ಲಿರುವಾಗಲೇ ಇಷ್ಟೊಂದು ಹಾಡುಗಳು ಇವರ ಕಂಠದಿಂದ ಹೊರಹೊಮ್ಮಲು ಇದೂ ಒಂದು ಕಾರಣವಿರಬಹುದು. ಲತಾ ಮಂಗೇಶ್ಕರ್ ಇವರಿಗೆ ಹೆಚ್ಚು ಅವಕಾಶಗಳು ಸಿಗದಂತೆ ಮಾಡಿದರು ಎಂದು ಕೆಲವರು ಹೇಳುವುದಿದೆ. ಆದರೆ ಇದರಲ್ಲಿ ಹುರುಳಿಲ್ಲ, ಅವರು ಹಾಡಬೇಕಾದ ಹಾಡುಗಳೆಲ್ಲ ಅವರಿಗೆ ಸಿಕ್ಕಿವೆ.

ರಫಿ - ಸುಮನ್

ಸುಮನ್ ಕಲ್ಯಾಣಪುರ್ ಡ್ಯುಯೆಟ್‌ಗಳ ರಾಣಿ ಎಂದರೆ ತಪ್ಪಾಗಲಾರದು. ಇವರು ರಫಿ ಜತೆಗೂಡಿ ಹಾಡಿದರೆಂದರೆ ಆ ಹಾಡು ಸುಪರ್ ಹಿಟ್ ಎಂದೇ ಅರ್ಥ. ತುಝ್ಕೊ ಪ್ಯಾರ್ ಕರತೆ ಹೈಂ ಕರತೆ ರಹೇಂಗೆ - ಎಪ್ರಿಲ್ ಫೂಲ್, ಅಗರ್ ತೇರಿ ಜಲ್ವಾನುಮಾಯಿ ನ ಹೋತಿ - ಬೇಟಿ ಬೇಟೆ, ಆಜ್ ಹುನ ಆಯೆ ಬಾಲಮಾ - ಸಾಂಝ್ ಔರ್ ಸವೇರಾ, ತುಮನೆ ಪುಕಾರಾ ಔರ್ ಹಮ್ ಚಲೆ ಆಯೆ - ರಾಜ್ ಕುಮಾರ್, ಠಹರಿಯೆ ಹೋಶ್ ಮೆಂ ಆ ಲೂಂ - ಮೊಹಬ್ಬತ್ ಇಸಕೊ ಕಹತೆ ಹೈಂ, ರಾತ್ ಸುಹಾನೀ ಜಾಗ್ ರಹೀ ಹೈ - ಜಿಗ್ರೀ ದೋಸ್ತ್, ಆಜ್ ಕಲ್ ತೆರೆ ಮೇರೆ ಪ್ಯಾರ್ ಕೆ - ಬ್ರಹ್ಮಚಾರಿ, ನಾ ನಾ ಕರತೆ ಪ್ಯಾರ್ ತುಮ್ಹೀ ಸೆ - ಜಬ್ ಜಬ್ ಫೂಲ್ ಖಿಲೆ, ದಿಲ್ ಏಕ್ ಮಂದಿರ್ ಹೈ - ಟೈಟಲ್ ಹಾಡು, ಪರ್‌ಬತೊಂ ಕೆ ಪೇಡೊಂ ಪರ್ - ಶಗೂನ್, ತುಮ್ ಸೆ ಓ ಹಸೀನಾ ಮೊಹಬ್ಬತ್ ನ ಮೈನೆ - ಫರ್ಜ್, ತುಝೆ ದೇಖಾ, ತುಝೇ ಚಾಹಾ - ಛೋಟೀಸೀ ಮುಲಾಕಾತ್ ಇವು ಕೆಲವು ಉದಾಹರಣೆಗಳು.

ಮುಕೇಶ್ - ಸುಮನ್

ಮುಕೇಶ್ ಜೊತೆಗಿನ ಅವರ ಹಿಟ್ ಹಾಡುಗಳು ಮೇರಾ ಪ್ಯಾರ್ ಭೀ ತೂ ಹೈ - ಸಾಥಿ, ಚುರಾ ಲೇನ ತುಮ್ ಕೋ ಯೇ - ದಿಲ್ ಹೀ ತೊ ಹೈ, ಯೇ ಕಿಸ್ ನೆ ಗೀತ್ ಛೇಡಾ - ಮೇರೀ ಸೂರತ್ ತೆರೀ ಆಂಖೆಂ, ಆಯಾ ನ ಹಮ್ ಕೋ ಪ್ಯಾರ್ ಜತಾನಾ - ಪಹಚಾನ್, ಹಾಂ ಮೈನೆ ಭೀ ಪ್ಯಾರ್ ಕಿಯಾ - ಬೂಂದ್ ಜೋ ಬನ್ ಗಯೀ ಮೋತಿ, ಯೇ ಮೌಸಮ್ ರಂಗೀನ್ ಸಮಾ - ಮಾಡರ್ನ್ ಗರ್ಲ್ ಇತ್ಯಾದಿ. ಪಹಚಾನ್ ಚಿತ್ರಕ್ಕಾಗಿ ಮುಕೇಶ್ ಮತ್ತು ಶಾರದಾ ಜೊತೆ ಅವರು ಹಾಡಿದ ವೋ ಪರಿ ಕಹಾಂ ಸೆ ಲಾವೂಂ ಚಾರ್ಟ್ ಬಸ್ಟರ್ ಆಗಿತ್ತು.

ಇತರರೊಂದಿಗೆ

ಅವರು ಹೇಮಂತ್ ಕುಮಾರ್ ಜೊತೆ ಹಾಡಿದ ಬಾತ್ ಏಕ್ ರಾತ್ ಕೀ ಚಿತ್ರದ ನ ತುಮ್ ಹಮೆಂ ಜಾನೋ, ಮನ್ನಾಡೆ ಜೊತೆ ಹಾಡಿದ ಜಿಂದಗೀ ಔರ್ ಖ್ವಾಬ್ ಚಿತ್ರದ ನ ಜಾನೆ ಕಹಾಂ ತುಮ್ ಥೆ, ಮನ್‌ಹರ್ ಉಧಾಸ್ ಜೊತೆ ಹಾಡಿದ ವಿಶ್ವಾಸ್ ಚಿತ್ರದ ಆಪ್ ಕೊ ಹಮ್ ಸೆ ಬಿಛಡೆ ಹುವೆ ಕೂಡ ಹಿಟ್ ಹಾಡುಗಳೇ.

ಸೋಲೋ ಹಾಡುಗಳು

ಅವರ ಸೋಲೋ ಹಾಡುಗಳಲ್ಲಿ ದಿಲ್ ಏಕ್ ಮಂದಿರ್ ಚಿತ್ರದ ಜೂಹಿ ಕೀ ಕಲಿ ಮೇರಿ ಲಾಡಲಿ, ಕಣ್ ಕಣ್ ಮೆಂ ಭಗವಾನ್ ಚಿತ್ರದ ಅಪನೆ ಪಿಯಾ ಕೀ ಮೈ ತೋ ಬನೀ ಜೋಗನಿಯಾ, ನೂರ್ ಮಹಲ್ ಚಿತ್ರದ ಮೇರೆ ಮೆಹಬೂಬ್ ನ ಜಾ, ಬಾಲಕ್ ಚಿತ್ರದ ಸುನ್ ಲೇ ಬಾಪೂ ಯೆ ಪೈಗಾಮ್, ರೇಶಮ್ ಕೀ ಡೋರಿಯ ಬಹನಾ ನೆ ಭಾಯಿ ಕೀ ಕಲಾಯಿ ಸೇ, ಗೀತ್ ಚಿತ್ರದ ಕಭೀ ಹೋಟೊಂ ಪೆ ಮುಝೆ ಭೀ ಲಗಾ ಲೆ, ರಫಿ ಮತ್ತು ಅವರು ಬೇರೆ ಬೇರೆಯಾಗಿ ಹಾಡಿದ ಜಹಾಂ ಪ್ಯಾರ್ ಮಿಲೆ ಚಿತ್ರದ ಚಲೇ ಜಾ ಚಲೇ ಜಾ ಹಾಡುಗಳು ನೆನಪಿನಲ್ಲುಳಿಯುವಂಥವು. Come September ಚಿತ್ರದ ಥೀಮ್ ಮ್ಯೂಸಿಕ್ ಆಧರಿಸಿ ಶಂಕರ್ ಜೈಕಿಶನ್ ನೇತೃತ್ವದಲ್ಲಿ ರಿಮ್ ಝಿಮ್ ರಿಮ್ ಝಿಮ್ ನ ಬರ್‌ಸೆ ಮೋತಿ ಕೆ ದಾನೆ ಎಂಬ non filmy ಹಾಡನ್ನು ಸುಮನ್ ಕಲ್ಯಾಣಪುರ್ ಹಾಡಿದ್ದು ಅದು ರೇಡಿಯೋ ಸಿಲೋನಿನಲ್ಲಿ ಮಾತ್ರ ಕೇಳಲು ಸಿಗುತ್ತಿತ್ತು.

ಕನ್ನಡ, ಮರಾಠಿ

'ಕಲಾವತಿ' ಚಿತ್ರದ ಒಡನಾಡಿ ಬೇಕೆಂದು, ಕಲ್ಪವೃಕ್ಷದ ಹನಿ ಹನಿ ಹೀರಿ ಹನಿ ಹರೆಯ ಮತ್ತು ತಿಲ್ಲಾನ ನೂರು ಬಗೆ ಅವರು ಹಾಡಿದ ಕನ್ನಡ ಹಾಡುಗಳು. ಅವರ ಮಧುರ ಮರಾಠಿ ಹಾಡುಗಳಲ್ಲಿ ಥಟ್ಟನೆ ನೆನಪಿಗೆ ಬರುವುದು ಬೆಳಗ್ಗೆ ರೇಡಿಯೋ ಮೂಲಕ ಕಿವಿಗೆ ಬೀಳುತ್ತಿದ್ದ 'ಕೇಶವಾ ಮಾಧವಾ ತುಝ್ಯಾ ನಾಮಾಚ ವೇಗೋಡವಾ' ಮತ್ತು 'ದೇಹ ಶುದ್ಧ ಕರುನಿ'.

ಸುರ್ ಸಿಂಗಾರ್ ಸಂಸದ್ ಪ್ರಶಸ್ತಿ, ಲತಾ ಮಂಗೇಶ್ಕರ್ ಪ್ರಶಸ್ತಿಗಳನ್ನು ಪಡೆದಿದ್ದ ಅವರನ್ನು 2023ರಲ್ಲಿ ಪದ್ಮಭೂಷಣ ನೀಡಿ ಗೌರವಿಸಲಾಗಿತ್ತು. ಯಾವುದೇ ವಿವಾದಗಳಿಗೆ ಸಿಲುಕದೆ ತಾನಾಯಿತು, ತನ್ನ ಹಾಡುಗಾರಿಕೆಯಾಯಿತು ಎಂದು ಕೂಡು ಕುಟುಂಬದೊಂದಿಗೆ ಸಂತೃಪ್ತ ಜೀವನ ನಡೆಸಿ 31-05-2026ರಂದು ನಮ್ಮನ್ನಗಲಿದ ಸುಮನ್ ಕಲ್ಯಾಣಪುರ್ ತಮ್ಮ ಹಾಡುಗಳ ರೂಪದಲ್ಲಿ ಎಂದೆಂದಿಗೂ ನಮ್ಮೊಂದಿಗೆ ಇರುತ್ತಾರೆ.

ಫಿಲಿಪ್ಪೀನ್ಸ್‌ನಲ್ಲಿ 7.8 ತೀವ್ರತೆ ಭೂಕಂಪ

ಪ್ರಬಲ ಕಂಪನಕ್ಕೆ 32 ಮಂದಿ ಸಾವು



• **ಮನಿಲಾ:** ದಕ್ಷಿಣ ಫಿಲಿಪ್ಪೀನ್ಸ್‌ನಲ್ಲಿ 7.8 ಪ್ರಬಲ ತೀವ್ರತೆಯ ಭೂಕಂಪ ಸಂಭವಿಸಿದ್ದು, 32 ಮಂದಿ ಮೃತಪಟ್ಟಿದ್ದು, 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಈ ಹಿನ್ನೆಲೆ ಕರಾವಳಿ ಪ್ರದೇಶದಲ್ಲಿ ಸುನಾಮಿ ಮುನ್ನೆಚ್ಚರಿಕೆ ನೀಡಲಾಗಿದೆ.

ಭೂಕಂಪದಿಂದ ಜನರಲ್ ಸ್ಯಾಂಟೋಸ್ ನಗರದಲ್ಲಿ ಹಲವು ಕಟ್ಟಡಗಳು ಕುಸಿದು ಬಿದ್ದಿದ್ದು, ಪ್ರಮುಖ ಮೂಲಸೌಕರ್ಯಗಳು ಹಾನಿಗೊಳಗಾಗಿದೆ. ಜನರಲ್ ಸ್ಯಾಂಟೋಸ್ ನಗರದ ಒಂದು ವಾಣಿಜ್ಯ ಸಂಕೀರ್ಣ ಸಂಪೂರ್ಣ ನೆಲಸಮವಾಗಿರುವ ದೃಶ್ಯಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿವೆ.

ಭೂಕಂಪದ ನಂತರದ ಆಘಾತಗಳಿಂದಾಗಿ ಕುಸಿಯಬಹುದಾದ ಮತ್ತು ಹಾನಿಗೊಳಗಾದ ಕಟ್ಟಡಗಳು ಮತ್ತು ಮನೆಗಳಿಂದ ಹೊರಬಂದು ಸುರಕ್ಷಿತ ಸ್ಥಳದಲ್ಲಿ ರಕ್ಷಣೆ ಪಡೆಯುವಂತೆ ನಾಗರಿಕರಿಗೆ ಸೂಚಿಸಲಾಗಿದೆ. ಇಂಡೋನೇಷ್ಯಾ, ತೈವಾನ್, ಪಲಾವ್, ಪಪುವಾ ನ್ಯೂಗಿನಿಯಾ ಮತ್ತು ಜಪಾನ್ ದೇಶಗಳಲ್ಲಿ ಸುನಾಮಿ ಎಚ್ಚರಿಕೆ ಘೋಷಿಸಲಾಗಿದೆ.

ಅತೀ ಹೆಚ್ಚು ಜನಸಂಖ್ಯೆಯಿರುವ ಪ್ರದೇಶ: ಜನರಲ್ ಸ್ಯಾಂಟೋಸ್ 700,000ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಬಂದರು ನಗರವಾಗಿದ್ದು, ಇದು ಟ್ಯೂನ ಮೀನು ರಫ್ತು ಉದ್ಯಮ ಮತ್ತು ಇತರ ವಾಣಿಜ್ಯದ ಪ್ರಾದೇಶಿಕ ಕೇಂದ್ರವಾಗಿದೆ. ಈ ವರ್ಷ ದೇಶವನ್ನು ಅಪ್ಪಳಿಸಿದ ಅತ್ಯಂತ ಪ್ರಬಲ ಭೂಕಂಪವು ಫಿಲಿಪ್ಪೀನ್ಸ್ ದ್ವೀಪಸಮೂಹದ ಎರಡನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದ್ವೀಪವಾದ ಮಿಂಡಾನಾವೊದ ಸಮುದ್ರದಲ್ಲಿ ಕೇಂದ್ರೀಕೃತವಾಗಿತ್ತು. ಬಾಕೋಲ್ಕೋಲ್ ಪ್ರಕಾರ, ಭೂಕಂಪವು ಸಾರಂಗಾನಿ ಪ್ರಾಂತ್ಯದ ಮಾಸಿಮ್ ಪಟ್ಟಣದಿಂದ ನೈಋತ್ಯಕ್ಕೆ ಸುಮಾರು 32 ಕಿಮೀ. (20 ಮೈಲಿ) ದೂರದಲ್ಲಿ 33 ಕಿಮೀ. (20 ಮೈಲಿ) ಆಳದಲ್ಲಿ ಸಂಭವಿಸಿದೆ.

ಫಿಲಿಪ್ಪೀನ್ಸ್ ಅಧ್ಯಕ್ಷ ಫರ್ಡಿನ್ಯಾಂಡ್ ಮಾರ್ಕೋಸ್ ಜೂನಿಯರ್ ತರಗತಿಗಳನ್ನು ರದ್ದುಗೊಳಿಸಲು ಆದೇಶಿಸಿದ್ದಾರೆ. ಭೂಕಂಪ ಪೀಡಿತ ಪ್ರಾಂತ್ಯಗಳಲ್ಲಿ ತಕ್ಷಣವೇ ದುರಸ್ಥಿ ಕಾರ್ಯ ವಿಪತ್ತು-ಪ್ರತಿಕ್ರಿಯೆ ಸಂಸ್ಥೆಗಳಿಗೆ ನಿರ್ದೇಶನ ನೀಡಿದ್ದಾರೆ.

ಶಿಕ್ಷಕರ ಕಾರ್ಯಕ್ಕೆ ಶ್ಲಾಘನೆ ವ್ಯಕ್ತ : ಭೂಕಂಪನದ ವೇಳೆ ಶಾಲಾ ಶಿಕ್ಷಕರು ಮತ್ತು ಅಧಿಕಾರಿಗಳು ವಿದ್ಯಾರ್ಥಿಗಳನ್ನು ಅತ್ಯಂತ ಶಾಂತವಾಗಿ, ಶಿಸ್ತುಬದ್ಧವಾಗಿ ಮುಕ್ತ ಮೈದಾನಕ್ಕೆ ಕರೆತಂದು ಸುರಕ್ಷತೆ ಖಚಿತಪಡಿಸಿರುವುದು ಸಾರ್ವಜನಿಕರ ಶ್ಲಾಘನೆಗೆ ಪಾತ್ರವಾಗಿದ್ದು ಈ ದೃಶ್ಯವು ಸಾಮಾಜಿಕ ಮಾಧ್ಯಮಗಳಲ್ಲಿ ಭಾರೀ ಪ್ರಶಂಸೆಗೆ ಪಾತ್ರವಾಗಿದೆ. ಸಂತ್ರಸ್ತ ಪ್ರದೇಶದ ಜನರಿಗೆ ಆಡಳಿತ ಮಂಡಳಿಯು ತಾತ್ಕಾಲಿಕ ವಸತಿ, ಆಹಾರ, ಶುದ್ಧ ನೀರು ಮತ್ತು ವೈದ್ಯಕೀಯ ಕಿಟ್‌ಗಳನ್ನು ವಿತರಿಸಲು ತುರ್ತು ಕೇಂದ್ರಗಳನ್ನು ತೆರೆದಿದೆ.

ಫಿಲಿಪ್ಪೀನ್ಸ್ ಪೆಸಿಫಿಕ್ ಮಹಾಸಾಗರದ ರಿಂಗ್ ಆಫ್ ಫೈರ್ ಅಂದರೆ ಭೂಕಂಪನ ಸೂಕ್ಷ್ಮ ವಲಯ ವ್ಯಾಪ್ತಿಯೊಳಗೆ ಇರುವುದರಿಂದ ಸಾಮಾನ್ಯವಾಗಿ ಇಲ್ಲಿನ ನಾಗರಿಕರು ಮತ್ತು ರಕ್ಷಣಾ ಪಡೆಗಳು ಇಂತಹ ಸವಾಲುಗಳನ್ನು ಎದುರಿಸಲು ಮೊದಲೇ ತರಬೇತಿ ಪಡೆದಿರುತ್ತಾರೆ. ಸರ್ಕಾರದ ತ್ವರಿತ ಸ್ಪಂದನೆ, ಡ್ರೋನ್ ತಂತ್ರಜ್ಞಾನದ ಕಣ್ಗಾವಲು ಮತ್ತು ನೆರೆರಾಷ್ಟ್ರಗಳ ಸೌಹಾರ್ದಯುತ ಬೆಂಬಲದಿಂದಾಗಿ ಮಿಂಡಾನಾವೊ ಪ್ರದೇಶವು ಅತ್ಯಂತ ವೇಗವಾಗಿ ಸಹಜ ಸ್ಥಿತಿಗೆ ಮರಳುತ್ತಿದ್ದು, ಪುನರ್ ನಿರ್ಮಾಣ ಕಾರ್ಯಗಳು ಸಶಕ್ತವಾಗಿ ಆರಂಭಗೊಂಡಿವೆ.

ಪ್ರಧಾನ್ ರಾಜೀನಾಮೆಗೆ ಇಂಡಿ ಕೂಟ ಆಗ್ರಹ

ಎಸ್‌ಐಆರ್ ಬಗ್ಗೆ ಸಿಜೆಐಗೆ ಪತ್ರ

• **ಹೊಸದಿಲ್ಲಿ:** ಇಂಡಿ ಕೂಟದ ವಿರೋಧ ಪಕ್ಷಗಳ ನಾಯಕರು ಸೋಮವಾರ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆ ಮತ್ತು ಮತ ಅಕ್ರಮಗಳ ಕುರಿತು ಭಾರತದ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆಯಲು ತೀರ್ಮಾನಿಸಿದ್ದು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿದ್ದಾರೆ.

ದಿಲ್ಲಿಯಲ್ಲಿ ನಡೆದ ವಿರೋಧ ಪಕ್ಷಗಳ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಒಕ್ಕೂಟ ಐದು ವಿಷಯಗಳಲ್ಲಿ ಒಮ್ಮತಕ್ಕೆ ಬಂದಿರುವುದಾಗಿ ತಿಳಿಸಿದರು. ನೀಟ್-ಸಿಬಿಎಸ್‌ಇ ವಿವಾದದ ಹಿನ್ನೆಲೆಯಲ್ಲಿ ಧರ್ಮೇಂದ್ರ ಪ್ರಧಾನ್ ತಕ್ಷಣ ರಾಜೀನಾಮೆ ನೀಡಬೇಕು ಎಂಬುದಾಗಿ ವಿರೋಧ ಪಕ್ಷಗಳು ಸರ್ವಾನುಮತದಿಂದ ಒತ್ತಾಯಿಸಿವೆ. ದೇಶದ ಆರ್ಥಿಕ ಪರಿಸ್ಥಿತಿ, ನಿರುದ್ಯೋಗ, ಬೆಲೆ ಏರಿಕೆ, ರೈತರ ಸಮಸ್ಯೆಗಳು, ಹಿಂದುಳಿದ ವರ್ಗಗಳ ಮೇಲಿನ ದೌರ್ಜನ್ಯಗಳು ಹಾಗೂ ಜನಸಾಮಾನ್ಯರ ಸಮಸ್ಯೆಗಳ ಕುರಿತು ಚರ್ಚಿಸಲು ಕೇಂದ್ರ ಸರ್ಕಾರ ಸರ್ವಪಕ್ಷ ಸಭೆ ಕರೆಯಬೇಕು ಎಂದು ಖರ್ಗೆ ಹೇಳಿದರು.

ಇಂಡಿ ಕೂಟದ ನಾಯಕರು ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ನಡೆಸಲು ತೀರ್ಮಾನಿಸಿದ್ದು, ಮುಂದಿನ ಸಭೆ ಆಗಸ್ಟ್‌ನಲ್ಲಿ ಹೈದರಾಬಾದ್‌ನಲ್ಲಿ ನಡೆಯಲಿದೆ.

ಮಧ್ಯಪ್ರಾಚ್ಯದಲ್ಲಿ ಇರಾನ್ ಮತ್ತು ಇಸ್ರೇಲ್ ನಡುವೆ ದಾಳಿ-ಪ್ರತಿದಾಳಿಗಳು ಪುನರಾರಂಭಗೊಂಡಿದ್ದು, 100 ದಿನಗಳ ಸಂಘರ್ಷದ ಹಿನ್ನೆಲೆಯಲ್ಲಿ ಭಾರತ ವ್ಯಾಪಕ ಆರ್ಥಿಕ ಆಘಾತ ಎದುರಿಸಲು ಸಜ್ಜಾಗಬೇಕಿದೆ. ಜಾಗತಿಕ ತೈಲ ಬೆಲೆಗಳು ಮತ್ತೆ ಏರಿಕೆಯಾಗಲಿವೆ ಮತ್ತು ಕೆಲವು ತಿಂಗಳುಗಳ ಕಾಲ ಸಂಘರ್ಷ ಮುಂದುವರಿದರೆ ಭಾರತದ ತೈಲ ಸಂಗ್ರಹ ಒತ್ತಡದಲ್ಲಿದೆ.



ಸವಾಲು ಎದುರಿಸಲು ಭಾರತ ಸಮಗ್ರ ಸಿದ್ಧತೆ

ಕ್ಷಿಪಣಿ ದಾಳಿ ಪುನರಾರಂಭ

ಯೆಮೆನ್‌ನ ಇರಾನ್ ಬೆಂಬಲಿತ ಹೌತಿ ಬಂಡುಕೋರರು ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದ ಬೆನ್ನಲ್ಲೇ ಪ್ರಾದೇಶಿಕ ಉದ್ವಿಗ್ನತೆ ಹೆಚ್ಚಾಗಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ಇಸ್ರೇಲ್ ಕೂಡ ಇರಾನ್ ನೆಲೆಗಳ ಮೇಲೆ ದಾಳಿ ನಡೆಸಿದೆ. ಅಮೆರಿಕಾದ ಮನವಿ ಸೇರಿದಂತೆ ಜಾಗತಿಕ ರಾಜತಾಂತ್ರಿಕ ಪ್ರಯತ್ನಗಳು ವಿಫಲವಾಗಿವೆ.ತನ್ನ ಇಂಧನ ಅಗತ್ಯಕ್ಕಾಗಿ ಈ ಪ್ರದೇಶವನ್ನು ಹೆಚ್ಚಾಗಿ ಅವಲಂಬಿಸಿರುವ ಭಾರತಕ್ಕೆ ಆತಂಕ ತಂದೊಡ್ಡಿದೆ.

ಸರ್ಕಾರದ ಮುನ್ನೆಚ್ಚರಿಕೆ

ಪಶ್ಚಿಮ ಏಷ್ಯಾ ಸಂಘರ್ಷದಿಂದ ದೇಶೀಯ ಆರ್ಥಿಕತೆಯನ್ನು ರಕ್ಷಿಸಲು ಕೇಂದ್ರ ಸರ್ಕಾರ ಹಂತ-ಹಂತದ ನೀತಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ವರದಿಯೊಂದರ ಪ್ರಕಾರ, ದೇಶೀಯ ಬೇಡಿಕೆ ಪೂರೈಸಲು ಅಗತ್ಯ ವಸ್ತುಗಳು, ಕಚ್ಚಾ ವಸ್ತುಗಳು ಮತ್ತು ಸಿದ್ಧ ವಸ್ತುಗಳ ಲಭ್ಯತೆ ಖಚಿತಪಡಿಸಿಕೊಳ್ಳಲು ಈ ಕ್ರಮಗಳನ್ನು ತರಾತುರಿಯಲ್ಲಿ ಮಾಡದೆ, ರೂಪಾಯಿ ಮೌಲ್ಯ ಮತ್ತು ವಿದೇಶಿ ವಿನಿಮಯ ಹರಿವಿನಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಹಂತ-ಹಂತವಾಗಿ ಜಾರಿಗೊಳಿಸಲಾಗುತ್ತಿದೆ.

ಏರ್‌ಲೈನ್ಸ್, ತೈಲ ಕಂಪನಿಗಳಿಗೆ ಸರ್ಕಾರಿ ಪ್ಯಾಕೇಜ್


ಸರ್ಕಾರ ರಿಸರ್ವ್ ಬ್ಯಾಂಕ್‌ನೊಂದಿಗೆ ಸಮನ್ವಯ ಸಾಧಿಸಿ ಸರ್ಕಾರಿ ಬಾಂಡ್‌ಗಳು ಮತ್ತು ಇತರ ಉಪಕರಣಗಳಲ್ಲಿ ವಿದೇಶಿ ಹೂಡಿಕೆಯನ್ನು ಹೆಚ್ಚಿಸಿದೆ. ಇದರೊಂದಿಗೆ, ಕಚ್ಚಾ ತೈಲ ಬೆಲೆ ಏರಿಕೆಯ ಆಘಾತದಿಂದ ರಕ್ಷಿಸಲು ವಿಮಾನಯಾನ ಸಂಸ್ಥೆಗಳಿಗೆ ವಿಶೇಷ ಪ್ಯಾಕೇಜ್ ಮಂಜೂರು ಮಾಡಲಾಗಿದೆ. ಹೆಚ್ಚುತ್ತಿರುವ ವೆಚ್ಚದ ಹೊರೆಯನ್ನು ಭಾಗಶಃ ಭರಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಆರ್ಥಿಕ ಬೆಂಬಲ ನೀಡಲಾಗುತ್ತಿದೆ. ಪೆಟ್ರೋಕೆಮಿಕಲ್ಸ್ ಮತ್ತು ಹತ್ತಿ ಕೊರತೆಯಿಂದ ಉತ್ಪಾದನಾ ವಲಯಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ.

ಸಬ್ಸಿಡಿ ಹೊರೆ ಏರಿಕೆ

ಹೆಚ್ಚುತ್ತಿರುವ ಸಬ್ಸಿಡಿಗಳು, ತೈಲ ವೆಚ್ಚ ಮತ್ತು ರೂಪಾಯಿ ಮೌಲ್ಯ ಕುಸಿತ ದೇಶದ ಬಜೆಟ್ ಲೆಕ್ಕಾಚಾರಕ್ಕೆ ಸವಾಲಾಗಿದೆ. ಪ್ರಸ್ತುತ ಬಜೆಟ್‌ನಲ್ಲಿ ವಿತ್ತೀಯ ಕೊರತೆ ಜಿಡಿಪಿಯ ಶೇ.4.3 ಕ್ಕೆ ಸೀಮಿತಗೊಳಿಸುವ ಗುರಿ ಹೊಂದಲಾಗಿದೆ. ಮೂಲಗಳ ಪ್ರಕಾರ, ರಸಗೊಬ್ಬರ ಸಬ್ಸಿಡಿ ಬಜೆಟ್ ಅಂದಾಜಿನ 1.7 ಲಕ್ಷ ಕೋಟಿ ರೂ.ಗಳಿಗಿಂತ ದುಪ್ಪಟ್ಟಾಗಿ 3.8 ಲಕ್ಷ ಕೋಟಿ ರೂ.ಗಳಿಗೆ ತಲುಪುವ ಸಾಧ್ಯತೆಯಿದೆ. ಕಳೆದ ವರ್ಷ 26,000 ಕೋಟಿ ರೂ. ಪಾವತಿಸಲಾಗಿದ್ದು, ಈ ವರ್ಷ ಅಡುಗೆ ಅನಿಲ ಸಬ್ಸಿಡಿ 12,085 ಕೋಟಿ ರೂ.ದಾಟುವ ನಿರೀಕ್ಷೆಯಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಯೂರಿಯಾ, ಡಿಎಪಿ ಮತ್ತು ಅಮೋನಿಯಾ ಬೆಲೆ ಏರಿಕೆಯು ಸಾರ್ವಜನಿಕ ಹಣಕಾಸಿನ ಮೇಲೆ ತೀವ್ರ ಒತ್ತಡವನ್ನು ಉಂಟುಮಾಡಿದೆ.

ಹೆಚ್ಚುತ್ತಿರುವ ವ್ಯಾಪಾರ ಕೊರತೆ

ಸರ್ಕಾರ ಈ ಹಿಂದೆ ಘೋಷಿಸಿದ್ದ ರಫ್ತು ಪ್ಯಾಕೇಜ್ ಉತ್ತಮ ಫಲಿತಾಂಶ ನೀಡುತ್ತಿದ್ದು, ಪ್ರಸಕ್ತ ಹಣಕಾಸು ವರ್ಷದ ಮೊದಲ ಎರಡು ತಿಂಗಳುಗಳಲ್ಲಿ ರಫ್ತು ವಲಯ ಎರಡಂಕಿ ಪ್ರಗತಿ ದಾಖಲಿಸಿದೆ. ಆದರೆ, ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಮತ್ತು ಚಿನ್ನದ ಬೆಲೆ ಏರಿಕೆ ದೇಶದ ವ್ಯಾಪಾರ ಕೊರತೆಯ ಮೇಲೆ ತೀವ್ರ ಒತ್ತಡ ಹೇರುತ್ತಿದೆ. ಪೂರೈಕೆ ಜಾಲ ಮತ್ತು ದೇಶೀಯ ವೆಚ್ಚಗಳ ಮೇಲೆ ತೀವ್ರ ನಿಗಾ ಇಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ರಿಸರ್ವ್ ಬ್ಯಾಂಕ್ ಮುನ್ನೆಚ್ಚರಿಕೆ

ಭಾರತದ ಆರ್ಥಿಕತೆ, ಆರ್ಥಿಕ ವರ್ಷ 2026ರಲ್ಲಿ ಶೇ.7.7 ಮತ್ತು ಕೊನೆ ತ್ರೈಮಾಸಿಕದಲ್ಲಿ ಶೇ.7.8 ಪ್ರಗತಿ ದಾಖಲಿಸಿದ್ದರೂ, ಪ್ರಸ್ತುತ ಜಾಗತಿಕ ಮತ್ತು ದೇಶೀಯ ಒತ್ತಡಗಳನ್ನು ಎದುರಿಸುತ್ತಿದೆ. ಜೂ.6ರಂದು ನಡೆದ ಹಣಕಾಸು ನೀತಿ ಪರಾಮರ್ಶೆಯಲ್ಲಿ ಆರ್‌ಬಿಐ ರೆಪೊ ದರವನ್ನು ಶೇ.5.25 ಯಥಾಸ್ಥಿತಿಯಲ್ಲಿಟ್ಟಿದೆ.ಕೇಂದ್ರ ಬ್ಯಾಂಕ್ ಆರ್ಥಿಕ ವರ್ಷ 2027ರ ಜಿಡಿಪಿ ಬೆಳವಣಿಗೆಯ ಮುನ್ಸೂಚನೆ ಶೇ.6.9 ರಿಂದ ಶೇ.6.6 ಕ್ಕೆ ಇಳಿಸಿದೆ. ಪೂರೈಕೆ ಕೊರತೆ ಮುಂದುವರಿದರೆ ಹಣದುಬ್ಬರ ಕೇವಲ ಇಂಧನ ಮತ್ತು ಸರಕುಗಳಿಗೆ ಸೀಮಿತವಾಗದೆ ಇಡೀ ಆರ್ಥಿಕತೆಗೆ ವ್ಯಾಪಿಸಲಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಸಂಜಯ್ ಮಲ್ಹೋತ್ರಾ ತಿಳಿಸಿದ್ದಾರೆ.

ಭಾರತದ ಮುಂದಿರುವ ಸವಾಲುಗಳೇನು?

ತೈಲ ಬೆಲೆ ಏರಿಕೆ: ಹೂಡಿಕೆ-ಬಳಕೆಗೆ ಹಿಂಜರಿಕೆ


ಹೆಚ್ಚುತ್ತಿರುವ ತೈಲ ಬೆಲೆ ಮತ್ತು ಪೂರೈಕೆ ಜಾಲದ ಅಡಚಣೆಯಿಂದಾಗಿ ದೇಶೀಯ ಕೈಗಾರಿಕೆಗಳ ಉತ್ಪಾದನಾ ವೆಚ್ಚ ಈಗಾಗಲೇ ಹೆಚ್ಚಾಗಿದೆ. ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಂಡಿರುವುದರಿಂದ, ಇದು ಹೂಡಿಕೆ ಮತ್ತು ಬಳಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದ್ದು, ಒಟ್ಟಾರೆ ಆರ್ಥಿಕ ಪ್ರಗತಿಯ ವೇಗ ಕುಂಠಿತಗೊಳಿಸಲಿದೆ. ಆದ್ದರಿಂದ ಸದ್ಯ ಭಾರತ ಜನಸಾಮಾನ್ಯರಿಗೆ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸುತ್ತಿದೆ.

ಕೈಗಾರಿಕಾ ವಲಯಕ್ಕೆ ಹಿನ್ನಡೆ

ವೃತ್ತಿಪರ ಮುನ್ಸೂಚನೆದಾರರು 2026-27ರ ನೈಜ ಜಿಡಿಪಿ ಬೆಳವಣಿಗೆ ಅಂದಾಜನ್ನು ಶೇ.6.9 ರಿಂದ ಶೇ.6.5ಕ್ಕೆ ಇಳಿಸಿದ್ದಾರೆ. ವೆಚ್ಚ ಏರಿಕೆ ಮತ್ತು ಅನಿಶ್ಚಿತ ಬೇಡಿಕೆಯಿಂದಾಗಿ ಕಂಪನಿಗಳು ತಮ್ಮ ವಿಸ್ತರಣಾ ಯೋಜನೆಗಳನ್ನು ಮುಂದೂಡುತ್ತಿವೆ. ಹೂಡಿಕೆಯಲ್ಲಿನ ಈ ದೀರ್ಘಾವಧಿಯ ಮಂದಗತಿ ಉತ್ಪಾದನಾ ಮತ್ತು ಮೂಲಸೌಕರ್ಯ ವಲಯಗಳ ಬೆಳವಣಿಗೆಗೆ ಧಕ್ಕೆ ತರಬಹುದು ಎಂದು ವಿಶ್ಲೇಷಕರು ಎಚ್ಚರಿಸಿದ್ದಾರೆ.

ಉದ್ಯೋಗ, ಆದಾಯ ಕುಂಠಿತ

ಸಮೀಕ್ಷೆ ಅವಧಿಯಲ್ಲಿ ಉದ್ಯೋಗ ಮಾರುಕಟ್ಟೆ ಮೇಲಿನ ವಿಶ್ವಾಸ ಮೈನಸ್ 9.1 ರಿಂದ ಮೈನಸ್ 14.4ಕ್ಕೆ ಕುಸಿದಿದೆ. ಶೇ.91.6 ರಷ್ಟು ಗ್ರಾಹಕರು ಕಳೆದ ಒಂದು ವರ್ಷದಲ್ಲಿ ಬೆಲೆಗಳು ಗಣನೀಯವಾಗಿ ಏರಿಕೆಯಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದಾಯದ ಬೆಳವಣಿಗೆ ಸ್ಥಗಿತಗೊಂಡಿದ್ದು, ಪ್ರಸ್ತುತ ಆದಾಯದ ನಿವ್ವಳ ಪ್ರತಿಕ್ರಿಯೆ 3.0 ರಿಂದ 0.9 ಕ್ಕೆ ಇಳಿದಿದೆ. ಇದರಿಂದಾಗಿ ಒಟ್ಟಾರೆ ವೆಚ್ಚ ಸಾಮರ್ಥ್ಯ 78.4 ರಿಂದ 74.0 ಕ್ಕೆ ಇಳಿಕೆಯಾಗಿದೆ.



ಹಣದುಬ್ಬರ: 15 ತಿಂಗಳ ಗರಿಷ್ಠ ಮಟ್ಟಕ್ಕೆ

ಜೂನ್ 3 ರಿಂದ ಜೂನ್ 8 ರವರೆಗೆ 38 ಆರ್ಥಿಕ ತಜ್ಞರ ನಡುವೆ ನಡೆಸಿದ ಸಮೀಕ್ಷೆಯ ಪ್ರಕಾರ, ಭಾರತದ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರ, ಮೇ ತಿಂಗಳಿನಲ್ಲಿ ಶೇ.4.0ಕ್ಕೆ ಏರಿದೆ. ಇದು ಏಪ್ರಿಲ್‌ನಲ್ಲಿ ಶೇ.3.48 ರಷ್ಟಿತ್ತು. ಕಳೆದ 15 ತಿಂಗಳುಗಳಿಂದ ಹಣದುಬ್ಬರ, ಆರ್‌ಬಿಐ ನಿಗದಿಪಡಿಸಿದ ಶೇ.4ರ ಮಧ್ಯಕಾಲೀನ ಗುರಿಗಿಂತ ಕೆಳಗಿತ್ತು. ತರಕಾರಿ ಮತ್ತು ಸಾರಿಗೆ ವೆಚ್ಚದ ಏರಿಕೆಯಿಂದಾಗಿ ಮೇ ತಿಂಗಳಿನಲ್ಲಿ ಗ್ರಾಹಕ ಬೆಲೆ ಸೂಚ್ಯಂಕವು ಶೇ.4ರ ಗಡಿ ದಾಟಿದೆ ಎಂದು ತಜ್ಞರು ತಿಳಿಸಿದ್ದಾರೆ.

ಕಿರುಸುದ್ದಿ

ಕಾದ ಕಬ್ಬಿಣ ಸೋರಿ ಒಂಬತ್ತು ಜನ ಸಾವು

• **ವಿಶಾಖಪಟ್ಟಣಂ:** ಆಂಧ್ರ ಪ್ರದೇಶದ ವಿಶಾಖಪಟ್ಟಣಂನಲ್ಲಿರುವ ರಾಷ್ಟ್ರೀಯ ಇಸ್ಪಾತ್ ನಿಗಮ್ ಲಿಮಿಟೆಡ್ (ವಿಜಾಗ್ ಸ್ಟೀಲ್ ಪ್ಲಾಂಟ್) ನಲ್ಲಿ ಸೋಮವಾರ ಸಂಭವಿಸಿದ ಭೀಕರ ಕೈಗಾರಿಕಾ ದುರಂತದಲ್ಲಿ ಕನಿಷ್ಠ ಒಂಬತ್ತು ಕಾರ್ಮಿಕರು ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿದ್ದಾರೆ. ಪೊಲೀಸರ ಮಾಹಿತಿ ಪ್ರಕಾರ, ಕ್ರೇನ್ ಮೂಲಕ ಬಕೆಟ್‌ನಲ್ಲಿ ಸಾಗಿಸಲಾಗುತ್ತಿದ್ದ ಕರಗಿದ ಕಬ್ಬಿಣ ಆಕಸ್ಮಿಕವಾಗಿ ಕಾರ್ಮಿಕರ ಮೇಲೆ ಚೆಲ್ಲಿದ ಪರಿಣಾಮ ಈ ದುರಂತ ಸಂಭವಿಸಿದೆ. ಸುಮಾರು 1,600 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹೊಂದಿದ್ದ ಕರಗಿದ ಕಬ್ಬಿಣ ಕಾರ್ಮಿಕರ ಮೇಲೆ ಬಿದ್ದ ಕಾರಣ ಸ್ಥಳದಲ್ಲೇ ಹಲವರು ಸಾವನ್ನಪ್ಪಿದ್ದಾರೆ. ಗಾಯಗೊಂಡ ಆರು ಕಾರ್ಮಿಕರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಯ ತಕ್ಷಣ ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಗಿದೆ.

ಕೇರಳದ ಇಡುಕ್ಕಿಯಲ್ಲಿ ಆನೆ ತುಳಿತಕ್ಕೆ ಮಹಿಳೆ ಬಲಿ

• **ತಿರುವನಂತಪುರಂ:** ದುರಂತ ಘಟನೆಯೊಂದರಲ್ಲಿ, ಇಡುಕ್ಕಿ ಜಿಲ್ಲೆಯ ಚಿನ್ನಕನಾಲ್‌ನ ಸೂರ್ಯನೆಲ್ಲಿ ಬಳಿ ಕಾಡು ಆನೆಯ ದಾಳಿಯಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದು, ಅವರ ಪುತ್ರ ಗಂಭೀರವಾಗಿ ಗಾಯಗೊಂಡಿದ್ದಾನೆ. ಸೋಮವಾರ ಬೆಳಗ್ಗೆ ಮಾರಿ (35) ಎಂಬ ಮಹಿಳೆ ತನ್ನ ಮಗನನ್ನು ಶಾಲೆಗೆ ಬಿಡಲು ಹೊರಟಾಗ ಈ ದಾಳಿ ನಡೆದಿದೆ. ಪೊಲೀಸರ ಪ್ರಕಾರ, ಭಾರೀ ಮಂಜು ಮತ್ತು ಮಳೆಯಿಂದಾಗಿ ಆನೆ ಹಾದಿ ತಪ್ಪಿ ರಸ್ತೆ ಬದಿ ಸಂಭವಿಸಿದೆ ಎಂದು ವರದಿಯಾಗಿದೆ. ರಾಜ್ಯದ ಅರಣ್ಯ ಅಂಚಿನ ಪ್ರದೇಶಗಳಲ್ಲಿ ಮಾನವ-ಆನೆ ಸಂಘರ್ಷದ ಘಟನೆಗಳು ಹೆಚ್ಚುತ್ತಿರುವುದನ್ನು ಪ್ರತಿಭಟಿಸಿ, ಸ್ಥಳೀಯರು ಮಾರಿ ಅವರ ದೇಹವನ್ನು ಆಸ್ಪತ್ರೆಗೆ ಸ್ಥಳಾಂತರಿಸಲು ಅಧಿಕಾರಿಗಳಿಗೆ ಅವಕಾಶ ನೀಡಲು ನಿರಾಕರಿಸಿದ್ದು, ಇದರಿಂದಾಗಿ ಈ ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾಗಿತ್ತು.

ಜೈಲು ಶಿಕ್ಷೆ ಮುಗಿದರೂ ಬಿಡುಗಡೆ ಭಾಗ್ಯವಿಲ್ಲ

• **ಢಾಕಾ:** ಕಾರ್ಯವಿಧಾನದ ವಿಳಂಬದಿಂದಾಗಿ ಸುಮಾರು 150 ಭಾರತೀಯರು ತಮ್ಮ ಜೈಲು ಶಿಕ್ಷೆ ಅವಧಿ ಪೂರ್ಣಗೊಳಿಸಿದರೂ ಬಾಂಗ್ಲಾದೇಶದ ಜೈಲುಗಳಲ್ಲಿ ನರಳುತ್ತಿದ್ದಾರೆ. 148 ಭಾರತೀಯರು ಸೇರಿದಂತೆ 152 ವಿದೇಶಿಯರು ತಮ್ಮ ಜೈಲು ಶಿಕ್ಷೆ ಪೂರ್ಣಗೊಳಿಸಿದ್ದರೂ ಬಾಂಗ್ಲಾದೇಶದ ಜೈಲಿನಲ್ಲೇ ಇದ್ದಾರೆ.

ನೇಪಾಳ ಗಡಿಯ ಬಳಿ ಅಭಿಷೇಕ್ ಆಪ್ತನ ಸೆರೆ

• **ಸಿಲಿಗುರಿ:** ಕೆಲವು ವಾರಗಳಿಂದ ತಲೆಮರೆಸಿಕೊಂಡಿದ್ದ ತೃಣಮೂಲ ಕಾಂಗ್ರೆಸ್ ನಾಯಕ, ಸಂಸದ ಅಭಿಷೇಕ್ ಬ್ಯಾನರ್ಜಿ ಆಪ್ತ ಜಹಾಂಗೀರ್ ಖಾನ್ ಅವರನ್ನು ಪಶ್ಚಿಮ ಬಂಗಾಳದ ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಸೋಮವಾರ ನೇಪಾಳ ಗಡಿ ಸಮೀಪವಿರುವ ಉತ್ತರ ಬಂಗಾಳದಲ್ಲಿ ಬಂಧಿಸಿದೆ.

ಸಂಸದ ಅಭಿಷೇಕ್ ಬ್ಯಾನರ್ಜಿ ಅವರ ಆಪ್ತರಾಗಿರುವ ಖಾನ್ ನೇಪಾಳಕ್ಕೆ ಪಲಾಯನ ಮಾಡಲು ಯತ್ನಿಸುತ್ತಿದ್ದಾಗ ಅಧಿಕಾರಿಗಳು ಅವರನ್ನು ವಶಕ್ಕೆ ಪಡೆದಿದ್ದಾರೆ. ಕಲ್ಕತ್ತಾ ಹೈಕೋರ್ಟ್ ಅವರಿಗೆ ನೀಡಿದ್ದ ಮಧ್ಯಂತರ ಜಾಮೀನನ್ನು ಹಿಂಪಡೆದ ಬೆನ್ನಲ್ಲೇ ಈ ಬಂಧನ ನಡೆದಿದೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ದಕ್ಷಿಣ 24 ಪರಗಣ ಕ್ಷೇತ್ರದಲ್ಲಾದ ವಿದ್ಯುನ್ಮಾನ ಮತಯಂತ್ರ (ಇವಿಎಂ) ಅಕ್ರಮ ಸೇರಿದಂತೆ ಖಾನ್ ವಿರುದ್ಧ ಹಲವು ಎಫ್‌ಐಆರ್‌ಗಳು ದಾಖಲಾಗಿವೆ.

ಮೇ 21 ರಂದು ನಡೆದ ಫಾಲ್ಟಾ ವಿಧಾನಸಭಾ ಕ್ಷೇತ್ರದ ಮರುಚುನಾವಣೆಯಿಂದ ಖಾನ್ ತಮ್ಮ ಉಮೇದುವಾರಿಕೆ ಹಿಂಪಡೆದಿದ್ದರು. ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೀಡಿದ ಅಭಿವೃದ್ಧಿ ಪ್ಯಾಕೇಜ್ ಭರವಸೆ ಕಾರಣ ತಾವು ಸ್ಪರ್ಧೆಯಿಂದ ಹಿಂದೆ ಸರಿದಿರುವುದಾಗಿ ಖಾನ್ ಪ್ರತಿಪಾದಿಸಿದ್ದರು. ಆದರೆ, ತೃಣಮೂಲ ಕಾಂಗ್ರೆಸ್ ಈ ನಿರ್ಧಾರದಿಂದ ದೂರ ಉಳಿದಿದ್ದು, ಇದು ಅವರ ವೈಯಕ್ತಿಕ ನಿರ್ಧಾರ ಎಂದು ಹೇಳಿತ್ತು.

ಏ.29 ರಂದು ನಡೆದಿದ್ದ ಮೊದಲ ಹಂತದ ಮತದಾನದಲ್ಲಿ ಚುನಾವಣಾ ಅಕ್ರಮಗಳು ನಡೆದ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯೋಗ ಮರುಚುನಾವಣೆಗೆ ಆದೇಶಿಸಿತ್ತು.

ಇಸ್ರೇಲ್ ಕಾನ್ಸುಲೇಟಲ್ಲಿ ಶಿವಾಜಿ ಪ್ರತಿಮೆ ಸ್ಥಾಪನೆ

• **ಮುಂಬೈ:** ಭಾರತ-ಇಸ್ರೇಲ್ ಸಂಬಂಧಗಳನ್ನು ಬಲಪಡಿಸುವ ಗುರಿ ಹೊಂದಿರುವ ಮಹತ್ವದ ಸಾಂಸ್ಕೃತಿಕ ಸೂಚಕವಾಗಿ, ಮುಂಬೈನಲ್ಲಿರುವ ಇಸ್ರೇಲ್ ಕಾನ್ಸುಲೇಟ್ ಜನರಲ್ ಇಸ್ರೇಲ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಸ್ಥಾಪಿಸುವ ಯೋಜನೆ ಘೋಷಿಸಿದೆ. ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ ವಾರ್ಷಿಕೋತ್ಸವದ ಶಿವರಾಜ್ಯಾಭಿಷೇಕ ದಿನದ ಶುಭ ಸಂದರ್ಭದಲ್ಲಿ ಈ ಘೋಷಣೆ ಮಾಡಲಾಗಿದೆ. ಈ ಪ್ರಸ್ತಾಪಕ್ಕೆ ಈಗಾಗಲೇ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ಬೆಂಬಲ ದೊರೆತಿದೆ ಎಂದು ಇಸ್ರೇಲಿ ಕಾನ್ಸುಲ್ ಜನರಲ್ ಯಾನಿವ್ ರೆವಾಚ್ ತಿಳಿಸಿದ್ದಾರೆ.

ಈ ಯೋಜನೆ ಹಿಂದಿನ ಕಲ್ಪನೆ ವಿವರಿಸಿದ ರೆವಾಚ್, ಈ ಸ್ಮಾರಕ ಉಭಯ ದೇಶಗಳ ನಡುವಿನ ಬೆಳೆಯುತ್ತಿರುವ ಸಂಬಂಧವನ್ನು ಪ್ರತಿನಿಧಿಸುತ್ತದೆ. ಇಸ್ರೇಲ್‌ನಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಇಸ್ರೇಲ್ ಮತ್ತು ಭಾರತದ ನಡುವಿನ ನಿಕಟ ಸಂಬಂಧಗಳ ಪ್ರಬಲ ಸಂಕೇತವಾಗಿ ಕಾರ್ಯನಿರ್ವಹಿಸುತ್ತದೆ. ಮಹಾರಾಷ್ಟ್ರ ಮತ್ತು ಭಾರತೀಯ ಯಹೂದಿ ಸಮುದಾಯದ ನಡುವಿನ ಐತಿಹಾಸಿಕ ಸಂಪರ್ಕವನ್ನು ಗಮನದಲ್ಲಿಟ್ಟುಕೊಂಡು ಅಂತಹ ಸ್ಮಾರಕವು ವಿಶೇಷವಾಗಿ ಅರ್ಥಪೂರ್ಣವಾಗಿದೆ. ಅವರ ಅನೇಕ ವಂಶಸ್ಥರು ಇಂದು ಇಸ್ರೇಲಿ ಸಮಾಜಕ್ಕೆ ಗಮನಾರ್ಹ ಕೊಡುಗೆ ನೀಡುತ್ತಾರೆ ಎಂದು ರೆವಾಚ್ ಫಡ್ನವೀಸ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಪ್ರತಿಮೆ ಶಿವಾಜಿ ಮಹಾರಾಜರ ಪರಂಪರೆ ನಿಖರವಾಗಿ ಪ್ರತಿಬಿಂಬಿಸುತ್ತದೆ ಎಂದು ಖಚಿತಪಡಿಸಿಕೊಳ್ಳುವಲ್ಲಿ ಮಹಾರಾಷ್ಟ್ರ ಸರ್ಕಾರ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಬಹಿರಂಗಪಡಿಸಿದರು.

ಬಂಗಾಳದಿಂದ 4,800 ವಲಸಿಗರ ಗಡಿಪಾರು

• **ಕೋಲ್ಕತ್ತಾ:** ಪೌರತ್ವ(ತಿದ್ದುಪಡಿ) ಕಾಯ್ದೆ ವ್ಯಾಪ್ತಿಗೆ ಬಾರದ ಬಾಂಗ್ಲಾದೇಶದ 4,800 ಅಕ್ರಮ ನುಸುಳುಕೋರರನ್ನು ಕಳೆದ ಒಂದು ತಿಂಗಳಲ್ಲಿ ಬಾಂಗ್ಲಾದೇಶಕ್ಕೆ ಗಡಿಪಾರು ಮಾಡಲಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ದೀರ್ಘಕಾಲದಿಂದ ವಿವಾದಾತ್ಮಕ ರಾಜಕೀಯ ಮತ್ತು ಭದ್ರತಾ ಕಾಳಜಿಯಾಗಿ ಉಳಿದಿದ್ದ ಅಕ್ರಮ ವಲಸೆ ಸಮಸ್ಯೆಯನ್ನುದ್ದೇಶಿಸಿ ಮಾತನಾಡಿದ ಅಧಿಕಾರಿ, ರಾಜ್ಯದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ವಿದೇಶಿ ಪ್ರಜೆಗಳನ್ನು ಗುರುತಿಸಲು, ಬಂಧಿಸಲು ಮತ್ತು ಗಡಿಪಾರು ಮಾಡಲು ತಮ್ಮ ಸರ್ಕಾರ ವ್ಯವಸ್ಥಿತ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ ಎಂದು ಪ್ರತಿಪಾದಿಸಿದರು. ಪ್ರಸ್ತುತ ನಿರಾಶ್ರಿತರ ಕೇಂದ್ರಗಳಲ್ಲಿ ಇನ್ನೂ 836 ಜನರನ್ನು ಇರಿಸಲಾಗಿದೆ. ಗಡಿಪಾರು ಪ್ರಕ್ರಿಯೆ ಪೂರ್ಣಗೊಳ್ಳಲು ಕಾಯಲಾಗುತ್ತಿದೆ ಎಂದು ಅಧಿಕಾರಿ ಹೇಳಿದರು. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ರೂಪಿಸಿದ ಕಾನೂನುಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿದೆ. ರಾಜ್ಯದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ವಿದೇಶಿ ಪ್ರಜೆಗಳನ್ನು ಗುರುತಿಸಿ ಮರಳಿ ಕಳುಹಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಅಕ್ರಮ ನುಸುಳುಕೋರರನ್ನು ನೇರವಾಗಿ ಬಿಎಸ್‌ಎಫ್‌ಗೆ ಹಸ್ತಾಂತರಿಸಲಾಗುತ್ತಿದೆ. ಅಕ್ರಮ ವಲಸೆ ಪಶ್ಚಿಮ ಬಂಗಾಳ ಎದುರಿಸುತ್ತಿರುವ ಅತ್ಯಂತ ಗಂಭೀರ ಸಮಸ್ಯೆಗಳಲ್ಲಿ ಒಂದಾಗಿದೆ. ಕಣ್ಗಾವಲು ಬಲಪಡಿಸಲು ಮತ್ತು ಭವಿಷ್ಯದ ಒಳನುಸುಳುವಿಕೆಯನ್ನು ತಡೆಯಲು ರಾಜ್ಯ ಸರ್ಕಾರವು ಗಡಿ ಭದ್ರತಾ ಸಂಸ್ಥೆಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ತಿಂಡಿ ಪೊಟ್ಟಣಕ್ಕೆ ಸುದ್ದಿ ಪತ್ರಿಕೆ ಬಳಸುವಂತಿಲ್ಲ

• **ಹೊಸದಿಲ್ಲಿ:** ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡಲು ಅಥವಾ ಸೇವಿಸಲು ಸುದ್ದಿ ಪತ್ರಿಕೆಗಳ ಬಳಕೆಯನ್ನು ತಕ್ಷಣವೇ ನಿಲ್ಲಿಸುವಂತೆ ಎಲ್ಲಾ ಆಹಾರ ವ್ಯಾಪಾರ ನಿರ್ವಾಹಕರಿಗೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಗಂಭೀರ ಆರೋಗ್ಯ ಅಪಾಯಗಳನ್ನು ಉಲ್ಲೇಖಿಸಿ ನಿರ್ದೇಶನ ನೀಡಿದೆ. ಮುಂಬೈನಲ್ಲಿ ಇತ್ತೀಚೆಗೆ ವಡಾ ಪಾವ್ ಮಾರಾಟಗಾರರೊಬ್ಬರು ಆಹಾರ ಪ್ಯಾಕ್ ಮಾಡಲು ಪತ್ರಿಕೆ ಬಳಸಿದ ಘಟನೆ ನಂತರ ಈ ಸಲಹೆ ನೀಡಲಾಗಿದೆ. ಆದರ ನಂತರ ಎಫ್‌ಎಸ್‌ಎಸ್‌ಎಐ ಮತ್ತು ಮುಂಬೈ ನಾಗರಿಕ ಸಂಸ್ಥೆ, ಬೃಹನ್ ಮುಂಬೈ ಮಹಾನಗರ ಪಾಲಿಕೆ ಜಂಟಿ ಕ್ರಮ ಕೈಗೊಂಡಿವೆ. ಪತ್ರಿಕೆಗಳು ಅಥವಾ ಅಂತಹುದೇ ಅನುಮೋದಿಸದ ವಸ್ತುಗಳನ್ನು ಆಹಾರ ಪ್ಯಾಕ್ ಅಥವಾ ಸೇವಿಸಲು ಬಳಸುವುದಕ್ಕೆ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ತೈಲ ಟ್ಯಾಂಕರ್‌ನಲ್ಲಿ ಅವಘಡ | 24 ನಾವಿಕರಿದ್ದ ಹಡಗಿನಲ್ಲಿ ಬೆಂಕಿ

ಎಲ್ಲ ಭಾರತೀಯ ನಾವಿಕರು ಸುರಕ್ಷಿತ

• **ಹೊಸದಿಲ್ಲಿ:** ಒಮನ್ ಕರಾವಳಿ ಸಮೀಪ ಸಂಚರಿಸುತ್ತಿದ್ದ ತೈಲ ಟ್ಯಾಂಕರ್‌ನಲ್ಲಿ ಸೋಮವಾರ ಬೆಂಕಿ ಕಾಣಿಸಿಕೊಂಡಿದ್ದು, ಅದರಲ್ಲಿದ್ದ 24 ಭಾರತೀಯ ನಾವಿಕರು ಸುರಕ್ಷಿತರಾಗಿದ್ದಾರೆ ಎಂದು ಕೇಂದ್ರ ಬಂದರು, ಹಡಗು ಸಾಗಣೆ ಮತ್ತು ಜಲಮಾರ್ಗ ಸಚಿವಾಲಯ ತಿಳಿಸಿದೆ.

ಮಡಗಾಸ್ಕರ್ ಧ್ವಜ ಹೊಂದಿದ್ದ ಎಂಟಿ ಮ್ಯಾರಿವೆಕ್ಸ್ ಎಂಬ ತೈಲ ಟ್ಯಾಂಕರ್‌ನಲ್ಲಿ ಮಧ್ಯಾಹ್ನ ಸುಮಾರು 1.30 ಗಂಟೆ ವೇಳೆಗೆ ಬೆಂಕಿ ಕಾಣಿಸಿಕೊಂಡಿರುವ ಮಾಹಿತಿ ಲಭಿಸಿದೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವಾಲಯದ ನಿರ್ದೇಶಕ ಒಪೇಶ್ ಕುಮಾರ್ ಶರ್ಮಾ, ಹಡಗಿನಲ್ಲಿ 24 ಭಾರತೀಯ ಸಿಬ್ಬಂದಿ ಇದ್ದರು ಎಂದು ತಿಳಿಸಿದರು.

ಬೆಂಕಿಗೆ ಕಾರಣವೇನು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಆದರೆ ಹಡಗು ಖಾಲಿಯಾಗಿದ್ದು, ಜಾಗತಿಕ ತೈಲ ಸಾಗಣೆಗೆ ಪ್ರಮುಖವಾಗಿರುವ ಹೋರ್ಮುಜ್ ಜಲಸಂಧಿಯಿಂದ ಸಾಕಷ್ಟು ದೂರದಲ್ಲಿತ್ತು ಎಂದು ಅವರು ಹೇಳಿದರು.

ನಮಗೆ ಲಭ್ಯವಾಗಿರುವ ಪ್ರಾಥಮಿಕ ಮಾಹಿತಿಯ ಪ್ರಕಾರ ಎಲ್ಲ ಭಾರತೀಯ ನಾವಿಕರೂ ಸುರಕ್ಷಿತರಾಗಿದ್ದಾರೆ. ಅವರ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ವಿದೇಶಾಂಗ ವ್ಯವಹಾರಗಳ ಸಚಿವಾಲಯ, ವಿದೇಶಗಳಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು, ಭಾರತೀಯ ನೌಕಾಪಡೆ ಹಾಗೂ ರಕ್ಷಣಾ ಸಚಿವಾಲಯದೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ ಎಂದು ಶರ್ಮಾ ಹೇಳಿದರು. ಹಡಗುಗಳ ಸಂಚಾರದ ಮಾಹಿತಿ ನೀಡುವ ವ್ಯವಸ್ಥೆಯ ಪ್ರಕಾರ, ಟ್ಯಾಂಕರ್ ಮಸ್ಕಟ್‌ನ ದಕ್ಷಿಣ ಭಾಗದಲ್ಲಿ ಲಂಗರು ಹಾಕಿಕೊಂಡಿತ್ತು. ಒಮಾನ್‌ನ ಡುಕ್ಮ್ ಬಂದರಿನತ್ತ ತೆರಳುತ್ತಿದ್ದ ವೇಳೆ ಹಡಗು ಮೇಲೆ ದಾಳಿ ನಡೆದಿರುವ ಶಂಕೆಯೂ ವ್ಯಕ್ತವಾಗಿದ್ದು, ಆದರ ಬಳಿಕ ತುರ್ತು ಸಹಾಯಕ್ಕಾಗಿ ಸಂದೇಶ ರವಾನಿಸಲಾಗಿದೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ.

ಈ ಘಟನೆ ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಸಂದರ್ಭದಲ್ಲೇ ಸಂಭವಿಸಿದೆ. ಇಸ್ರೇಲ್ ಮತ್ತು ಇರಾನ್ ನಡುವೆ ಮತ್ತೆ ದಾಳಿ-ಪ್ರತಿದಾಳಿ ಆರಂಭವಾಗಿದ್ದು, ಇಸ್ರೇಲ್ ಇರಾನ್‌ನ ಪೆಟ್ರೋಕೆಮಿಕಲ್ ಘಟಕಗಳ ಮೇಲೆ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಇಸ್ರೇಲ್‌ನ ಹೈಫಾ ಪ್ರದೇಶದ ಗುರಿಗಳ ಮೇಲೆ ಕ್ಷಿಪಣಿ ದಾಳಿ ನಡೆಸಿರುವುದಾಗಿ ವರದಿಯಾಗಿದೆ.

ಪ್ರಮುಖ ಅಂಶಗಳು

- ಭಾರತೀಯ ನೌಕಾಪಡೆ, ವಿದೇಶಾಂಗ ಸಚಿವಾಲಯದೊಂದಿಗೆ ಸಮನ್ವಯ
- ಇಸ್ರೇಲ್‌ಇರಾನ್ ಉದ್ವಿಗ್ನತೆಯ ನಡುವೆಯೇ ಘಟನೆ ಸಂಭವನೆ

ಭದ್ರತಾ ಪಡೆ-ಪ್ರತಿಭಟನಾಕಾರರ ನಡುವೆ ಘರ್ಷಣೆ

ಪಿಒಕೆ ಸಂಘರ್ಷದಲ್ಲಿ 11 ಸಾವು

• **ರಾವಲಕೋಟ್:** ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ(ಪಿಒಕೆ) ರಾವಲಕೋಟ್‌ನಲ್ಲಿ ನಾಗರಿಕ ಸಮಾಜದ ಒಕ್ಕೂಟದ ಪ್ರತಿಭಟನಾಕಾರರು ಮತ್ತು ಭದ್ರತಾ ಪಡೆಗಳ ನಡುವೆ ನಡೆದ ಹಿಂಸಾತ್ಮಕ ಘರ್ಷಣೆಯಲ್ಲಿ ಭಾನುವಾರ 11 ಮಂದಿ ಮೃತಪಟ್ಟಿದ್ದಾರೆ. ಇತರೆ 70ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಜಂಟಿ ಅವಾಮಿ ಆಕ್ಷನ್ ಕಮಿಟಿ(ಜೆಎಎಸಿ) ಸದಸ್ಯರನ್ನು ಚದುರಿಸಲು ಪೊಲೀಸ್ ಮತ್ತು ಅರೆಸೇನಾ ಪಡೆಗಳು ಯತ್ನಿಸಿದಾಗ ಈ ಘಟನೆ ಸಂಭವಿಸಿದೆ. ಪೂಂಚ್ ವಲಯದ ಕಮಿಷನರ್ ಸರ್ದಾರ್ ವಹೀದ್ ಖಾನ್ ಪ್ರಕಾರ, ಮೃತರ ಪೈಕಿ ನಾಲ್ಕು ಪೊಲೀಸ್ ಅಧಿಕಾರಿಗಳು ಮತ್ತು ಒಬ್ಬ ದಾರಿಹೋಕ ಸೇರಿದಂತೆ ಏಳು ನಾಗರಿಕರು ಸೇರಿದ್ದಾರೆ. ಪ್ರಾದೇಶಿಕ ಪೊಲೀಸ್ ಮುಖ್ಯಸ್ಥ ಲಿಯಾಖತ್ ಮಲಿಕ್ ಮಾತನಾಡಿ, 23 ಭದ್ರತಾ ಸಿಬ್ಬಂದಿ ಮತ್ತು 50 ಪ್ರತಿಭಟನಾಕಾರರು ಗಾಯಗೊಂಡಿದ್ದು, ಅಧಿಕಾರಿಗಳು 30 ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ತಿಳಿಸಿದ್ದಾರೆ.




ಇಂದು ಲಾಕ್‌ಡೌನ್

ಜುಲೈ 27ರಂದು ನಡೆಯಲಿರುವ ಶಾಸನಸಭೆ ಚುನಾವಣೆಯಲ್ಲಿ ನಿರಾಶ್ರಿತರಿಗಾಗಿ 12 ಸ್ಥಾನಗಳನ್ನು ಕಾಯ್ದಿರಿಸಿರುವುದನ್ನು ವಿರೋಧಿಸಿ ಜಂಟಿ ಅವಾಮಿ ಕ್ರಿಯಾ ಸಮಿತಿ ಈ ಪ್ರತಿಭಟನೆಗೆ ಕರೆ ನೀಡಿತ್ತು. ಪ್ರಾದೇಶಿಕ ಸರ್ಕಾರ ಶುಕ್ರವಾರ ಈ ಒಕ್ಕೂಟವನ್ನು ಭಯೋತ್ಪಾದನಾ ವಿರೋಧಿ ಕಾಯ್ದೆಯಲ್ಲಿ ನಿಷೇಧಿತ ಗುಂಪು ಎಂದು ಘೋಷಿಸಿತ್ತು. ಅಲ್ಲದೆ, ಜೂನ್ 9 ರಂದು ನಿಗದಿಯಾಗಿದ್ದ ಲಾಕ್‌ಡೌನ್‌ಗಿಂತ ಮುಂಚಿತವಾಗಿ ಈ ಪ್ರದೇಶವನ್ನು ತೊರೆಯುವಂತೆ ಪ್ರವಾಸಿಗರಿಗೆ ಸಲಹೆ ನೀಡಿತ್ತು.

ಕಿರುಸುದ್ದಿ

ಆವೆಮಣ್ಣಿನ ರಾಜ ಜ್ವೆರೆವ್ ಚೊಚ್ಚಲ ಸ್ಲಾಮ್ ಗೆದ್ದ ವೀರ



ಪ್ಯಾರಿಸ್: ಫ್ರೆಂಚ್ ಓಪನ್ 2026ರಲ್ಲಿ ಪುರುಷರ ಚಾಂಪಿಯನ್ ಆಗಿ ಹೊರಹೊಮ್ಮಿದ ಜರ್ಮನಿಯ ಅಲೆಗ್ಸಾಂಡರ್ ಜ್ವೆರೆವ್ ತಮ್ಮ ಚೊಚ್ಚಲ ಪ್ರಶಸ್ತಿಯನ್ನು ಗೆದ್ದಿದ್ದಾರೆ. 2020ರ ಯುಎಸ್ ಓಪನ್, 2024ರ ಫ್ರೆಂಚ್ ಓಪನ್ ಮತ್ತು 2025ರ ಆಸ್ಟ್ರೇಲಿಯನ್ ಓಪನ್ ಫೈನಲ್‌ಗಳಲ್ಲಿ ಸೋತಿದ್ದ ಜ್ವೆರೆವ್ ತಮ್ಮ ಚೊಚ್ಚಲ ಗ್ರ್ಯಾಂಡ್ ಸ್ಲಾಮ್ ಗೆದ್ದುಕೊಂಡಿದ್ದಾರೆ. ಬೋರಿಸ್ ಬೆಕರ್ 1996ರ ಆಸ್ಟ್ರೇಲಿಯನ್ ಓಪನ್ ಗೆದ್ದ ಬಳಿಕ ಗ್ರ್ಯಾಂಡ್ ಸ್ಲಾಮ್ ಗೆದ್ದ ಮೊದಲ ಜರ್ಮನ್ ಪುರುಷ ಆಟಗಾರನೆಂಬ ದಾಖಲೆಯನ್ನೂ ಬರೆದಿದ್ದಾರೆ.

ಭಾನುವಾರ ನಡೆದ ರೋಚಕ ಫೈನಲ್‌ನಲ್ಲಿ ಜ್ವೆರೆವ್ ತಮ್ಮ ಎದುರಾಳಿ ಇಟಲಿಯ ಫ್ಲೇವಿಯೋ ಕೊಬೊಲಿ ಅವರನ್ನು 6-1, 4-6, 6-4, 6-7(5/7), 6-1 ಸೆಟ್‌ಗಳ ಅಂತರದಿಂದ ಸೋಲಿಸಿದರು. ನಾಲ್ಕನೇ ಸೆಟ್‌ನಲ್ಲಿ ತೀವ್ರ ಪೈಪೋಟಿ ನೀಡಿ ನಿರ್ಭೀತ ಆಟವಾಡಿ ಗೆದ್ದ ಫ್ಲೇವಿಯೋ, ಜ್ವೆರೆವ್ ನಿರ್ಣಾಯಕ ಐದನೇ ಸೆಟ್ ಆಡುವಂತೆ ಮಾಡಿದರು. ಆದರೆ ಕೊನೆಗೂ ಜ್ವೆರೆವ್ ಐದನೇ ಸೆಟ್ ಸುಲಭದಲ್ಲಿ ಗೆದ್ದರು. ಮೊದಲ ಸೆಟ್‌ನಲ್ಲಿ ಜ್ವೆರೆವ್ ಸಂಪೂರ್ಣ ಮೇಲುಗೈ ಸಾಧಿಸಿದರು. ಆದರೆ ಕೊಬೊಲಿ ಅದ್ಭುತವಾಗಿ ಪುಟಿದೇಳುವ ಮೂಲಕ ದ್ವಿತೀಯ ಸೆಟ್ ತಮ್ಮದಾಗಿಸಿದರು. ಮೂರನೇ ಸೆಟ್ ಗೆದ್ದ ಜ್ವೆರೆವ್ ತಮ್ಮ ಚೊಚ್ಚಲ ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿಯತ್ತ ಹೆಜ್ಜೆಯಿಟ್ಟರು. ಒತ್ತಡ ಮತ್ತು ಉದ್ವಿಗ್ನತೆಯ ನಡುವೆ ನಡೆದ ಈ ಪಂದ್ಯದಲ್ಲಿ ಮುನ್ನಡೆ ಹಲವು ಬಾರಿ ಬದಲಾಗುತ್ತಾ, ಅಭಿಮಾನಿಗಳನ್ನು ಕೊನೆಯ ಕ್ಷಣದವರೆಗೂ ಕುತೂಹಲದಲ್ಲಿ ಇಟ್ಟಿತು.

ವೈಭವ್ ವಿಶೇಷ ಪ್ರತಿಭೆ, ಅತಿಯಾದ ನಿರೀಕ್ಷೆ ನ್ಯಾಯವಲ್ಲ

ಮುಂಬೈ: ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ವಿಶೇಷವಾದ ಪ್ರತಿಭೆ. ಆದರೆ ಈ ಹಂತದಲ್ಲಿ ಅವರಿಂದ ಅತಿಯಾದ ನಿರೀಕ್ಷೆ ಇಟ್ಟುಕೊಳ್ಳುವುದು ನ್ಯಾಯೋಚಿತವಲ್ಲ ಎಂದು ಕ್ರಿಕೆಟ್ ದಂತಕತೆ ಕಪಿಲ್ ದೇವ್ ಸೋಮವಾರ ಅಭಿಪ್ರಾಯಿಸಿದ್ದಾರೆ.



ಯುವ ಪ್ರತಿಭೆಯಿಂದ ಇಷ್ಟೊಂದು ನಿರೀಕ್ಷಿಸುವುದು ನ್ಯಾಯೋಚಿತವಲ್ಲ, ಅವರಿಗೆ ಕ್ಲಬ್ ಕ್ರಿಕೆಟ್‌ನಿಂದ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಹೊಂದಿಕೊಳ್ಳಲು ಅವರಿಗೆ ಸಮಯ ಬೇಕಾಗುತ್ತದೆ. ಸಮಯ ನೀಡಿ. ಆದರೆ ಖಂಡಿತವಾಗಿ ತನ್ನಲ್ಲಿ ಪ್ರತಿಭೆಯಿದೆ ಎಂದು ತೋರಿಸಿದ್ದಾರೆ. ನಂಬಲಸಾಧ್ಯ ಪ್ರತಿಭೆಯನ್ನು ಸೂರ್ಯವಂಶಿ ಹೊಂದಿದ್ದಾರೆ ಎಂದು ಕಪಿಲ್ ಎಚ್ಚರಿಸಿದ್ದಾರೆ.

ಪಿ.ವಿ. ಸಿಂಧು ನೇತೃತ್ವದಲ್ಲಿ ಭಾರತ ಸ್ಪರ್ಧೆ

ಹೊಸದಿಲ್ಲಿ: ಆಸ್ಟ್ರೇಲಿಯನ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಜೂ.9ರಿಂದ 14ರವರೆಗೆ ಸಿಡ್ನಿ ನಗರದಲ್ಲಿ ನಡೆಯಲಿದ್ದು, ಪಿವಿ ಸಿಂಧು ನೇತೃತ್ವದ ಭಾರತ ತಂಡ ಸ್ಪರ್ಧಿಸಲಿದೆ. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಈ ಋತುವಿನಲ್ಲಿ ಮೊದಲ ಪ್ರಶಸ್ತಿ ಗೆಲ್ಲುವ ಗುರಿ ಹೊಂದಿದ್ದಾರೆ.

ಅಂಪೈರ್ ವಿಕ್ರಮ್ ನಿಧನ

ಬೆಂಗಳೂರು: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಅಂತಾರಾಷ್ಟ್ರೀಯ ಕ್ರಿಕೆಟ್ ಅಂಪೈರ್ ವಿಕ್ರಮ್ ರಾಜು(92) ಭಾನುವಾರ ಮೈಸೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರು 1986ರ ಸೆಪ್ಟೆಂಬರ್‌ನಲ್ಲಿ ಮದ್ರಾಸ್‌ನಲ್ಲಿ (ಇಂದಿನ ಚೆನ್ನೈ) ನಡೆದ ಭಾರತ-ಆಸ್ಟ್ರೇಲಿಯಾ ಟೆಸ್ಟ್‌ನಿಂದ ಪ್ರಸಿದ್ಧಿ ಪಡೆದಿದ್ದು, ಟೆಸ್ಟ್ ರೋಚಕ ಟೈ ಆಗಿತ್ತು. ಇವರು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳ ಪ್ರಸರಣ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದರು.



ಇಂದಿನಿಂದ ಆರ್ಚರಿ ವಿಶ್ವಕಪ್ 3ನೇ ಹಂತ

ಅಂಟಲ್ಯಾ: ಆರ್ಚರಿ ವಿಶ್ವಕಪ್ 2026ರ ಮೂರನೇ ಹಂತ ಟರ್ಕಿಯ ಅಂಟಲ್ಯಾದಲ್ಲಿ ಜೂ.9ರಿಂದ 14ರವರೆಗೆ ನಡೆಯಲಿದ್ದು, ದೀಪಿಕಾ ಕುಮಾರಿ ಸಹಿತ ಭಾರತದ 16 ಸದಸ್ಯರ ತಂಡ ಸ್ಪರ್ಧಿಸಲಿದೆ. ಯುವ ಕೀರ್ತಿ ಶರ್ಮಾ ಮತ್ತು ಗಣೇಶ್ ಮಣಿರತ್ನಂ ವಿಶ್ವಕಪ್ ಪದಾರ್ಪಣೆ ಮಾಡಲಿದ್ದಾರೆ.

ಕನಸಿನ ಪದಾರ್ಪಣೆಗೈದ ಎಡಗೈ ಸ್ಪಿನ್ನರ್ ಮಾನವ್ ಸುಥಾರ್ | ಭಾರತಕ್ಕೆ ಅತಿ ದೊಡ್ಡ ಇನ್ನಿಂಗ್ಸ್ ಗೆಲುವು

ಮುಲ್ಲಾನ್‌ಪುರದಲ್ಲಿ ಆಫ್ಘನ್ ತಂಡದ ಕಬ್ಜ





ಮುಲ್ಲಾನ್‌ಪುರ: ಎಡಗೈ ಸ್ಪಿನ್ನರ್ ಮಾನವ್ ಸುಥಾರ್ ಕನಸಿನ ಪದಾರ್ಪಣೆಯು ಭಾರತದ ಅತಿ ದೊಡ್ಡ ಟೆಸ್ಟ್ ಜಯದೊಂದಿಗೆ ಸಂಪನ್ನಗೊಂಡಿದೆ. ಅಫ್ಘಾನಿಸ್ತಾನ ಎದುರಿನ ಏಕೈಕ ಟೆಸ್ಟ್‌ನಲ್ಲಿ ಭಾರತ ಇನ್ನಿಂಗ್ಸ್ ಮತ್ತು 300 ರನ್ ಭಾರೀ ಅಂತರದ ಗೆಲುವು ಸಾಧಿಸಿದೆ.

ಪ್ರಥಮ ಇನ್ನಿಂಗ್ಸ್‌ನಲ್ಲಿ 113ಕ್ಕೆ 5 ಎಂಬಲ್ಲಿಂದ ಮೂರನೇ ದಿನದಾಟ ಆರಂಭಿಸಿದ ಆಫ್ಘನ್ ಪರ ಆಸರೆಯಾಗಿದ್ದ ರೆಹಮತ್ ಶಾ (60) ಅವರನ್ನು ಸುಥಾರ್ ತಮ್ಮ ಸ್ಪಿನ್ ಮೋಡಿಗೆ ಸಿಲುಕಿಸಿ 5ನೇ ಬಲಿ ಪಡೆದರು. ಇದರೊಂದಿಗೆ ತಮ್ಮ ಪದಾರ್ಪಣಾ ಟೆಸ್ಟ್‌ನಲ್ಲಿ 5 ವಿಕೆಟ್ ಕಬಳಿಸಿದ ಸುಥಾರ್, ಈ ಸಾಧನೆಗೈದ ಎಲೈಟ್ ಬೌಲರ್‌ಗಳ ಯಾದಿಗೆ ಸೇರಿದ್ದಾರೆ. ಮೂರನೇ ದಿನದಾಟ ಆರಂಭವಾದ ಅರ್ಧ ಗಂಟೆಯೊಳಗೆ ಅಜ್ಮತುಲ್ಲಾ ಒಮರ್‌ಝಾಯಿ ಅವರನ್ನು ಕರ್ನಾಟಕ ವೇಗಿ ಪ್ರಸಿದ್ಧ ಕೃಷ್ಣ ಕ್ಲೀನ್‌ಬೌಲ್ಡ್ ಮಾಡಿದ್ದರು. ಇದಾದ ಬಳಿಕ ಆಫ್ಘನ್ ಪತನ ಆರಂಭವಾಗಿದ್ದು, 152 ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ 412 ರನ್‌ಗಳ ಭಾರೀ ಮುನ್ನಡೆ ಪಡೆಯಿತು.

ಆಫ್ಘನ್ 112ಕ್ಕೆ ಆಲೌಟ್: ಅಫ್ಘಾನಿಸ್ತಾನದ ದ್ವಿತೀಯ ಇನ್ನಿಂಗ್ಸ್‌ನಲ್ಲಿ ಸೆದಿಕುಲ್ಲಾ ಅತಲ್ ಅವರ 80 ಎಸೆತಗಳ 42 ರನ್ ಆಟವೊಂದನ್ನು ಬಿಟ್ಟರೆ ನೋಡುವಂತದ್ದು ಏನೂ ಇರಲಿಲ್ಲ. 23 ಓವರ್‌ಗಳಲ್ಲಿ 87ಕ್ಕೆ 2 ವಿಕೆಟ್ ಕಳೆದುಕೊಂಡಿದ್ದ ಆಫ್ಘನ್ ಇನ್ನೂ 12 ಓವರ್ ಆಗುವಷ್ಟರಲ್ಲಿ 112 ರನ್‌ಗಳಿಗೆ ಆಲೌಟಾಗಿತ್ತು. ಪ್ರಥಮ ಇನ್ನಿಂಗ್ಸ್‌ನಲ್ಲಿ ಯುವ ಸ್ಪಿನ್ನರ್ ಸುಥಾರ್ ಅದ್ಭುತ ಪ್ರದರ್ಶನ ನೀಡಿದ್ದರಿಂದ ಒತ್ತಡಕ್ಕೊಳಗಾದ ಕುಲ್ದೀಪ್ ಮತ್ತು ವಾಷಿಂಗ್ಟನ್ ದ್ವಿತೀಯ ಇನ್ನಿಂಗ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ.

ಜೂ.13ರಿಂದ ಏಕದಿನ ಸರಣಿ: ಏಕೈಕ ಟೆಸ್ಟ್‌ನಲ್ಲಿ ಅತಿ ದೊಡ್ಡ ಇನ್ನಿಂಗ್ಸ್ ಸೋಲುಂಡ ಅಫ್ಘಾನಿಸ್ತಾನ ಏಕದಿನ ಸರಣಿಯಲ್ಲಿ ಉತ್ತಮ ಹೋರಾಟ ನೀಡುವ ಸಾಧ್ಯತೆಯಿದೆ. ಇದೇ ಶನಿವಾರ ಧರ್ಮಶಾಲಾದಲ್ಲಿ ಮೊದಲ ಏಕದಿನ ಪಂದ್ಯ ನಡೆಯಲಿದೆ.

ಪದಾರ್ಪಣಾ ಟೆಸ್ಟ್‌ನಲ್ಲಿ ಅತ್ಯುತ್ತಮ ಬೌಲಿಂಗ್ (ಭಾರತೀಯರು)

ಬೌಲರ್	ಎದುರಾಳಿ	ಮೈದಾನ	ವರ್ಷ	ವಿಕೆಟ್	ಫಲಿತಾಂಶ
ನರೇಂದ್ರ ಹೀರ್ವಾನಿ	ವೆಸ್ಟ್ ಇಂಡೀಸ್	ಚೆನ್ನೈ	1988	61ಕ್ಕೆ 8	ಗೆಲುವು
ನರೇಂದ್ರ ಹೀರ್ವಾನಿ	ವೆಸ್ಟ್ ಇಂಡೀಸ್	ಚೆನ್ನೈ	1988	75ಕ್ಕೆ 8	ಗೆಲುವು
ಮಾನವ್ ಸುಥಾರ್	ಅಫ್ಘಾನಿಸ್ತಾನ	ಮುಲ್ಲಾನ್‌ಪುರ	ಜೂ.8, 2026	33ಕ್ಕೆ 6	ಗೆಲುವು
ರವಿಚಂದ್ರನ್ ಅಶ್ವಿನ್	ವೆಸ್ಟ್ ಇಂಡೀಸ್	ಕೋಟ್ಲಾ, ದಿಲ್ಲಿ	ನ.6, 2011	47ಕ್ಕೆ 6	ಗೆಲುವು
ಸೈಯದ್ ಆಬಿದ್ ಅಲಿ	ಆಸ್ಟ್ರೇಲಿಯಾ	ಅಡಿಲೇಡ್, ಅಡಿಲೇಡ್	ಡಿ.23, 1967	55ಕ್ಕೆ 6	ಸೋಲು

> ಯಾವುದೇ ಪರಿಸ್ಥಿತಿಯಲ್ಲಿ 20 ವಿಕೆಟ್‌ಗಳನ್ನು ಕಬಳಿಸಬಲ್ಲ ಬೌಲಿಂಗ್ ವಿಭಾಗವನ್ನು ನಾವು ಹೊಂದಿದ್ದೇವೆ. ಪ್ರಥಮ ಇನ್ನಿಂಗ್ಸ್‌ನಲ್ಲಿ ನಿರಂತರ 350ರಿಂದ 400 ರನ್ ಮೊತ್ತ ಕಲೆಹಾಕುವ ಅಗತ್ಯವಿದೆ. ತ್ರಿವಳಿ ಸ್ಪಿನ್ನರ್‌ಗಳು ಗುಣಮಟ್ಟದ ಬೌಲಿಂಗ್ ಪ್ರದರ್ಶನ ನೀಡಿದ್ದಾರೆ. ಇದೊಂದು ಪೂರ್ಣ ಗೆಲುವು.
> ■ ಶುಬ್ಮನ್ ಗಿಲ್, ಭಾರತ ನಾಯಕ

> ಕ್ರಿಕೆಟ್ ವೃತ್ತಿಜೀವನದ ನಂಬಲಸಾಧ್ಯ ಅನುಭವ. ಭಾರತವನ್ನು ಪ್ರತಿನಿಧಿಸಿ ಟೆಸ್ಟ್ ಕ್ರಿಕೆಟ್ ಆಡುವುದು ಆರಂಭದಿಂದಲೂ ನನ್ನ ಕನಸಾಗಿತ್ತು. ಟೆಸ್ಟ್‌ನಲ್ಲಿ ತಾಳ್ಮೆ ಹಾಗೂ ಸ್ಥಿರ ಪ್ರದರ್ಶನ ನೀಡುವುದು ಬಹಳ ಮುಖ್ಯ ಎಂದು ಕಲಿತಿದ್ದೇನೆ.
> ■ ಮಾನವ್ ಸುಥಾರ್, ಎಡಗೈ ಸ್ಪಿನ್ನರ್

ಭಾರತದ ಅತಿ ದೊಡ್ಡ ಇನ್ನಿಂಗ್ಸ್ ಗೆಲುವು

ಗೆಲುವು	ಎದುರಾಳಿ
ಇನ್ನಿಂಗ್ಸ್ ಮತ್ತು 300 ರನ್	ಅಫ್ಘಾನಿಸ್ತಾನ, ಮುಲ್ಲಾನ್‌ಪುರ, 2026
ಇನ್ನಿಂಗ್ಸ್ ಮತ್ತು 272 ರನ್	ವೆಸ್ಟ್ ಇಂಡೀಸ್, ರಾಜ್‌ಕೋಟ್, 2018
ಇನ್ನಿಂಗ್ಸ್ ಮತ್ತು 262 ರನ್	ಅಫ್ಘಾನಿಸ್ತಾನ, ಬೆಂಗಳೂರು, 2018
ಇನ್ನಿಂಗ್ಸ್ ಮತ್ತು 239 ರನ್	ಬಾಂಗ್ಲಾದೇಶ, ಮಿರ್‌ಪುರ್, 2007
ಇನ್ನಿಂಗ್ಸ್ ಮತ್ತು 239 ರನ್	ಶ್ರೀಲಂಕಾ, ನಾಗ್ಪುರ, 2017

ಆಫ್ಘನ್‌ನ ಇನ್ನಿಂಗ್ಸ್ ಸೋಲುಗಳು

ಸೋಲು	ಎದುರಾಳಿ
ಇನ್ನಿಂಗ್ಸ್ ಮತ್ತು 300 ರನ್	ಭಾರತ, ಮುಲ್ಲಾನ್‌ಪುರ, 2026
ಇನ್ನಿಂಗ್ಸ್ ಮತ್ತು 262 ರನ್	ಭಾರತ, ಬೆಂಗಳೂರು, 2018
ಇನ್ನಿಂಗ್ಸ್ ಮತ್ತು 73 ರನ್	ಜಿಂಬಾಬ್ವೆ, ಹರಾರೆ, 2025
112 ರನ್ ಅಫ್ಘಾನಿಸ್ತಾನದ 3ನೇ ಅತಿ ಕಡಿಮೆ ಮೊತ್ತ	

ಸ್ಕೋರ್ ಬೋರ್ಡ್

ಭಾರತ ಪ್ರಥಮ ಇನ್ನಿಂಗ್ಸ್: 564/8 ಡಿ.
ಅಫ್ಘಾನಿಸ್ತಾನ ಪ್ರಥಮ ಇನ್ನಿಂಗ್ಸ್: 152/10

ರೆಹಮತ್ ಶಾ	ಬಿ ಸುಥಾರ್	60
ಒಮರ್‌ಝಾಯಿ	ಬಿ ಪ್ರಸಿದ್ಧ	0
ಅಶ್ರಫ್	ಸಿ ಪಂತ್ ಬಿ ಸುಥಾರ್	11
ಖರೋಟೆ	ಔಟಾಗದೆ	4
ಸಲೀಮ್	ಎಲ್‌ಬಿ ಸುಥಾರ್	0
ಜಿಯಾವುರ್	ಸಿ ಪಂತ್ ಬಿ ಸುಂದರ್	6
ಇತರೆ		3

ಬೌಲಿಂಗ್ ವಿವರ

ಸಿರಾಜ್	9-2-29-0
ಪ್ರಸಿದ್ಧ	11-2-37-3
ಸುಥಾರ್	22-10-33-6
ಕುಲ್ದೀಪ್	10-1-32-0
ಸುಂದರ್	6.4-1-21-1

ಅಫ್ಘಾನಿಸ್ತಾನ ದ್ವಿತೀಯ ಇನ್ನಿಂಗ್ಸ್: 112/10

ಸೆದಿಕುಲ್ಲಾ	ಸಿ ಪ್ರಸಿದ್ಧ ಬಿ ಸುಂದರ್	42
ಮಲಿಕ್	ಎಲ್‌ಬಿ ಸಿರಾಜ್	8
ಗುರ್ಬಜ್	ಸಿ ಪ್ರಸಿದ್ಧ ಬಿ ಕುಲ್ದೀಪ್	24
ರೆಹಮತ್	ಶಾ ಸಿ ಸುಥಾರ್ ಬಿ ಸುಂದರ್	13
ಶಾಹಿದಿ	ಸಿ ಗಿಲ್ ಬಿ ಸುಂದರ್	5
ಅಫ್ಸರ್	ಎಲ್‌ಬಿ ಸುಥಾರ್	8
ಒಮರ್‌ಝಾಯಿ	ಸಿ ಕುಲ್ದೀಪ್ ಬಿ ಸುಂದರ್	4
ಖರೋಟೆ	ಸಿ ಸುಥಾರ್ ಬಿ ಕುಲ್ದೀಪ್	6
ಜಿಯಾವುರ್ ಔಟಾಗದೆ		0
ಸಲೀಮ್	ಸಿ ಸಾಯಿ ಬಿ ಕುಲ್ದೀಪ್	0
ಶರಾಫುದ್ದೀನ್	ಗಾಯಾಳು	-
ಇತರೆ		2

ಬೌಲಿಂಗ್ ವಿವರ

ಸುಥಾರ್	10-2-29-1
ಪ್ರಸಿದ್ಧ	3-0-6-0
ಕುಲ್ದೀಪ್	7.5-1-30-3
ಸಿರಾಜ್	4-1-11-1
ಸುಂದರ್	11-4-36-4

ಶ್ರೇಯಾಂಕಾಗೆ 4 ವಿಕೆಟ್ | ರಾಧಾಗೆ 3 ವಿಕೆಟ್

ಕನ್ನಡತಿ ಸ್ಪಿನ್ ದಾಳಿ: ನಡುಗಿದ ವಿಂಡೀಸ್



ಸಂಕ್ಷಿಪ್ತ ಸ್ಕೋರ್
ಭಾರತ 179/8(20): ಭಾರ್ತಿ 56(40), ಮಂದನಾ 39(23), ಯಸ್ತಿಕಾ 36(26), ಶೆಫಾಲಿ 29(13), ಫ್ಲೆಚರ್ 23ಕ್ಕೆ 4.
ವೆಸ್ಟ್ ಇಂಡೀಸ್ 153/8(20): ಡೊಟಿನ್ 49(44), ಕ್ಯಾಂಪಬೆಲ್ ಗಾಯಾಳಾಗಿ ನಿವೃತ್ತಿ 25(22), ಹೆಕ್ಟರ್ 19(11), ಶ್ರೇಯಾಂಕಾ 36ಕ್ಕೆ 4, ರಾಧಾ 25ಕ್ಕೆ 3.

ಕಾರ್ಡಿಫ್: ವೆಸ್ಟ್ ಇಂಡೀಸ್ ವನಿತೆಯರ ವಿರುದ್ಧದ ಐಸಿಸಿ ಟಿ20 ವಿಶ್ವಕಪ್ ಅಭ್ಯಾಸ ಪಂದ್ಯದಲ್ಲಿ ಭಾರತ ತಂಡ 26 ರನ್‌ಗಳ ಗೆಲುವು ದಾಖಲಿಸಿದೆ. ಭಾರತ ನೀಡಿದ 180 ರನ್‌ಗಳ ಸವಾಲನ್ನು ಬೆನ್ನತ್ತುವಲ್ಲಿ ವಿಂಡೀಸ್ ವಿಫಲವಾಗಿದ್ದು, 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 153 ರನ್ ಗಳಿಸಲಷ್ಟೇ ಶಕ್ತವಾಯಿತು.

ಸೋಮವಾರ ಕಾರ್ಡಿಫ್‌ನಲ್ಲಿ ನಡೆದ ವಿಶ್ವಕಪ್ ಅಭ್ಯಾಸ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಭಾರತ ಪರ ಭಾರ್ತಿ ಫುಲ್ಮಾಲಿ ಅರ್ಧಶತಕ ದಾಖಲಿಸಿದರು. ನಾಯಕ ಹರ್ಮನ್‌ಪ್ರೀತ್ ಅನುಪಸ್ಥಿತಿಯಲ್ಲಿ ಸ್ಮೃತಿ ತಂಡ ಮುನ್ನಡೆಸಿದ್ದು, ನಾಯಕಿ ಮಂದನಾ ಮತ್ತು ಶೆಫಾಲಿ ಮೊದಲ ವಿಕೆಟ್‌ಗೆ 5.2 ಓವರ್‌ಗಳಲ್ಲಿ 59 ರನ್ ಪೇರಿಸಿ ಉತ್ತಮ ಅಡಿಪಾಯ ಹಾಕಿಕೊಟ್ಟರು. ಶೆಫಾಲಿ ಎಂದಿನಂತೆ ಸ್ಫೋಟಕ ಆರಂಭವನ್ನು ನೀಡಿದ್ದರು. ಸ್ಮೃತಿ 23 ಎಸೆತಗಳಲ್ಲಿ 39 ರನ್ ಹೊಡೆದರು. ಉತ್ತಮ ಲಯದಲ್ಲಿರುವ ಯಸ್ತಿಕಾ ಭಾಟಿಯ 26 ಎಸೆತಗಳಿಂದ 36 ರನ್ ಕೊಡುಗೆ ನೀಡಿದರು. ನಾಲ್ಕನೇ ವಿಕೆಟ್‌ಗೆ ಯಸ್ತಿಕಾ ಮತ್ತು ಭಾರ್ತಿ 60 ರನ್ ಕಲೆಹಾಕಿ ಭಾರತ ಉತ್ತಮ ಮೊತ್ತ ಪೇರಿಸಲು ನೆರವಾದರು. ಭಾರತ ತಂಡ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 179 ರನ್ ಪೇರಿಸಿತು. ವೆಸ್ಟ್ ಇಂಡೀಸ್ ಪರ ಫ್ಲೆಚರ್ 23ಕ್ಕೆ 4 ವಿಕೆಟ್ ಕಬಳಿಸಿದ್ದರು.

ಶ್ರೇಯಾಂಕಾ, ರಾಧಾ ಸ್ಪಿನ್ ಮೋಡಿ: 180 ರನ್ ಗುರಿ ಬೆನ್ನತ್ತಿದ ವಿಂಡೀಸ್ ಮೊದಲ ವಿಕೆಟ್‌ಗೆ ನಿಧಾನಗತಿಯಲ್ಲಿ 63 ರನ್ ಕಲೆಹಾಕಿತು. ಆರಂಭಿಕರ ಸ್ಕೋರ್ ವಿಂಡೀಸ್ ಪರ ವೈಯಕ್ತಿಕ ಅತ್ಯುತ್ತಮ ಆಗಿದ್ದವು. ಕನ್ನಡತಿ ಶ್ರೇಯಾಂಕಾ ಪಾಟೀಲ್ ಹಾಗೂ ರಾಧಾ ಯಾದವ್ ಅವರ ಸ್ಪಿನ್ ದಾಳಿಗೆ ನಲುಗಿದ ವಿಂಡೀಸ್ 26 ರನ್‌ಗಳ ಸೋಲುಂಡಿತು.

ಪ್ರಜ್ಞಾನಂದಗೆ ತ.ನಾಡು ಸರ್ಕಾರದಿಂದ ₹50 ಲಕ್ಷ

ಚೆನ್ನೈ: ಇತ್ತೀಚೆಗೆ ನಾರ್ವೆ ಚೆಸ್ ಪ್ರಶಸ್ತಿ ಗೆದ್ದ ಭಾರತೀಯ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಅವರನ್ನು ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಸೋಮವಾರ ಸನ್ಮಾನಿಸಿದರು. 20ರ ಹರೆಯದ ಪ್ರಜ್ಞಾನಂದರನ್ನು ಸೋಮವಾರ ತಮ್ಮ ಮುಖ್ಯಮಂತ್ರಿ ಕಚೇರಿಗೆ ಸ್ವಾಗತಿಸಿದ ಸಿಎಂ ವಿಜಯ್ ತಮಿಳುನಾಡು ಸರ್ಕಾರದ ವತಿಯಿಂದ 50 ಲಕ್ಷ ರೂ. ನಗದು ಬಹುಮಾನದ ಚೆಕ್ ನೀಡಿ ಸನ್ಮಾನಿಸಿದರು.

ಇದಲ್ಲದೆ ಆಕಸ್ಮಿಕವಾಗಿ ಪ್ರಜ್ಞಾನಂದ ಅವರೊಂದಿಗೆ ಚೆಸ್ ಆಟವನ್ನು ಆಡಿದರು. ಚೆಕ್‌ಮೇಟ್ ನೀಡುವ ಮೂಲಕ ಮುಖ್ಯಮಂತ್ರಿ ವಿಜಯ್ ಸಹಿತ ಕಚೇರಿಯಲ್ಲಿ ಸೇರಿದ್ದವರನ್ನು ನಿಬ್ಬೆರಗಾಗಿಸಿದರು. ಮುಖ್ಯಮಂತ್ರಿ ಭೇಟಿ ಸಂದರ್ಭ ಪ್ರಜ್ಞಾನಂದ ತಾಯಿ ನಾಗಲಕ್ಷ್ಮಿ ಜೊತೆಗಿದ್ದರು. ಸಾರ್ವಜನಿಕ ಸೇವಾ ಇಲಾಖೆ ಮತ್ತು ಕ್ರೀಡಾ ಸಚಿವ ಆಧವ್ ಅರ್ಜುನ ಸೇರಿ ಹಲವರು ಸ್ಥಳದಲ್ಲಿದ್ದರು.


ಬೋರ್ಡ್ ತರಲು ಹೇಳಿದ್ದ ವಿಜಯ್: ಮುಖ್ಯಮಂತ್ರಿ ಭೇಟಿಯ ಬಳಿಕ ಮಾತನಾಡಿದ ಪ್ರಜ್ಞಾನಂದ, ಮುಖ್ಯಮಂತ್ರಿ ಚೆಸ್ ಆಡುತ್ತಾರೆಂದು ತಿಳಿದಿರಲಿಲ್ಲ. ಚೆಸ್ ಬೋರ್ಡ್ ತರಲು ಹೇಳಿದ್ದರು. ಆದರೆ ಭೇಟಿ ಬಳಿಕ ನಾವು ಆಕಸ್ಮಿಕವಾಗಿ 15 ನಿಮಿಷಗಳ ಕಾಲ ಚೆಸ್ ಆಡಿದೆವು. ಮುಖ್ಯಮಂತ್ರಿ ಚೆಸ್ ಆಟ ನನಗೆ ಅಚ್ಚರಿ ಮೂಡಿಸಿತು ಎಂದು ಹೇಳಿದ್ದಾರೆ. ಸ್ನೇಹಿತರ ಜತೆ ಚೆಸ್ ಆಡುವ ಹವ್ಯಾಸ ಇರುವುದಾಗಿ ಪ್ರಜ್ಞಾನಂದಗೆ ವಿಜಯ್ ಹೇಳಿದ್ದಾರೆ.



ಗ್ರ್ಯಾಂಡ್ ಮಾಸ್ಟರ್ ಜತೆ ಚೆಸ್ ಆಡಿದ ಸಿಎಂ ವಿಜಯ್

ಪದಬಂಧ

ರಾಜಾ ಸಂಗಮೇಶ ಹಿರೇಮಠ



6009

ಎಡದಿಂದ ಬಲಕ್ಕೆ
1.ಮನಸ್ಸಿನ ಉಮ್ಮಳ-ದುಃಖವಿದು (3)
3.ಹೋರಿ ನಡುವೆ ತಿರುಗಿ ಪಥಿಕನಾದ (4)
5.ಬೇಡತಿ-ಕಿರಾತ ಸ್ತ್ರೀಯೀಕೆ (4)
6.ಮೃತದೇಹಗಳನ್ನಿಡುವ ಸ್ಥಳ (4)
8.ಬಿಳಿಯ ನಡುವೆ ಬೀಸಿದ ಚಂಡಮಾರುತ (4)
11.ಶುಭಲಕ್ಷಣಗಳಿಂದ ಕೂಡಿದ ಆನೆ (4)
14.ಇದು ನಾಲ್ಕನೆಯ ವೇದ (4)
15.ಸಸಿ-ಕಸ ಒಳಗೊಂಡ ತಿಕ್ಕಾಟ ತಿರುಗಿದೆ (4)
16.ಕಾಳಗ ನಡೆಯುವ ಬಯಲು (4)
17.ಇದು ತಾಂಬೂಲದ ಎಲೆ (3)

ಮೇಲಿನಿಂದ ಕೆಳಕ್ಕೆ
1.ಕೆಟ್ಟ ಹಂಚಿಕೆಯನ್ನು ಹೀಗೂ ಹೇಳುತ್ತೇವೆ (4)
2.ಮಂದಿರದ ಮಧ್ಯಮಂಟಪ ಕಡೆಯಲ್ಲಿ ದೀರ್ಘವಾಗಿದೆ (4)
3.ನಡತೆಗೆಡು ಎಂಬರ್ಥದ ನುಡಿಗಟ್ಟು (4)
4.ಬಾಳೆಯಗಿಡವನ್ನು ಸೂಚಿಸುವ ಶಬ್ದ (3)
7.ಹಾವಾಡಿಗ-ಐಂದ್ರಜಾಲಿಕ ಎಂಬರ್ಥದ ಶಬ್ದ (4)
9.ಆಕಾಶಮಾರ್ಗವನ್ನು ಹೀಗೂ ಹೇಳಬಹುದು (4)
10.ಈತ ಅಡುಗೆ ಮಾಡುವವನು (4)
12.ಶಿವನ ಉಗ್ರರೂಪ ತಲೆಕೆಳಗಾಗಿದೆ (4)
13.ಜಯದ ನಡುವೆ ತಟಾಕವಿದೆ (4)
14. ಅಸಂಖ್ಯಾತ-ಮಿತಿಯಿಲ್ಲದ್ದು (3)

6008 ಉತ್ತರ

ಎಡದಿಂದ ಬಲಕ್ಕೆ:
1.ಅಂಕಣ 4.ನಮೂದು
6.ಕುಕವಿ 8.ನೆಲಹಾಸು
9.ಕಲಸನ್ನ 11.ಅಮೇರಿಕ
13.ಕರಿನೀರು 15.ವಿದುರ
17.ಅಂದಣ 18.ಪಾತಕ

ಮೇಲಿನಿಂದ ಕೆಳಕ್ಕೆ :
2.ಕರವಾಲ 3.ಕಂಟಕ
5.ಮೂಗುಬ್ಬಸ
6.ಕುಸುಮಾಕರ
7.ವಿಕಟಕವಿ 8.ಅರ್ಚನೆ
10.ತಿಮಿರು
12.ಮೇಘನಾದ
14.ಕಲಕಂಠ 16.ದುಪ್ಪಟ್ಟು

ವಿಶ್ವಯೋಗಾಸನ ಚಾಂಪಿಯನ್‌ಶಿಪ್-2026 | 102 ಸ್ವರ್ಣಸಹಿತ ಒಟ್ಟು 114 ಪದಕ ಬಾಚಿಕೊಂಡ ಭಾರತ

ಜಾಗತಿಕ ವೇದಿಕೆಯಲ್ಲಿ ಹೊಸ ಇತಿಹಾಸ ಸೃಷ್ಟಿಸಿದ ಭಾರತ

ಅಹಮದಾಬಾದ್: ನಗರದಲ್ಲಿ ನಡೆದ ಉದ್ಘಾಟನಾ ವಿಶ್ವ ಯೋಗಾಸನ ಚಾಂಪಿಯನ್‌ಶಿಪ್‌ನಲ್ಲಿ ಆತಿಥೇಯ ಭಾರತ ಸಂಪೂರ್ಣ ಪ್ರಾಬಲ್ಯ ಮೆರೆದಿದೆ. ಸೋಮವಾರ ಮುಕ್ತಾಯಗೊಂಡ ಈ ಕೂಟದಲ್ಲಿ ಭಾರತವು 102 ಚಿನ್ನದ ಪದಕಗಳೊಂದಿಗೆ ಒಟ್ಟು 114 ಪದಕಗಳನ್ನು ಬಾಚಿಕೊಳ್ಳುವ ಮೂಲಕ ಭರ್ಜರಿ ಪ್ರದರ್ಶನ ನೀಡಿದೆ.

ಜಪಾನ್ ಮೂರು ಚಿನ್ನ, ಮೂರು ಬೆಳ್ಳಿ ಮತ್ತು ಐದು ಕಂಚಿನ ಪದಕಗಳೊಂದಿಗೆ ಎರಡನೇ ಸ್ಥಾನ ಪಡೆದರೆ, ಅರ್ಜೆಂಟೀನಾದ ಕ್ರೀಡಾಪಟು ನಬೀಲಾ ಬರ್ರಾಜಾ ಅವರು ಎರಡು ಚಿನ್ನ ಮತ್ತು ಮೂರು ಬೆಳ್ಳಿ ಪದಕಗಳನ್ನು ಗೆಲ್ಲುವ ಮೂಲಕ ತಮ್ಮ ದೇಶವನ್ನು ಮೂರನೇ ಸ್ಥಾನದಲ್ಲಿ ನಿಲ್ಲಿಸಿದರು.

52 ಪದಕ ಗೆದ್ದ ನೇಪಾಳ: ಪಕ್ಕದ ರಾಷ್ಟ್ರ ನೇಪಾಳವು ಒಂದು ಚಿನ್ನ, 36 ಬೆಳ್ಳಿ ಮತ್ತು 15 ಕಂಚಿನ ಪದಕಗಳೊಂದಿಗೆ ಒಟ್ಟು 52 ಪದಕಗಳನ್ನು ಗೆದ್ದು, ಪದಕ ಪಟ್ಟಿಯಲ್ಲಿ ಐದನೇ ಸ್ಥಾನವನ್ನು ಪಡೆದುಕೊಂಡಿತು. ಉಜ್ಬೇಕಿಸ್ತಾನ್ ಒಂದು ಚಿನ್ನ, 13 ಬೆಳ್ಳಿ ಮತ್ತು 11 ಕಂಚಿನ ಪದಕಗಳೊಂದಿಗೆ ಒಟ್ಟು 25 ಪದಕಗಳನ್ನು ಗಳಿಸಿತು.





522 ಯೋಗಪಟುಗಳು ಭಾಗಿ: ಈ ಚಾಂಪಿಯನ್‌ಶಿಪ್‌ನಲ್ಲಿ 79 ದೇಶಗಳ ಒಟ್ಟು 522 ಕ್ರೀಡಾಪಟುಗಳು ಭಾಗವಹಿಸಿದ್ದರು. ಇವರಲ್ಲಿ 31 ದೇಶಗಳ ಕ್ರೀಡಾಪಟುಗಳು ಪದಕಗಳನ್ನು ಗೆಲ್ಲುವಲ್ಲಿ ಯಶಸ್ವಿಯಾದರು ಮತ್ತು ಹತ್ತು ದೇಶಗಳು ಕನಿಷ್ಠ ಒಂದು ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡವು.

ಕ್ರೀಡಾ ಪ್ರಾಧಿಕಾರಗಳ ಬೆಂಬಲ: 2030ರ ಕಾಮನ್ವೆಲ್ತ್ ಕ್ರೀಡಾಕೂಟದ ಆತಿಥ್ಯ ವಹಿಸಲಿರುವ ಅಹಮದಾಬಾದ್‌ನಲ್ಲಿ ನಡೆದ ಈ ಚಾಂಪಿಯನ್‌ಶಿಪ್, ಪ್ರಾಚೀನ ಭಾರತೀಯ ಕಲೆ ಯೋಗಾಸನವನ್ನು ಜಾಗತಿಕ ಸ್ಪರ್ಧಾತ್ಮಕ ಕ್ರೀಡೆಯಾಗಿ ಪರಿವರ್ತಿಸುವಲ್ಲಿ ಮತ್ತು ಅದನ್ನು ಒಲಿಂಪಿಕ್ ಕ್ರೀಡಾಕೂಟದತ್ತ ಕೊಂಡೊಯ್ಯುವಲ್ಲಿ ಒಂದು ಐತಿಹಾಸಿಕ ಘಟ್ಟವಾಗಿದೆ.

ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ, ಆಯುಷ್ ಸಚಿವಾಲಯ, ಭಾರತೀಯ ಕ್ರೀಡಾ ಪ್ರಾಧಿಕಾರ (ಸಾಯ್), ಗುಜರಾತ್ ಕ್ರೀಡಾ ಪ್ರಾಧಿಕಾರ, ಗುಜರಾತ್ ಪ್ರವಾಸೋದ್ಯಮ ಮತ್ತು ಗುಜರಾತ್ ಯೋಗಾಸನ ಕ್ರೀಡಾ ಸಂಘಗಳು ಈ ಚಾಂಪಿಯನ್‌ಶಿಪ್‌ಗೆ ಬೆಂಬಲ ನೀಡಿದ್ದವು.

6 ವಿಭಾಗಗಳಲ್ಲಿ ಸ್ಪರ್ಧೆ: ಆತಿಥೇಯ ಭಾರತವು 122 ಸದಸ್ಯರ ತಂಡವನ್ನು ಕಣಕ್ಕಿಳಿಸಿತ್ತು. ಕ್ರೀಡಾಪಟುಗಳು ಆರು ವಯೋಮಿತಿ ವಿಭಾಗಗಳಲ್ಲಿ ಸ್ಪರ್ಧಿಸಿದರು: ಸಬ್-ಜೂನಿಯರ್ (10-14 ವರ್ಷ), ಜೂನಿಯರ್ (14-18 ವರ್ಷ), ಸೀನಿಯರ್ (18-28 ವರ್ಷ), ಸೀನಿಯರ್ ಎ (28-35 ವರ್ಷ), ಸೀನಿಯರ್ ಬಿ (35-45 ವರ್ಷ) ಮತ್ತು ಸೀನಿಯರ್ ಸಿ (45-55 ವರ್ಷ).

ಶಾಂತಿ, ಮಾನವ ಐಕ್ಯತೆಯ ಮಾರ್ಗ

ವೀಡಿಯೊ ಸಂದೇಶವೊಂದರಲ್ಲಿ ಮಾತನಾಡಿದ ವಿಶ್ವ ಯೋಗಾಸನದ ಅಧ್ಯಕ್ಷ ಯೋಗಋಷಿ ಸ್ವಾಮಿ ರಾಮದೇವ್ ಜಿ ಮಹಾರಾಜ್, ವಿಶ್ವ ಯೋಗಾಸನ ಚಾಂಪಿಯನ್‌ಶಿಪ್ ಕೇವಲ ಒಂದು ಗಮ್ಯಸ್ಥಾನವಲ್ಲ; ಇದು ಜಾಗತಿಕ ಚಳುವಳಿಯ ಆರಂಭವಾಗಿದೆ. ಯೋಗವು ಕೇವಲ ಕ್ರೀಡೆಯಲ್ಲ-ಅದು ಜೀವನಶೈಲಿ, ಆರೋಗ್ಯ, ಸಾಮರಸ್ಯ, ಶಾಂತಿ ಮತ್ತು ಮಾನವ ಐಕ್ಯತೆಯ ಮಾರ್ಗ ಎಂದು ತಿಳಿಸಿದರು. ಫಲಿತಾಂಶಗಳ ಪ್ರಕಾರ, ಆರ್ಟಿಸ್ಟಿಕ್ ಪೇರ್ ಸಬ್-ಜೂನಿಯರ್ ಮಹಿಳೆಯರ ವಿಭಾಗದಲ್ಲಿ ಭಾರತದ ಇಶಿಕಾ ಗುಚ್ಛೈತ್ ಮತ್ತು ಇಶಾನ್ವಿ (90.89) ಚಿನ್ನದ ಪದಕ ಗೆದ್ದರೆ, ಜಾಂಬಿಯಾದ ನಿಯಾ ವಿಜಯ್‌ವರ್ಗೀಯ ಮತ್ತು ಆರೋಹಿ ಲೋಖಂಡೆ (82.38) ಬೆಳ್ಳಿ ಹಾಗೂ ಜಪಾನ್‌ನ ರೆಂಕಾ ಅಯೋಕಿ ಮತ್ತು ಇಚಿಕಾ ಶಿಮಿಜು (60.34) ಕಂಚಿನ ಪದಕ ಪಡೆದರು. ಜೂನಿಯರ್ ಮಹಿಳೆಯರ ವಿಭಾಗದಲ್ಲಿ ಭಾರತದ ದೀಪಾ ಲೋಧಿ ಮತ್ತು ಸಿಮಾ ನಿಯೋಪಾನೆ (90.42) ಚಿನ್ನ, ನೇಪಾಳದ ಸ್ವೀಕ್ಷ್ಯ ಥಾಪಾ ಮತ್ತು ಪ್ರಜ್ಞಾ ಗೌತಮ್ (56.39) ಬೆಳ್ಳಿ ಹಾಗೂ ಜಾಂಬಿಯಾದ ಟಸಿಲಾ ಬ್ಲೆಸ್ಸಿಂಗ್ ಫಿರಿ ಮತ್ತು ಡೆಬೊರಾ (41.30) ಕಂಚಿನ ಪದಕಗಳನ್ನು ಗೆದ್ದುಕೊಂಡರು.

CHANGE OF NAME

I, **SRINIDHI** (Old Name) Resident of # 275/B, Plot No - 42, Basaveshwar Nagar, B Block, 14th Cross, Beside Lions English Medium School, Haveri - 581110, Karnataka, have changed my name as **SRINIDHI AMARENDRA SOMPALLI** (New Name) henceforth I will be called and recognized by new name for all future purposes, dated: 08/06/2026.

CHANGE OF NAME

I, **GIRIJAKUMARI** (Old Name) Resident of # 275/B, Plot No - 42, Basaveshwar Nagar, B Block, 14th Cross, Beside Lions English Medium School, Haveri - 581110, Karnataka, have changed my name as **SOMPALLI GIRIJAKUMARI** (New Name) henceforth I will be called and recognized by new name for all future purposes, dated: 08/06/2026.

ಕ್ರಿಮಿನಲ್ ಮಿಸಲೇನಿಯಸ್ ನಂ. 159/2026
ಮಾನ್ಯ ಜೆ.ಎಮ್. ಎಫ್.ಸಿ. ನರಗುಂದ ಇವರ ನ್ಯಾಯಾಲಯ
ಅರ್ಜಿದಾರ: ಅಬ್ದುಲಗಫಾರ ತಂ ಹಸನಮೀಯಾ ಖಾಜಿ
ವಿರುದ್ಧ
ಎದುರುಗಾರ: ಜನನ-ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ ನರಗುಂದ.
ಸಾರ್ವಜನಿಕ ತಿಳುವಳಿಕೆ ನೋಟೀಸು

ಅರ್ಜಿದಾರನ ತಂದೆಯಾದ ಶ್ರೀಯುತ "ಹಸನಮೀಯಾ ತಂ ಬಡೇಸಾಬ ಖಾಜಿ" ಇವರು ನರಗುಂದ ತಾಲೂಕಿನ ಕೊಣ್ಣೂರ ಗ್ರಾಮದ ಮನೆಯಲ್ಲಿ ದಿನಾಂಕ: 21-11-1974 ರಂದು ನಿಧನರಾಗಿದ್ದು ಸದರ ದಿನಾಂಕವನ್ನು ಎದುರುದಾರನಲ್ಲಿ ದಾಖಲಿಸಿಕೊಳ್ಳುವಂತೆ ಆದೇಶ ಕೋರಿ ಅರ್ಜಿ ನೀಡಿರುತ್ತಾರೆ.

ಸದರ ಪ್ರಕರಣವು ದಿನಾಂಕ: 20-07-2026 ರಂದು ಇದ್ದು ಮೇಲ್ಕಂಡ ಪ್ರಕರಣದಲ್ಲಿ ಯಾರಿಗಾದರು ಹಕ್ಕು ಹಿತಾಸಕ್ತಿ ಇದ್ದಲ್ಲಿ ತಕರಾರು ಇದ್ದಲ್ಲಿ ಮಾನ್ಯ ನ್ಯಾಯಲಯವು ನಿಗದಿಪಡಿಸಿದ ದಿನದಂದು ಅಂದರೆ ದಿನಾಂಕ:20-07-2026 ರಂದು ಬೆಳಿಗ್ಗೆ 10-30 ಘಂಟೆಗೆ ಸ್ವತಃ ನೀವಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು ಇಲ್ಲದಿದ್ದರೆ, ನಿಮ್ಮ ಗೈರು ಹಾಜರಾತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ಮಾನ್ಯ ನ್ಯಾಯಾಲಯವು ಕಾನೂನಿನ ಪ್ರಕಾರ ಮುಂದಿನ ಆದೇಶ ಮಾಡುತ್ತದೆ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಈ ದಿವಸ ದಿನಾಂಕ: 04-06-2026 ರಂದು ಕೋರ್ಟಿನ ಮೊಹರಿನೊಂದಿಗೆ ಕೊಡಲಾಗಿದೆ.
ನರಗುಂದ
04-06-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ನರಗುಂದ
ಸಹಿ/- (ಎಮ್. ಬಿ. ಕುಲಕರ್ಣಿ)
ಅರ್ಜಿದಾರರ ಪರ ವಕೀಲರು
ವಿನಾಯಕ ನಗರ ನರಗುಂದ.

ಕ್ರಿಮಿನಲ್ ಮಿಸಲೇನಿಯಸ್ ನಂ. 155/2026
ಮಾನ್ಯ ಜೆ.ಎಮ್. ಎಫ್.ಸಿ. ನರಗುಂದ ಇವರ ನ್ಯಾಯಾಲಯ
ಅರ್ಜಿದಾರ: ಶ್ರೀಮತಿ ಬಸವಣ್ಣೆವ್ವ ಕೋಂ ಬಸವಣ್ಣೆಪ್ಪಾ ಕುರಬಗಟ್ಟಿ
ವಿರುದ್ಧ
ಎದುರುಗಾರ : ಜನನ-ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ ನರಗುಂದ.
ಸಾರ್ವಜನಿಕ ತಿಳುವಳಿಕೆ ನೋಟೀಸು

ಅರ್ಜಿದಾರರ ತಾಯಿಯಾದ ಶ್ರೀಮತಿ "ಪಾರ್ವತೆವ್ವ ಕೋಂ. ಬಸಪ್ಪ ತೋರಗಲ್ಲ" ಇವರು ನರಗುಂದ ತಾಲೂಕಿನ ಚಿಕ್ಕನರಗುಂದ ಗ್ರಾಮದಲ್ಲಿ ತಾ: 18-09-1984 ರಂದು ನಿಧನರಾಗಿದ್ದು, ಸದರ ದಿನಾಂಕವನ್ನು ಎದುರುದಾರನಲ್ಲಿ ದಾಖಲಿಸಿಕೊಳ್ಳುವಂತೆ ಆದೇಶ ಕೋರಿ ಅರ್ಜಿ ನೀಡಿರುತ್ತಾರೆ.

ಸದರ ಪ್ರಕರಣವು ದಿನಾಂಕ: 20- 07-2026 ರಂದು ಇದ್ದು ಮೇಲ್ಕಂಡ ಪ್ರಕರಣದಲ್ಲಿ ಯಾರಿಗಾದರು ಹಕ್ಕು ಹಿತಾಸಕ್ತಿ ಇದ್ದಲ್ಲಿ ತಕರಾರು ಇದ್ದಲ್ಲಿ ಮಾನ್ಯ ನ್ಯಾಯಲಯವು ನಿಗದಿಪಡಿಸಿದ ದಿನದಂದು ಅಂದರೆ ದಿನಾಂಕ: 20-07-2026 ರಂದು ಬೆಳಿಗ್ಗೆ 10-30 ಘಂಟೆಗೆ ಸ್ವತಃ ನೀವಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು. ಇಲ್ಲದಿದ್ದರೆ ನಿಮ್ಮ ಗೈರು ಹಾಜರಾತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ಮಾನ್ಯ ನ್ಯಾಯಾಲಯವು ಕಾನೂನಿನ ಪ್ರಕಾರ ಮುಂದಿನ ಆಧೇಶ ಮಾಡುತ್ತದೆ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಈ ದಿವಸ ದಿ: 04-06-2026 ರಂದು ಕೋರ್ಟಿನ ಮೊಹರಿನೊಂದಿಗೆ ಕೊಡಲಾಗಿದೆ.
ನರಗುಂದ
04-06-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ನರಗುಂದ
ಸಹಿ/- (ಎಮ್. ಬಿ. ಕುಲಕರ್ಣಿ)
ಅರ್ಜಿದಾರರ ಪರ ವಕೀಲರು
ವಿನಾಯಕ ನಗರ ನರಗುಂದ.

ಕ್ರಿಮಿನಲ್ ಮಿಸಲೇನಿಯಸ್ ನಂ. 157/2026
ಮಾನ್ಯ ಜೆ.ಎಮ್. ಎಫ್.ಸಿ. ನರಗುಂದ ಇವರ ನ್ಯಾಯಾಲಯ
ಅರ್ಜಿದಾರ: ಶಂಕರಪ್ಪ ತಂ ಉಮೇಶ ಚವ್ಹಾನ
ವಿರುದ್ಧ
ಎದುರುಗಾರ : ಜನನ-ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ ನರಗುಂದ.
ಸಾರ್ವಜನಿಕ ತಿಳುವಳಿಕೆ ನೋಟೀಸು

2ನೇಯ ಅರ್ಜಿದಾರನ ತಂದೆಯಾದ "ಶ್ರೀಯುತ ಉಮೇಶ ತಂ. ಸಕ್ರಪ್ಪ ಚವ್ಹಾನ" ಇವರು ನರಗುಂದ ತಾಲೂಕಿನ ಶಿರೋಳ ಗ್ರಾಮದ ಮನೆಯಲ್ಲಿ ದಿನಾಂಕ : 17-07-2021 ರಂದು ನಿಧನರಾಗಿದ್ದು ಸದರ ದಿನಾಂಕವನ್ನು ಎದುರುದಾರನಲ್ಲಿ ದಾಖಲಿಸಿಕೊಳ್ಳುವಂತೆ ಆದೇಶ ಕೋರಿ ಅರ್ಜಿ ನೀಡಿರುತ್ತಾರೆ.

ಸದರ ಪ್ರಕರಣವು ದಿನಾಂಕ: 20-07-2026 ರಂದು ಇದ್ದು ಮೇಲ್ಕಂಡ ಪ್ರಕರಣದಲ್ಲಿ ಯಾರಿಗಾದರು ಹಕ್ಕು ಹಿತಾಸಕ್ತಿ ಇದ್ದಲ್ಲಿ ತಕರಾರು ಇದ್ದಲ್ಲಿ ಮಾನ್ಯ ನ್ಯಾಯಲಯವು ನಿಗದಿಪಡಿಸಿದ ದಿನದಂದು ಅಂದರೆ ದಿನಾಂಕ: 20-07-2026 ರಂದು ಬೆಳಿಗ್ಗೆ 10-30 ಘಂಟೆಗೆ ಸ್ವತಃ ನೀವಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು. ಇಲ್ಲದಿದ್ದರೆ ನಿಮ್ಮ ಗೈರು ಹಾಜರಾತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ಮಾನ್ಯ ನ್ಯಾಯಾಲಯವು ಕಾನೂನಿನ ಪ್ರಕಾರ ಮುಂದಿನ ಆದೇಶ ಮಾಡುತ್ತದೆ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಈ ದಿವಸ ದಿ: 04-06-2026 ರಂದು ಕೋರ್ಟಿನ ಮೊಹರಿನೊಂದಿಗೆ ಕೊಡಲಾಗಿದೆ.
ನರಗುಂದ
04-06-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ನರಗುಂದ
ಸಹಿ/- (ಎಮ್. ಬಿ. ಕುಲಕರ್ಣಿ)
ಅರ್ಜಿದಾರರ ಪರ ವಕೀಲರು
ವಿನಾಯಕ ನಗರ ನರಗುಂದ.

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ: 593/2026
ಅರ್ಜಿದಾರರು : 1) ಹೆಚ್.ಆರ್. ಪರಮೇಶ್ವರ ತಂದೆ ದಿವಂಗತ ರಾಮೇಗೌಡ ವಯಸ್ಸು: 47 ವರ್ಷ, ವಾಸ: ಮನೆ ನಂ.2 ಹೆಚ್.ಎಸ್.ಸಿ.ಎಲ್. ದೋಣಿಮಲೈ ಟೌನ್‌ಶಿಪ್, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ 2) ರಾಜಮ್ಮ ಗಂಡ ದಿವಂಗತ ರಾಮೇಗೌಡ ವಯಸ್ಸು: 71 ವರ್ಷ, ವಾಸ: ಮಾರೆಮ್ಮ ದೇವಸ್ಥಾನದ ಹತ್ತಿರ, ಶಾಂತಿನಗರ ಕ್ಯಾಂಪ್, ದೋಣಿಮಲೈ ಟೌನ್‌ಶಿಪ್, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಸಂಡೂರು,
ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ 1ರ ತಂದೆಯಾದ ರಾಮೇಗೌಡ ತಂದೆ ನಂಜೇಗೌಡ ಇವರು ದಿನಾಂಕ: 30-11-2024 ರಂದು ದೋಣಿಮಲೈ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ-ರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 17-7-2026 ಬೆಳಿಗ್ಗೆ 11:00 ಗಂಟೆಗೆ ಮುದ್ದುತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 8-6-2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರ
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಹಿ/- ಬಿ.ಆರ್.ಎಸ್.ಬಿ. ರಹಮತ್
ಅರ್ಜಿದಾರರ ಪರ ವಕೀಲರು ಸಂಡೂರು

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು.

ಸಂಖ್ಯೆ : 06/2026-27 ದಿನಾಂಕ: 06.06.2026

ಟೆಂಡರ್ ಅಧಿಸೂಚನೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು-570010 ರವರು ಕೆ.ಡಬ್ಲ್ಯೂ-3ರ ಮತ್ತು 2ರ ರೀತ್ಯ ಒಟ್ಟು 02 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ **ರೂ.25.00 ಲಕ್ಷಗಳು** ಮತ್ತು ಗರಿಷ್ಠ **ಮೊತ್ತ ರೂ. 75.00 ಲಕ್ಷಗಳಾಗಿರುತ್ತದೆ,** ಇ.ಎಂ.ಡಿ ಕನಿಷ್ಠ **ರೂ 0.50 ಲಕ್ಷಗಳು** ಮತ್ತು ಗರಿಷ್ಠ **ರೂ 1.50 ಲಕ್ಷಗಳಾಗಿರುತ್ತದೆ.**

ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವಧಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್"ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ ಪೋರ್ಟಲ್" ನಲ್ಲಿ ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್'ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.

1)ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ: **ದಿನಾಂಕ 16.06.2026, ಸಂಜೆ 5-30 ಗಂಟೆ**

2)ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ: **17.06.2026, ಸಂಜೆ 5-30 ಗಂಟೆ**

3) ಬಿಡ್ ತೆರೆಯುವ ದಿನಾಂಕ : **19.06.2026 ರ ಬೆಳಿಗ್ಗೆ 11-00 ಗಂಟೆ ನಂತರ.**

ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ: ಸದರಿ ಕಾಮಗಾರಿಯ ಟೆಂಡರ್‌ಗಳನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು, ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸನೀ ಮತ್ತು ಅಂ.ಅ ವಿಭಾಗ, ಮೈಸೂರು

ವಾಸಾಸಂಇ/ಮೈಸೂರು/276/ಎಸ್ಎಸ್‌ಸಿ/2026-27

ಕರ್ನಾಟಕ ಸರಕಾರ
ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ 582101

ಜಿಲ್ಲಾ: ಗದಗ ರಾಜ್ಯ: ಕರ್ನಾಟಕ
ದೂರವಾಣಿ: 08372-259932 ಇ-ಮೇಲ್: ka.gadag.betageri.cmc@gmail.com
ನಂ.ಗಬೆನಸ/ತಾಂ.ವಿ/ವಹಿ/ಟೆಂಡರ್/2026-27 ದಿನಾಂಕ: 08-06-2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಗದಗ-ಬೆಟಗೇರಿ ನಗರಸಭೆಯ ಸನ್ 2026-27 ನೇ ಸಾಲಿನ ನಗರಸಭೆ ಅನುದಾನದಲ್ಲಿ **ಒಟ್ಟು 02** ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ **ರೂ.23.56 ಲಕ್ಷಗಳಿಗೆ** ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, **ಇಂಡೆಂಟ್‌ನಂ:- 1)DMA/2026-27/OW/WORK_INDENT-59326 2) DMA/2026-27/OW/WORK_INDENT-59325 http://kppp.karnataka.gov.in** ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀ ಗಳನ್ನು Electronic ಪದ್ಧತಿಯಲ್ಲಿ ತುಂಬಿ ನಿಗದಿಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	**22-06-2026 Upto 16.00 hours**
ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	**23-06-2026 Upto 16.30 hours**

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು. ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-
ಪೌರಾಯುಕ್ತರು
ಗದಗ-ಬೆಟಗೇರಿ ನಗರಸಭೆ

ವಾ.ಸಾ.ಇ./ಗದಗ/112/ದೇಶಪಾಂಡೆಪಬ್ಲಿಸಿಟಿ/2026-27

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 590/2026
ಅರ್ಜಿದಾರರು : ಎಚ್ ಎಂ ಲಕ್ಷ್ಮೀ ಗಂಡ ಲೇಟ್ ಎಚ್ ಎಂ ಪರ್ವತಯ್ಯ, ವಯಸ್ಸು: 43 ವರ್ಷ, ವಾಸ: ಭುಜಂಗನಗರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಸಂಡೂರು.
ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ಮಾವನವರಾದ ಪೊಂಪಣ್ಣ ತಂದೆ ಬಸಯ್ಯ ಇವರು ದಿನಾಂಕ: 11-01-2005 ರಂದು ಭುಜಂಗನಗರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ-ರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 13-7-2026 ಬೆಳಿಗ್ಗೆ 11:00 ಗಂಟೆಗೆ ಮುದ್ದುತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 6-6-2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಹಿ/- ಕೆ. ಮೊಹ್ಮದ್ ಅಯೂಬ್
ಅರ್ಜಿದಾರರ ಪರ ವಕೀಲರು ಸಂಡೂರು

ಪಿ.ಐ.ಎಸ್.ಸಿ ನಂ: 3/2026
ಮಾನ್ಯ ಹಿರಿಯ ದಿವಾಣಿ ನ್ಯಾಯಾದೀಶರು ಶಿಗ್ಗಾಂವ ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು : 1) ಶ್ರೀಮತಿ ಲಕ್ಷ್ಮವ್ವ ಕೋಂ ದಿ. ಗುಡ್ಡಪ್ಪ ಹೊಸಮನಿ @ ಮಾದರ, ಸಾ: ಬಂಕಾಪುರ 2) ಉಡಚಪ್ಪ ತಂದೆ ದಿ. ಗುಡ್ಡಪ್ಪ ಹೊಸಮನಿ @ ಮಾದರ, ಸಾ: ಬಂಕಾಪುರ 3) ಶ್ರೀಮತಿ ಚೈತ್ರಾ ಕೋಂ ಫಕ್ಕೀರಪ್ಪ ಹರಿಜನ ಸಾ: ಬಂಕಾಪುರ
ವಿರುದ್ಧ
ಎದುರುಗಾರ : ಯಾರೂ ಇಲ್ಲಾ
ಇಷ್ತಿಯಾರ ನಾಮೆ

ಈ ಪ್ರಕರಣದ ಅರ್ಜಿದಾರರಾದ ನಾವು ಈ ಮೂಲಕ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಿದ ನೋಟೀಸು ಏನೆಂದರೆ :-

ನಾವು ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಶಿಗ್ಗಾಂವ ಇವರಲ್ಲಿ ಮೇಲ್ಕಂಡ ಅರ್ಜಿಯನ್ನು ಮೃತ ಮಂಜಪ್ಪ @ ಮಂಜುನಾಥ ತಂದೆ ಗುಡ್ಡಪ್ಪ ಮಾದರ @ ಹೊಸಮನಿ ಇವನ ಮರಣೋತ್ತರ ಸೌಲಭ್ಯ ಪಡೆಯಲು ಉತ್ತರದಾಯಿತ್ವ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿರುತ್ತೇವೆ. ಸದರಿ ಅರ್ಜಿಯ ಚೌಕಸಿಗಾಗಿ ಮಾನ್ಯ ನ್ಯಾಯಾಲಯದವರು ದಿನಾಂಕ: 09-07-2026 ರಂದು ಮುದ್ದತ್ತನ್ನು ನೇಮಿಸಲಾಗಿದೆ. ಕಾರಣ, ಸದರಿ ಪ್ರಕರಣದಲ್ಲಿ ಯಾರಿಗಾದರೂ ತಂ-ಟೆ ವ ತಕರಾರು ಇದ್ದರೆ ಆ ದಿನ ಬೆಳಿಗ್ಗೆ 11:00 ಘಂಟೆಗೆ ತಾವಾಗಲಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗಿ ನಿಮ್ಮ ಲಿಖಿತ ತಕರಾರು ಸಲ್ಲಿಸತಕ್ಕದ್ದು ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಈ ಇಷ್ತಿಯಾರ್ ನಾಮೆಯನ್ನು ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 08-06-2026 ರಂದು ಕೊಡಲಾಗಿದೆ.
ಸ್ಥಳ: ಶಿಗ್ಗಾಂವ

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಹಿರಿಯ ದಿವಾಣಿ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ
ಸಹಿ/- (ಪಿ.ಎಮ್ ಗೋಂದಕರ)
ಅರ್ಜಿದಾರರ ಪರ ವಕೀಲರು.

IN THE COURT OF THE HON'BLE CIVIL JUDGE AND J.M.F.C. AT KUDLIGI
Crl. Misc. No. 2299/2025

Between:-
1) Halyada Kotresha s/o late Nagappa, aged about 27 years, 2) Smt. Parimala D/o. late Nagappa, aged about 25 years, Both are Hindus, agriculturists, R/o. Gangammanahalli Village in Kudligi Taluk, Vijayanagara District .....Petitioners
And
The Tahasildar, Kottur .....Respondent

SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.

Whereas the above petitioners have instituted above petition to get the death certificate of their deceased petitioner's mother by Name Siddamma w/o late Nagappa was died on 14-04-2000 at Gangammanahalli Village, in Kottur Taluk, and Vijayanagara District. On the file of the civil Judge & JMFC at Kudligi. The Tahasildar Taluk Office, Kottur is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 30/6/2026 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above-mentioned case will be heard and determined ex parte. Given under my hand and seal of this Hon'ble Court on 8-6-2026.

"By Order of Court"
Sd/- Chief Ministerial Officer
Civil Judge (J.D.) Court at Kudligi
Sd/- Sri. J. Nagaraja
Advocate, Kudligi

ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ

ಮಿನಿ ವಿಧಾನಸೌಧ ಪಕ್ಕದಲ್ಲಿ, ಸ್ಟೇಷನ್ ಮುಖ್ಯ ರಸ್ತೆ, ಕಲಬುರಗಿ-585102.Email: commissionergda@gmail.com
ಸಂಖ್ಯೆ: ನಪ್ರಾಕ/ತಾಂತ್ರಿಕ/ಉದ್ಯಾನವನ/ /2026-27/1056 ದಿನಾಂಕ : 08-06-2026

-: ಇ-ಪ್ರೋಕ್ಯೂರಮೆಂಟ ಟೆಂಡರ ಪ್ರಕಟಣೆ (ಮೂರನೇಯ ಕರೆ) :-

ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಲಬುರಗಿ ನಗರದ ಸ್ಥಳೀಯ ಯೋಜನಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ ಸಂಖ್ಯೆ 19 ರ ಬಿಲಾಲಾಬಾದ ಕಾಲೋನಿ ರೆಹಮಾನ ಮಜೀದ ಹತ್ತಿರದಲ್ಲಿರುವ ಬಿಲಾಲಾಬಾದ ಪಾರ್ಕ & ಆಟದ ಮೈದಾನ ಅಭಿವೃದ್ಧಿ ಪಡಿಸುವ ಕಾಮಗಾರಿಗಾಗಿ ಇ-ಪ್ರೋಕ್ಯೂರಮೆಂಟ ಟೆಂಡರ್ ಕರೆಯಲಾಗಿದೆ. ಟೆಂಡರಗಿಟ್ಟ ಮೊತ್ತ **ರೂ. 1,34,32,260/-** ಇ.ಎಮ್.ಡಿ ಮೊತ್ತ ರೂ. 2,00,000/- ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ದ್ವಿಲಕೋಟಿ ಮಾದರಿಯಲ್ಲಿ (KW-4) ರಂತೆ, ಟೆಂಡರ್ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **23.06.2026 ರಂದು ಸಾಯಂಕಾಲ 5:30 ಗಂಟೆವರೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **25.06.2026 ರಂದು ಬೆಳಗ್ಗೆ 11:00 ಗಂಟೆಗೆ** ಆರ್ಥಿಕ ಬಿಡ್ ತೆರೆಯುವ ದಿನಾಂಕ: **29.06.2026 ರಂದು ಬೆಳಗ್ಗೆ 11:00 ಗಂಟೆಗೆ.** ಟೆಂಡರದ ಎಲ್ಲಾ ವಿವರಗಳನ್ನು ಇ-ಪ್ರೋಕ್ಯೂರಮೆಂಟ ಟೆಂಡರದ ವೆಬ್‌ಸೈಟ್ www.kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಇನ್ನುಳಿದಂತೆ ವಿವರಗಳಿಗಾಗಿ ಪ್ರಾಧಿಕಾರದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಾಭಿವೃದ್ಧಿ ಪ್ರಾಧಿಕಾರ ಕಲಬುರಗಿ ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/194/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಇಲಾಖೆ ವಿಭಾಗ ಕಲಬುರಗಿ ದೂ. 08472 -220196 midnglb@rediffmail.com /midnglb1@gmail.com
ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ-1/ಕೆ.ಡಬ್ಲ್ಯೂ-1/2026-27/ 1174 ದಿ.: 06-06-2026

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-1) ::

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 4702 ಕೆರೆಗಳ ಆಧುನೀಕರಣ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: **ಗರಿಷ್ಠ ರೂ. 11,85,633.91 ಕನಿಷ್ಠ ರೂ. 3,43,481.25.** 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಹಾಗೂ ಮೇಲ್ಪಟ್ಟು, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆ.ಪಿ.ಪಿ.ಪಿ. ಪೋರ್ಟಲನಂತೆ, ಇ.ಎಂ.ಡಿ. ಗರಿಷ್ಠ ರೂ. 29,700.00, ಕನಿಷ್ಠ ರೂ. 4,500.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **15-06-2026 ಬೆಳಿಗ್ಗೆ 11.00 ಗಂಟೆಯ ವರೆಗೆ,** 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **16-06-2026 ಸಾಯಂಕಾಲ 17.30 ಗಂಟೆಯ ವರೆಗೆ,** 7) ಟೆಂಡರ ತೆರೆಯುವ ದಿನಾಂಕ: **17-06-2026 ಸಾಯಂಕಾಲ 17.30 ಗಂಟೆಯ ವರೆಗೆ,** 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ : (https:// KPPP.Karnataka.gov.in)

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/196/ಕೆ.ಎಸ್.ಎಂ.ಸಿ.&ಎ/2026-27

IN THE COURT OF CIVIL JUDGE & JMFC AT SIRUGUPPA
Criminal. Misc. No: 405/2026

Between:
Mehaboob Sabu .....Petitioner
And
The Birth & Death Registrar, TMC Tekkolakote .....Respondent

TO WHOM SO EVER IT MAY CONCERN
NOTICE

WHEREAS the above named petitioner herein has instituted the above petition under section 13(3) of birth and death Registrar Act 1969 against the respondent for the purpose of seeking death certificate of petitioners Sister Huseen Bee W/o. Mabu who was died on 09-06-2004 at the residence of the Petitioner.

Any person interested are hereby summoned to appear before this court in person or by pleader duly instructed and able to answer all material questions relating to the petition 10-06-2026 at 11.00 am before this court.

In default of your appearance on the date/day of above petition will be heard and determined as "Ex-part"

Given under my hand and seal of this court on this 8th day of June-2026.

By Order of the court,
Sd/- Sheristedar,
Civil Judge & JMFC Siruguppa.
Sd/- Shreedhar H.,
Advocates Siruguppa

CHANGE OF NAME

I, **VEENA S MURAGUNDI (Old Name)** R/o. H.No.3971, Maladar Galli Guruwar Peth, Gokak, Dist: Belagavi-591307 have changed my name as **VEENA VISHWANATH KADABI (New Name)** vide affidavit sworn before notary Patil V.H. Hubbli, Dated 06.06.2026

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/910/877 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop
ಸಂಖ್ಯೆ: ಕಹಾಮ/ಖರೀದಿ/ಟೆಂಡರ್-918/2026-27 ದಿನಾಂಕ. 08.06.2026

ಟೆಂಡರ್ ಪ್ರಕಟಣೆ (KMF/2026-27/SE5273)

ಕಹಾಮದ ನಂದಿನಿ ಹೈಟೆಕ್ ಉತ್ಪನ್ನ ಘಟಕ., ಚನ್ನರಾಯಪಟ್ಟಣ ಘಟಕದಿಂದ ಕರ್ನಾಟಕ ಹಾಗೂ ಇತರೆ ರಾಜ್ಯಗಳಿಗೆ ಯು.ಹೆಚ್.ಟಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಸಾಗಾಣಿಕಾ ಸೇವೆಗೆ 02 ವರ್ಷದ ಅವಧಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಯನ್ನು E-Proc ವೆಬ್‌ಸೈಟ್ https://kppp.karnataka.gov.in ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಸಹಾಯವಾಣಿ ಸಂ.8046010000/ 8068948777.

ಟೆಂಡರ್ ಶುರುವಾಗುವ ದಿನಾಂಕ - 08.06.2026, ಪೂರ್ವಬಾವಿ ಸಭೆ - 16.06.2026 ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಅಪ್‌ಲೋಡ್ ಮಾಡಲು ಕಡೆಯ ದಿನಾಂಕ -07.07.2026 ಸಂಜೆ 5.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ-08.07.2026 ಸಂಜೆ 5.05 ಘಂಟೆಗೆ, ವಾಣಿಜ್ಯ ಬಿಡ್ ತೆರೆಯುವ ದಿನಾಂಕ-ತಾಂತ್ರಿಕ ಟೆಂಡರ್ ವಿಶ್ಲೇಷಣೆಯ ನಂತರ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರ ಕಛೇರಿ, ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

ಸಂಖ್ಯೆ: ಎಸ್‌ಯುಪಿ(2)2/2026-27 ದಿನಾಂಕ: 08-06-2026

ಟೆಂಡರ್ ಅಧಿಸೂಚನೆ (ದ್ವಿ-ಲಕೋಟೆ ಪದ್ಧತಿಯಲ್ಲಿ)
(ಕೆಪಿಪಿ. ಕರ್ನಾಟಕ ಪೋರ್ಟಲ್ ಮುಖಾಂತರ ಮಾತ್ರ)

ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು, ಇಲ್ಲಿನ ವಿವಿಧ ವಿಭಾಗದ ರೋಗಿಗಳ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಬೇಕಾಗುವ equipments (DHFWS/2026-27/IND2504) ಗಳ ಟೆಂಡರ್ ಕರೆಯಲಾಗಿದೆ. ಕೆಪಿಪಿ. ಕರ್ನಾಟಕ ಪೋರ್ಟಲ್ ಮೂಲಕ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 19-06-2026 (ಮಧ್ಯಾಹ್ನ 4.30 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಸಂಪರ್ಕಿಸಲು ಕೋರಿದೆ.

ಸಹಿ/- ಸದಸ್ಯ ಕಾರ್ಯದರ್ಶಿ, ಆರೋಗ್ಯ ರಕ್ಷಾ ಸಮಿತಿ ಹಾಗೂ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಅಧೀಕ್ಷಕರು,
ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು

DIPR/DK/KSMCA/329/
26-27 dt. 08.06.2026

IN THE COURT OF CIVIL JUDGE & JMFC AT SIRUGUPPA
Criminal. Misc. No: 406/2026

Between:
K. Dodda Rangaswamy .....Petitioner
And
The Birth & Death Registrar Taluk Office, Siruguppa .....Respondent

TO WHOM SO EVER IT MAY CONCERN
NOTICE

WHEREAS the above named petitioner herein has instituted the above petition under section 13(3) of birth and death Registrar Act 1969 against the respondent for the purpose of seeking death certificate of petitioners Father K.H. Andyal Eranna S/o. Ganganna who was died on 24-05-2005 at the residence of the Petitioner.

Any person interested are hereby summoned to appear before this court in person or by pleader duly instructed and able to answer all material questions relating to the petition 10-06-2026 at 11.00 am before this court.

In default of your appearance on the date/day of above petition will be heard and determined as "Ex-part"

Given under my hand and seal of this court on this 8th day of June-2026.

By Order of the court,
Sd/- Sheristedar,
Civil Judge & JMFC Siruguppa.
Sd/- Shreedhar H.,
Advocates Siruguppa

CHANGE OF NAME

I, **SAYED AHAMED PATTEGAR** (Old Name) Resident of Arekoppa, Bachagaon, Husri, Sirsi, Uttara Kannada, Karnataka, India - 581402 (address), have changed my name as **SAYED AHAMAD MOHAMMED HANIF PATTEGAR** (New Name) for all purposes affidavit Dtd.: 06-06-2026 sworn before notary **Sadanand R. Bhat.**

CHANGE OF NAME

I, **PRAFULLA MALEKAR** (Old Name) Resident of 04, Santosh Apartment Vivekanand Nagar,4th Cross, Suvarna Petrl Pump, Dharwad - 580004 have changed my name as **PRAFULLA GURUNATH CHALMI** (New Name) henceforth I will be called and recognized by new name for all future purposes, dated: 08/06/2026.

ಕ್ರಿ.ಮಿ. ನಂ: 80/2026
ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ ಕಲಘಟಗಿ ಇವರಲ್ಲಿ
ಅರ್ಜಿದಾರ:ಶಿವಪುತ್ರಪ್ಪ ತಂದೆ ಸಿದ್ದಪ್ಪ ಬಡಿಗೇರ,
ವಿರುದ್ಧ
ಎದುರುಗಾರರು :ಮೇ॥ ತಹಶೀಲ್ದಾರರು ಹಾಗೂ ಜನನ ವ ಮರಣ ನೋಂದಣಿ ಅಧಿಕಾರಿಗಳು, ಕಲಘಟಗಿ, ಹಾಗೂ ಇನ್ನೊಬ್ಬರು.
ಸೂಚನೆ

ಮೇಲ್ಕಾಣಿಸಿದ ಪ್ರಕರಣವನ್ನು ಅರ್ಜಿದಾರನ ಸಹೋದರನಾದ ಈರಪ್ಪ ತಂದೆ ಸಿದ್ದಪ್ಪಬಡಿಗೇರ ಇವರು ದಿನಾಂಕ:16/04/2005 ರಂದು ಕಲಘಟಗಿ ತಾಲೂಕಿನ ಆರಳಿಹೊಂಡ ಗ್ರಾಮದಲ್ಲಿ ಮರಣ ಹೊಂದಿದ್ದು ಇರುತ್ತದೆ. ಸದರಿ ಮೃತನ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಸದರಿ ಪ್ರಕರಣವನ್ನು ಮಾನ್ಯ ದಿವಾಣಿ ನ್ಯಾಯಾ ಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾ ಲಯ ಕಲಘಟಗಿ ಇವರಲ್ಲಿ ದಾಖಲ ಮಾಡಿದ್ದು ಇರುತ್ತದೆ. ಸದರ ಪೋತಿಗೆ ಯಾರಾದರೂ ಸರಳ ವ ಸಮೀಪದ ವಾರಸುದಾರರು ಇದ್ದರೆ ಮತ್ತು ಅದಕ್ಕೆ ಯಾವುದೇ ರೀತಿಯ ತಕರಾರು ಇದ್ದಲ್ಲಿ ದಿನಾಂಕ: 22/06/2026 ರಂದು ಬೆಳಿಗ್ಗೆ 11-00 ಘಂಟೆಗೆ ತಮ್ಮ ತಮ್ಮ ತಕರಾರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರಪಡಿಸಬಹುದು ಇಲ್ಲದೇ ಇದ್ದ ಪಕ್ಷದಲ್ಲಿ, ಯಾರದು ತಕರಾರು ಇಲ್ಲವೆಂದು ಸದರಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು.
ಸ್ಥಳ: ಕಲಘಟಗಿ
ದಿನಾಂಕ: 08/06/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶೀರಸ್ತೆದಾರರು (ದಿವಾಣಿ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ಕಲಘಟಗಿ)
ಸಹಿ/- (ಎಸ್. ಆಯ್. ಕುಂಬಾರ)
ಅರ್ಜಿದಾರನ ಪರ ವಕೀಲರು

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

IN THE COURT OF THE CIVIL JUDGE & J.M.F.C. AT KUDLIGI
Crl. Misc. No.2318/2025

Between:
1) Dodda Ramappa son of late Kenchappa, aged about 75 years, 2) Thindappa J. son of late Kenchappa, aged about 73 years, 3) Smt. Thindamma. J D/o Late Kenchappa, aged about 70 years, 4) Smt. Shanthamma D/o Late Kenchappa, aged about 68 years, 5) Anandappa J. S/o Late Kenchappa, aged about 65 years, 6) Sanna Annadappa J. S/o Late Kenchappa, aged about 64 years, 7) Dodda Maliyappa J. S/o Late Kenchappa, aged about 63 years, 8) Sanna Maliyappa J. S/o Late Kenchappa, aged about 62 years, 9) Smt. Maliyamma J. D/o Late Kenchappa, aged about 45 years, 10) Smt. Ramakak J. D/o Late Kenchappa, aged about 44 years, All are Hindus, agriculturists, R/o Gangammanahalli village in Kottur Taluk, Vijaynagara Dist. .....Petitioners
And
The Tahasildar Kottur .....Respondent

SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.

Whereas the above petitioners have instituted above petition to get the death certificate of their deceased petitioner No.1 to 10's father by name Kenchappa S/o. Late Marappa was died on 19-07-2009 at Gangammanahalli village in Kottur Taluk, Vijaynagara Dist on the file of the civil Judge & JMFC at Kudligi, the Tahasildar Kottur is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 30-6-2026 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 8-6-2026.

"By Order of Court"
Sd/- Chief Ministerial Officer
Civil Judge (J.D.) Court at Kudligi
Sd/- J. Nagaraja, Advocate, Kudligi

CHANGE OF NAME

I, **SOPIYABI ABDULGANISAHEB KHALIFA** (Old Name) Resident of Shaha Bazar Bankapur 581202 (address) have changed my name as **SOPIYABI MATTUR** (New Name) henceforth I will be called and recognized by new name for all future purposes, dated: 08/06/2026.

ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಬದಾಮಿ ಇವರನ್ಯಾಯಾಲಯದಲ್ಲಿ
ಜಿ.&ಡಬ್ಲ್ಯೂ.ಸಿ.ನಂ.23/2026
1)ಬೆನ್ನಪ್ಪ ತಂ. ಹನಮಪ್ಪ ತುಳಸಿಗೇರಿ ಹಾಗೂ ಇತರರು ...ಅರ್ಜಿದಾರರು
-ವಿರುದ್ಧ-
1) ಯಾರು ಇಲ್ಲ ...ಎದುರುದಾರರು
ಸಾರ್ವಜನಿಕ ನೋಟಿಸು.

ಮೇಲ್ಕಾಣಿಸಿದ ಪ್ರಕರಣದಲ್ಲಿ ಅರ್ಜಿದಾರರ ಹೆಸರಿನಲ್ಲಿರುವ ಬದಾಮಿ ತಾಲೂಕ ಸೈಕಿ ಹೂಲಗೇರಿ ಗ್ರಾಮದಲ್ಲಿ ಜಮೀನು ರಿ.ಸ. ನಂ. 290/1 ಕ್ಷೇತ್ರ 00 ಎಕರೆ 27 ಗುಂಟೆ, ಆಕಾರ 0.77 ಪೈ, ಅಂತಾ ಇರುತ್ತದೆ. ಅರ್ಜಿದಾರ ನಂ. 11 ಮತ್ತು 12 ರವರ ಭವಿಷ್ಯದ ಕಲ್ಯಾಣಕ್ಕಾಗಿ ಅವರ ಶಿಕ್ಷಣ ವ ಪಾಲನೆ ಪೋಷಣೆಸಲುವಾಗಿ ಅವರ ಹಿಸ್ಸಾದ ಆಸ್ತಿಯನ್ನು ಮಾರಾಟ ಮಾಡಲು ಅರ್ಜಿದಾರ ನಂ.9ಇವರನ್ನು ಅರ್ಜಿದಾರ ನಂ. 11 ಮತ್ತು 12 ರವರ ಪಾಲನ ಕರ್ತರು ಅಂತಾ ನೇಮಕ ಮಾಡಲು ಮೇ॥ ನ್ಯಾಯಾಲಯದಿಂದ ಆದೇಶ ಕೋರಿ ಸದರ ಪ್ರಕರಣವನ್ನು ದಾಖಲಿಸಿರುತ್ತಾರೆ.

ಆದ್ದರಿಂದ ಸದರಿ ವಿಷಯದ ಸಂಬಂಧದಲ್ಲಿ ಯಾರಾದರೂ ಹಿತಾಸಕ್ತಿ ಉಳ್ಳವರು ಇದ್ದಲ್ಲಿ ದಿನಾಂಕ:25/07/2026 ರಂದು ಮೇ॥ ಹಿರಿಯ ದಿವಾಣಿ ನ್ಯಾಯಾಧೀಶರ ಬದಾಮಿ ಇವರ ನ್ಯಾಯಾಲಯದ ಮುಂದೆ ಹಾಜರಿದ್ದುತಾವಾಗಲಿ ತಮ್ಮ ವಕೀಲರ ಮುಖಾಂತರ ಆಗಲಿ ತಮ್ಮ ತಕರಾರುಗಳನ್ನು ಸಲ್ಲಿಸಬೇಕು.ಅದಕ್ಕೆ ತಪ್ಪಿದಲ್ಲಿ ಯಾರದೂ ಏನೂ ತಕರಾರು ಇರುವದಿಲ್ಲ ಅಂತಾ ಪರಿಗಣಿಸಿ ಮೇ॥ರವರು ಮುಂದಿನ ವಿಚಾರಣೆಯನ್ನು ಕೈಗೆತ್ತಿಕೊಳ್ಳುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸದರಿ ನೋಟಿಸನ್ನು ಇವತ್ತು ದಿನಾಂಕ:06/06/2026 ರಂದು ಮೇ॥ನ್ಯಾಯಾಲಯದ 'ಮುದ್ರೆ ಹಾಗೂ ಸಹಿಯೊಂದಿಗೆ ಕೊಡಲಾಗಿದೆ.
ಸ್ಥಳ: ಬದಾಮಿ
ದಿನಾಂಕ: 4/6/2026

ನ್ಯಾಯಾಲಯದ ಆಜ್ಞೆಯೊಂದಿಗೆ
ಸಹಿ\-ಶಿರಸ್ತೆದಾರರು
ಮೇ॥ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬದಾಮಿ
ಸಹಿ\-(ಎಮ್. ಬಿ. ಪೂಜಾರಿ)
ಅರ್ಜಿದಾರರ ಪರ ವಕೀಲರು

CHANGE OF NAME

I, **PREETI PAWAR** (Old Name) Resident of Near Gardimane Ward No 3 Gudur 587202 Bagalkot (address) have changed my name as **KOMAL HADIMANI** (New Name) henceforth I will be called and recognized by new name for all future purposes, dated: 08/06/2026.

ಕ್ರಿಮಿನಲ್ ಮಿಸ್ಲೆನಿಯಸ್:204/2026
ಮಾನ್ಯ 1ನೇ ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ.ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ
ಅರ್ಜಿದಾರ:1)ವರ್ಧಮಾನ ತಂದೆ ಆಲಮಪ್ಪ ತಮ್ಮಣ್ಣವರ ಹಾಗೂ ಇತರರು
ವಿರುದ್ಧ
ಎದುರುಗಾರರು: ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೋಂದಣಿ ವಿಭಾಗ,ತಹಶೀಲ್ದಾರ ಕಾರ್ಯಾಲಯ, ಧಾರವಾಡ

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ಸಹ ಕಲಂ 20ಮತ್ತು151 ನೇದ್ದರ ಅಡಿಯಲ್ಲಿ ಕೊಟ್ಟ ನೋಟಿಸು

ಇದರಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ಪೋತಿ 'ಶ್ರೀಮತಿ ಶಿವ್ವವ್ವ ಕೋಂ ಮಲ್ಲಪ್ಪ ತಮ್ಮಣ್ಣವರ'ಇವರ ಮರಣ ದಿನಾಂಕ ಮತ್ತು ಹೆಸರು ದಾಖಲು ಮಾಡುವ ಸಲುವಾಗಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ.

ಸದರಿ ಮೇಲ್ಕಾಣಿಸಿದ ಅರ್ಜಿಯಲ್ಲಿ ಎದುರುದಾರರಿಗೆ ಮಾನ್ಯ ನ್ಯಾಯಾಲಯದಿಂದ ಸಮನ್ಸ ವ ನೋಟಿಸು ಜಾರಿ ಮಾಡಿದ್ದು ಇರುತ್ತದೆ. ಆದ್ದರಿಂದ ಸದರಿ ಅರ್ಜಿಗೆ ಸಂಬಂದಪಟ್ಟಂತೆ ಯಾರಿಗಾದರು ಯಾವುದೆ ರೀತಿಯ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ:13/07/2026 ರ ಬೆಳಿಗ್ಗೆ 11.00 ಘಂಟೆಗೆ ಮಾನ್ಯ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು, ಒಂದು ವೇಳೆ ಗೈರು ಹಾಜರ ಆದಲ್ಲಿ ಮುಂದೆ ಕಾನೂನು ಪ್ರಕಾರ ಆದೇಶ ಮಾಡಲಾಗುವುದು.

2026 ರ ಜೂನ ತಿಂಗಳಿನ 6 ನೇ ಈ ದಿನದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.
ಸ್ಥಳ: ಧಾರವಾಡ
ದಿನಾಂಕ: 06/06/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ\-ಶಿರಸ್ತೇದಾರರು.
ಪ್ರಧಾನ ದಿವಾಣಿ ನ್ಯಾಯಾಧೀ ನ್ಯಾಯಾಲಯ ಧಾರವಾಡ
ಸಹಿ/-(ಎಮ್.ಪಿ.ಹುಜರತ್ತಿ)ಅರ್ಜಿದಾರರ ಪರ ವಕೀಲರು

ಕರ್ನಾಟಕ ಸರ್ಕಾರ
ತಾಲೂಕ ಪಂಚಾಯತ, ಶಿಗ್ಗಾಂವ ಜಿಲ್ಲಾ ಪಂಚಾಯತ, ಹಾವೇರಿ
ಗ್ರಾಮ ಪಂಚಾಯತ ಕಾರ್ಯಾಲಯ, ಕ್ಯಾಲಕೊಂಡ

ನಂ: ಗ್ರಾಪಂಕು/ನರೇಗಾ/ಸಾಮಗ್ರಿಖರೀದಿ/2025-26 ದಿನಾಂಕ: 03-06-2026

-: ಇ-ಪ್ರೋಕ್ಯೂಮೆಂಟ್ ಟೆಂಡರ್ ಪ್ರಕಟಣೆ :-

ಹಿರೇಮಲ್ಲೂರ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ಬೂದು ನೀರು ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು 2000ರ ಪ್ರಕಾರ ಅರ್ಹ ಪರವಾನಿಗೆ ಹೊಂದಿರುವ ವಿವಿಧ ಏಜೆನ್ಸಿಗಳಿಂದ ದರಪಟ್ಟಿ ಆಹ್ವಾನಿಸಿ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂಮೆಂಟ್ ಟೆಂಡರ ಕರೆಯಲಾಗಿದೆ.

ವೇಳಾ ಪಟ್ಟಿ

1	ಇ-ಪ್ರೋಕ್ಯೂಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ	:	RDPR/2026-27/BR/WORK_INDENT27117, RDPR/2026-27/CN/WORK_INDENT27110
2	ಟೆಂಡರ ಫಾರಂ ಬೆಲೆ	:	ಇ-ಪ್ರೋಕ್ಯೂಮೆಂಟ್‌ನಲ್ಲಿ ನಿಗಧಿಪಡಿಸಿದಂತೆ
3	ಇ-ಪ್ರೋಕ್ಯೂಮೆಂಟ್‌ನಲ್ಲಿ ಟೆಂಡರ ತೆರೆಯುವ ದಿನಾಂಕ	:	ದಿನಾಂಕ: 03-06-2026
4	ಇ-ಪ್ರೋಕ್ಯೂಮೆಂಟ್‌ನಲ್ಲಿ ಟೆಂಡರ ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ	:	ದಿನಾಂಕ: 17-06-2026 ಸಮಯ: ಸಂಜೆ 5.00 ಘಂಟೆಯೊಳಗೆ
5	ತಾಂತ್ರಿಕ ಟೆಂಡರ ತೆರೆಯುವ ದಿನಾಂಕ (ಬದಲಾವಣೆಗೆ ಒಳಪಟ್ಟಿರುತ್ತದೆ)	:	ದಿನಾಂಕ: 19-06-2026 ಸಮಯ: ಮುಂಜಾನೆ 11.00 ಘಂಟೆಗೆ
6	ಆರ್ಥಿಕ ಟೆಂಡರ ತೆರೆಯುವ ದಿನಾಂಕ (ಬದಲಾವಣೆಗೆ ಒಳಪಟ್ಟಿರುತ್ತದೆ)	:	ದಿನಾಂಕ: 19-06-2026 ಸಮಯ: ಮದ್ಯಾಹ್ನ 12.00 ಘಂಟೆಗೆ
7	ಟೆಂಡರನೊಂದಿಗೆ ಪಾವತಿಸ ಬೇಕಾದ ಇ.ಎಂ.ಡಿ ಮೊತ್ತ	:	ಇ-ಪ್ರೋಕ್ಯೂಮೆಂಟ್ ತಂತ್ರಾಂಶದ ಮೂಲಕ ಸಲ್ಲಿಸುವುದು
8	ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	:	ಕಛೇರಿ ವೇಳೆಯಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ, ಕ್ಯಾಲಕೊಂಡ ತಾ॥ ಶಿಗ್ಗಾಂವ, ಪೋನ್: 9164444206

ಸಹಿ/-
ಪಂಚಾಯತ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯತ, ಕ್ಯಾಲಕೊಂಡ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕೊಪ್ಪಳ

ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ, ಕೊಪ್ಪಳ, ಇ-ಮೇಲ್ : eepredkpl@gmail.com / eepredkpl1@gmail.com
ಸಂ.ಪಂರಾಇಂ/ ವಿಕೊ/ತಾ.ಶಾ/ಕಿ.ಇಂ/ಟೆಂಡರ/2026-27/498 ದಿನಾಂಕ: 08-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (5 ನೇ ಕರೆ)

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999-2000 ರ ಪಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆಡಬ್ಲ್ಯೂ-1, 2, 3 ಮತ್ತು 4ರ ಪಕಾರ ನಿಯಮ ಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ "ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2024-25ನೇ ಸಾಲಿನ ರಾಜ್ಯವಲಯ ಮುಂದುವರೆದ ಯೋಜನೆಯಡಿ ಕೊಪ್ಪಳ ಜಿಲ್ಲೆಯ ಸರಕಾರಿ ಶಾಲೆಗಳಲ್ಲಿ ಶಾಲಾ ಹೊಸ ಕೊಠಡಿಗಳ ನಿರ್ಮಾಣ (4202-01-201-1-08-422) ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು.

1) ಟೆಂಡರ್ ಪ್ರೊಸೆಸಿಂಗ್ ಶುಲ್ಕ: ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿರುವಂತೆ 2) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ: 06 ತಿಂಗಳು 3) ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: 11-06-2026 ಸಮಯ 10.00 ಗಂಟೆ ನಂತರ ದಿಂದ 18-06-2026 ಸಮಯ 16.00 ಗಂಟೆವರೆಗೆ 4) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: 11-06-2026 ಸಮಯ 10.00 ಗಂಟೆ ನಂತರ ದಿಂದ 18-06-2026 ಸಮಯ 16.30 ಗಂಟೆವರೆಗೆ 5) ಟೆಂಡರ್ ತಾಂತ್ರಿಕ & ಆರ್ಥಿಕ ಬಿಡ್ ತೆರೆಯುವ ದಿನಾಂಕ: 19-06-2026 ಕಚೇರಿ ಸಮಯದಲ್ಲಿ

<u>ಸಾಮಾನ್ಯ ಸೂಚನೆಗಳು:</u> 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ: 08539-220845 ರಿಂದ ಮಾಹಿತಿ ಪಡೆಯುವುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ http://eproc.karnataka.gov.in ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ: 10-06-2026 ರ ನಂತರ ದಿಂದ Download ಮಾಡಿಕೊಳ್ಳಬಹುದಾಗಿದೆ.

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/144/ಮಣಿಪಾಲ್/2026-27

ಕಿರುಸುದ್ದಿ

ಕರ್ತವ್ಯ ಲೋಪ: ವಾರ್ಡನ್ ಅಮಾನತು

◆ **ವಿಜಯನಗರ:** ಕರ್ತವ್ಯ ಲೋಪ ಎಸಗಿದ ಹೂವಿನಹಡಗಲಿ ಪಟ್ಟಣದ ಸರ್ಕಾರಿ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದ ವಾರ್ಡನ್ ಮಂಜುಳಾ ತಂಬ್ರಹಳ್ಳಿ ಅವರನ್ನು ಸೇವೆಯಿಂದ ಅಮಾನತು ಮಾಡಿ ಜಿಲ್ಲಾ ಪಂಚಾಯತಿಯ ಸಿಇಓ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಮ್ ಷಾ ಆದೇಶಿಸಿದ್ದಾರೆ. ನಿಲಯ ಪಾಲಕಿ ಮಂಜುಳ ತಂಬ್ರಹಳ್ಳಿ ವಿದ್ಯಾರ್ಥಿ ನಿಲಯದಿಂದ ಅಕ್ರಮವಾಗಿ ಅಕ್ಕಿ ಸಾಗಾಟ ಮಾಡಲಾಗುತ್ತಿದೆ ಎಂದು ಕೆಆರ್‌ಎಸ್ ಪಕ್ಷದ ಪದಾಧಿಕಾರಿಗಳು ನೀಡಿದ ಮೌಖಿಕ ದೂರಿನ ಮೇರೆಗೆ ಹಡಗಲಿ ತಾಲೂಕು ಪಂಚಾಯತಿ ಆಡಳಿತಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿಗಳು ಜಂಟಿಯಾಗಿ ವಸತಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಈ ವೇಳೆ ಬೇರೆಡೆಗೆ ಅಕ್ರಮವಾಗಿ ಸಾಗಿಸಲಾಗಿದ್ದ ಅಕ್ಕಿ ದಾಸ್ತಾನನ್ನು ಪುನಃ ವಸತಿ ನಿಲಯಕ್ಕೆ ತಂದಿಟ್ಟಿರುವುದು ಕಂಡುಬಂದಿದೆ. ನಿಲಯಕ್ಕೆ ನೀಡಲಾಗಿದ್ದ ವಾಷಿಂಗ್ ಮಷಿನ್ ಅನ್ನು ನಿಯಮಾನುಸಾರ ವಿಲೇವಾರಿ ಮಾಡದೆ ಗುಜರಿಗೆ ಮಾರಾಟ ಮಾಡಲಾಗಿದೆ. ನಿಲಯದಲ್ಲಿದ್ದ ಗ್ಯಾಸ್ ಸಿಲಿಂಡರ್ ಸಹ ಕಳ್ಳತನವಾಗಿರುವುದು ತನಿಖೆಯಿಂದ ಬೆಳಕಿಗೆ ಬಂದಿದೆ. ಈ ಎಲ್ಲಾ ಲೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು 1966ರ ನಿಯಮ-3ನ್ನು ಉಲ್ಲಂಘಿಸಿದ ಆರೋಪದ ಮೇಲೆ ವಾರ್ಡನ್ ಮಂಜುಳ ತಂಬ್ರಹಳ್ಳಿ ಅವರನ್ನು ಅಮಾನತುಗೊಳಿಸಿ ಶಿಸ್ತು ಕ್ರಮ ಜರುಗಿಸಲಾಗಿದೆ ಎಂದು ತಿಳಿಸಿದ್ದಾರೆ.

ಸಹೋದರರು ನೀರುಪಾಲು

◆ **ಬೆಳಗಾವಿ/ಮೂಡಲಗಿ:** ಜಿಲ್ಲೆಯ ಮೂಡಲಗಿ ತಾಲೂಕಿನ ಧರ್ಮಟ್ಟಿ ಗ್ರಾಮದಲ್ಲಿ ಹಳ್ಳದಲ್ಲಿ ಈಜಲು ತೆರಳಿದ್ದ ಅಣ್ಣ-ತಮ್ಮ ಇಬ್ಬರು ನೀರುಪಾಲಾಗಿರುವ ಘಟನೆ ನಡೆದಿದೆ. ಮೃತರನ್ನು ಸಾಗರ ಬಾಬು ಮಾದರ (15) ಹಾಗೂ ಪ್ರವೀಣ ಬಾಬು ಮಾದರ (13) ಎಂದು ಗುರುತಿಸಲಾಗಿದೆ. ಶನಿವಾರ ಮಧ್ಯಾಹ್ನ ಇಬ್ಬರೂ ಗ್ರಾಮದ ಪಂಚಾಯಿತಿ ವ್ಯಾಪ್ತಿಯ ಹಳ್ಳದ ಬಳಿ ತೆರಳಿದ್ದರು. ಈ ವೇಳೆ ತಮ್ಮ ಪ್ರವೀಣ ನೀರಿಗೆ ಇಳಿದಾಗ



ಮುಳುಗಲು ಆರಂಭಿಸಿದ್ದಾನೆ ಎನ್ನಲಾಗಿದೆ. ಅವನನ್ನು ರಕ್ಷಿಸಲು ಅಣ್ಣ ಸಾಗರ ಕೂಡ ನೀರಿಗೆ ಇಳಿದಿದ್ದಾನೆ. ಆದರೆ, ಇಬ್ಬರಿಗೂ ಈಜು ಬಾರದ ಕಾರಣ ಇಬ್ಬರೂ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆಯು ತಡವಾಗಿ ಬೆಳಕಿಗೆ ಬಂದಿದೆ ಎನ್ನಲಾಗಿದೆ. ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದ್ದು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಮೃತ ಬಾಲಕರ ಕುಟುಂಬಕ್ಕೆ ಗ್ರಾಮಸ್ಥರು ಹಾಗೂ ಸಾರ್ವಜನಿಕರು ಸಂತಾಪ ಸೂಚಿಸಿದ್ದಾರೆ. ಈ ಘಟನೆಯ ಕುರಿತು ಮೂಡಲಗಿ ಪೊಲೀಸ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಮಗು ಸಾವು

◆ **ಬಾಗಲಕೋಟೆ:** ನವನಗರದ ಸೆಕ್ಟರ್ ನಂ.38ರಲ್ಲಿ ಎದುರಿನ ಮನೆಯ ನೆಲದ ಟ್ಯಾಂಕ್‌ನಲ್ಲಿ ಮಗುವೊಂದು ಬಿದ್ದು ಮೃತಪಟ್ಟ ಘಟನೆ ನಡೆದಿದೆ. ಮೃತಪಟ್ಟ ಮಗು ಅಮೀನಾ ಪಠಾಣ್ (18 ತಿಂಗಳು) ಎಂದು ಗುರುತಿಸಲಾಗಿದೆ. ಮಗು ಮೃತಪಟ್ಟಿದ್ದರೂ ಹೇಗಾದರೂ ಮಾಡಿ ಬದುಕಿಸಬೇಕು ಎಂದು ಪೋಷಕರು ಮಾಡಿದ ವಿಲಕ್ಷಣ ಪ್ರಯತ್ನ ಇಡೀ ಜಿಲ್ಲಾ ಆಸ್ಪತ್ರೆಯನ್ನೇ ಕಣ್ಣೀರಿನಲ್ಲಿ ಮುಳುಗಿಸಿತು. ಮಗು ನೀರಿನಲ್ಲಿ ಮುಳಗಿ ಮೃತಪಟ್ಟ ತಕ್ಷಣ ಮೃತದೇಹವನ್ನು ಉಪ್ಪಿನಲ್ಲಿ ಮುಳುಗಿಸಿ ಇಟ್ಟರೆ ಮಗು ಮತ್ತೆ



ಬದುಕಿ ಬರುತ್ತದೆ ಎಂಬ ಮೂಢನಂಬಿಕೆ ಪೋಷಕರಲ್ಲಿ ಮನೆ ಮಾಡಿತ್ತು. ಈ ನಂಬಿಕೆಯಿಂದ ಪೋಷಕರು ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯ ಶವಾಗಾರದ ಮುಂಭಾಗದಲ್ಲೇ ಮಗುವಿನ ಮುಖವನ್ನು ಮಾತ್ರ ಹೊರಗೆ ಇಟ್ಟು ಇಡೀ ದೇಹವನ್ನು ಉಪ್ಪಿನ ರಾಶಿಯಲ್ಲಿ ಮುಳುಗಿಸಿ ಇಟ್ಟಿದ್ದರು. ಮಗುವಿಗೆ ಉಪ್ಪನ್ನು ಹಾಕಿ ಕೂರಿಸಿದ್ದಲ್ಲೇ ಆಕೆಯ ಕಿವಿಯ ಬಳಿ ಮೊಬೈಲ್ ಇಟ್ಟು ಅದರಲ್ಲಿ ಕುರಾನ್ ಪವಿತ್ರ ವಚನಗಳನ್ನು ಪ್ಲೇ ಮಾಡಿದ್ದರು. ಕುರಾನ್ ಧ್ವನಿ ಕೇಳಿ ಮತ್ತು ಉಪ್ಪಿನ ಪ್ರಭಾವದಿಂದ ಮಗು ಮರಳಿ ಉಸಿರಾಡಬಹುದು ಎಂದು ಪೋಷಕರು ಭಾವುಕರಾಗಿ ಪ್ರಾರ್ಥಿಸುತ್ತಾ ಕುಳಿತಿದ್ದ ದೃಶ್ಯ ನೆರೆದವರ ಕಣ್ಣಾಲಿಗಳಲ್ಲಿ ತುಂಬಿ ಹರಿಯುವಂತೆ ಮಾಡಿತು. ಘಟನಾ ಸ್ಥಳಕ್ಕೆ ನವನಗರ ಪೊಲೀಸ್‌ರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಗುವನ್ನು ಕಳೆದುಕೊಂಡ ಕುಟುಂಬಸ್ಥರು ಆಕ್ರಂದನ ಮುಗಿಲು ಮುಟ್ಟಿತು.

ಮಳೆ ಬಂದರೆ ಸಾಕು ಮನೆಗಳೇ ಕೆರೆ | ನಿವಾಸಿಕರ ಆಕ್ರೋಶ

ಹರಿಯುವ ನೀರಿನಲ್ಲೇ ಯುವಕನ ಪ್ರತಿಭಟನೆ

◆ **ಬೈಲಹೊಂಗಲ:** ಸೋಮವಾರ ಮಧ್ಯಾಹ್ನ ಸುರಿದ ಧಾರಾಕಾರ ಮಳೆ ಕೆಲವರಿಗೆ ತಂಪು ತಂದರೆ, ನಗರದ ಹೊಸ ಬಸ್ ನಿಲ್ದಾಣದ ಹಿಂಭಾಗದ ನಿವಾಸಿಗಳಿಗೆ ಅದು ಮತ್ತೆ ದುಃಖ, ಆತಂಕ ಮತ್ತು ಸಂಕಷ್ಟದ ದಿನಗಳನ್ನು ನೆನಪಿಸಿತು.

ಮಳೆ ನೀರು ಮನೆಗಳಿಗೆ ನುಗ್ಗಿ ಜೀವನ ಅಸ್ತವ್ಯಸ್ತಗೊಂಡ ಹಿನ್ನೆಲೆಯಲ್ಲಿ ಸ್ಥಳೀಯ ಯುವಕನೊಬ್ಬ ರಭಸವಾಗಿ ಹರಿಯುತ್ತಿದ್ದ ನೀರಿನಲ್ಲೇ ಕುಳಿತು ಪ್ರತಿಭಟನೆ ನಡೆಸಿದ ದೃಶ್ಯ ಸಾರ್ವಜನಿಕರ ಮನಕಲಕುವಂತಿತ್ತು.

ಕುಲಕರ್ಣಿ ಗಲ್ಲಿ, ಪಾಟೀಲ ಗಲ್ಲಿ, ಕೋಲಕಾರ ಗಲ್ಲಿ ಹಾಗೂ ಸಂಗೊಳ್ಳಿ ಅವರ ಮನೆ ಸಮೀಪದ ಪ್ರದೇಶಗಳಲ್ಲಿ ಮಳೆ ಬಂದಾಗಲೆಲ್ಲ ಮನೆಗಳೇ ಜಲಾವೃತವಾಗುತ್ತಿವೆ. ಹಲವು ವರ್ಷಗಳಿಂದ ಈ ಸಮಸ್ಯೆ ಮುಂದುವರಿದಿದ್ದರೂ ಶಾಶ್ವತ ಪರಿಹಾರ ಸಿಗದ ಕಾರಣ ಜನರ ಆಕ್ರೋಶ ಇದೀಗ ಪ್ರತಿಭಟನೆಯ ರೂಪ ಪಡೆದಿದೆ.

ಸ್ಥಳೀಯರ ಪ್ರಕಾರ, ಹೊಸ ಬಸ್ ನಿಲ್ದಾಣ ನಿರ್ಮಾಣಕ್ಕೂ ಮುನ್ನ ಮಳೆ ನೀರು ಖಾಲಿ ಜಾಗಗಳಲ್ಲಿ



ಇಂಗಿ ಹೋಗುತ್ತಿತ್ತು. ಆದರೆ, ಬಸ್ ನಿಲ್ದಾಣ ನಿರ್ಮಾಣದ ಬಳಿಕ ನೀರಿನ ಸಹಜ ಹರಿವಿನ ಮಾರ್ಗ ಬದಲಾಗಿದ್ದು, ಸಮರ್ಪಕ ಚರಂಡಿ ವ್ಯವಸ್ಥೆ ನಿರ್ಮಿಸದ ಕಾರಣ ಅಪಾರ ಪ್ರಮಾಣದ ಮಳೆ ನೀರು ನೇರವಾಗಿ ಮನೆಗಳತ್ತ ಹರಿದು ಬರುತ್ತಿದೆ. ಪರಿಣಾಮವಾಗಿ ಪ್ರತಿ ಮಳೆಯಲ್ಲೂ ಮನೆಗಳ ಒಳಗೆ ನೀರು ನಿಂತು ದವಸ-ಧಾನ್ಯ, ಪೀಠೋಪಕರಣ, ವಿದ್ಯುತ್ ಉಪಕರಣಗಳು ಸೇರಿದಂತೆ ಲಕ್ಷಾಂತರ ರೂಪಾಯಿ ಮೌಲ್ಯದ ಆಸ್ತಿ ಹಾನಿಯಾಗುತ್ತಿದೆ.

ಮಳೆ ಬರುತ್ತಿದೆ ಎಂದರೆ ನಮಗೆ ಭಯ ಶುರುವಾಗುತ್ತದೆ. ಮನೆಗೆ ನೀರು ನುಗ್ಗದಂತೆ ತಡೆಯುವುದೇ ನಮ್ಮ ಕೆಲಸವಾಗುತ್ತದೆ. ಅಧಿಕಾರಿಗಳು ಬರುತ್ತಾರೆ, ಪರಿಶೀಲನೆ ನಡೆಸುತ್ತಾರೆ, ಭರವಸೆ ಕೊಡುತ್ತಾರೆ. ಆದರೆ, ಸಮಸ್ಯೆ ಮಾತ್ರ ಹಾಗೆಯೇ ಉಳಿದಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದರು.

ಹರಿಯುವ ನೀರಿನಲ್ಲೇ ಕುಳಿತು ಪ್ರತಿಭಟನೆ ನಡೆಸಿದ ಯುವಕ ಮಾತನಾಡಿ, ನಾವು ತೆರಿಗೆ ಕಟ್ಟುತ್ತೇವೆ. ಆದರೆ, ಕನಿಷ್ಠ ಮೂಲಭೂತ ಸೌಲಭ್ಯಗಳಿಗಾಗಿ ಕೂಡ ಹೋರಾಟ ಮಾಡಬೇಕಾದ ಸ್ಥಿತಿ ಬಂದಿದೆ. ನಮ್ಮ ನೋವು ಅಧಿಕಾರಿಗಳಿಗೆ ಅರ್ಥವಾಗಬೇಕೆಂದರೆ ಇದೇ ದಾರಿ ಉಳಿದಿತ್ತು ಎಂದು ಬೇಸರ ವ್ಯಕ್ತಪಡಿಸಿದನು.

ಭಾರೀ ಮಳೆಗೆ ತುಂಬಿ ಹರಿದ ಹಳ್ಳ-ಕೊಳ್ಳಗಳು

◆ **ಸವದತ್ತಿ:** ನಗರದಲ್ಲಿ ಮಧ್ಯಾಹ್ನ 3 ಗಂಟೆಗೆ ಪ್ರಾರಂಭವಾದ ಭಾರೀ ಮಳೆಯಿಂದ ಸವದತ್ತಿ ನಗರ ಹಾಗೂ ಸುತ್ತಮುತ್ತಲಿನ ಗುಡ್ಡಗಳು, ಹಳ್ಳ-ಕೊಳ್ಳಗಳು ತುಂಬಿ ಹರಿದಿವೆ.

ನಗರದ ಮುಖ್ಯ ಕಾಲುವೆ ಆನೆ ಅಗಸಿ ಹಿಂಭಾಗದ ಹಳ್ಳವು ಸಂಪೂರ್ಣವಾಗಿ ತುಂಬಿದ್ದರಿಂದ ಹಳ್ಳದ ಪಕ್ಕದಲ್ಲಿರುವ ಮುಖಾಸಿ ಓಣಿ ಆನೆ ಅಗಸಿ ಮತ್ತು ಆನೆ ಅಗಸೆಯಿಂದ ಕಡಕೋಳ ಬ್ಯಾಂಕ್ ಸರ್ಕಲ್ ತಲುಪುವ ರಸ್ತೆ ಮಾರ್ಗದಲ್ಲಿ ಕೆಲವು ದ್ವಿಚಕ್ರ ವಾಹನಗಳು ಕೊಚ್ಚಿ ಹೋಗಿವೆ. ಅಲಾರಿಕಿ ಓಣಿಯ ಮನೆಗಳಿಗೆ ನೀರು ನುಗ್ಗಿದೆ. ಅತಿ ಹೆಚ್ಚಾಗಿ ಮಳೆಯಾಗಿದ್ದರಿಂದ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ನಗರದ ಬಹಳಷ್ಟು ಮನೆಗಳು ಗೋಡೆಗಳು ಸಂಪೂರ್ಣವಾಗಿ ನೆನೆದು ಹೋಗಿದ್ದು, ರಸ್ತೆ ಪಕ್ಕದ ಅಂಗಡಿಗಳಿಗೂ ಕೂಡ ನೀರು ಒಳ ನುಗ್ಗಿದೆ. ಸಮೀಪದ ಸಿದ್ದನಕೊಳ್ಳ ಕಮಾನ್ ಗೇಟ್ ಹತ್ತಿರ ಬರುವ ಕೊಳ್ಳವು ತುಂಬಿ ಹರಿಯಿತು.



ಮಹಾಬಲೇಶ್ವರ ಮಂದಿರದ ಗರ್ಭ ಗುಡಿಗೆ ನುಗ್ಗಿದ ಮಳೆ ನೀರು

◆ **ಗೋಕರ್ಣ:** ಸಂಗಮ ನಾಲಾ ಸಮುದ್ರ ಸೇರುವ ಸ್ಥಳದಲ್ಲಿ ಮರಳು ತುಂಬಿ ದಿಬ್ಬವಾದ ಪರಿಣಾಮ ಭಾರೀ ಮಳೆಯಿಂದ ಹೆಚ್ಚಿನ ಪ್ರಮಾಣದ ನೀರು ಸಂಗ್ರಹವಾಗಿ ಮುಂದೆ ಹೋಗದೆ ಸೋಮಸೂತ್ರದ ಮೂಲಕ ಮಹಾಬಲೇಶ್ವರ ಮಂದಿರದ ಗರ್ಭ ಗುಡಿಗೆ ನುಗ್ಗಿದ ಘಟನೆ ಸೋಮವಾರ ನಡೆದಿದೆ.

ಸುರಿದ ಭಾರೀ ಮಳೆಯಿಂದ ಮಧ್ಯಾಹ್ನ ನೀರು ಒಳ ಪ್ರವೇಶಸಲು ಪ್ರಾರಂಭವಾಗಿತ್ತು. ಇದರಿಂದ ಭಕ್ತರಿಗೆ ದೇವರ ಸ್ಪರ್ಶ ದರ್ಶನಕ್ಕೆ ಅವಕಾಶವಿರಲಿಲ್ಲ. ನಂದಿ ಮಂಟಪದಿಂದ ಹೊರಗಡೆ ದರ್ಶನಕ್ಕೆ ವ್ಯವಸ್ಥೆ ಮಾಡಿಕೊಡಲಾಗಿತ್ತು. ಮಧ್ಯಾಹ್ನದ ಮಹಾಪೂಜೆ ಸಹ ನಿತ್ಯ ಸಮಯಕ್ಕಿಂತ ವಿಳಂಬವಾಗಿ ನಡೆಯಿತು.

ವ್ಯವಸ್ಥಾಪಕರು ಹಾಗೂ ಮಂದಿರದ ಸಿಬ್ಬಂದಿಗಳು ಪಂಪ್ ಮೂಲಕ ನೀರು ಹೊರ ಹಾಕಲು ಶ್ರಮವಹಿಸಿದ್ದು, ನಂತರ ದೇವಾಲಯದವರೇ ಜೆಸಿಬಿ ತಂದು ಸಂಗಮ ಸಮುದ್ರ ಸೇರುವ ಜಾಗದಲ್ಲಿ ಮರಳು ದಿಬ್ಬವನ್ನ ಬಿಡಿಸಿ ಕೊಟ್ಟು ನೀರು ಸರಾಗವಾಗಿ ಹೋಗುವಂತೆ ಮಾಡಿಕೊಟ್ಟಿದ್ದಾರೆ. ಸಂಜೆ ಭಕ್ತರಿಗೆ ಪೂಜಾ ಸೇವೆಗಳನ್ನ ಬಂದ್ ಮಾಡಲಾಗಿತ್ತು.

ಪ್ರತಿ ವರ್ಷ ಮಳೆಗಾಲದಲ್ಲಿ ಸಮುದ್ರ ಭರತವಿದ್ದಾಗ (ಅಬ್ಬರ ಹೆಚ್ಚಾದಾಗ) ವಿವಿಧ ಕಡೆಯ ಮಳೆ ನೀರು ಹಾಗೂ ರಸ್ತೆಗಳ ಚರಂಡಿ ನೀರು ಒಟ್ಟಾಗಿ ಸಮುದ್ರ ಸೇರುವ ಸಂಗಮ ನಾಲಾ ಸೇರುವ ಪ್ರದೇಶದಲ್ಲಿ ಅಲೆ ಆರ್ಭಟಕ್ಕೆ ಮರಳು ತುಂಬುತ್ತದೆ.



ಗ್ರಾಪಂ ನಿರ್ಲಕ್ಷ್ಯ: ಆರೋಪ

ಪ್ರತಿ ವರ್ಷ ಮಳೆಗಾಲದ ಸಮಯದಲ್ಲಿ ಸಮುದ್ರ ಸಂಗಮನಾಲಾ ಸಮುದ್ರ ಸೇರುವಲ್ಲಿ ಮರಳು ತುಂಬಿ ಮುಚ್ಚುತ್ತದೆ. ಇದನ್ನ ಮುಂಚಿತವಾಗಿ ಬಿಡಿಸಿ ಕೊಡುವ ಕಾರ್ಯ ಮಾಡಬೇಕಿತ್ತು. ಆದರೆ, ಪ್ರತಿ ವರ್ಷ ಇದನ್ನ ನಿರ್ಲಕ್ಷಿಸುತ್ತಾ ಬಂದಿರುವುದು ಈ ಅವಾಂತರಕ್ಕೆ ಕಾರಣ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಇದರಿಂದ ನೀರು ನಿಂತು ಇದೇ ನಾಲಾ ಸೇರುವ ದೇವಾಲಯದ ತೀರ್ಥ ಬರುವ ಸೋಮಸೂತ್ರ ಸಾಲಾದಲ್ಲಿ ವಾಪಸ ಆಗಿ ಒಳಗೆ ನುಗ್ಗುತ್ತದೆ. ಕಳೆದ ವರ್ಷ ಮಾತ್ರ ಜಡಿಕಂಬಿ ಭಾಗದ ಹಳ್ಳದ ಹೂಳೆತ್ತುವಾಗ ಈ ಸೋಮಸೂತ್ರಕ್ಕೆ ನೀರು ನುಗ್ಗದಂತೆ ಆ ಸ್ಥಳದಲ್ಲಿ ಗುತ್ತಿಗೆದಾರರು ಆಳ ಮಾಡಿಕೊಟ್ಟಿದ್ದರಿಂದ ನೀರು ಒಳಗೆ ಬರಲಿಲ್ಲ, ಆದರೆ, ಈ ಬಾರಿ ಮತ್ತೆ ಮಣ್ಣು ತುಂಬಿದೆ.

ಬೈಲಹೊಂಗಲದಲ್ಲಿ ಧಾರಾಕಾರ ಸುರಿದ ಮಳೆ

◆ **ಬೈಲಹೊಂಗಲ:** ಸೋಮವಾರ ಮಧ್ಯಾಹ್ನ ಏಕಾಏಕಿ ಸುರಿದ ಧಾರಾಕಾರ ಮಳೆಯು ಬೈಲಹೊಂಗಲ ಪಟ್ಟಣದ ಜನಜೀವನ ಅಸ್ತವ್ಯಸ್ತಗೊಳಿಸಿತು. ಕೆಲವೇ ನಿಮಿಷಗಳಲ್ಲಿ ಸುರಿದ ಮೇಘ ಸ್ಫೋಟದಂತ ಮಳೆಯಿಂದ ಪ್ರಮುಖ ರಸ್ತೆಗಳು ನದಿಯಂತೆ ಮಾರ್ಪಟ್ಟರೆ, ತಗ್ಗು ಪ್ರದೇಶಗಳ ನಿವಾಸಿಗಳು ಸಂಕಷ್ಟಕ್ಕೆ ಸಿಲುಕಿದರು.

ಹರಳಯ್ಯ ಕಾಲೋನಿಯ ಹಲವು ಮನೆಗಳಿಗೆ ಮಳೆ ನೀರು ನುಗ್ಗಿದ ಪರಿಣಾಮ ಮಹಿಳೆಯರು ಹಾಗೂ ಕುಟುಂಬಸ್ಥರು ಪಾತ್ರೆ, ಬಕೆಟ್‌ಗಳ ಸಹಾಯದಿಂದ ನೀರನ್ನು ಹೊರಹಾಕಲು ಹರಸಾಹಸ ಪಟ್ಟರು. ಬಸ್ ನಿಲ್ದಾಣದ ಬಳಿ ನಿಲ್ಲಿಸಿದ್ದ ಕೆಲವು ದ್ವಿಚಕ್ರ ವಾಹನಗಳು ನೀರಿನ ಸೆಳೆತಕ್ಕೆ ಕೊಚ್ಚಿ ಹೋಗಿರುವ ಘಟನೆ ವರದಿಯಾಗಿದೆ. ನಗರ ನ್ಯಾಯಾಲಯದ ಹಿಂಭಾಗದಲ್ಲಿ ಬೃಹತ್ ಮರವೊಂದು ವಿದ್ಯುತ್ ಕಂಬದ ಮೇಲೆ ಉರುಳಿಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ನಗರದ ಬಹುತೇಕ ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿಯದ ಕಾರಣ ರಸ್ತೆ ಮೇಲೆಯೇ ಹೊಳೆಯಂತೆ ಹರಿಯಿತು.

ಬೆಳಗಾವಿ ರಸ್ತೆಯ ಗ್ರಂಥಾಲಯದಿಂದ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಒಂದು ಬದಿಯ ರಸ್ತೆ ಸಂಪೂರ್ಣ ಜಲಾವೃತಗೊಂಡು ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಒಂದೇ ಮಾರ್ಗದಲ್ಲಿ ವಾಹನಗಳ ಸಂಚಾರ ನಡೆದ ಪರಿಣಾಮ ದಟ್ಟಣೆ ಉಂಟಾಗಿ ವಾಹನ ಸವಾರರು ಪರದಾಡುವಂತಾಯಿತು.

ಅಮಟೂರ ಬಾಳಪ್ಪ ವೃತ್ತ, ಇಂಚಲ ರಸ್ತೆ, ದೀಪಾ ಹೋಟೆಲ್ ಸನಿಹ ಹಾಗೂ ರಾಯಣ್ಣ ವೃತ್ತ ಪ್ರದೇಶಗಳಲ್ಲಿ ಪಾದಚಾರಿಗಳು



ಮತ್ತು ವಾಹನ ಸವಾರರು ನೀರಿನ ನಡುವೆ ಸಂಚರಿಸಲು ಹರಸಾಹಸ ಪಟ್ಟರು. ಸೋಮವಾರಪೇಟೆ ಹಾಗೂ ತರಕಾರಿ ಮಾರುಕಟ್ಟೆಯಲ್ಲಿ ನೀರಿನ ಸೆಳೆತ ಹೆಚ್ಚಾದ ಪರಿಣಾಮ ವ್ಯಾಪಾರಿಗಳು ಮಾರಾಟಕ್ಕೆ ಇಟ್ಟಿದ್ದ ತರಕಾರಿ ಹಾಗೂ ಹಣ್ಣುಗಳು ನೀರಿನಲ್ಲಿ ತೇಲಿ ಹೋಗಿ ನಷ್ಟ ಅನುಭವಿಸಿದರು.

ಬಜಾರ್ ರಸ್ತೆಯ ಹಲವು ಅಂಗಡಿಗಳಿಗೆ ನೀರು ನುಗ್ಗಿದ ಪರಿಣಾಮ ವ್ಯಾಪಾರಿಗಳಿಗೆ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ ಎಂದು ತಿಳಿದುಬಂದಿದೆ. ಒಂದೆಡೆ ಬೇಸಿಗೆಯ ಉರಿಬಿಸಿಲಿನಿಂದ ಕಂಗೆಟ್ಟಿದ್ದ ಜನತೆಗೆ ಮಳೆಯು ತಂಪು ತಂದಿದ್ದರೂ, ಮತ್ತೊಂದೆಡೆ ನಗರದ ಅವ್ಯವಸ್ಥಿತ ಚರಂಡಿ ವ್ಯವಸ್ಥೆ ಹಾಗೂ ಮಳೆ ನೀರು ನಿರ್ವಹಣೆಯ ಕೊರತೆ ಮತ್ತೊಮ್ಮೆ ಬಹಿರಂಗವಾಗಿದೆ. ಮಳೆಗಾಲದ ಆರಂಭದಲ್ಲೇ ಎದುರಾದ ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಚರಂಡಿಗಳ ಸ್ವಚ್ಛತೆ, ಮಳೆ ನೀರು ನಿರ್ವಹಣೆ ಹಾಗೂ ತುರ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸಂಸದ ಕಾಗೇರಿ ಪ್ರಯತ್ನಕ್ಕೆ ಯಶಸ್ಸು

ಕಾರವಾರ-ಮಡಗಾಂವ್ ರೈಲು ಸೇವೆ ಖಾಯಂ

◆ **ಶಿರಸಿ:** ಕಾರವಾರ ಮತ್ತು ಮಡಗಾಂವ್ ನಡುವೆ ಸಂಚರಿಸುತ್ತಿದ್ದ ವಿಶೇಷ ರೈಲನ್ನು ಇನ್ನು ಮುಂದೆ ಖಾಯಂ ಸೇವೆಯನ್ನಾಗಿ ಪರಿವರ್ತಿಸಲು ರೈಲ್ವೆ ಮಂಡಳಿ ಆದೇಶ ಹೊರಡಿಸಿದೆ ಎಂದು ಸಂಸದರ ಕಚೇರಿ ತಿಳಿಸಿದೆ.

ಕಾರವಾರ ಭಾಗದ ಸಾರ್ವಜನಿಕರು ಹಾಗೂ ರೈಲ್ವೆ ಪ್ರಯಾಣಿಕರ ಬಹುದಿನಗಳ ಬೇಡಿಕೆಯಾಗಿದ್ದ ಈ ರೈಲು ಸೇವೆಯನ್ನು ಖಾಯಂಗೊಳಿಸುವಂತೆ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ರೈಲ್ವೆ ಸಚಿವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿ ಒತ್ತಾಯಿಸಿದ್ದರು. ಸಂಸದರ ಈ ಪ್ರಯತ್ನಕ್ಕೆ ರೈಲ್ವೆ ಇಲಾಖೆಯಿಂದ ಹಸಿರು ನಿಶಾನೆ ಸಿಕ್ಕಿದ್ದು, ಈ ಯಶಸ್ಸಿಗೆ ಸಂಸದರು ತೀವ್ರ ಸಂತಸ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ ವಿಶೇಷ ರೈಲು ಸಂಖ್ಯೆ 01595/01596 ಆಗಿ ಸಂಚರಿಸುತ್ತಿದ್ದ ಈ ಸೇವೆಯನ್ನು, ಇನ್ನು ಮುಂದೆ ಹೊಸದಾಗಿ ರೈಲು ಸಂಖ್ಯೆ 10109/10110 ಮಡಗಾಂವ್-ಕಾರವಾರ-ಮಡಗಾಂವ್ ಎಕ್ಸ್‌ಪ್ರೆಸ್ ರೈಲನ್ನಾಗಿ ಪ್ರತಿದಿನ ನಿಯಮಿತವಾಗಿ ಓಡಿಸಲಾಗುತ್ತದೆ. ಹೊಸ ವೇಳಾಪಟ್ಟಿಯ ಪ್ರಕಾರ, ರೈಲು ಸಂಖ್ಯೆ 10110 ಕಾರವಾರ-ಮಡಗಾಂವ್ ಎಕ್ಸ್‌ಪ್ರೆಸ್ ಪ್ರತಿದಿನ ಬೆಳಗ್ಗೆ 08:30 ಕ್ಕೆ ಕಾರವಾರದಿಂದ ಹೊರಟು, ಅದೇ ದಿನ ಬೆಳಗ್ಗೆ 09:45ಕ್ಕೆ ಮಡಗಾಂವ್ ತಲುಪಲಿದೆ.

ಹಾಗೆಯೇ ಮರುಪ್ರಯಾಣದಲ್ಲಿ ರೈಲು ಸಂಖ್ಯೆ 10109 ಮಡಗಾಂವ್ - ಕಾರವಾರ ಎಕ್ಸ್‌ಪ್ರೆಸ್ ಪ್ರತಿದಿನ ಸಂಜೆ 04:30 ಕ್ಕೆ ಮಡಗಾಂವ್‌ನಿಂದ ಹೊರಟು, ಸಂಜೆ 05:45 ಕ್ಕೆ ಕಾರವಾರವನ್ನು ತಲುಪಲಿದೆ. ಈ ಎರಡು ಪ್ರಮುಖ ನಿಲ್ದಾಣಗಳ ನಡುವೆ ಸಂಚರಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಈ ರೈಲಿಗೆ ಕಾಣಕೋಣ ನಿಲ್ದಾಣದಲ್ಲಿ ವಾಣಿಜ್ಯ ನಿಲುಗಡೆಯನ್ನು ಕಲ್ಪಿಸಲಾಗಿದೆ.

ಈ ರೈಲು ಎಸಿ, ಸ್ಲೀಪರ್ ಮತ್ತು ಸಾಮಾನ್ಯ ದರ್ಜೆಯ ಬೋಗಿಗಳನ್ನು ಒಳಗೊಂಡ ಒಟ್ಟು 14 ಬೋಗಿಗಳೊಂದಿಗೆ ಸಂಚರಿಸಲಿದೆ. ಈ ಭಾಗದ ಜನಸಾಮಾನ್ಯರಿಗೆ, ಉದ್ಯೋಗಿಗಳಿಗೆ, ಪ್ರವಾಸಿಗರಿಗೆ ಹಾಗೂ ಆರೋಗ್ಯ ಸೇವೆಗಾಗಿ ಗೋವಾಕ್ಕೆ ತೆರಳುವ ರೋಗಿಗಳಿಗೆ ಅತ್ಯಂತ ಉಪಯುಕ್ತವಾಗಲಿರುವ ಈ ಖಾಯಂ ರೈಲು ಸೇವೆಯ ಸೌಲಭ್ಯವನ್ನು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸದುಪಯೋಗ ಪಡಿಸಿಕೊಳ್ಳಬೇಕೆಂದು ಸಂಸದರ ಕಚೇರಿ ಪ್ರಕಟಣೆಯಲ್ಲಿ ವಿನಂತಿಸಿದೆ. ರೈಲ್ವೆ ರಾಜ್ಯ ಸಚಿವರಾದ ವಿ. ಸೋಮಣ್ಣನವರು ಜೂನ್ 11, 2026ರಂದು ಮಡಗಾಂವ್ ನಿಲ್ದಾಣದಿಂದ ಈ ರೈಲಿನ ನಿಯಮಿತ ಸೇವೆಗೆ ಹಸಿರು ನಿಶಾನೆ ತೋರಲಿದ್ದಾರೆ. ಈ ಸೇವೆಯನ್ನು ಖಾಯಂಗೊಳಿಸಿದ್ದಕ್ಕಾಗಿ ಕೇಂದ್ರ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಅವರಿಗೆ ಹಾಗೂ ರೈಲ್ವೆ ರಾಜ್ಯ ಸಚಿವರಾದ ವಿ. ಸೋಮಣ್ಣ ಅವರಿಗೆ ಸಂಸದರು ಅಭಿನಂದನೆ ಸಲ್ಲಿಸಿದ್ದಾರೆ.

ಭಟ್ಕಳದಲ್ಲಿ ಭಾರೀ ಮಳೆ: ಜನಜೀವನ ಅಸ್ತವ್ಯಸ್ತ

◆ **ಭಟ್ಕಳ:** ತಾಲೂಕಿನಾದ್ಯಂತ ಸೋಮವಾರ ಬೆಳಗ್ಗೆಯಿಂದ ಮಧ್ಯಾಹ್ನದ ವರೆಗೂ ಭಾರೀ ಮಳೆ ಸುರಿದಿದ್ದರಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಭಾರೀ ಮಳೆಗೆ ತಗ್ಗು ಪ್ರದೇಶ ಜಲಾವೃತಗೊಂಡಿತು. ಪಟ್ಟಣದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಮಳೆ ನೀರು ನುಗ್ಗಿದ್ದರಿಂದ ಕೆಲ ಹೊತ್ತು ತೊಂದರೆ ಉಂಟಾಯಿತು. ಮಳೆ ನೀರು ಹೋಗುವ ದಾರಿ ಕಟ್ಟಿದ್ದರಿಂದ ನೀರು ಆಸ್ಪತ್ರೆಯ ವರಾಂಡದಲ್ಲಿ ಬರುವಂತಾಯಿತು. ಸರ್ಕಾರಿ ಆಸ್ಪತ್ರೆ ಬಳಿ ಕಾಮಗಾರಿಯೊಂದನ್ನು ನಡೆಸಲಾಗುತ್ತಿದ್ದು, ಮಳೆ ನೀರು ಹರಿದು ಹೋಗುವ ದಾರಿ ಮುಚ್ಚಿದ್ದರಿಂದ ನೀರು ಆಸ್ಪತ್ರೆಗ ಒಳಗೆ ಬರುವಂತಾಯಿತು, ಕೊನೆಗೆ ಸರಿಪಡಿಸಿದ್ದರಿಂದ ಸಮಸ್ಯೆ ಬಗೆಹರಿಯಿತು. ತಾಲ್ಲೂಕಿನಲ್ಲಿ ಗಟಾರ ಸ್ವಚ್ಛತೆಗೆ ಇನ್ನೂ ಮುಂದಾಗದೇ ಇರುವುದರಿಂದ ಹೆಚ್ಚಿನ ಕಡೆ ಮಳೆ ನೀರು ರಸ್ತೆ ಮೇಲೆ ಹರಿಯುವಂತಾಯಿತು.

ಹೆದ್ದಾರಿ ಕಾಮಗಾರಿಗಾಗಿ ಮಣ್ಣು ಅಗೆದಿದ್ದರಿಂದ ಕೆಲವು ಕಡೆ ಕೆಸರು ಮಯವಾಗಿದೆ. ಗಟಾರ ಕಾಮಗಾರಿಯೂ ಅರ್ಧಬಂರ್ಧ ಆಗಿರುವುದರಿಂದ ಮಳೆ ನೀರು ಸರಾಗವಾಗಿ ಹರಿದು ಹೋಗಲು ಆಗುತ್ತಿಲ್ಲ, ದೊಡ್ಡ



ಮಳೆ ಬಂದರೆ ಜನರು ಭಯಗೊಳ್ಳುವಂತೆ ಆಗಿದೆ.

ಗಟಾರದ ವ್ಯವಸ್ಥೆ ಸರಿ ಇಲ್ಲದೇ ಇರುವುದರಿಂದ ಎಲ್ಲಿ ನೀರು ನುಗ್ಗುತ್ತದೆ ಎಂದು ಹೇಳುವುದೇ ಕಷ್ಟವಾಗಿದೆ. ಪ್ರತಿ ವರ್ಷದಂತೆ ಈ ವರ್ಷ ರಂಗೀಕಟ್ಟೆಯ ಹೆದ್ದಾರಿಯ ಮೇಲೆ ನೀರು ನಿಲ್ಲದಿದ್ದರೂ ಹೆದ್ದಾರಿಯನ್ನು ಎತ್ತರಿಸಿ ಮಾಡಿದ್ದರಿಂದ ಇಕ್ಕೆಲಗಳಲ್ಲಿ ನೀರು ನಿಂತು ಅಕ್ಕ ಪಕ್ಕದ ಮನೆಯವರು ಓಡಾಡುವುದೇ ಕಷ್ಟಕರವಾಯಿತು.

ಪಟ್ಟಣದ ರಂಗೀಕಟ್ಟೆಯಿಂದ ಬಸ್ ನಿಲ್ದಾಣದ ತನಕ ಹೆದ್ದಾರಿ ಕಾಮಗಾರಿ ನಡೆಯುತ್ತಿದ್ದು ಹೆದ್ದಾರಿಯ ಇಕ್ಕೆಲಗಳಲ್ಲಿಯೂ ಕೂಡಾ ಕೆಸರುಮಯವಾಗಿ ಪರಿಣಮಿಸಿದೆ. ಮುಖ್ಯ ರಸ್ತೆಯಲ್ಲಿಯೂ ಕೂಡಾ ನೀರು ತುಂಬಿ ಹರಿದಿದ್ದು ಸರಿಯಾಗಿ ಗಟಾರದಲ್ಲಿ ನೀರು ಹೋಗದಿರುವುದೇ ಕಾರಣ. ಹಳೆ ಬಸ್ ನಿಲ್ದಾಣದಲ್ಲಿ ನೀರು ತುಂಬಿ ಜನ-ವಾಹನ ಓಡಾಟಕ್ಕೆ ತೀವ್ರ ತೊಂದರೆಯಾಯಿತು. ಮಾರಿಕಟ್ಟೆಯ ಸಮೀಪದಲ್ಲಿ ನೀರು ತುಂಬಿ ಕೆಲಸ ಕಾಲ ತೀವ್ರ ತೊಂದರೆಯಾಯಿತು.

ಪುರಸಭಾ ಕಟ್ಟಡದ ಪಕ್ಕದ ರಸ್ತೆಯೇ ಸಂಪೂರ್ಣ ಜಲಾವೃತವಾಗಿದ್ದು ಮಳೆಯ ಆರ್ಭಟಕ್ಕೆ ಜನತೆ ತೀವ್ರ ತೊಂದರೆ ಪಡುವಂತಾಯಿತು. ತಾಲ್ಲೂಕಿನಾದ್ಯಂದ ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೆ ಸತತವಾಗಿ ಮಳೆ ಸುರಿದ್ದಿದ್ದರಿಂದ ತಂಪಿನ ವಾತಾವರಣ ನಿರ್ಮಾಣಗೊಂಡಿದೆ.

ರೆಡ್ ಅಲರ್ಟ್

ಜಿಲ್ಲಾಡಳಿತ ಜೂನ್ 10ರ ವರೆಗೆ ಹೆಚ್ಚು ಮಳೆ ಆಗುವ ಸಾಧ್ಯತೆ ಇರುವುದರಿಂದ ರೆಡ್ ಅಲರ್ಟ್ ಘೋಷಿಸಿರುವ ಜೊತೆಗೆ ಸಾರ್ಜಜನಿಕರಿಗೆ ಕೆಲವು ಮುನ್ನೆಚ್ಚರಿಕಾ ಕ್ರಮದ ಬಗ್ಗೆ ಸೂಚಿಸಿದೆ.

ಬುದ್ದಿ ಹೇಳಿದ್ದಕ್ಕೆ ತಂದೆ ಹತ್ಯೆಗೈದ ಮಗ

◆ **ಹುಬ್ಬಳ್ಳಿ:** ಮಗನಿಗೆ ತಂದೆ ಬೈದು ಬುದ್ದಿ ಹೇಳಿದ ಕಾರಣ ಬಡಿಗೆಯಿಂದ ಹಲ್ಲೆ ನಡೆಸಿ ಕೊಲೆ ಮಾಡಿದ ಘಟನೆ ಭಾನುವಾರ ತಡರಾತ್ರಿ ಗೋಪನಕೊಪ್ಪದ ಸಿದ್ದೇಶ್ವರ ಕಾಲೋನಿಯಲ್ಲಿ ನಡೆದಿದೆ. ತಂದೆ ಕಲ್ಲಪ್ಪ ಮೂಲಿಮನಿ(50) ಮೃತಪಟ್ಟಿರುವ ವ್ಯಕ್ತಿ. ಮಗನಾದ ಮಹೇಶ ಕೊಲೆ ಮಾಡಿದ್ದಾರೆ. ತಂದೆ ಮಗನಾದ ಮಹೇಶನಿಗೆ ಬೈದು ಬುದ್ದಿ ಹೇಳಿದ್ದಾನೆ. ಇದಕ್ಕೆ ಕೋಪಗೊಂಡ ಮಗ ತಂದೆಗೆ ಬಡಿಗೆಯಿಂದ ಮೊದಲು ಮುಖಕ್ಕೆ ಆಮೇಲೆ ತಲೆಗೆ ಹೊಡೆದಿದ್ದಾನೆ. ಇದರಿಂದ ಗಂಭೀರವಾಗಿ ಗಾಯಗೊಂಡ ಕಲ್ಲಪ್ಪ ಮೃತಪಟ್ಟಿದ್ದಾರೆ. ಈ ಕುರಿತು ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

9 ಜನರ ಮೇಲೆ ಪ್ರಕರಣ ದಾಖಲು

◆ **ಧಾರವಾಡ:** ಕಲಘಟಗಿ ತಾಲೂಕಿನ ಹುಲ್ಲಂಬಿ ಗ್ರಾಮದಲ್ಲಿ ಉದ್ದೇಶಪೂರ್ವಕವಾಗಿ ಮಾರಣಾಂತಿಕ ಹಲ್ಲೆಯನ್ನು ಮಾಡಿ ಜೀವ ಬೆದರಿಕೆ ನೀಡಿರುವ ಕುರಿತು ಕಲಘಟಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಶಶಿಧರ ತಂದೆ ಚಿಕ್ಕಪ್ಪ ಗೊರವರ ಎಂಬುವರು ದೂರು ನೀಡಿದ್ದು ಜೂನ್ 2ರಂದು ರಾತ್ರಿ ಸಮಯ ಸುಮಾರು 8 ಗಂಟೆಗೆ ಧಾರವಾಡದಿಂದ ಕಲಘಟಗಿ ತಾಲೂಕಿನ ಹುಲ್ಲಂಬಿಗೆ ಹೋಗುವ ಸಮಯದಲ್ಲಿ ಊರಿನ ಚಹಾದ ಅಂಗಡಿಯಲ್ಲಿ ಚಹಾ ಕುಡಿಯಲು ಹೋದಾಗ ಏಕಾಏಕಿ ಆರೋಪಿತರು ಗುಂಪನ್ನು ಕಟ್ಟಿಕೊಂಡು ಮಾರಕಾಸ್ತ್ರಗಳಾದ ಕಬ್ಬಿಣದ ರಾಡು ಕಬ್ಬಿಣದ ಕೊಡಲಿ ಕಲ್ಲುಗಳು ಮತ್ತು ಕಟ್ಟಿಗೆಯ ಮುಂಡಗಳನ್ನು ತೆಗೆದುಕೊಂಡು ಹೆದರಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸುತ್ತ, ಕೈಯಲ್ಲಿದ್ದ ಮಾರಕಾಸ್ತ್ರಗಳನ್ನು ತೆಗೆದುಕೊಂಡು ರಾಡಿನಿಂದ ಜೋರಾಗಿ ಹಲ್ಲೆಯನ್ನು ಮಾಡಿ, ನಂತರ ಬೆದರಿಕೆ ಹಾಕಿದ್ದಾರೆ. ಈ ಕುರಿತು 9 ಜನರ ಮೇಲೆ ಪ್ರಕರಣ ದಾಖಲಾಗಿದೆ.

ವಿಧಾನ ಪರಿಷತ್‌ಗೆ ಲಿಂಗರಾಜ ಪಾಟೀಲ


ರಾಜ್ಯಸಭೆಗೆ ಎಂ.ನಾಗರಾಜಗೆ ಟಿಕೆಟ್ ಘೋಷಣೆ

▸ ವಿಜಯಕುಮಾರ ಬೆಳ್ಳೇರಿಮಠ

ದಿಗಂತ ವಿಶೇಷ

◆ **ಹುಬ್ಬಳ್ಳಿ:** ವಿಧಾನ ಸಭೆಯಿಂದ ರಾಜ್ಯಸಭೆಗೆ ಹಾಗೂ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಗೆ ಬಿಜೆಪಿಯೂ ವಾಣಿಜ್ಯನಗರಿ ಹುಬ್ಬಳ್ಳಿಯ ಇಬ್ಬರು ಮುಖಂಡರಿಗೆ ಟಿಕೆಟ್ ಘೋಷಿಸಲಾಗಿದೆ. ರಾಜ್ಯಸಭೆಯ ಒಂದು ಸ್ಥಾನಕ್ಕೆ ನಡೆಯುವ ಚುನಾವಣೆಯಲ್ಲಿ ಬಿಜೆಪಿಯೂ ಮುಖಂಡ ಎಂ.ನಾಗರಾಜ ಹಾಗೂ ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಗೆ ಲಿಂಗರಾಜ ಪಾಟೀಲ ಅವರಿಗೆ ಟಿಕೆಟ್ ನೀಡಿದೆ.

ಕೊನೆಗೂ ಲಿಂಪಾಗೆ ಒಲಿದ ಅದೃಷ್ಟ: ಮುಖಂಡ ಲಿಂಗಾರಾಜ ಪಾಟೀಲ ಅವರಿಗೆ ರಾಜ್ಯಸಭೆ, ವಿಧಾನ ಪರಿಷತ್ ಸೇರಿ ವಿವಿಧ ಚುನಾವಣೆಗಳಲ್ಲಿ ಹಲವಾರು ಬಾರಿ ಟಿಕೆಟ್ ಕೈತಪ್ಪಿತ್ತು. ಇತ್ತೀಚೆಗೆ ಪಶ್ಚಿಮ ಪದವೀಧರ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಪಕ್ಷ ಹಾಲಿ ಎಂಎಲ್‌ಸಿ ಎಸ್.ವಿ.ಸಂಕನೂರ ಅವರಿಗೆ ಟಿಕೆಟ್ ನೀಡಿದ್ದರಿಂದ ಬೇಸರಗೊಂಡು ಅವರು, ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ, ಅಸಮಾಧಾನ ವ್ಯಕ್ತಪಡಿಸಿದ್ದರು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ



ಬಿ.ವೈ. ವಿಜಯೇಂದ್ರ ಅವರು ಲಿಂಗರಾಜ ಪಾಟೀಲ ಅವರನ್ನು ಭೇಟಿ ಮಾಡಿ ಸೂಕ್ತ ಸಮಯದಲ್ಲಿ ಸೂಕ್ತ ಸ್ಥಾನಮಾನ ನೀಡುವುದಾಗಿ ಭರವಸೆ ನೀಡಿದ್ದರು. ಅದರಂತೆ ಈಗ ಲಿಂಗಾರಾಜ ಪಾಟೀಲ ಅವರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಟಿಕೆಟ್ ದೊರೆಕಿದ್ದು, ಅದೃಷ್ಟ ಒಲಿದು ಬಂದಿದೆ.

ವಿದ್ಯಾನಗರ ನಿವಾಸಿಯಾಗಿರುವ ಲಿಂಗರಾಜ ಪಾಟೀಲ ಅವರು ಬಿ.ಎಸ್‌ಸಿ ಪದವೀಧರಾಗಿದ್ದಾರೆ. ಅವರು 1989ರಿಂದ ಇಲ್ಲಿಯವರೆಗೆ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದಾರೆ. 1994-96ರಲ್ಲಿ ಹು-ಧಾ ಮಹಾನಗರ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ, 1996-98ರಲ್ಲಿ ರಾಜ್ಯ ಯುವ ಮೋರ್ಚಾ ಕಾರ್ಯದರ್ಶಿಯಾಗಿದ್ದರು. 1992-94ರ ಅವಧಿಯಲ್ಲಿ ರಾಣಿ ಚನ್ನಮ್ಮ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸುವ ಹೋರಾಟದಲ್ಲಿ ಪಾಲ್ಗೊಂಡಿದ್ದರು.

> ಪಕ್ಷ ನನಗೆ ಟಿಕೆಟ್ ನೀಡಿದ್ದು ನಿಷ್ಠಾವಂತ ಕಾರ್ಯಕರ್ತನಿಗೆ ಗೌರವ ದೊರೆತಂತೆ ಆಗಿದೆ. ಈಗ ಪಕ್ಷ ಸಂಘಟನೆಯ ಜೊತೆಗೆ ಜನ ಸೇವೆ ಮಾಡುವ ಅವಕಾಶ ಸಿಗಲಿದೆ. ಪಕ್ಷದಲ್ಲಿ ನನ್ನ ಕೆಲಸ ಗುರುತಿಸಿ ಟಿಕೆಟ್ ನೀಡಿದ್ದಕ್ಕೆ ಖುಷಿಯಾಗಿದೆ.
>
> ■ ಲಿಂಗರಾಜ ಪಾಟೀಲ, ಅಭ್ಯರ್ಥಿ ವಿಧಾನ ಪರಿಷತ್

2007-09 ಮತ್ತು 2013-16 ರಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಜಿಲ್ಲಾ ಘಟಕದ ಅಧ್ಯಕ್ಷ, 2010-12ರಲ್ಲಿ ಧಾರವಾಡ ವಿಭಾಗದ ಸಹ ಪ್ರಭಾರಿ, 2019-24ರ ಅವಧಿಯಲ್ಲಿ ಧಾರವಾಡ ವಿಭಾಗದ ಪ್ರಭಾರಿ, 2016-18ರಲ್ಲಿ ರಾಜ್ಯ ಕಾರ್ಯಕಾರಿಣಿ ಸದಸ್ಯರಾಗಿದ್ದರು. ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಸ್ಥಾನ ಉತ್ತಮವಾಗಿ ನಿಭಾಯಿಸಿದ್ದರು. ವಿದ್ಯಾನಗರದ ಸಿದ್ದೇಶ್ವರ ಪಾರ್ಕ್ ನಿವಾಸಿ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘ ಸಕ್ರಿಯ ಕಾರ್ಯಕರ್ತರಾದ ಎಂ.ನಾಗರಾಜ ಅವರಿಗೆ ರಾಜ್ಯಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಒದಗಿ ಬಂದಿದೆ. ಕುರುಬ ಸಮಾಜಕ್ಕೆ ಸೇರಿದ ಅವರು, ಬಿಇ (ಸಿವಿಲ್ ಎಂಜಿನಿಯರಿಂಗ್, ಎಂ.ಇ (ಹೈವೇ ಎಂಜಿನಿಯರಿಂಗ್) ಪದವೀಧರ. ಹೈವೇ ಎಂಜಿನಿಯರಿಂಗ್‌ನಲ್ಲಿ ಪಿಎಚ್.ಡಿ ಪದವಿ ಪಡೆದಿದ್ದಾರೆ. ಪ್ರಾಧ್ಯಾಪಕರಾಗಿ 22 ವರ್ಷ ಕೆಲಸ ಮಾಡಿದ್ದಾರೆ. 2006-2012ರ ಅವಧಿಯಲ್ಲಿ ಕೆಪಿಎಸ್‌ಸಿ ಸದಸ್ಯರಾಗಿದ್ದರು. ಎಬಿವಿಪಿ ರಾಜ್ಯ ಘಟಕದ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ.

> ಟಿಕೆಟ್ ನನಗೆ ನೀಡಿರುವುದು ಸಂತಸ ವಿಷಯ. ಕೇಂದ್ರ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ. ಅವುಗಳನ್ನು ಹಿಂದುಳಿದ ಸೇರಿ ಎಲ್ಲ ಸಮುದಾಯಗಳಿಗೆ ತಲುಪಿಸಲು ಶ್ರಮಿಸಲಾಗುವುದು.
>
> ■ ಪ್ರೊ.ಎಂ.ನಾಗರಾಜ್, ರಾಜ್ಯಸಭೆ ಬಿಜೆಪಿ ಅಭ್ಯರ್ಥಿ

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ, ಧಾರವಾಡ ವಿಭಾಗದ ಪ್ರಭಾರಿ, ಬಿಜೆಪಿ ಜಿಲ್ಲಾ ಕಲ್ಯಾಣ ಭವನ ನಿರ್ಮಾಣ ಸಮಿತಿಯ ರಾಜ್ಯ ಉಸ್ತುವಾರಿ ಸೇರಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿರುವ ಅವರು, 2016ರಲ್ಲಿ ನಡೆದಿದ್ದ ಪಶ್ಚಿಮ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದರು. ಜೂ.18ರಂದು ಚುನಾವಣೆ ನಡೆಯಲಿದೆ. ಇಬ್ಬರು ಅಭ್ಯರ್ಥಿಗಳು ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ.

ಕಿರುಸುದ್ದಿ

ಉಚಿತ ಔಷಧಿ ವಿತರಣಾ ಶಿಬಿರ

ಮುಂಡರಗಿ: ನಮ್ಮ ನಾಡಿನಲ್ಲಿ ಇರುವ ಇತಿಹಾಸವನ್ನು ಬೇರೆ ಯಾವ ದೇಶದಲ್ಲಿ ನೋಡಲು ಸಾಧ್ಯವಿಲ್ಲ. ಅನೇಕ ಋಷಿ ಮುನಿಗಳು ಈ ನಾಡಿನಲ್ಲಿ ಇಂತಹ ಆಯುರ್ವೇದವನ್ನು ಬಳಸುತ್ತಾ ಬಂದಿದ್ದಾರೆ. ಅತ್ಯಂತ ಕಡಿಮೆ ಸಮಯದಲ್ಲಿ ನಮ್ಮ ರೋಗವನ್ನು ನಿವಾರಿಸುವ ಶಕ್ತಿ ಆಯುರ್ವೇದದಲ್ಲಿದೆ. ಅನೇಕ ರೋಗಗ್ರಸ್ತರಿಗೆ ಹಳ್ಳಿ ಹಳ್ಳಿಗಳಿಗೆ ತೆರಳಿ ಅಲ್ಲಿ ಆರೋಗ್ಯ ಶಿಬಿರವನ್ನು ಹಮ್ಮಿಕೊಂಡು ಅಲ್ಲಿಯ ರೋಗಿಗಳ ರಕ್ಷಣೆಗೆ ಮುಂದಾಗ ಈ ಕಾಲೇಜಿನ ಕಾರ್ಯ ಸಾರ್ಥಕವಾಗುತ್ತದೆ ಎಂದು ಅಳವಂಡಿ ಶ್ರೀ ಮರುಳಾರಾಧ್ಯ ಶಿವಾಚಾರ್ಯರು ಹೇಳಿದರು. ಅವರು ಇಲ್ಲಿಯ ಎಸ್‌ಬಿಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ ಅಸ್ತಮಾ ಶ್ವಾಸ ಸಂಬಂಧಿತ ರೋಗಿಗಳಿಗೆ ಮೃಗಶೀರ ನಕ್ಷತ್ರದಂದು ಉಚಿತ ಔಷಧಿ ವಿತರಣಾ ಶಿಬಿರದ ಸಾನ್ನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದರು. ಡಾ.ಶಿಲ್ಪಾ ಮಾತನಾಡಿ, ಪ್ರತಿವರ್ಷ ಮೃಗಶಿರ ಮಳೆ ಪ್ರಾರಂಭದ ಸಂದರ್ಭದಲ್ಲಿ ವಿತರಿಸುವ ಈ ಔಷಧಿಯಿಂದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ ಪ್ರತಿಯೊಬ್ಬ ಮನುಷ್ಯನ ಆರೋಗ್ಯವನ್ನು ಸುಧಾರಿಸಿಕೊಳ್ಳಬಹುದು ಎಂದರು. ಯುವ ಮುಖಂಡ ರಾಮು ಕಲಾಲ ಮಾತನಾಡಿದರು. ಪುರಸಭೆಯ ಮಾಜಿ ಸದಸ್ಯ ನಾಗರಾಜ ಹೊಂಬಳಗಟ್ಟಿ ಮಾತನಾಡಿ, ಇಂದಿನ ಇಂಗ್ಲಿಷ್ ಔಷಧಿಗಳ ಗರಿಷ್ಠ ಬಳಕೆಯಿಂದ ಬಡ ರೋಗಿಗಳು ಆರ್ಥಿಕ ಸಂಕಷ್ಟವನ್ನು ಅನುಭವಿಸುವ ಪ್ರಸಂಗಗಳು ಹೆಚ್ಚು. ಜನಸಾಮಾನ್ಯರೂ ಸಹ ಬೇಗ ತಮ್ಮ ಆರೋಗ್ಯವನ್ನು ಸುಧಾರಿಸುವಲ್ಲಿ ಆಯುರ್ವೇದಿಕ್ ಔಷಧಿ ರಾಮಬಾಣ ವಾಗಿವೆ ಎಂದರು. ಈ ವೇಳೆ ಪ್ರಾಚಾರ್ಯ ಎಸ್.ಆರ್. ಜಾಗೀರದಾರ, ಉಪ ಪ್ರಾಚಾರ್ಯ ಕಾಮರಾಜ, ರಾಜು ಡಾವಣಗೇರಿ, ಅಶೋಕ ಪೂಜಾರ, ಎಸ್.ಡಿ.ಹಿರೇಮಠ, ಡಾ.ತುಕಾರಾಮ, ಅನ್ವರಹುಸೇನ್ ಗಡಾದ, ಡಾ. ಸವಿತಾ ಬಳ್ಳಾರಿ, ಎಸ್.ವಿ.ಹಿರೇಮಠ, ಡಾ.ವನಿತಾ ಕೆ, ಡಾ.ಹಾಲಸ್ವಾಮಿ ಸೇರಿದಂತೆ ಇತರರು ಇದ್ದರು.

ಪ್ರತಿಭಾ ಪುರಸ್ಕಾರದ ಪೂರ್ವಭಾವಿ ಸಭೆ ನಾಳೆ

ಶಿರಹಟ್ಟಿ: ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ತಾಲೂಕು ಘಟಕದ ವತಿಯಿಂದ ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ಕಾರ್ಯಕ್ರಮದ ಪೂರ್ವಭಾವಿ ಸಭೆ ಜೂ.10ರಂದು ತಾಲೂಕಿನ ಬೆಳ್ಳಟ್ಟಿ ಗ್ರಾಮದ ಎಪಿಎಂಸಿಯಲ್ಲಿ ಮಧ್ಯಾಹ್ನ 3ಕ್ಕೆ ಕರೆಯಲಾಗಿದ್ದು, ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಲಹೆ ಸೂಚನೆ ನೀಡುವಂತೆ ತಾಲೂಕಾಧ್ಯಕ್ಷರ ಬಸವರಾಜ ತುಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಗತಿ ಪರಿಶೀಲನೆ ಸಭೆ ಜೂ.15ರಂದು

ಗದಗ: ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ ಅಧ್ಯಕ್ಷತೆಯಲ್ಲಿ ಜೂ.15ರಂದು ಬೆಳಗ್ಗೆ 11ಕ್ಕೆ ನಗರದ ಜಿಲ್ಲಾ ಪಂಚಾಯತಿ ವಿಸಿ ಹಾಲ್‌ನಲ್ಲಿ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯನ್ನು ಏರ್ಪಡಿಸಲಾಗಿದೆ ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಾಲ್)

ಕಡಲೆಕಾಳು	2044-6135
ಉದ್ದಿನಕಾಳು	1212-5112
ಧನಿಯಾ	9581-10581
ಅಲಸಂದೆ	3477-6556
ಒಣ ಮೆಣಸಿನಕಾಯಿ	35967-35967
ಹೆಸರುಕಾಳು	1869-6409
ಶೇಂಗಾ	4556-7776
ಹುರುಳಿಕಾಳು	4121-4121
ಶೇಂಗಾ	4556-7776
ಹುರುಳಿಕಾಳು	4121-4121
ಜೋಳ	1877-4833
ಮೆಕ್ಕೆಜೋಳ	1777-2403
ಮಡಿಕೆ	6150-6150
ಕುಸುಬೆ	4434-5340
ಸೂರ್ಯಕಾಂತಿ	6827-7007
ತೊಗರಿ	3714-5340
ಗೋಧಿ	2012-5112



ಮುಂಡರಗಿ: ಇಲ್ಲಿಯ ಎಸ್‌ಬಿಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ ಅಸ್ತಮಾ ಶ್ವಾಸ ಸಂಬಂಧಿತ ರೋಗಿಗಳಿಗೆ ಮೃಗಶೀರ ನಕ್ಷತ್ರದಂದು ಉಚಿತ ಔಷಧಿ ವಿತರಣಾ ಶಿಬಿರದ ಅಳವಂಡಿ ಶ್ರೀ ಮರುಳಾರಾಧ್ಯ ಶಿವಾಚಾರ್ಯರು ಸಾನ್ನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದರು.

ಆಯುರ್ವೇದ ಔಷಧ ಸೇವಿಸಿ ಆರೋಗ್ಯವಾಗಿರಿ

ಗಜೇಂದ್ರಗಡ: ನಗರದ ಟಕ್ಕೇದ ದರ್ಗಾದಲ್ಲಿ ಮೃಗಶಿರ ಮಳೆ ನಕ್ಷತ್ರ ಪ್ರವೇಶದ ಹಿನ್ನೆಲೆಯಲ್ಲಿ ಅಸ್ತಮಾ (ಉಬ್ಬಸ) ರೋಗಿಗಳಿಗೆ ಉಚಿತವಾಗಿ ಸಾಂಪ್ರದಾಯಿಕ ಮಂತ್ರೌಷ ಮಾತ್ರೆ ನಗರದ ಕಟ್ಟಿ ಬಸವೇಶ್ವರ ರಂಗ ಮಂದಿರದಲ್ಲಿ ಸೋಮವಾರ ವಿತರಿಸಲಾಯಿತು.

ಬಳಿಕ ದರ್ಗಾದ ಪ್ರಸಕ್ತ 8ನೇ ಪೀಠಾಪತಿಗಳಾದ ಹಜರತ್ ಸೈಯದ್ ನಿಜಾಮುದ್ದಿನ್ ಶಾ ಅರ್ಷಫಿ ಮಕಾನದಾರ ಆರ್ಶಿವಚನ ನೀಡಿ, ಬೆಳಗಿನಿಂದಲೇ ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಮತ್ತು ಧಾರ್ಮಿಕ ವಿಧಿವಿಧಾನಗಳು ಜರುಗಿದವು. ಜನರಿಗೆ ದರ್ಗಾದ ವತಿಯಿಂದ ಸಿದ್ಧಪಡಿಸಲಾದ ವಿಶೇಷ ಮೂಲಿಕಾ ಮಂತ್ರೌಷಯ ಮಾತ್ರೆಗಳನ್ನು ಉಚಿತವಾಗಿ ನೀಡಲಾಗುತ್ತದೆ ಎಂದರು. ಬಳಿಕ ನಿಕಟಪೂರ್ವ ಪುರಸಭೆ ಸದಸ್ಯರಾದ ಶಿವರಾಜ ಘೋರ್ಪಡೆ ಮಾತನಾಡಿದರು. ಪ್ರಾಸ್ತಾವಿಕವಾಗಿ ಅಂಜುಮನ ಇಸ್ಲಾಂ ಕಮಿಟಿ ನಿರ್ದೇಶಕ ದಾವಲಸಾಬ ತಾಳಿಕೋಟಿ, ಎಸ್.ಎಸ್.ನರೇಗಲ್, ಸುರೇಶ ಪತ್ತಾರ ಮಾತನಾಡಿದರು.

ಈ ವೇಳೆ ಉಡಚಪ್ಪ ಚನ್ನಮ್ಮನವರ, ಶ್ರೀಧರ ಬಿದರಳ್ಳಿ, ಹಸನಸಾಬ ತಟಗಾರ, ರಫಿಕ್ ತೋರಗಲ್ಲ, ಎಸ್.ಎಸ್.ನರೇಗಲ್, ಸುರೇಶ ಪತ್ತಾರ, ಮಾಸುಮ ಅಲಿ ಮದಗಾರ, ಖಾಜಾಮೈಜುದ್ದಿನ್ ಮಕಾನದಾರ, ಸಾಜೀದ ವಾಲಿಕಾರ, ಮಕ್ತುಂಸಾಬ ಗೋಡೆಕಾರ, ಶ್ರೀಧರ ಗಂಜಿಗೌಡ್ರ, ರಾಜಪ್ಪ ಹೊಸಮನಿ, ಪರಸಪ್ಪ ಹೊಸಮನಿ, ಬಾಷಾ ಹವಾಲ್ದಾರ್, ಎಂ.ಎಸ್. ಮಕನದಾರ, ಅಬ್ಬು ಮದಗಾರ, ಚಾಂದಸಾಬ ಹವಾಲ್ದಾರ್ ಸೇರಿದಂತೆ ಅನೇಕರು ಇದ್ದರು.



ಗಜೇಂದ್ರಗಡ: ನಗರದ ಟಕ್ಕೇದ ದರ್ಗಾದಲ್ಲಿ ಮೃಗಶಿರ ಮಳೆ ನಕ್ಷತ್ರ ಪ್ರವೇಶದ ಹಿನ್ನೆಲೆಯಲ್ಲಿ ಅಸ್ತಮಾ (ಉಬ್ಬಸ) ರೋಗಿಗಳಿಗೆ ಉಚಿತವಾಗಿ ಸಾಂಪ್ರದಾಯಿಕ ಮಂತ್ರೌಷ ಮಾತ್ರೆ ನಗರದ ಕಟ್ಟಿ ಬಸವೇಶ್ವರ ರಂಗ ಮಂದಿರದಲ್ಲಿ ಸೋಮವಾರ ವಿತರಿಸಲಾಯಿತು.

ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನ ಸೇರಿ ಆಡಳಿತಾತ್ಮಕ ಮೇಲ್ವಿಚಾರಣೆಯಲ್ಲಿ ಹಿನ್ನಡೆ

ಜಿಪಂ ಸಿಇಒ ನೇಮಕಾತಿ ಯಾವಾಗ?

ರುದ್ರಗೌಡ ಪಾಟೀಲ

ದಿಗಂತ ವಿಶೇಷ

ಗದಗ: ಜಿಲ್ಲಾ ಪಂಚಾಯತಿ ಸಿಇಒ ಇಲ್ಲದೇ 9 ತಿಂಗಳು ಪೂರ್ಣಗೊಂಡಿದ್ದು, ಈವರೆಗೂ ಸರ್ಕಾರ ಜಿಪಂ ಸಿಇಒ ನೇಮಕಕ್ಕೆ ಮುಂದಾಗಿಲ್ಲ ಇದರಿಂದ ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನ ಸೇರಿ ಆಡಳಿತಾತ್ಮಕ ಮೇಲ್ವಿಚಾರಣೆಯಲ್ಲಿ ಹಿನ್ನಡೆ ಉಂಟಾಗಿದ್ದು, ಸಾರ್ವಜನಿಕರು ಸರ್ಕಾರದ ನಡೆಗೆ ಹಿಡಿಶಾಪ ಹಾಕುವಂತಾಗಿದೆ.

2025ರ ಆಗಸ್ಟ್ 22ರಂದು ಜಿಪಂ ಸಿಇಒ ಭರತ ಎಸ್. ಅವರು ಬೆಂಗಳೂರಿನ ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರ ಹುದ್ದೆಗೆ ವರ್ಗವಾದ ನಂತರ ತೆರವಾದ ಜಿಪಂ ಸಿಇಒ ಹುದ್ದೆ ಖಾಲಿ ಉಳಿದಿದ್ದು, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಅವರಿಗೆ ಜಿಪಂ ಸಿಇಒ ಹೆಚ್ಚುವರಿ ಹುದ್ದೆ ನಿರ್ವಹಿಸುತ್ತಿದ್ದಾರೆ. ಜಿಲ್ಲೆಯಾಗಿ 29 ವರ್ಷಗಳು ಪೂರೈಸಿದ್ದು, ಜಿಲ್ಲೆಯ ಇತಿಹಾಸದಲ್ಲಿಯೇ ಅತೀ ಹೆಚ್ಚು ಅವಧಿಗಳ ಕಾಲ ಜಿಪಂ ಹುದ್ದೆ ಖಾಲಿ ಇದೆ.

ಕಾಂಗ್ರೆಸ್ ಸರಕಾರದ ಆಡಳಿತದ ಅವಧಿಯಲ್ಲಿ ಜಿಲ್ಲೆಗೆ ಜಿಪಂ ಸಿಇಒ ಹುದ್ದೆಗೆ ಗರ ಬಡಿದಂತಾಗಿದೆ. 2023ರಲ್ಲಿ ಜಿಪಂ ಆಗಿದ್ದ ಡಾ.ಸುಶೀಲಾ ಬಿ. ಅವರು 2023 ಜುಲೈ 18ರಂದು ಜಿಲ್ಲೆಯಿಂದ ವರ್ಗಾವಣೆಯಾದ ನಂತರ 8 ತಿಂಗಳ ಕಾಲ ಸಿಇಒ ನೇಮಕವಾಗಿರಲಿಲ್ಲ. 2024 ಮಾರ್ಚ್ 14ರಂದು ಜಿಪಂ ಸಿಇಒ ಆಗಿ ಭರತ ಎಸ್. ನೇಮಕವಾದರು. ತದನಂತರ 2025ರ ಆಗಸ್ಟ್ 22ರಂದು ಜಿಪಂ ಸಿಇಒ ಭರತ ಎಸ್. ವರ್ಗಾವಣೆಯಾದ ನಂತರ ಈವರೆಗೆ 9 ತಿಂಗಳ ಕಾಲ ಸಿಇಒ ಹುದ್ದೆ



ಖಾಲಿಯಾಗಿಯೇ ಉಳಿದಿದೆ. ರಾಜ್ಯ ಕಾಂಗ್ರೆಸ್ ಸರ್ಕಾರದ 36 ತಿಂಗಳ ಆಡಳಿತದಲ್ಲಿ 17 ತಿಂಗಳ ಕಾಲ ಜಿಪಂ ಸಿಇಒ ಹುದ್ದೆ ಖಾಲಿಯಾಗಿ ಉಳಿದಿರುವುದು ದೇಶದ ಇತಿಹಾಸದಲ್ಲೇ ಮೊದಲೆನ್ನುವಂತಾಗಿದೆ.

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆ ಅತ್ಯಂತ ಹೆಚ್ಚು ಜವಾಬ್ದಾರಿಯುತವಾಗಿರುತ್ತದೆ. ಆಡಳಿತಾತ್ಮಕನಿರ್ವಹಣೆ,ಕೇಂದ್ರ-ರಾಜ್ಯ ಸರ್ಕಾರಗಳ ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನ, ಹಣಕಾಸು ನಿಯಂತ್ರಣ, ಜಿಪಂ ಸಾಮಾನ್ಯ ಸಭೆ, ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ, ಕುಡಿಯುವ ನೀರು, ನೈರ್ಮಲ್ಯ, ಗ್ರಾಮೀಣ ರಸ್ತೆಗಳು, ಶಿಕ್ಷಣ, ಆರೋಗ್ಯಕ್ಕೆ ಸಂಬಂಧಿಸಿದ ಮೂಲಸೌಕರ್ಯ ಕಾಮಗಾರಿಗಳ ಪ್ರಗತಿ ಪರಿಶೀಲಿಸುವುದು ಸೇರಿ ಸಾರ್ವಜನಿಕರ ದೂರುಗಳಿಗೆ ಆದ್ಯತೆ ನೀಡಿ ತ್ವರಿತವಾಗಿ ಪರಿಹಾರ ಒದಗಿಸುವುದು ಪ್ರಮುಖವಾಗಿರುತ್ತದೆ. ಆದರೆ ಜಿಲ್ಲಾಧಿಕಾರಿ ಕಳೆದ 9 ತಿಂಗಳಿಂದ ಎರಡೂ ಹುದ್ದೆಗಳನ್ನು ಒತ್ತಡದಲ್ಲಿ ಕೆಲಸ ನಿರ್ವಹಿಸುವಂತಾಗಿದೆ.

ಕಡತ ವಿಲೇವಾರಿಗೆ ವಿಳಂಬ: ಜಿಪಂ ಸಿಇಒ ಇಲ್ಲದ ಕಾರಣಕ್ಕೆ ಜಿಲ್ಲಾಧಿಕಾರಿಗಳೇ ಎರಡೂ ಹುದ್ದೆಗಳನ್ನು ನೋಡಿಕೊಳ್ಳಬೇಕಿರುವುದರಿಂದ ಜಿಪಂ ಕಚೇರಿಯಲ್ಲಿ ಕಡತ ವಿಲೇವಾರಿಗೆ ವಿಳಂಬ ವಾಗುತ್ತಿದೆ ಎಂಬ ದೂರುಗಳು ಸಾಮಾನ್ಯವಾಗಿದೆ. ಗದಗ ಜಿಪಂಗೆ ಸಿಇಒ ನೇಮಕ ಮಾಡುವಂತೆ ಅನೇಕ ಸಂಘಟನೆಗಳು ಒತ್ತಾಯಿಸುತ್ತಿರುವುದು ಸಾಮಾಜಿಕ ಜಾಲತಾಣಗಳಲ್ಲಿಯೂ ಚರ್ಚೆ ಶುರುವಾಗಿದೆ. ಈ ವಿಷಯ ಮಾಜಿ ಸಚಿವ ಎಚ್.ಕೆ.ಪಾಟೀಲರ ಗಮನಕ್ಕೂ ಬಂದಿದ್ದರೂ ಜಿಪಂ ಸಿಇಒ ಹುದ್ದೆ ಭರ್ತಿಗೆ ಕ್ರಮ ಕೈಗೊಂಡಿಲ್ಲ ಎಂಬುದು ಸಾರ್ವಜನಿಕರ ಆರೋಪ.

ಐಎಎಸ್ ಶ್ರೇಣಿಯ ಜಿಪಂ ಸಿಇಒ ಹುದ್ದೆ ಇಷ್ಟೊಂದು ಸುದೀರ್ಘ ಅವಧಿಗೆ ಖಾಲಿ ಇರುವುದು ಇದೇ ಮೊದಲು. ಸಾಮಾನ್ಯವಾಗಿ ವರ್ಗಾವಣೆಯಾದ ತಿಂಗಳೊಳಗೆ ಸರ್ಕಾರ ಮತ್ತೊಬ್ಬ ಅಧಿಕಾರಿ ನೇಮಕ ಮಾಡುತ್ತದೆ. ಆದರೆ ಇದೇ ಮೊದಲ ಬಾರಿಗೆ 9 ತಿಂಗಳು ಕಳೆದರೂ ನೇಮಕ ಮಾಡದಿರುವುದು ಅನುಮಾನ ಮೂಡಿಸಿದೆ ಎನ್ನುತ್ತಿದ್ದಾರೆ ಸಾರ್ವಜನಿಕರು.

> **ಜಿಲ್ಲೆಯಲ್ಲಿ ಕಳೆದ ಸುಮಾರು ತಿಂಗಳಿಂದ ಜಿಪಂ ಸಿಇಒ ಹುದ್ದೆ ಇಲ್ಲದೆ ಸಾಕಷ್ಟು ಸಮಸ್ಯೆಯಾಗಿದೆ. ಇದರಿಂದ ಜಿಪಂ ಹಾಗೂ ವಿವಿಧ ಇಲಾಖೆಗಳಿಗೆ ಬಹಳ ತೊಂದರೆಯಾಗಿದೆ. ಕೂಡಲೇ ಸರಕಾರ ಜಿಲ್ಲೆಗೆ ನೂತನ ಜಿಪಂ ಸಿಇಒ ನೇಮಕ ಮಾಡುವ ಮೂಲಕ ಜಿಲ್ಲಾ ಪಂಚಾಯತ್ ಆಡಳಿತ ಸುಗಮವಾಗಿ ಆಡಳಿತ ನಡೆಸಲು ಸಾಧ್ಯವಾಗುತ್ತಿದೆ.**
>
> ■ ವಿಶ್ವನಾಥ ಖಾನಪ್ಪನವರ, ಸಾಮಾಜಿಕ ಕಾರ್ಯಕರ್ತರು

ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ

ಗದಗ: ಯಾವುದೇ ಒಂದು ಸಮಾಜ ಅಭಿವೃದ್ಧಿ ಯಾಗಬೇಕಾದರೆ, ಪರಿಪೂರ್ಣಗೊಳ್ಳಬೇಕಾದರೆ ಬ್ರಾಹ್ಮಣರ ಮಾರ್ಗದರ್ಶನ, ಸಹಕಾರವಿಲ್ಲದೆ ಅದು ಸಾಧ್ಯವಾಗಲಾರದು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್ ರಘುನಾಥ ಹೇಳಿದರು.

ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ನಗರದ ಶಂಕರ ಮಠದಲ್ಲಿ ನೆರವೇರಿದ ಪ್ರತಿಭಾ ಪುರಸ್ಕಾರ, ನಿವೃತ್ತರಿಗೆ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬಿಡಿ ಬಿಡಿಯಾಗಿ ನಾವು ಬಹಳಷ್ಟು ಸಾಧನೆ ಮಾಡಿದ್ದೇವೆ ಆದರೆ ಒಗಟ್ಟಾಗಿ ನಾವು ಸಾಧನೆ ಮಾಡಿದ್ದು ಕಡಿಮೆ ನಾವೆಲ್ಲ ಒಗ್ಗಟ್ಟಾದರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯವಿದೆ ಎಂದು ಹೇಳಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಸಭಾ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿಯೂ ಕೂಡ ಬಲಿಷ್ಠವಾದ ಸಂಘಟನೆಗಳನ್ನು ಹೊಂದಲು ಅದಕ್ಕೆ ಅವಶ್ಯಕವಾದ ಬೈಲಾ ತಿದ್ದುಪಡಿಗಳನ್ನು ಮಾಡಿ ಗ್ರಾಮೀಣ ಮಟ್ಟದಿಂದಲೂ ಕೂಡ ಬ್ರಾಹ್ಮಣರ ಸಶಕ್ತ ಸಂಘಟನೆಯನ್ನು ಮಾಡಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ವೆಂಕಟೇಶ್ ಕುಲಕರ್ಣಿ ಅಧ್ಯಕ್ಷತೆ ವಹಿಸಿದರು. ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿರ್ದೇಶಕ ಗುರಣ್ಣ ಬಳಗಾನೂರ, ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ರಾಜ್ಯಾಧ್ಯಕ್ಷ ಅಸುಗೋಡ ಜಯಸಿಂಹ ಮಾತನಾಡಿದರು.

ಬ್ರಹ್ಮವೃಂದ ಅಧ್ಯಕ್ಷ ದತ್ತಂಭಟ್ ತೆಂಬದಮನಿ, ಡಾ.ವೆಂಕಟೇಶ್ ಕುಲಕರ್ಣಿ, ಪ್ರೊ.ಅನಿಲ್ ವೈದ್ಯ, ರತ್ನಾಕರ್ ಭಟ್ ಜೋಷಿ, ಡಾ.ದತ್ತಪ್ರಸನ್ನ ಪಾಟೀಲ, ದತ್ತಣ್ಣ ಜೋಶಿ, ಕೃಷ್ಣಾಜಿ ನಾಡಿಗೇರ, ಎಂ.ಜಿ.ಕುಲಕರ್ಣಿ, ಡಾ.ಆರ್.ಎನ್.ಗೋಡಬೋಲೆ, ವಿಶ್ವನಾಥ ಕುಲಕರ್ಣಿ, ಮುರಳಿ, ಪ್ರಶಾಂತ ಕಿನ್ನಾಳ, ಶೇಷಾದ್ರಿ, ಕಿರಣಗೌಡ ಪಾಟೀಲ, ಜಿಲ್ಲಾ ಘಟಕದ ಪದಾಧಿಕಾರಿ ಅನೀಲ ತೆಂಬದಮನಿ, ರವೀಂದ್ರ ಜೋಶಿ, ಆರ್.ಎಸ್.ಕುಲಕರ್ಣಿ, ಹೇಮಂತ ಕುಲಕರ್ಣಿ, ಸಂತೋಷ ಕುಲಕರ್ಣಿ, ಅಜಯಕುಮಾರ ದಪ್ತರದಾರ ಇದ್ದರು. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣ್ಯ ಸಾಧನೆ ಸಲ್ಲಿಸಿದ ಸಾಧಕರನ್ನು ಹಾಗೂ ಸೇವಾ ನಿವೃತ್ತರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಪ್ರತಿಭಾ ಪುರಸ್ಕಾರದ ಆರಂಭದಲ್ಲಿ ಕಲಾವಿದ ಡಾ.ವೆಂಕಟೇಶ ಕುಲಕರ್ಣಿ ಭಕ್ತಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಸಮಾರಂಭದ ನಂತರ ಹಾಸ್ಯ ವಾಗ್ಮಿಗಳಾದ ಪ್ರೊ.ಅನೀಲ ವೈದ್ಯ, ಅರುಣ ಕುಲಕರ್ಣಿ ಇವರಿಂದ ನಗೆ ಹಬ್ಬ ಕಾರ್ಯಕ್ರಮ ನೆರವೇರಿತು.



ಮಕ್ಕಳಿಗೆ ಕಂಪ್ಯೂಟರ್ ಜ್ಞಾನ ಅಗತ್ಯ: ರಾಜೋಳಿ

ಗದಗ: ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಕಂಪ್ಯೂಟರ್ ಜ್ಞಾನ ಹಾಗೂ ತರಬೇತಿ ನೀಡುವುದರಿಂದ ಅವರು ಸ್ವಾವಲಂಬಿಯಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಸಹಕಾರಿಯಾಗುತ್ತದೆ ಎಂದು ಅರುಣೋದಯ ವಿಶೇಷ ಅಗತ್ಯವುಳ್ಳ ಮಕ್ಕಳ ಶಾಲೆಯ ಆಡಳಿತ ಮಂಡಳಿಯ ಉಪಾಧ್ಯಕ್ಷ ಲುಕ್ಕಣಸಾ ರಾಜೋಳಿ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಅರುಣೋದಯ ವಿಶೇಷ ಅಗತ್ಯವುಳ್ಳ ಮಕ್ಕಳ ಶಾಲೆಯಲ್ಲಿ ವಿಶೇಷ ಮಕ್ಕಳಿಗೆ ಹಮ್ಮಿಕೊಂಡಿದ್ದ ಕಂಪ್ಯೂಟರ್ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ವಿಶೇಷ ಮಕ್ಕಳನ್ನು ಸಾಮಾನ್ಯ ಮಕ್ಕಳಂತೆ ರೂಪಿಸಲು ಶಾಲೆಯಲ್ಲಿ ವಿಶೇಷ ಕಾಳಜಿ ವಹಿಸಿ ಪ್ರಯತ್ನಿಸಲಾಗುತ್ತಿದೆ. ಅಗತ್ಯ ಬೋಧನೆ, ಕಲಿಕಾ ಸಾಧನ-ಸಲಕರಣೆಗಳ ಮೂಲಕ ಪ್ರೀತಿ ಹಾಗೂ ಸ್ನೇಹಪೂರ್ವಕ ವಾತಾವರಣದಲ್ಲಿ ಶಿಕ್ಷಣ ನೀಡಲು ವಿಶೇಷ ತರಬೇತಿ ಪಡೆದ ಅನುಭವಿ ಶಿಕ್ಷಕ-ಶಿಕ್ಷಕಿಯರು ನಿರಂತರ ಶ್ರಮಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ವಿಶೇಷ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತಿರುವ ನಮ್ಮ ಶಾಲೆಗೆ ಬೆಂಗಳೂರಿನ 'ಅಂಬಾ' ಎನ್.ಜಿ.ಓ ಸಂಸ್ಥೆ 25 ಲ್ಯಾಪ್ಟಾಪ್ ನೀಡಲು ಮುಂದೆ ಬಂದಿರುವುದು ಹೆಮ್ಮೆಯ ಸಂಗತಿ ಎಂದರು. ಬೇಸಿಗೆ ರಜೆಯಲ್ಲಿ ಈಗಾಗಲೇ ಇಬ್ಬರು ವಿದ್ಯಾರ್ಥಿಗಳು ಹಾಗೂ ಓರ್ವ ಶಿಕ್ಷಕರಿಗೆ ವಿಶೇಷ ತರಬೇತಿ ನೀಡಿ ಒಂದು ಲ್ಯಾಪ್ಟಾಪ್ ವಿತರಿಸಲಾಗಿದೆ. ಪ್ರಸ್ತುತ 2 ತಿಂಗಳ ತರಬೇತಿ ಪೂರ್ಣಗೊಳ್ಳುತ್ತಿದ್ದಂತೆಯೇ ಹೊಸ ಲ್ಯಾಪ್ಟಾಪ್ ಗಳನ್ನು ಕಳುಹಿಸಲು ಸಂಸ್ಥೆ ಸಿದ್ಧವಿದೆ ಎಂದು ಮಾಹಿತಿ ನೀಡಿದರು.

ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ತಂತ್ರಜ್ಞಾನದ ಬೆಳಕಿನಲ್ಲಿ ಹೊಸ ಭವಿಷ್ಯ ರೂಪಿಸುವ ಈ ಕಾರ್ಯಕ್ಕೆ ಪಾಲಕರು ಹಾಗೂ ದಾನಿಗಳ ಸಹಕಾರ ಅಗತ್ಯ ಎಂದು ಅವರು ಮನವಿ ಮಾಡಿದರು.

ಕಾರ್ಯದರ್ಶಿ ಜಯರಾಜ ಮುಳಗುಂದ ಮಾತನಾಡಿದರು. ಆಡಳಿತ ಮಂಡಳಿ ಸದಸ್ಯರಾದ ಬಸವರಾಜ ನಾಗಲಾಪೂರ, ಡಾ. ಉಮೇಶ ಹಾದಿ ಉಪಸ್ಥಿತರಿದ್ದರು. ಶಾಲಾ ಮುಖ್ಯೋಪಾಧ್ಯಾಯ ಮಲ್ಲಪ್ಪ ಹಕ್ಕಿ ಸ್ವಾಗತಿಸಿದರು. ಸದಸ್ಯ ಬಸವರಾಜ ಪಟ್ಟಣಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಕಟ್ಟಡ ನಿರ್ವಾಹಕ ಮಲ್ಲಿಕಾರ್ಜುನ ನಾಗಲಾಪೂರ ವಂದಿಸಿದರು.

ಜಗದೀಶ ಹಡಪದ, ಜಯಶ್ರೀ ಭಾವರೆ, ಸುರೇಶ ಹಾದಿ, ಸಿಬ್ಬಂದಿಗಳಾದ ರೇಣುಕಾ ದಾಸರ, ವೀಣಾ ಕೊಲ್ಲಾಪುರೆ ಪಾಲ್ಗೊಂಡಿದ್ದರು.



ಲಂಡಿಹಳ್ಳಕ್ಕೆ ಗಂಗಪ್ಪ ಭೇಟಿ ನೀಡಿ ಪರಿಶೀಲನೆ

ಲಕ್ಷ್ಮೇಶ್ವರ: ಪಟ್ಟಣದ ಕೆಂಚಲಾಪುರ ಓಣಿ, ಭಜಂತ್ರಿ ಓಣಿ ಬನಶಂಕರಿ ಬಡಾವಣೆ ಹಳ್ಳದಕೇರಿ ಕೇರಿಯಲ್ಲಿ ಇರುವ ಲಂಡಿಹಳ್ಳದಲ್ಲಿ ಕಳೆದ ಹಲವು ವರ್ಷಗಳಿಂದ ಗಿಡ, ಮರಗಳ ಬೆಳೆದು ನೀರು ಹೋಗಲಾರದ ಪರಿಸ್ಥಿತಿ ನಿರ್ಮಾಣ ಆಗಿದ್ದ ಪರಿಣಾಮ, ಗದಗ ಜಿಲ್ಲಾ ಉಪವಿಭಾಗಾಧಿಕಾರಿ ಗಂಗಪ್ಪ ಎಂ ಭೇಟಿ ನೀಡಿ ಪರಿಶೀಲನೆ ಮಾಡಿದರು.

ಈ ವೇಳೆ ಸ್ಥಳೀಯರಾದ ಮಂಜುನಾಥ ಮಾಗಡಿ ಹಾಗೂ ಅಲ್ಲಿನ ನಿವಾಸಿಗಳು ಲಂಡಿಹಳ್ಳದ ಸಮಸ್ಯೆ ಹಾಗೂ ಅಲ್ಲಿ ವಾಸಿಸುವ ನಿವಾಸಿಗಳಿಗೆ ಆಗುವ ತೊಂದರೆಗಳನ್ನು ವಿವರಿಸಿದರು. ನಿವಾಸಿಗಳ ಸಮಸ್ಯೆಗಳನ್ನು ಆಲಿಸಿ ಅಲ್ಲಿನ ಸಮಸ್ಯೆಗಳನ್ನು ಕಣ್ಣಾರೆ ಕಂಡ ಗಂಗಪ್ಪ ಅವರು ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ ಮುದಗಲ್ ಅವರಿಗೆ ಸ್ವಚ್ಛತೆ ಕೈಗೊಳಬೇಕು. ಜನರಿಗೆ ಇದರಿಂದ ಸಮಸ್ಯೆ ಆಗದಂತೆ ನೋಡಿಕೊಳ್ಳುವುದು ಪುರಸಭೆ ಜವಾಬ್ದಾರಿ ಎಂದು ಸೂಚನೆ ನೀಡಿದರಲ್ಲದೆ ಜೂ.20ರಂದು ಮತ್ತೆ ಸ್ಥಳಕ್ಕೆ ಭೇಟಿ ನೀಡುತ್ತೇನೆ ಅಷ್ಟೊತ್ತಿಗೆ ಸ್ವಚ್ಛತೆ ಆಗಿರಬೇಕು ಎಂದರು.

ಭೇಟಿ ವೇಳೆ ತಹಶೀಲ್ದಾರ್ ಧನಂಜಯ ಎಂ, ಪುರಸಭೆ ಮಾಜಿ ಉಪಾಧ್ಯಕ್ಷ ದಾದಾಪೀರ ಮುಚ್ಚಾಲೆ, ಮಾಜಿ ಸದಸ್ಯ ಸಾಹೇಬಜಾನ್ ಹವಾಲ್ದಾರ್, ನಾಗರಾಜ ಚಿಂಚಲಿ, ಗಣೇಶ ನೂಲ್ವಿ ಚನ್ನಬಸನಗೌಡ ಉದ್ದನಗೌಡ್ರ, ಹೇಮಣ್ಣ ಬುರಡಿ, ದೇವು ಶಿರಹಟ್ಟಿ ಸೋಮು ಮಜ್ಜಿಗುಡ್ಡ, ರಾಜಪ್ಪ ಕಣವಿ, ದಶರಥ ಘೋರ್ಪಡೆ, ಪರಪ್ಪ ಕಣವಿ, ಫಕ್ಕೀರೇಶ ಭಜಂತ್ರಿ, ಮುದಕಪ್ಪ ಭಜಂತ್ರಿ ಮಹಾದೇವಪ್ಪ ಅಂದಲಗಿ, ಮುದಕಪ್ಪ ಸಾಲ್ಮನಿ, ಈಶಪ್ಪ ರೋಣದ, ಅರುಣಾ ಕಣವಿ, ಫಕ್ಕೀರೇಶ ಕಣವಿ, ಪವನ ಬಂಕಾಪುರ, ಶಂಕರ ಬ್ಯಾಡಗಿ ಸ್ಥಳೀಯರು ಇದ್ದರು.



ಬಿತ್ತನೆ ಬೀಜ, ರಸಗೊಬ್ಬರದ ಕೊರತೆ: ರೈತರ ಆಕ್ರೋಶ

ರೋಣ: ಮುಂಗಾರು ಹಂಗಾಮಿನ ರೋಹಿಣಿ ಮಳೆಯ ಅವಧಿ ಮುಗಿದರು ಸಹ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳ ಕೊರತೆ ನಿಗಿಲ್ಲ. ಇದರಿಂದ ರೈತ ಸಮುದಾಯ ತೀವ್ರ ತೊಂದರೆ ಅನುಭವಿಸುವಂತಾಗಿದೆ ಎಂದು ಕರ್ನಾಟಕ ರಾಜ್ಯ ಸಂಘದ ಮುಖಂಡ ಶಿವಲಿಂಗಪ್ಪ ಬೋಪಳಾಪೂರ ಆಕ್ರೋಶ ಹೊರಹಾಕಿದರು.

ಅವರು ಸೋಮವಾರ ತಹಶೀಲ್ದಾರ್ ಕಚೇರಿಗೆ ಮನವಿ ಸಲ್ಲಿಸಿ ನಂತರ ಮಾತನಾಡಿ, ಮುಂಗಾರು ಹಂಗಾಮಿನಲ್ಲಿ ರೈತರ ಬೆಳೆ ಬೆಳೆಯಲು ರೋಹಿಣಿ ಮಳೆ ಉತ್ತಮವಾಗಿರುತ್ತದೆ. ಹೀಗಾಗಿ ರೈತರು ರೋಹಿಣಿ ಮಳೆ ಸಂಧರ್ಭದಲ್ಲಿ ಹೆಚ್ಚಿನ ರೀತಿಯಲ್ಲಿ ಬಿತ್ತನೆ ಕಾರ್ಯವನ್ನು ನಡೆಸುತ್ತಾನೆ. ಆದರೆ ಮಳೆ ಅವಧಿ ಮುಗಿದರು ಸಹ ಸರ್ಕಾರ ಸಮರ್ಪಕ ರೀತಿಯಲ್ಲಿ ಬೀಜ ಗೊಬ್ಬರಗಳ ದಾಸ್ತಾನು ಮಾಡಿಲ್ಲ,



ಇದರಿಂದ ಬಿತ್ತನೆ ಕುಂಠಿತಗೊಂಡಿದ್ದು, ರೈತರು ಸಂಕಷ್ಟದ ಸ್ಥಿತಿ ಅನುಭವಿಸುವಂತೆ ಮಾಡಿದೆ ಎಂದರು. ರಾಜ್ಯ ಮತ್ತು ಕೇಂದ್ರ ಸರ್ಕಾರ ಬಿತ್ತನೆ ಬೀಜ,ಗೊಬ್ಬರ, ಡೀಸೆಲ್ ಪೂರೈಕೆಯಲ್ಲಿ ಕೊರತೆ ಉಂಟಾಗದಂತೆ ನೀಗಾವಹಿಸಬೇಕು ಎಂದು ಆಗ್ರಹ ಮಾಡಿದರು.

ತಾಲೂಕಾಧ್ಯಕ್ಷ ಸಂಗಣ್ಣ ಪವಾಡಶೆಟ್ಟಿ ಮಾತನಾಡಿ, ಟ್ರ್ಯಾಕ್ಟರ್ ವಾಹನದೊಂದಿಗೆ ಬಂದರೆ ಮಾತ್ರ ಡೀಸೆಲ್ ವಿತರಣೆ ಮಾಡುತ್ತಿರುವ ಬಂಕ್ ಗಳ ಮಾಲಿಕರು ರೈತರ ಸ್ಥಿತಿಯನ್ನು ಆಲಿಸಬೇಕು. ಡೀಸೆಲ್ ವಿತರಣೆಗೆ ಅಗತ್ಯ ಕ್ರಮತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಹೋರಾಟ ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದರು. ಮೇಘರಾಜ ಭಾವಿ ಮಾತನಾಡಿದರು.

ಸಂಗಣ್ಣ ದಂಡಿನ, ಬಸವರಾಜ ಹೊಸಮನಿ, ಶಾಂತವೀರಯ್ಯ ಬೆನಹಾಳ, ಶರಣಪ್ಪ ಚನ್ನಪ್ಪಗೌಡ್ರ, ಬಸನಗೌಡ ಚೆನ್ನಪ್ಪಗೌಡ, ಕಾವ್ಯ ಸೋಮನಕಟ್ಟಿ, ಮಲ್ಲಪ್ಪ ಯಂಡಿಗೇರಿ, ಮೈಲಾರಪ್ಪ ಚವಡಿ, ಕಳಕಪ್ಪ ನೀರಲೋಟ, ರೈಮಾನಸಾಬ ಬಾಲೇಸಾಬನವರ, ಉಮೇಶ ಮುಗುಳಿ, ಬಸವರಾಜ ಬ್ಯಾಳಿ, ಬಸನಗೌಡ ಮುದಿಬಸನಗೌಡ, ಯಲ್ಲಪ್ಪ ಹಡಗಲಿ, ಮಲ್ಲಪ್ಪ ಚಳಗೇರಿ, ರಮೇಶ ಚನ್ನಪ್ಪಗೌಡ್ರ, ಈರಪ್ಪ ಯತ್ನಳ್ಳಿ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.

ಲೋಕ ಕಲ್ಯಾಣಕ್ಕಾಗಿ 33 ಸುದರ್ಶನ ಹೋಮ



ಗಜೇಂದ್ರಗಡ: ನಗರದ ಗುರು ರಾಘವೇಂದ್ರಸ್ವಾಮಿ ಮಠದಲ್ಲಿ ಅಧಿಕ ಮಾಸದ ಪ್ರಯುಕ್ತ ವಿಶೇಷ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. ಅಧಿಕ ಮಾಸವು ಪ್ರತಿ 33 ತಿಂಗಳಿಗೊಮ್ಮೆ ಬರುವುದರಿಂದ, ಈ ಪವಿತ್ರ ಮಾಸದಲ್ಲಿ ಮಾಡುವ ಜಪ, ತಪ, ದಾನ ಹಾಗೂ ಹೋಮ-ಹವನಗಳಿಗೆ ಅತ್ಯಂತ ವಿಶೇಷವಾದ ಮತ್ತು ಅಧಿಕ ಫಲವಿರುತ್ತದೆ ಎಂಬ ನಂಬಿಕೆಯಿದೆ. ಹಿಂದಿನ ಅಧಿಕ ಮಾಸಗಳ ಸಂದರ್ಭದಲ್ಲೂ ಗಣಹೋಮಗಳಂತಹ ಬೃಹತ್ ಧಾರ್ಮಿಕ ಕಾರ್ಯಕ್ರಮಗಳನ್ನು ಭಕ್ತಿಪೂರ್ವಕವಾಗಿ ನೆರವೇರಿಸಲಾಗಿತ್ತು. 33 ಅಪೂಪ ದಾನದಂತಹ ಸಂಕಲ್ಪಗಳೊಂದಿಗೆ ಲೋಕಕಲ್ಯಾಣಕ್ಕಾಗಿ ವಿಶೇಷ ಪೂಜೆಗಳು, ಹವನಗಳು ಜರುಗುತ್ತವೆ.

ಬಳಿಕ ಪ್ರಧಾನ ಅರ್ಚಕರಾದ ವೆಂಕಟೇಶ ಆಚಾರ್ಯ ಮಾತನಾಡಿ, ಶ್ರೀಮನ್ ನಾರಾಯಣನ ಶಕ್ತಿಶಾಲಿ ಆಯುಧವಾದ ಸುದರ್ಶನ ಚಕ್ರವನ್ನು ಆರಾಧಿಸುವ ಈ ಹೋಮವು ದೃಷ್ಟಿದೋಷ, ನಕಾರಾತ್ಮಕ ಶಕ್ತಿಗಳು, ರೋಗ ನಿವಾರಿಸಿ, ಜೀವನದಲ್ಲಿ ಸುಖ, ಶಾಂತಿ, ಐಶ್ವರ್ಯ ಕರುಣಿಸುತ್ತದೆ ಎಂದು ನಂಬಲಾಗಿದೆ ಎಂದರು. ಅಂದಪ್ಪ ಸಂಕನೂರ, ಶ್ರೀನಿವಾಸ ಬಾಕಳೆ ಮಾತನಾಡಿದರು. ಭಿಷ್ಮಾಸಾ ಬಾಕಳೆ, ದತ್ತುಸಾ ಬಾಕಳೆ, ವೆಂಕಟೇಶ ಶೆಟ್ಟರ, ವಿಶ್ವನಾಥ ಕುಷ್ಟಗಿ, ಆರ್.ಎಂ.ರಾಯಬಾಗಿ, ನಾಗರಾಜ ವೇರ್ಣೇಕರ, ದೇವೇಂದ್ರ ಬಡಿಗೇರ, ಕಿರಣ ಬಳೂಟಗಿ, ಅಶೋಕ ಮುದೇನೂರ, ನಾಗರಾಜ ಹೊಸಂಗಡಿ, ನಾಗರಾಜ ಹುಣಸಿಕಟ್ಟಿ, ಉಮೇಶ ನಾವಡೆ, ಪ್ರವೀಣ ರಾಯಬಾಗಿ, ಶಿವಕುಮಾರ ತಳಕಲ, ಕವಿತಾ ಜಾಳಿಹಾಳ, ದಿವ್ಯಾ ಸಂಕನೂರ ಸೇರಿದಂತೆ ಅನೇಕರು ಇದ್ದರು.

ರಾಘವೇಂದ್ರ ರಚಿಸಿದ ಕವನ ಬಿಡುಗಡೆ

ನರಗುಂದ: ಸೋಮವಾರ ಪಟ್ಟಣದ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ ಕಾರ್ಯಕ್ರಮವೊಂದರಲ್ಲಿ ಲಯನ್ಸ್ ಸ್ವತಂತ್ರ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ರಾಘವೇಂದ್ರ ಎಸ್. ಗೆಜ್ಜೆ ಅವರು ರಚಿಸಿದ ತಾಯಿ ಅಂದ್ರೆ ನಮ್ಮ ನರಗುಂದ ಅಕ್ಕ ಎಂಬ ಕವನವನ್ನು ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಉಪನಿರ್ದೇಶಕಿ ನಂದಾ ಹಣಬರಟ್ಟಿ ಬಿಡುಗಡೆಗೊಳಿಸಿದರು.

ಈ ವೇಳೆ ಜಿಲ್ಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಆರ್.ಎಸ್.ಬುರಡಿ, ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕ ರಾಜ ಯೋಗಿನಿ ಬ್ರ.ಕು ಪ್ರಭಕ್ಕನವರು, ವಿರೂಪಾಕ್ಷಪ್ಪ ಕೊಳ್ಳಿಯವರ, ಹೊಳೆ ಆಲೂರ ಜನಸೇವಾ ಸಂಸ್ಥೆ ಅಧ್ಯಕ್ಷೆ ಶೋಭಾ ಆಡಿನ್, ಕ್ಷೇತ್ರ ಶಿಕ್ಷಣಾಧಿಕಾರಿ ಎಮ್ ಹೆಚ್ ಕಂಬಳಿ, ಲಯನ್ಸ್ ಸ್ವತಂತ್ರ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಎಸ್.ಜಿ.ಜಕ್ಕಲಿ, ಕೆಎಸ್‌ಆರ್‌ಟಿಸಿ ಸೂಪರವೈಸರ್ ಲಕ್ಷ್ಮಿ ವಾಡೇದ, ಎಂ ಕೆ ಮೇಟಿ, ಕಲಾಶ್ರೀ ಹಾದಿಮನಿ, ಶ್ರೀಕಾಂತ ದಂಡನಾಯ್ಕರ, ಹನುಮಂತಪ್ಪ ಮಾದರ, ಉಮೇಶ ಸುಬೇದಾರ, ತಾನಾಜಿ ಅವತಾಡೆ ಮತ್ತು ಇತರರಿದ್ದರು.



ಜಮೀರ್‌ಗೆ ಡಿಸಿಎಂ ಸ್ಥಾನ ನೀಡಲು ಆಗ್ರಹ



ಮುಂಡರಗಿ: ಮಾಜಿ ಸಚಿವ ಬಿ.ಝಡ್.ಜಮೀರ್ ಅಹ್ಮದಖಾನ್ ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಮಂತ್ರಿಮಂಡಳದಲ್ಲಿ ಉಪಮುಖ್ಯಮಂತ್ರಿ ಸ್ಥಾನ ನೀಡುವುದರ ಜೊತೆಗೆ ಉನ್ನತ ಖಾತೆ ನೀಡಬೇಕೆಂದು ಆಗ್ರಹಿಸಿ ಅವರ ಅಭಿಮಾನಿಬಳಗ ಪಟ್ಟಣದ ಕೊಪ್ಪಳ ಕ್ರಾಸ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ ,ಪಂಜಿನ ಮೆರವಣಿಗೆ ನಡೆಸಿ ಆಗ್ರಹಿಸಿದರು.

ಈ ವೇಳೆ ಯೋಜನಾ ಸಮಿತಿ ಸದಸ್ಯ ರಾಜಾಭಕ್ಷಿ ಬೆಟಗೇರಿ ಮಾತನಾಡಿ ಪಕ್ಷದಲ್ಲಿ ಸಣ್ಣ-ಪುಟ್ಟ ಸುಳ್ಳು ಸಬೂಬ ಇಟ್ಟುಕೊಂಡು ಮಂತ್ರಿಮಂಡಳದಿಂದ ಜಮೀರ್ ಅಹ್ಮದ್ ಅವರನ್ನು ಕೈಬಿಟ್ಟಿರುವುದು ನಮ್ಮ ಸ್ವಾಭಿಮಾನಕ್ಕೆ ದಕ್ಕೆ ಉಂಟಾಗಿದೆ. ಅವರೊಬ್ಬ ಪ್ರಭಾವಿ ನಾಯಕರಾಗಿದ್ದಾರೆ. ಜಮೀರ್ ಅಹ್ಮದ್ ಸಾಹೇಬರ ಸೇವೆ ಕಾಂಗ್ರೆಸ್ ಪಕ್ಷಕ್ಕೂ ಮತ್ತು ಸಾರ್ವಜನಿಕರಿಗೂ ಸಲ್ಲಿಕೆಯಾಗಿದೆ. ಆದ್ದರಿಂದ ಮುಂದಿನ ಸಚಿವ ಸಂಪುಟದ ವಿಸ್ತರಣೆಯಲ್ಲಿ ಜಮೀರ್ ಅಹ್ಮದ್ ಸಹೇಬರಿಗೆ ಉಪಮುಖ್ಯಮಂತ್ರಿ ಸ್ಥಾನ ಮತ್ತು ಉನ್ನತ ಖಾತೆಯನ್ನು ನೀಡಬೇಕು. ಅವರಿಗೆ ಸಚಿವ ಸ್ಥಾನಮಾನ ನೀಡದಿದ್ದರೆ ಮುಂಬರುವ ದಿನಗಳಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಅಲ್ಪಸಂಖ್ಯಾತರನ್ನು ದುರ್ಬಿನ್ ಹಚ್ಚಿ ಹುಡುಕುವಂತೆ ಆಗುತ್ತದೆ ಎಂದು ಎಚ್ಚರಿಸಿದರು. ಈ ಪ್ರತಿಭಟನೆಯಲ್ಲಿ ನಬಿಸಾಬ ಕೆಲೂರ,ಡಿ.ಎಂ.ಕಾತರಕಿ, ರಾಜಾಸಾಬ ಬೆಟಗೇಡರಿ, ಮೌಲಾಸಾಬ ಬಾಗವಾನ, ಎ.ಕೆ.ಕೊಕ್ಕರಗುಂದಿ, ಎನ್.ಎ.ಖತೀಬ, ಮಹ್ಮದಸಾಬ ಮನಿಯಾರ್, ಹಸನಸಾಬ ಅಳವಂಡಿ, ಸಂತೋಷ ಹಿರೇಮನಿ ಇದ್ದರು.

ಮತದಾರರ ಪಟ್ಟಿ ಪರಿಷ್ಕರಣೆ ಜೂ.29ರಿಂದ ಆರಂಭ

ಮುಂಡರಗಿ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್ ಐಆರ್) ಜೂ.29ರಿಂದ ಆರಂಭಗೊಳ್ಳಲಿದ್ದು, ಜು.29ರವರೆಗೆ ನಡೆಯಲಿದೆ. ಮತದಾರರ ಪಟ್ಟಿ ಸರಿ ಇದೆಯೋ ಇಲ್ಲವೋ ಎಂಬುವುದರ ಕುರಿತು ಪರಿಶೀಲಿಸಬಹುದು. ನಂತರ ದಿನಗಳಲ್ಲಿ ಅರ್ಹ ಮತದಾರರು ಉಳಿದಿದ್ದರೇ ಹೆಸರು ಸೇರಿಸುವುದು ಸೇರಿ ಅಗತ್ಯ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗುವುದು ಎಂದು ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಹೇಳಿದರು.

ಪಟ್ಟಣದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ತಾಲೂಕು ಆಡಳಿತವು ಇತ್ತೀಚಿಗೆ ಹಮ್ಮಿಕೊಂಡಿದ್ದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಬಿಎಲ್‌ಎ, ಬಿಎಲ್‌ಒ ಅವರಿಗೆ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು.

ಶಿರಹಟ್ಟಿ ವಿಧಾನಸಭಾ ಮತಕ್ಷೇತ್ರದ ಇಆರ್‌ಒ ನಂದಾ ಹಣಬರಹಟ್ಟಿ, ರೋಣ ವಿಧಾನಸಭಾ ಮತಕ್ಷೇತ್ರದ ಇಆರ್‌ಒ ಬಸವನಗೌಡ ಕೊಟ್ಟೂರು ಮಾತನಾಡಿದರು. ಪ್ರಾಧ್ಯಾಪಕರಾದ ಡಾ.ಎಚ್.ಹನುಮಂತಪ್ಪ, ಡಾ.ಆರ್. ಎಚ್.ಜಂಗಣವಾರಿ ಅವರು ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ವಿಶೇಷ ಉಪನ್ಯಾಸ ನೀಡಿದರು. ತಾಲೂಕು ಬ್ಲಾಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಿ.ಡಿ.ಮೋರನಾಳ, ಬಿಜೆಪಿ ಮುಂಡರಗಿ ಮಂಡಲ ಪ್ರಧಾನ ಕಾರ್ಯದರ್ಶಿ ಬಸವರಾಜ ಬಿಳಿಮಗ್ಗದ, ಬಿಎಲ್‌ಎ, ಬಿಎಲ್‌ಒ, ಉಪಸ್ಥಿತರಿದ್ದರು.



ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪದವಿ ಪ್ರದಾನ

ಗ್ರಾಮೀಣದಲ್ಲಿ ವೈದ್ಯರ ಸೇವೆ ಅಗತ್ಯ: ಜೋಶಿ



ಬಾಗಲಕೋಟೆ: ವೈದ್ಯಕೀಯ ಶಾಸ್ತ್ರದ ಮೂಲ ನೆಲೆಯಾದ ಭಾರತ ಇಂದು ವೈದ್ಯಕೀಯ ಕ್ಷೇತ್ರದಲ್ಲಿ ಬಹಳಷ್ಟು ಪ್ರಗತಿ ಸಾಧಿಸಿದೆ. ಅನ್ಯ ರಾಷ್ಟ್ರಗಳ ಜನರು ಭಾರತಕ್ಕೆ ವೈದ್ಯಕೀಯ ಚಿಕಿತ್ಸೆಗಾಗಿ ಬರುತ್ತಿರುವರು. ನಗರ ಪ್ರದೇಶಕ್ಕಿಂತ ಗ್ರಾಮೀಣ ಭಾಗಗಳಲ್ಲಿ ವೈದ್ಯಕೀಯ ಸೇವೆಯ ಅಗತ್ಯವಿದೆ ಎಂದು ಭಾರತ ಸರ್ಕಾರದ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ಪದವಿ ಪ್ರದಾನ
240 ಸ್ನಾತಕ ಮತ್ತು 10 ಸ್ನಾತಕೋತ್ತರ ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು.

ನಗರದ ಪ್ರತಿಷ್ಠಿತ ಬಿವ್ಹಿವ್ಹಿ ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ 17ನೇ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪದವೀಧರರಿಗೆ ಪ್ರಮಾಣ ಪತ್ರಗಳನ್ನು ವಿತರಿಸಿ ಮಾತನಾಡಿದ ಅವರು, ಪದವೀಧರರಾದ ನಿಮಗೆ ಇಂದಿನಿಂದ ಕಲಿಕೆ ಆರಂಭವಾಗುತ್ತದೆ. ಸವಾಲುಗಳು ಕೂಡ ಎದುರಾಗುವುದು ಈಗಿನಿಂದಲೇ. ಸವಾಲುಗಳನ್ನು ಎದುರಿಸಿ ವೃತ್ತಿಯಲ್ಲಿ ಉತ್ಕೃಷ್ಟವಾದದ್ದನ್ನು ಸಾಧಿಸಿ ಎಂದರು.

ಜೊತೆಗೆ ಉತ್ತರ ಕರ್ನಾಟಕದಲ್ಲಿ ಡಾ.ವೀರಣ್ಣ ಚರಂತಿಮಠ ಅವರು ಅತ್ಯುತ್ತಮವಾದ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಿ ವೈದ್ಯಕೀಯ ಕ್ಷೇತ್ರಕ್ಕೆ ಗಮನಾರ್ಹವಾದ ಕೊಡುಗೆ ನೀಡುತ್ತಿರುವರು ಎಂದು ಪ್ರಶಂಸಿಸಿದರು.

ಬೆಂಗಳೂರಿನ ಖ್ಯಾತ ಹಿರಿಯ ಹೃದ್ರೋಗ ತಜ್ಞ ಡಾ.ಗಿರೀಶ ಬಿ.ನವಸುಂದಿ ಮಾತನಾಡಿ, ಶಿಕ್ಷಿತನಾಗುವುದು ಎಂದರೆ ಕೇವಲ ವೈಯಕ್ತಿಕ ಬೆಳವಣಿಗೆಯಲ್ಲ ಅದು ಸಮುದಾಯದ ಬೆಳವಣಿಗೆ. ವೈದ್ಯರಾಗಿ ಅತ್ಯುತ್ತಮ ಸೇವೆ ಒದಗಿಸಿ ಸಮಾಜದ ಪ್ರಗತಿಗೆ ಕಾರಣರಾಗಿ. ಪ್ರತಿಫಲವನ್ನು ನಿರೀಕ್ಷಿಸದೆ ವೃತ್ತಿಗೆ ಕೊಡುಗೆ ನೀಡಬೇಕು. ಸಾಮಾಜಿಕ ಮಾಧ್ಯಮವನ್ನು ಸೀಮಿತವಾಗಿ ಉಪಯೋಗಿಸಿ. ವಿಷಯದ ಪಠ್ಯಪುಸ್ತಕಗಳೊಂದಿಗೆ ಸಾಹಿತ್ಯ ಮತ್ತು ತತ್ವಜ್ಞಾನದ ಪುಸ್ತಕಗಳನ್ನು ಓದಿ ಎಂದು ಪದವೀಧರರಿಗೆ ಕಿವಿಮಾತು ಹೇಳಿದರು.

> ಕೊರೋನಾ ಸಂದಿಗ್ಧ ಕಾಲದಲ್ಲಿ ಕೋವಿಡ್ ಲಸಿಕೆ ಕಂಡು ಹಿಡಿದು ನೂರಕ್ಕೂ ಹೆಚ್ಚು ರಾಷ್ಟ್ರಗಳಿಗೆ ಕಳುಹಿಸಿಕೊಟ್ಟ ದೇಶ ನಮ್ಮದು. ದೇಶದ ವೈದ್ಯಕೀಯ ಉತ್ಕೃಷ್ಟತೆಯನ್ನು ನೆನಪಿನಲ್ಲಿಟ್ಟುಕೊಂಡು ಸಮಾಜ ಮತ್ತು ರಾಷ್ಟ್ರಕ್ಕೆ ಕೊಡುಗೆ ನೀಡಿ.
> ■ **ಪ್ರಹ್ಲಾದ ಜೋಶಿ, ಕೇಂದ್ರ ಸಚಿವ**

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಿವ್ಹಿವ್ಹಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಮಾತನಾಡಿ, ರೋಗಿಗಳ ಸೇವೆ ದೇವರ ಸೇವೆ ಎಂದು ಭಾವಿಸಿ ಚಿಕಿತ್ಸೆ ನೀಡಿ. ವೈದ್ಯಕೀಯ ಶಿಕ್ಷಣಕ್ಕೆ ಅಗತ್ಯವಾದ ಎಲ್ಲ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಭಾಗದ ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಎಚ್.ಎಸ್.ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆರಂಭಗೊಂಡಿದ್ದು ಎಲ್ಲ ಪ್ರಕಾರದ ವಿಶೇಷ ಚಿಕಿತ್ಸೆಗಳ ಸೌಲಭ್ಯ ಸಾರ್ವಜನಿಕರಿಗೆ ದೊರೆಯುತ್ತಿದೆ ಎಂದರು.

ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ ಸ್ವಾಗತಿಸಿದರು. ಡಾ.ಅನಿತಾ ಹೆರೂರ ಮತ್ತು ಡಾ.ಮಂಜುಳಾ ಪಾಟೀಲ ಪರಿಚಯಿಸಿದರು. ಡಾ.ಸಿ.ಎಸ್.ಹಿರೇಮಠ ಪ್ರತಿಜ್ಞಾವಿಧಿ ಬೋಧಿಸಿದರು. ಡಾ.ಮಹಾಂತೇಶ ಭೂತಲ್ ವಂದಿಸಿದರು.

ಡಾ.ಅಭಿಷೇಕ ಮತ್ತು ಡಾ.ಸಂಜನಾ ಮೆಡಿಕಲ್ ಕಾಲೇಜಿನಲ್ಲಿ ತಮ್ಮ ವಿದ್ಯಾಭ್ಯಾಸದ ಅನುಭವಗಳನ್ನು ಹಂಚಿಕೊಂಡರು. ಡಾ.ಜಯರಾಜ, ಡಾ. ಕೃತಿಕಾ, ಡಾ.ಶಾಂಭವಿ, ಡಾ.ಸುರಜ ಮತ್ತು ಡಾ.ವಿದ್ಯಾಶ್ರೀ ಕಾರ್ಯಕ್ರಮ ನಿರೂಪಿಸಿದರು.

ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ, ಬಿವ್ಹಿವ್ಹಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಎನ್.ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್. ಸಜ್ಜನ (ಬೇವೂರ), ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಉಪಪ್ರಾಚಾರ್ಯ ಡಾ.ಸಿ.ಎಸ್.ಹಿರೇಮಠ, ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಡಾ.ಮಂಜುಳಾ ಪಾಟೀಲ, ಡಾ.ಮಹಾಂತೇಶ ಭೂತಲ್ ಉಪಸ್ಥಿತರಿದ್ದರು.

ಕೈಕೈ ಮಿಲಾಯಿಸಿದ ಮುಖಂಡರು

ಪಾಲಿಕೆ ಹೋರಾಟ ಸಭೆ ರಣರಂಗ

ಧಾರವಾಡ: ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ದೇಶಪಾಂಡೆ ಭವನದಲ್ಲಿ ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಯ ಕುರಿತು ಸೋಮವಾರ ಹೋರಾಟಗಾರ ಬಿ.ಡಿ.ಹಿರೇಮಠ ನೇತೃತ್ವದಲ್ಲಿ ನಡೆದ ವಿವಿಧ ಸಂಘಟನೆ ಸಭೆಯು ಹೈಡ್ರಾಮಾಗೆ ಸಾಕ್ಷಿಯಾಗಿದೆ.

ಅಧಿಸೂಚನೆಗೆ ಸರ್ಕಾರಕ್ಕೆ ತಿಂಗಳ ಗಡುವು



ನೂತನ ಸರ್ಕಾರದಲ್ಲಿ ಸಾಕಷ್ಟು ಕೆಲಸಗಳಾಗಬೇಕಿದೆ. ಹೋರಾಟದ ಬಗ್ಗೆ ಕಾಳಜಿ ತೋರಿದ ಮುಖ್ಯಮಂತ್ರಿಗಳೇ ಸಮಯ ಕೋರಿ ಹಿರೇಮಠಗೆ ಪತ್ರವೂ ಬರೆದಿದ್ದು, ಸರ್ಕಾರಕ್ಕೆ 2 ತಿಂಗಳ ಗಡುವು ನೀಡುವ ಕುರಿತು ಕಾಂಗ್ರೆಸ್ ನಾಯಕರು ಸಲಹೆ ನೀಡಿದರು.

ಬಿಜೆಪಿಗರ ಆಕ್ಷೇಪ: ಇದಕ್ಕೆ ಆಕ್ಷೇಪಿಸಿದ ಬಿಜೆಪಿ ಮುಖಂಡ ಶಿವು ಹಿರೇಮಠ, 48 ಗಂಟೆಯಲ್ಲಿಯೇ ಅಧಿಸೂಚನೆ ಹೊರಡಿಸುವುದಾಗಿ ಹೇಳಿದ ಕಾಂಗ್ರೆಸ್ ನಾಯಕರು 2 ತಿಂಗಳು ಸಮಯ ಕೇಳುವುದು ಸಲ್ಲ. ಸರ್ಕಾರಕ್ಕೆ 15 ದಿನಗಳ ಗಡುವು ನೀಡಲು ಸಭೆಗೆ ಕೋರಿದರು.

ಪರಸ್ಪರ ದೂಷಣೆ: ಸಭೆಯ ಮಧ್ಯ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರು, ಈ ಧಾರವಾಡ ಪ್ರತ್ಯೇಕ ಪಾಲಿಕೆ ರಚನೆ ಕುರಿತು ಪರಸ್ಪರ ದೂಷಣೆಗೆ ಇಳಿದ ಸಂದರ್ಭದಲ್ಲಿ ತೀವ್ರ ಮಾತಿನ ಚಕಮಕಿ ನಡೆಯುವುದರ ಜೊತೆಗೆ ಪರಿಸ್ಥಿತಿ ಕೈಕೈ ಮಿಲಾಯಿಸುವ ಹಂತಕ್ಕೂ ತಲುಪಿತು.

ಪ್ರತ್ಯೇಕ ಪಾಲಿಕೆ ಸಿಗದಿರಲು ಕಾರಣ ಯಾರು? ರಾಜ್ಯಪಾಲರು ಪಾಲಿಕೆ ಕಡತಕ್ಕೆ ಸಹಿ ಹಾಕಿದಿದ್ದಾಗ ನಮ್ಮ ನಾಯಕರ ಭಾವಚಿತ್ರ ದಹಿಸಿದ ಕಾಂಗ್ರೆಸ್ ನಾಯಕರಿಗೆ ಸರ್ಕಾರಕ್ಕೆ ಒತ್ತ ಹಾಕಿ, ಅಧಿಸೂಚನೆ ಹೊರಡಿಸುವ ತಾಕತ್ತಿಲ್ಲ ಎಂದು ಬಿಜೆಪಿಗರು ಮೂದಲಿಸಿದರು.

ಆತಂಕದ ವಾತಾವರಣ: ಸಭೆಯಲ್ಲಿ ಕೈ-ಕಮಲ ಮುಖಂಡರ ಮಧ್ಯ ವಾಕ್ಸಮರ ಶುರುವಾಗಿ, ಕ್ಷಣಕ್ಷಣಕ್ಕೂ ವಿಕೋಪಕ್ಕೆ ತಿರುಗಿದ ಗದ್ದಲ, ಕೊನೆಗೆ ಪರಸ್ಪರ ನೂಕಾಟ, ತಳ್ಳಾಟ ಮತ್ತು ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿ ಸಭೆಯಲ್ಲಿ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಯಿತು.

ಮುಖಂಡರಿಗೆ ತಾಕೀತು: ಪರಿಸ್ಥಿತಿ ಕೈಮೀರುವುದು ಅರಿತು ಮಧ್ಯ ಪ್ರವೇಶಿಸಿದ ಹೋರಾಟಗಾರ ಹಿರೇಮಠ, ಉಭಯ ಪಕ್ಷಗಳ ಮುಖಂಡರನ್ನು ಸಮಾಧಾನಪಡಿಸಿದರು. ನಿಮ್ಮ ರಾಜಕೀಯ ಕೆಸರೆರಚಾಟ ಬಿಟ್ಟು ಹೋರಾಟದ ಉದ್ದೇಶದ ಕಡೆಗೆ ಗಮನ ಕೊಡಲು ತಾಕೀತು ಮಾಡಿದರು.

ಬಿ.ಡಿ.ಹಿರೇಮಠ ಮಾತನಾಡಿ, ಧಾರವಾಡ ಪ್ರತ್ಯೇಕ ಪಾಲಿಕೆ ನಿರಂತರ ಇರಲಿದೆ. ಆದರೆ, ನೂತನ ಸರ್ಕಾರದ ಮಟ್ಟದಲ್ಲಿ ಕೆಲಸ ಕಾರ್ಯಗಳಾಗಲು ಸಮಯವೂ ಬೇಕು. ಹೀಗಾಗಿ ಜು.8ರವರೆಗೆ ಸತ್ಯಾಗ್ರಹ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದಾಗಿ ಸ್ಪಷ್ಟಪಡಿಸಿದರು.

ನಿರ್ಣಯ ಪ್ರಕಟ: ಅಲ್ಲದೇ ಧಾರವಾಡ ಪ್ರತ್ಯೇಕ ಪಾಲಿಕೆ ರಚನೆಗೆ ಅಧಿಸೂಚನೆ ಹೊರಡಿಸಲು ರಾಜ್ಯ ಸರ್ಕಾರಕ್ಕೆ ತಿಂಗಳ ಗಡುವು (ಜು.8ರವರೆ) ನೀಡಿದೆ. ಅಷ್ಟರದಲ್ಲಿ ಅಧಿಸೂಚನೆ ಹೊರಡಿಸದಿದ್ದರೆ, ಜು.9ರಿಂದ ಪುನಃ ಅಹೋರಾತ್ರಿ ಧರಣಿ ನಡೆಸುವ ನಿರ್ಣಯ ಕೈಗೊಂಡರು.

ಸಭೆಯಲ್ಲಿ ಮಹಾದೇವ ಹೊರಟ್ಟಿ, ವಿಠ್ಠಲ ಕಮ್ಮಾರ, ರವಿ ಮಾಳಗೇರ, ವಿಜಯ ಶೆಟ್ಟರ್, ಮನೋಜ ಕರ್ಜಗಿ, ಮೇಯರ್ ಜ್ಯೋತಿ ಪಾಟೀಲ, ಪಾಲಿಕೆ ಸದಸ್ಯ ಶಂಕರ ಶೇಳಕೆ, ಕವಿತಾ ಕಬ್ಬೇರ, ಸುರೇಶ ಬೇದರೆ, ರಾಜು ಕಮತಿ ಅನೇಕರು ಇದ್ದರು.

ಕಿರುಸುದ್ದಿ

ಒಂದೇ ಕಾರಿನಲ್ಲಿ ಸಹೋದರರ ಪ್ರಯಾಣ




ಬೆಳಗಾವಿ: ಕರ್ನಾಟಕದ ಪ್ರಭಾವಿ ರಾಜಕಾರಣಿಗಳಾಗಿರುವ ಜಾರಕಿಹೊಳಿ ಸಹೋದರರು ಸೋಮವಾರ ಒಂದೇ ಕಾರಿನಲ್ಲಿ ಪ್ರಯಾಣ ಬೆಳೆಸುವ ಮೂಲಕ ಎಲ್ಲರ ಗಮನ ಸೆಳೆಯುವಂತೆ ಮಾಡಿದ್ದಾರೆ. ಇತ್ತೀಚೆಗೆ ಗೋಕಾಕ ಶಾಸಕ ರಮೇಶ ಜಾರಕಿಹೊಳಿ ನಿವಾಸಕ್ಕೆ ಹೊಸ ಐಶಾರಾಮಿ ಲೆಕ್ಸಸ್ ಕಾರು ಆಗಮನವಾಗಿದೆ. ಕುಟುಂಬದ ಸದಸ್ಯರ ಪ್ರಯಾಣಕ್ಕೆ ಅನುಕೂಲ ಆಗುವ ನಿಟ್ಟಿನಲ್ಲಿ ಹೊಸ ಬ್ರ್ಯಾಂಡ್ ನ್ಯೂ ಕಾರನ್ನು ಖರೀದಿ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಸುಮಾರು 2.15 ಕೋಟಿಗೂ ಹೆಚ್ಚು ಬೆಲೆಯ ಕಪ್ಪು ಬಣ್ಣದ ಲೆಕ್ಸಸ್ ಕಾರು ಇದಾಗಿದ್ದು, ಜಾರಕಿಹೊಳಿ ಸಹೋದರರಾದ ಶಾಸಕ ರಮೇಶ ಜಾರಕಿಹೊಳಿ ಹಾಗೂ ವಿಧಾನ ಪರಿಷತ್ ಸದಸ್ಯ ಲಖನ್ ಜಾರಕಿಹೊಳಿ ಅವರು ನೂತನ ಕಾರಿನಲ್ಲಿ ಅಕ್ಕ-ಪಕ್ಕ ಕುಳಿತು ಪ್ರಯಾಣ ಬೆಳೆಸಿದ್ದಾರೆ. ಬೆಳಗಾವಿ ರಾಜಕೀಯ ಹಾಗೂ ರಾಜ್ಯ ಮಟ್ಟದ ಪ್ರಮುಖ ಬೆಳವಣಿಗೆಗಳ ಸಂದರ್ಭದಲ್ಲಿ ಇವರ ಈ ರೀತಿಯ ಒಡನಾಟಗಳು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿವೆ.

ವಿದ್ಯಾರ್ಥಿ ನೇಣಿಗೆ ಶರಣು

ಧಾರವಾಡ: ನಗರದ ಹಂಚಿನಮನಿ ರೆಸಿಡೆನ್ಸಿಯಲ್ ಶಾಲೆಯ ವಿದ್ಯಾರ್ಥಿಯೊಬ್ಬ ಅನುಮಾನಸ್ಪದ ರೀತಿಯಲ್ಲಿ ಆತ್ಮಹತ್ಯೆಗೆ ಶರಣಾದ ಘಟನೆ ನಡೆದಿದೆ. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಹಿರೇಉಳ್ಳಿಗೇರಿ ಗ್ರಾಮದ ಪ್ರೀತಮ್ ಕಂಪ್ಲಿ (15) ಆತ್ಮಹತ್ಯೆ ಮಾಡಿಕೊಂಡಿರುವ ವಿದ್ಯಾರ್ಥಿ. ಸಂಜೆ ತಮ್ಮೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿದ ಮಗ ಆತ್ಮಹತ್ಯೆ ಮಾಡಿಕೊಂಡಿಲ್ಲ. ಆತನನ್ನು ಹತ್ಯೆಗೈದು ನೇಣು ಹಾಕಲಾಗಿದೆ ಎಂದು ಪ್ರೀತಮ್ ಪಾಲಕರು ಆರೋಪಿಸಿ, ಆತನ ಸಾವಿಗೆ ಆಡಳಿತ ಮಂಡಳಿಯೇ ಕಾರಣ. ಆಡಳಿತ ಮಂಡಳಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಧಾರವಾಡ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಶೀಲನೆ ನಡೆಸಿ, ತನಿಖೆ ಕೈಗೊಂಡಿದ್ದಾರೆ.

ಕೆ ಸಿಇಟಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನ, ಜಿಲ್ಲೆಗೆ ಪ್ರಥಮ

ಅರ್ಜುನ ಕಾಲೇಜು ವಿದ್ಯಾರ್ಥಿಗಳ ಸಾಧನೆ



ಧಾರವಾಡ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಕೆ ಸಿಇಟಿ ಪರೀಕ್ಷೆಯಲ್ಲಿ ನಮ್ಮ ಅರ್ಜುನ ಸಂಸ್ಥೆಯ ವಿದ್ಯಾರ್ಥಿಯಾದ ಅನ್ಮೋಲ್ ಪ್ರಭು ಕೃಷಿ ವಿಭಾಗದಲ್ಲಿ ರಾಜ್ಯಕ್ಕೆ 2ನೇ ಸ್ಥಾನ, ಡಿ ಫಾರ್ಮ್ ಬಿ ಫಾರ್ಮ್‌ದಲ್ಲಿ 8ನೇ ಸ್ಥಾನ, ಯೋಗ ನ್ಯಾಚುರೋಪಥಿಯಲ್ಲಿ 9ನೇ ಸ್ಥಾನ, ಪಶು ವೈದ್ಯಕೀಯ ವಿಜ್ಞಾನ ವಿಭಾಗದಲ್ಲಿ 10ನೇ ಮತ್ತು ಎಂಜಿನಿಯರಿಂಗ್ ವಿಭಾಗದಲ್ಲಿ 16ನೇ ಸ್ಥಾನದೊಂದಿಗೆ ನಮ್ಮ ಸಂಸ್ಥೆಯ ಕೀರ್ತಿ ಹೆಚ್ಚಿಸಿ ಉತ್ತಮವಾದ ಸಾಧನೆ ಮಾಡಿದ್ದಾನೆ.

ಎಂಜಿನಿಯರಿಂಗ್ ವಿಭಾಗ: ಅನ್ಮೋಲ್ ಪ್ರಭು (16), ದರ್ಶನ್ ಸುಬ್ರಾಯ ಭಟ್ (80), ಕೇದಾರ್ ಜೋಶಿ (161), ಧ್ರುವಂತ್ ಎಸ್.ಎಂ (379), ವಿನೀತ್ ಚವಾಣ್(871), ಅನೀಶ್ ನಾಯ್ಕ್ (892), ಆಕಾಶ್ ರಾಠೋಡ್ (950), ಈಶಾನ್ ಶಾನಭಾಗ್ (1097), ಸಿಂಚನಾ ಭಟ್ (1556), ಪ್ರಣತಿ ವಿ ಮೆಣಸೂಮನೆ (1577), ಕಾರ್ತಿಕ್ ಭಜಂತ್ರಿ (1776), ಅನನ್ಯಾ ಪುಜಾರ್ (2125), ಆದರ್ಶ್ ಭಟ್ (3289), ಅನ್ನಪೂರ್ಣಾ ನಾಯ್ಕ್ (3347), ಸುಶಾಂತ್ ನಾಯ್ಕ್ (3684), ರಾಜತ್ ಭಟ್ (3750), ನಂದನ್ ಹೆಗಡೆ (3860), ಪ್ರೀತಂ ಚವಾಣ್ (4138), ಆದರ್ಶ್ ರತ್ನಾಕರ್ ಭಟ್, (4403), ನೇಹಾಲ್ ಗಲಗಿ (4452), ಪ್ರಗತಿ ನರೋಣಿ (4779), ಸೃಜನ್ ಎಸ್. ಪಾಟೀಲ್ (4991), ಚಿನ್ಮಯಿ ಎ. ಶಾನಭಾಗ್ (5104), ಪೂರ್ವಿ ಹೆಗಡೆ (5010), ವಿಘ್ನೇಶ್ವರ ಸಿ.ಹುಲಿಮನೆ (5578), ದರ್ಶನ್ ನಾಯ್ಕ್ (5637), ಸಮೀಕ್ಷಾ ಸುರೇಶ್ ಹೆಗಡೆ (5999), ಪ್ರೀತಂ ಯು.ಯಾದಹಳ್ಳಿ (6057), ಸುಧನ್ವ ದೇಶಪಾಂಡೆ (7032), ಅನನ್ಯಾ ಶಾಸ್ತ್ರಿ (7207), ತೇಜಸ್ ಶ್ರೀಧರ ಹೆಗಡೆ (7252), ನಿಶಾಂತ್ ಬಿ.ನಂದವಾಡಗಿ (8193), ಅನುಜ್ಞಾ ಎನ್.ಗಾಂವ್ಕರ್ (9043), ಅಪೂರ್ವಾ ಹೆಗಡೆ (9227), ನಿಧಿ ಹಬ್ಬು (9714)ರ್‍ಯಾಂಕ್ ಪಡೆದಿದ್ದಾರೆ.

ಬಿ ಫಾರ್ಮ ವಿಭಾಗ: ಅನ್ಮೋಲ್ ಪ್ರಭು (8), ದರ್ಶನ್ ಸುಬ್ರಾಯ ಭಟ್ (654), ಕೇದಾರ್ ಜೋಶಿ (839), ಧ್ರುವಂತ್ ಎಸ್.ಎಂ (1387), ಪ್ರೀತಂ (2470), ಅನೀಶ್ ನಾಯ್ಕ್ (2768), ಆಕಾಶ್ ರಾಠೋಡ್ (2854), ವಿನೀತ್ ಚವಾಣ್ (3271), ನೇಹಾಲ್ ಶಿವಕಲ್ಲಪ್ಪ ಗಲಗಿ (4080), ಈಶಾನ್‌ಶಾನಭಾಗ್ (4110), ಕಾರ್ತಿಕ್ ಭಜಂತ್ರಿ (4261), ದರ್ಶನ್ ಸುಬ್ರಾಯ ಭಟ್(654), ಕೇದಾರ್ ಜೋಶಿ (839), ಧ್ರುವಂತ್ ಎಸ್.ಎಂ(1387), ಪ್ರೀತಂ ಚವಾಣ್ (2470), ಅನೀಶ್ ನಾಯ್ಕ್ (2768), ಆಕಾಶ್ ರಾಠೋಡ್ (2854), ವಿನೀತ್ ಚವಾಣ್ (3271), ನೇಹಾಲ್ ಗಲಗಿ (4080), ಈಶಾನ್ ಶಾನಭಾಗ್ (4110), ಕಾರ್ತಿಕ್ ಭಜಂತ್ರಿ(4261) ರ್‍ಯಾಂಕ್ ಪಡೆದಿದ್ದಾರೆ.

ನರ್ಸಿಂಗ್ ವಿಭಾಗ: ಅನ್ಮೋಲ್ ಪ್ರಭು (10), ಪ್ರೀತಂ ಚವಾಣ್ (1755), ನೇಹಾಲ್ ಗಲಗಿ (2970), ಚಿನ್ಮಯಿ ಎ. ಶಾನಭಾಗ್ (4853)

ಕೃಷಿ ವಿಭಾಗ: ಅನ್ಮೋಲ್ ಪ್ರಭು (2), ಪ್ರೀತಂ ಚವಾಣ್ (1020), ನೇಹಾಲ್ ಗಲಗಿ (1545), ಚಿನ್ಮಯಿ ಎ. ಶಾನಭಾಗ್ (1826), ಪ್ರಗತಿ ನರೋಣಿ(3597), ಅಪೂರ್ವಾ ಹೆಗಡೆ (4081), ದರ್ಶನ್ ನಾಯ್ಕ್ (5388), ತೃಪ್ತಿ ಗೌಡ (6811), ಬಿ ಶುಕ್ಲಾ (1052), ದಾಮೋದರ ಎ ಕುಲಕರ್ಣಿ (1707), ವೈಷ್ಣವಿ ಅಂಬ್ಲಿ(355), ಗುರುಪ್ರಸಾದ್ ವಿ ವಕ್ಕುಂದ (3977), ನಂದೀಶ್ ಹೂಗಾರ (4538) ರ್‍ಯಾಂಕ್.

ಪಶುವೈದ್ಯಕೀಯ ವಿಭಾಗ: ಅನ್ಮೋಲ್ ಪ್ರಭು (10), ಪ್ರೀತಂ ಚವಾಣ್ (1750), ನೇಹಾಲ್ ಗಲಗಿ (2961), ಬಿ ಶುಕ್ಲಾ (1090), ದಾಮೋದರ ಎ ಕುಲಕರ್ಣಿ (2371), ವೈಷ್ಣವಿ ಅಂಬ್ಲಿ(1741), ಗುರುಪ್ರಸಾದ್ ವಿ ವಕ್ಕುಂದ (1378), ನಂದೀಶ್ ಹೂಗಾರ(3635) ರ್‍ಯಾಂಕ್.


ಯೋಗ ಮತ್ತು ನ್ಯಾಚುರೋಪತಿ ವಿಭಾಗ: ಅನ್ಮೋಲ್ ಪ್ರಭು (9), ಪ್ರೀತಂ ವಿನಾಯಕ ಚವಾಣ್ (869) ರ್‍ಯಾಂಕ್ ಪಡೆದಿದ್ದಾರೆ. ಒಟ್ಟು 7 ವಿದ್ಯಾರ್ಥಿಗಳು 1000 ರ್‍ಯಾಂಕಿನೊಳಗೆ ಸಾಧನೆ ಮಾಡಿದ್ದಾರೆ. 35 ವಿದ್ಯಾರ್ಥಿಗಳು 5000 ರ್‍ಯಾಂಕಿನೊಳಗೆ ಸಾಧನೆ ಮಾಡಿದ್ದಾರೆ. 55ಕ್ಕೂ ಹೆಚ್ಚು ವಿದ್ಯಾರ್ಥಿಗಳು 10000 ರ್‍ಯಾಂಕಿನೊಳಗೆ ಸಾಧನೆ ಮಾಡಿದ್ದಾರೆ. ಈ ಸಾಧನೆಗೆ ಆಡಳಿತ ಮಂಡಳಿ, ಪ್ರಾಚಾರ್ಯರು, ಸಿಬ್ಬಂದಿ ವರ್ಗ, ಸರ್ವ ಸದಸ್ಯರು ಹರ್ಷ ವ್ಯಕ್ತಪಡಿಸಿದ್ದಾರೆ.

ಒಂದೇ ಗ್ರಾಮದ ಹದಿನೈದು ಯುವಕರು ಅಗ್ನಿವೀರರಾಗಿ ಆಯ್ಕೆ

ಹುಲ್ಯಾಳ: ಭಾರತೀಯ ಸೇನೆಯ ಅಗ್ನಿವೀರ ನೇಮಕಾತಿಯಲ್ಲಿ ಜಮಖಂಡಿ ತಾಲೂಕಿನ ಹುಲ್ಯಾಳ ಗ್ರಾಮದ 15 ಯುವಕರು ನೂತನವಾಗಿ ಆಯ್ಕೆಯಾಗಿದ್ದಾರೆ. ಆಯ್ಕೆಯಾದ ಯುವಕರಲ್ಲಿ ಮಹೇಶ ಕೋರಿ, ಮಲ್ಲಪ್ಪ ಸೋರಗಾಂವಿ, ಪ್ರವೀಣ ಮೆಟಗುಡ್ಡ, ಆಕಾಶ ಮುಗಳಖೋಡ, ಮಲ್ಲಪ್ಪ ಭೂಮಾರ, ಅಭಿಷೇಕ ಬಡಿಗೇರ, ಹನುಮಂತ ಬೆಳಗಲಿ, ಶ್ರೀಧರ ಕೋರಿ, ರಾಜು ಅಂಬಿ, ಜಯಸೂರ್ಯ ಮಂಡಾಗಣಿ, ವಿನಯ ಬೀಳಗಿ, ಮಲ್ಲಪ್ಪಕೋರಿ, ಮುತ್ತು ಔರಸಂಗ, ಮಹಿಬೂಬ ಯಮಕನಮರಡಿ ಹಾಗೂ ರಾಹುಲ ಕುಂಟೆ ಸೇರಿದ್ದಾರೆ. ಯುವಕರ ಈ ಸಾಧನೆಗೆ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು ಹಾಗೂ ಪಿಡಿಒ, ಸುರೇಶ ಕಡಪಟ್ಟಿ ಸೇರಿದಂತೆ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

ವಾಟ್ಸ್ಆ್ಯಪ್ ಯುನಿವರ್ಸಿಟಿ ಸುದ್ದಿಗಳಿಗೆ ಮಹತ್ವ ನೀಡುವ ಅಗತ್ಯವಿಲ್ಲ: ಬೊಮ್ಮಾಯಿ

ಹಾವೇರಿ: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸಂಸದರಿಗೆ ಟಿಕೆಟ್ ನೀಡುವ ಕುರಿತು ಹರಿದಾಡುತ್ತಿರುವ ಸುದ್ದಿಗಳು 'ವಾಟ್ಸ್ಆ್ಯಪ್ ಯುನಿವರ್ಸಿಟಿ'ಯು ಸೃಷ್ಟಿಯಾಗಿದ್ದು, ಅಂತಹ ಸುದ್ದಿಗಳಿಗೆ ಮಹತ್ವ ನೀಡುವ ಅಗತ್ಯವಿಲ್ಲ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಸಚಿವ ಸ್ಥಾನ ಪಡೆಯಲು ನಮ್ಮ ಹೆಸರು ಬಳಕೆ

ಬೊಮ್ಮಾಯಿ ಹಾಗೂ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಕಿರುಕುಳ ನೀಡುತ್ತಿದ್ದಾರೆ ಎಂಬ ಶಾಸಕ ಯಾಸೀರ್‌ಅಹ್ಮದ್‌ಖಾನ್ ಪಠಾಣ್ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ಕಿರುಕುಳ ಎಂಬ ಪದವೇ ನಮ್ಮ ಡಿಕ್ಷನರಿಯಲ್ಲಿ ಇಲ್ಲ. ಕೆಲವರು ಸಚಿವ ಸ್ಥಾನ ಗಿಟ್ಟಿಸಿಕೊಳ್ಳುವ ಉದ್ದೇಶದಿಂದ ನಮ್ಮ ಹೆಸರನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ತಿರುಗೇಟು ನೀಡಿದರು.

ನಗರದಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಬೇಕೆಂಬ ಉದ್ದೇಶದಿಂದ ಪಕ್ಷದ ಹೋರಾಟ ಮುಂದುವರಿಯಲಿದೆ ಎಂದು ತಿಳಿಸಿದರು.

ಬಿಜೆಪಿ-ಜೆಡಿಎಸ್ ಮೈತ್ರಿಯಲ್ಲಿ ಯಾವುದೇ ಸಮಸ್ಯೆ ಉಂಟಾಗಿಲ್ಲ. ಈ ಕುರಿತು ಪಕ್ಷದ ಉನ್ನತ ನಾಯಕರು ಚರ್ಚಿಸಿ ತೀರ್ಮಾನ ಕೈಗೊಳ್ಳಲಿದ್ದು, ಈ ಬಗ್ಗೆ ತಮ್ಮ ಗಮನಕ್ಕೆ ಯಾವುದೇ ಮಾಹಿತಿ ಬಂದಿಲ್ಲ ಎಂದು ಹೇಳಿದರು.

ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಕುರಿತು ಯಾವುದೇ ಚರ್ಚೆ ನಡೆಯುತ್ತಿಲ್ಲ. ಪಕ್ಷ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಹಿಂದುಳಿದ ವರ್ಗಗಳು, ಎಸ್‌ಸಿ ಹಾಗೂ ಎಸ್‌ಟಿ ಸಮುದಾಯಗಳ ಸಂಘಟನೆಗೆ ಹೆಚ್ಚಿನ ಒತ್ತು ನೀಡಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರ ನಾಯಕತ್ವವನ್ನು ಒಪ್ಪಿಕೊಂಡಿರುವ ರೀತಿಯಲ್ಲಿ ಡಿ.ಕೆ. ಶಿವಕುಮಾರ್ ಅವರ ನಾಯಕತ್ವವನ್ನು ಕಾಂಗ್ರೆಸ್ ನಾಯಕರು ಒಪ್ಪಿಕೊಂಡಿಲ್ಲ. ಇದೇ ಕಾರಣದಿಂದ ಸಚಿವರ ರಾಜೀನಾಮೆ, ಖಾತೆ ಬದಲಾವಣೆ ಸೇರಿದಂತೆ ಹಲವು ಗೊಂದಲಗಳು ನಡೆಯುತ್ತಿವೆ. ಡಿ.ಕೆ. ಶಿವಕುಮಾರ ಅವರ ನಿಲುವು ಹಾಗೂ ನಡವಳಿಕೆಯು ಮುಂದಿನ ದಿನಗಳಲ್ಲಿ ಅವರಿಗೆ ಸವಾಲಾಗಿ ಪರಿಣಮಿಸಬಹುದು. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಾಗುವತ್ತ ಅವರು ಗಮನ ಹರಿಸಬೇಕು ಎಂದು ಸಲಹೆ ಮಾಡಿದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಮತ್ತೆ ಯುದ್ಧ ಪರಿಸ್ಥಿತಿ ಉಂಟಾಗಿರುವುದರಿಂದ ಸಮಸ್ಯೆಗಳು ಎದುರಾಗಿವೆ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು ಬೇರೆ ರೀತಿಯಲ್ಲಿ ಹೊಂದಾಣಿಕೆ ಮಾಡಲಾಗುತ್ತಿದೆ. ಆದರೆ, ಅಡುಗೆ ಅನಿಲದ ಬಹುಪಾಲು ಮಧ್ಯ ಪ್ರಾಚ್ಯದ ದೇಶಗಳಿಂದಲೇ ಬರಬೇಕಾಗಿರುವುದರಿಂದ ಬೆಲೆ ಏರಿಕೆಯಾಗಿದೆ. ಆದರೂ ಸಿಲಿಂಡರ್ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ರಸಗೊಬ್ಬರ ತಯಾರಿಕೆಗೆ ಅಗತ್ಯವಾದ ಕಚ್ಚಾ ವಸ್ತುಗಳು ಪೆಟ್ರೋಲಿಯಂ ಉಪ ಉತ್ಪನ್ನಗಳಾಗಿವೆ. ರಷ್ಯಾ, ಮೊರಾಕ್ಕೊ ಹಾಗೂ ಮಧ್ಯಪ್ರಾಚ್ಯ ರಾಷ್ಟ್ರಗಳಿಂದ ಇವುಗಳ ಪೂರೈಕೆ ನಡೆಯುತ್ತಿದ್ದು, ಯುದ್ಧದ ಪರಿಣಾಮವಾಗಿ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿ ಸಮಸ್ಯೆಗಳು ಎದುರಾಗಿವೆ ಎಂದರು.

ಹಾವೇರಿ ಜಿಲ್ಲೆಗೆ ಸಚಿವ ಸ್ಥಾನ ನೀಡಲಿ

ಈ ಬಾರಿ ಹಾವೇರಿ ಜಿಲ್ಲೆಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದ ಅವರು, ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜಿಲ್ಲೆಯ ಯಾವುದೇ ಶಾಸಕರಿಗೆ ಸಚಿವ ಸ್ಥಾನ ಸಿಕ್ಕಿರಲಿಲ್ಲ. ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಇಲ್ಲಿನ ಶಾಸಕರಿಗೆ ಸಚಿವ ಸ್ಥಾನ ನೀಡುವುದು ಅಗತ್ಯವಾಗಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ್

ಕಲಬುರಗಿ ಚೋಟಾ ಪಾಕಿಸ್ತಾನ ಮಾಡಲು ಬಿಡಲ್ಲ

ಗೃಹ ಸಚಿವರ ವಿರುದ್ಧ ತೀವ್ರ ಆಕ್ರೋಶ

ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವಗಳ ಮೇಲೆ ನಾವು ರಾಜಕೀಯ ಮಾಡುತ್ತಿದ್ದೇವೆ. ನೂರಾರು ಜನ ಕಾನೂನು ಕೈಗೆತ್ತಿಕೊಂಡು ಬೈಕ್ ರ್‍ಯಾಲಿಯ ಮೂಲಕ ಪೊಲೀಸ್ ಠಾಣೆಗೆ ನುಗ್ಗಿ ಗದ್ದಲ ಎಬ್ಬಿಸಿದ್ದಾರೆ ಎಂದು ನಮ್ಮ ವಿರುದ್ಧವೇ ಸುಳ್ಳು ಕೇಸ್ ದಾಖಲಿಸಿದವರ ವಿರುದ್ಧ ಗೃಹ ಸಚಿವರು ತಕ್ಷಣವೇ ಕಾನೂನು ಕ್ರಮ ಜರುಗಿಸಬೇಕು ಎಂದು ಮಾಜಿ ಶಾಸಕ ಅಪ್ಪುಗೌಡ ಆಗ್ರಹಿಸಿದರು.

ಕಲಬುರಗಿ: ನಮ್ಮ ಮೇಲೆ ನೂರು ಕೇಸ್‌ಗಳಾದರೂ ಬೆದರಿಕೆಗಳಿಗೆ ಅಂಜುವ ಮಾತೆ ಇಲ್ಲ. ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಗೂಂಡಾಗಿರಿ ಮತ್ತು ಅರಾಜಕತೆಯ ವಿರುದ್ಧ ಹೋರಾಡಲು ಕಲಬುರಗಿಯ ಜನತೆ ಸಿದ್ಧರಾಗಿದ್ದು, ನಾನು ಜೀವಂತವಾಗಿರುವವರೆಗೂ ಕಲಬುರಗಿಯನ್ನು ಚೋಟಾ ಪಾಕಿಸ್ತಾನ ಮಾಡಲು ಬಿಡುವುದಿಲ್ಲ ಎಂದು ಬಿಜೆಪಿ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ್ ಗುಡುಗಿದರು.



ನಗರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಆಳಂದಿನ ಶಿವಲಿಂಗದ ಪೂಜೆ ವೇಳೆ ಹಲ್ಲೆ ನಡೆಸಿದ್ದ ಆರೋಪಿಗಳ ಮೇಲಿನ ಪ್ರಕರಣ ಸರ್ಕಾರ ವಾಪಸ್ ಪಡೆದಿರುವುದನ್ನು ವಿರೋಧಿಸಿ ಬಿಜೆಪಿಯಿಂದ ನಡೆದ ಬೃಹತ್ ಪ್ರತಿಭಟನೆಯಲ್ಲಿ ನಾನು ಯಾವುದೇ ಜಾತಿ, ಧರ್ಮಕ್ಕೆ ನಿಂದಿಸಿಲ್ಲ. ಆದರೂ ತಮ್ಮ ವಿರುದ್ಧ ಸುಳ್ಳು ಎಫ್‌ಐಆರ್ ದಾಖಲಿಸಲಾಗಿದೆ. ಕಲಬುರಗಿಯಲ್ಲಿ ಕೆಲವರು ಸರ್ಕಾರ ನಮ್ಮದಿದೆ ಎನ್ನುವ ಭ್ರಮೆಯಲ್ಲಿದ್ದು, ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದೆ ಎಂಬುದನ್ನು ಮರೆಯಬಾರದು. ಈ ಅರಾಜಕತೆಯ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆಯಲಾಗುವುದು ಹಾಗೂ ಗೂಂಡಾಗಿರಿ ವಿರುದ್ಧ ಒಂದು ಲಕ್ಷ ಸಹಿ ಸಂಗ್ರಹ ಅಭಿಯಾನ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

> ಪ್ರತಿಭಟನೆಗೆ ಅನುಮತಿ ಕೋರಿದರೇ ಪೊಲೀಸ್ ಇಲಾಖೆ ಕ್ಯಾರೇ ಎನ್ನುತ್ತಿಲ್ಲ. ನೂರಾರು ಜನ ಬೈಕ್ ರ್‍ಯಾಲಿ ಮಾಡಿ ಬಾಯಿಗೆ ಬಂದಂತೆ ಅವಾಚ್ಯ ಸಾಮಾಜಿಕ ಜಾಲತಾಣದಲ್ಲಿ ಧಮ್ಕಿ ಹಾಕುತ್ತಾರೆ. ಇವರ ಮೇಲೆ ದೂರು ಕೊಟ್ಟರೆ ತೆಗೆದುಕೊಳ್ಳುವುದಿಲ್ಲ. ಪೊಲೀಸ್ ಇಲಾಖೆ ಸರ್ಕಾರದ ಕೈಗೊಂಬೆಯಂತೆ ವರ್ತನೆ ತೋರುತ್ತಿದೆ.
> ■ **ದತ್ತಾತ್ರೇಯ ಪಾಟೀಲ ರೇವೂರ್, ಮಾಜಿ ಶಾಸಕ**

ಮಾಜಿ ಶಾಸಕ ಸುಭಾಷ್ ಗುತ್ತೇದಾರ್ ಮಾತನಾಡಿದರು.

ಮಾಜಿ ಎಂಎಲ್ಸಿ ಅಮರನಾಥ ಪಾಟೀಲ, ಶರಣಪ್ಪ ತಳವಾರ್, ಅವಣ್ಣ ಮ್ಯಾಕೇರಿ, ನಿತಿನ್ ಗುತ್ತೇದಾರ್, ಶಿವರಾಜ್ ಪಾಟೀಲ್, ಲಿಂಗರಾಜ ಬಿರಾದಾರ್, ರಾಜು ವಾಡೆಕರ್, ಸಿದ್ದಾಜಿ ಪಾಟೀಲ್, ದಯಾಘನ ಧಾರವಾಡಕರ್, ವಿಶಾಲ್ ದರ್ಗಿ, ರಾಮಚಂದ್ರ ಜಾಧವ ಸೇರಿದಂತೆ ಹಲವರು ಪ್ರಮುಖರು ಇದ್ದರು.

> ಉದ್ದೇಶಪೂರ್ವಕವಾಗಿಯೇ ಅಪ್ಪು ಗೌಡರ ವಿರುದ್ಧ ದಾಖಲಾದ ಸುಳ್ಳು ಪ್ರಕರಣ ಸರ್ಕಾರ ಕೂಡಲೇ ವಾಪಸ್ ಪಡೆಯಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಜಿಲ್ಲೆಯಾದ್ಯಂತ 20,000ಕ್ಕೂ ಹೆಚ್ಚು ಕಾರ್ಯಕರ್ತರನ್ನು ಸೇರಿಸಿ ಸರ್ಕಾರದ ವಿರುದ್ಧ ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು.
> ■ **ಬಸವರಾಜ್ ಮತ್ತಿಮಡು, ರಾಜ್ಯ ಕಾರ್ಯದರ್ಶಿ ಶಾಸಕ**

> ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದ ಪ್ರತಿಭಟನೆಯಲ್ಲಿ ಮಾಜಿ ಶಾಸಕರು ಹಳೆಯ ಘಟನೆಯ ಮೆಲುಕು ಹಾಕಿದ್ದಾರೆಯೇ ಹೊರತು ಯಾರನ್ನೂ ನಿಂದಿಸಿಲ್ಲ. ಆದರೆ, ಅವರ ವಿರುದ್ಧ ಸುಳ್ಳು ಕೇಸ್ ಹಾಕಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಪೊಲೀಸ್ ಠಾಣೆಗೆ ನುಗ್ಗಿದ 18 ಮಂದಿ ವಿರುದ್ಧ ಪೊಲೀಸರು ತಕ್ಷಣ ಕ್ರಮ ಕೈಗೊಳ್ಳಬೇಕು.
> ■ **ಅಶೋಕ್ ಬಗಲಿ, ಬಿಜೆಪಿ ಜಿಲ್ಲಾಧ್ಯಕ್ಷ**

ಬಿಜೆಪಿ ಅಭ್ಯರ್ಥಿಗಳ ಆಯ್ಕೆಗೆ ಸ್ವಾಗತ

ಬೆಳಗಾವಿ: ತಮ್ಮ ರಾಜ್ಯಸಭಾ ಸದಸ್ಯತ್ವದ ಅವಧಿ ಇದೇ ತಿಂಗಳ 25ರಂದು ಮುಕ್ತಾಯಗೊಳ್ಳಲಿದ್ದು, ನೂತನ ರಾಜ್ಯಸಭಾ ಸದಸ್ಯರಾಗಿ ಧಾರವಾಡದ ಹಾಲುಮತದ ಎಂ.ನಾಗರಾಜ್ ಅವರನ್ನು ಆಯ್ಕೆ ಮಾಡಿರುವುದನ್ನು ಸ್ವಾಗತಿಸುತ್ತೇನೆ ಎಂದು ರಾಜ್ಯಸಭಾ ಸದಸ್ಯ ಈರಣ್ಣಾ ಕಡಾಡಿ ಹೇಳಿದರು.



ಸೋಮವಾರ ಬೆಳಗಾವಿ ನಗರದ ಸರ್ಕಿಟ್ ಹೌಸ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತೀಯ ಜನತಾ ಪಕ್ಷವು ಸಾಮಾನ್ಯ ಕಾರ್ಯಕರ್ತರಿಗೆ ಅವಕಾಶ ನೀಡುವ ಪರಂಪರೆಯನ್ನು ಮುಂದುವರಿಸಿದ್ದು, ಎಂ.ನಾಗರಾಜ್ ಅವರ ಜೊತೆಗೆ ವಿಧಾನಪರಿಷತ್ತಿಗೆ ಲಿಂಗಾಯತ ಸಮಾಜದ ಲಿಂಗರಾಜ್ ಪಾಟೀಲ್ ಹಾಗೂ ಮೈಸೂರಿನ ಮಡಿವಾಳ ಸಮಾಜದ ರಘು ಕೌಟಿಲ್ಯ ಅವರನ್ನು ಆಯ್ಕೆ ಮಾಡಿರುವುದು ಸಂತಸದ ವಿಷಯ ಎಂದು ಹೇಳಿದರು. ತಾವು ಕೂಡ ಸಾಮಾನ್ಯ ಕಾರ್ಯಕರ್ತರಾಗಿ ಪಕ್ಷದಲ್ಲಿ ಬೆಳೆದು ಬಂದಿದ್ದು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಬಿ.ಎಲ್.ಸಂತೋಷ, ಪ್ರಹ್ಲಾದ ಜೋಶಿ ಹಾಗೂ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಲು ಅವಕಾಶ ನೀಡಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಿದರು. ತಮ್ಮ ಆರು ವರ್ಷಗಳ ಅವಧಿಯಲ್ಲಿ ರೂ.23.53 ಕೋಟಿ ಅನುದಾನದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದು ತಿಳಿಸಿದ ಅವರು, ಬೆಳಗಾವಿ ವಿಮಾನ ನಿಲ್ದಾಣಕ್ಕೆ ಕಿತ್ತೂರು ರಾಣಿ ಚನ್ನಮ್ಮ ಅವರ ಹೆಸರಿಡುವ ಹಾಗೂ ಅವರ ಪ್ರತಿಮೆ ಸ್ಥಾಪಿಸುವ ಯೋಜನೆ ಅಂತಿಮ ಹಂತದಲ್ಲಿದೆ ಎಂದರು. ಈ ವೇಳೆ ನಗರಸೇವಕ ರಾಜಶೇಖರ ಡೋಣಿ, ಈರಯ್ಯಾ ಖೋತ್, ಬಾರಕರ್, ಮಹಾದೇವ ರಾಥೋಡ್, ಸಿದ್ದನಗೌಡ ಪಾಟೀಲ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ನಾಳೆ ವಿದ್ಯುತ್ ವ್ಯತ್ಯಯ

ಕುಮಟಾ : ಉಪವಿಭಾಗದ ನಗರ ಶಾಖೆಯ 11ಕೆ.ವಿ ಕುಮಟಾ ಟೌನ ಮತ್ತು ಗ್ರಾಮೀಣ ಶಾಖೆಯ 11ಕೆ.ವಿ ಧಾರೇಶ್ವರ ಮಾರ್ಗದಲ್ಲಿ ಐ.ಆರ್.ಬಿ ರವರ ವಿದ್ಯುತ್ ಮಾರ್ಗದ ಸ್ಥಳಾಂತರ ಕಾಮಗಾರಿ ಇರುವುದರಿಂದ 11ಕೆ.ವಿ ಕುಮಟಾ ಟೌನ್ ಮತ್ತು 11ಕೆ.ವಿ ಧಾರೇಶ್ವರ ಮಾರ್ಗದಲ್ಲಿ ಮತ್ತು 11ಕೆ.ವಿ ಚಿತ್ರಗಿ ಮಾರ್ಗದಲ್ಲಿ ತುರ್ತುನಿರ್ವಹಣ ಕಾಮಗಾರಿ ಇರುವುದರಿಂದ ಹಾಗೂ ಗ್ರಾಮೀಣ ಶಾಖೆಯ ಮಿರ್ಜಾನದಲ್ಲಿ ಹೊಸ 11ಕೆ.ವಿ ಮಾರ್ಗದ ರಚನೆ ಕಾಮಗಾರಿ ಇರುವುದರಿಂದ 11ಕೆ.ವಿ ಮಿರ್ಜಾನ ಮತ್ತು 11ಕೆ.ವಿ ಕತಗಾಲ ಮಾರ್ಗದಲ್ಲಿ ಜೂನ್.10ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಗ್ರಾಹಕರು ಸಹಕರಿಸ ಬೇಕ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು ಹೆಸ್ಕಾಂ, ಕುಮಟಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಹಶೀಲ್ದಾರರಾಗಿ ಪ್ರಸಾದ ನೇಮಕ

ಮುಂಡಗೋಡ: ನೂತನ ತಹಶೀಲ್ದಾರರಾಗಿ ಎಸ್.ಎ.ಪ್ರಸಾದ ಸೋಮವಾರ ಅಧಿಕಾರ ಸ್ವೀಕಾರ ಮಾಡಿದರು. ಇವರು ಉಡುಪಿ ಜಿಲ್ಲೆಯ ಹೆಬ್ರಿ ತಾಲೂಕಿನ ತಹಶೀಲ್ದಾರಾಗಿ ಸೇವೆ ಸಲ್ಲಿಸುತ್ತಿದ್ದರು. ಈ ಹಿಂದೆ ಇದ್ದ ತಹಶೀಲ್ದಾರ ಶಂಕರ ಗೌಡಿ ಅವರು ಕಳೆದ ನಾಲ್ಕು ವರ್ಷದಿಂದ ದಕ್ಷ ಹಾಗೂ ಪ್ರಾಮಾಣಿಕ ಸೇವೆ



ಸಲ್ಲಿಸಿದ್ದರು.

ಕಾರ್ಯಕರ್ತೆಯರ ನೇಮಕಕ್ಕೆ ಒತ್ತಾಯ



ಮುಂಡಗೋಡ: ಆನಂದ ನಗರದ ಅಂಗನವಾಡಿ ಕೇಂದ್ರಕ್ಕೆ ಕಾರ್ಯಕರ್ತೆಯನ್ನು ನೇಮಿಸುವಂತೆ ಆಗ್ರಹಿಸಿ ಸೋಮವಾರ ಸ್ಥಳೀಯರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಆನಂದ ನಗರದ ಅಂಗನವಾಡಿ ಕೇಂದ್ರ ಕಾರ್ಯಕರ್ತೆ ನಿವೃತ್ತಿ ಹೊಂದಿ 1 ವರ್ಷಕ್ಕಿಂತ ಹೆಚ್ಚಾಗಿದೆ. ಈವರೆಗೆ ಹೊಸದಾಗಿ ಅಂಗನವಾಡಿ ಕಾರ್ಯಕರ್ತೆಯ ನೇಮಕ ಆಗಿರುವುದಿಲ್ಲ. ಈ ಓಣಿಯಲ್ಲಿ ಎಸ್ಸಿ-ಎಸ್ಟಿ ಮಕ್ಕಳು ಸೇರಿದಂತೆ ಇತರೆ ಸಮಾಜದ ಬಡ ಮಕ್ಕಳು ಇದ್ದು, ಇವರ ವಿದ್ಯಾಭ್ಯಾಸಕ್ಕೆ ತೊಂದರೆ ಆಗುತ್ತಿದೆ. ಇದರಿಂದ ಅನಾಥರು, ನಿರ್ಗತಿಕ ಬಡಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಆದ್ದರಿಂದ ಹೊಸ ನೇಮಕಾತಿ ಮಾಡಿ ಕೂಡಲೇ ಈ ಶೈಕ್ಷಣಿಕ ವರ್ಷದಲ್ಲಿ ಅಂಗನವಾಡಿ ಕಾರ್ಯಕರ್ತೆಯ ನೇಮಕ ಮಾಡುವಂತೆ ಅವರು ನೀಡಿದ ಮನವಿಯಲ್ಲಿ ತಿಳಿಸಿದ್ದಾರೆ.ಜಾನು ಜೋರೆ, ಲಕ್ಷ್ಮೀ ನಾಯ್ಕ, ಕಾವ್ಯ ಭೋವಿವಡ್ಡರ, ಉಮಾ ಆಚಾರಿ, ಮಾಲತಿ ನಾಯ್ಕ, ಅಂಜನಾ ಚೌಡಳ್ಳಿ ಸೇರಿದಂತೆ ಇತರರಿದ್ದರು.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	66799	67299
ಬಿಳಿಗೋಟು	25009	35399
ಕೆಂಪುಗೋಟು	23299	36879
ಬೆಟ್ಟೆ	41299	48389
ರಾಶಿ	50599	52909
ಚಾಲಿ	43800	48299

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58899	58899
ರಾಶಿ	50299	55599
ಬೆಟ್ಟೆ	38000	48769
ಕೆಂಪುಗೋಟು	18899	37199
ಬಿಳಿಗೋಟು	20000	35199
ಚಾಲಿ	37599	48141
ಕೋಕಾ	12909	29499
ಕಾಳುಮೆಣಸು	60211	68555



ಬನವಾಸಿ: ಸಮೀಪದ ಬೆಂಗಳೆ ಗ್ರಾಮದ ಅಂಬೇಡ್ಕರ್ ಭವನದಲ್ಲಿ ಭಾನುವಾರ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶ್ರೀರಕ್ಷಾ ಮಹಿಳಾ ಜ್ಞಾನ ವಿಕಾಸ ಕೇಂದ್ರದ ವತಿಯಿಂದ ಹಮ್ಮಿಕೊಂಡ ಆರೋಗ್ಯದ ಕುರಿತು ಮಾಹಿತಿ ಕಾರ್ಯಕ್ರಮವನ್ನು ಯೋಗ ಶಿಕ್ಷಕಿ ಭುವನೇಶ್ವರಿ ಉದ್ಘಾಟಿಸಿದರು.

ಉತ್ತಮ ಆರೋಗ್ಯಕ್ಕೆ ಯೋಗ ಸಹಕಾರಿ

ಬನವಾಸಿ: ದೇಹದ ಆರೋಗ್ಯ ಕಾಪಾಡಿಕೊಳ್ಳಲು ಔಷಧಗಳಿಗಿಂತ ಯೋಗಾಸನಗಳು ಹೆಚ್ಚು ಉಪಯುಕ್ತವಾಗಿವೆ. ನಿಯಮಿತ ಯೋಗಾಭ್ಯಾಸದಿಂದ ಅನೇಕ ರೀತಿಯ ಆರೋಗ್ಯ ಸಮಸ್ಯೆಗಳಿಂದ ದೂರವಿರಬಹುದು ಎಂದು ಯೋಗ ಶಿಕ್ಷಕಿ ಭುವನೇಶ್ವರಿ ಹೇಳಿದರು.

ಅವರು ಸಮೀಪದ ಬೆಂಗಳೆ ಗ್ರಾಮದ ಅಂಬೇಡ್ಕರ್ ಭವನದಲ್ಲಿ ಭಾನುವಾರ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶ್ರೀರಕ್ಷಾ ಮಹಿಳಾ ಜ್ಞಾನ ವಿಕಾಸ ಕೇಂದ್ರದ ವತಿಯಿಂದ ಹಮ್ಮಿಕೊಂಡ ಆರೋಗ್ಯದ ಕುರಿತು ಮಾಹಿತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಹುತೇಕ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆ ಎಂದರೆ ಅದು ಪಿಸಿಓಡಿ ಅಥವಾ ಪಿಸಿಓಎಸ್ ಸಮಸ್ಯೆ. ಅನಿಯಮಿತ ಮುಟ್ಟಿನ ದಿನಗಳು, ಗರ್ಭಾವಸ್ಥೆಯ ಸಮಸ್ಯೆ, ತಲೆನೋವು, ಅತಿಯಾದ ದೇಹದ ತೂಕ ಪಿಸಿಓಡಿಯಿಂದ ಕಾಣಿಸಿಕೊಳ್ಳುತ್ತವೆ. ಇದರ ನಿವಾರಣೆಗೆ ಯೋಗಾಸನಗಳು ಅತ್ಯುತ್ತಮ ಪರಿಹಾರವಾಗಿದೆ. ಭುಜಂಗಾಸನ, ಬಾಲಾಸನ, ವಜಸ್ರಾಸನ ಸೇರಿದಂತೆ ಅನೇಕ ವ್ಯಾಯಾಮಗಳು ಹಾಗೂ ಪ್ರಾಣಾಯಾಮ, ಮುದ್ರೆಗಳು ಪಿಸಿಓಎಸ್ ಸಮಸ್ಯೆಗೆ ಪರಿಹಾರ ನೀಡುತ್ತದೆ. ಆದರೆ ನಿಯಮಿತ ಅಭ್ಯಾಸ ಮುಖ್ಯವಾಗಿರುತ್ತದೆ ಎಂದರು. ಮಹಿಳಾ ಜ್ಞಾನವಿಕಾಸ ಕೇಂದ್ರದ ತಾಲೂಕು ಸಮನ್ವಯಾಧಿಕಾರಿ ಮಲ್ಲಿಕಾ ಶೆಟ್ಟಿ ಮಾತನಾಡಿದರು.ಮಹಿಳಾ ಜ್ಞಾನವಿಕಾಸದ ಸದಸ್ಯೆ ಭಾರತಿ ಅಧ್ಯಕ್ಷತೆವಹಿಸಿದ್ದರು. ಕಾರ್ಯಕ್ರಮದಲ್ಲಿ ವಲಯ ಮೇಲ್ವಿಚಾರಕಿ ಸುನಂದಾ ನಾಯ್ಕ್, ಸೇವಾ ಪ್ರತಿನಿಧಿ ಲಕ್ಷ್ಮೀ ಕಬ್ಬೇರ, ಎನ್. ಸವಿತಾ, ಶೀಲಾ, ಬಿ.ಸವಿತಾ ಹಾಗೂ ಶ್ರೀರಕ್ಷಾ ಮಹಿಳಾ ಜ್ಞಾನವಿಕಾಸ ಕೇಂದ್ರದ ಸದಸ್ಯರು ಉಪಸ್ಥಿತರಿದ್ದರು.



ಗೋಕರ್ಣ: ಸೋಮವಾರ ಬೆಳಗ್ಗೆಯಿಂದ ಸುರಿದ ಭಾರೀ ಮಳೆಯ ಅಬ್ಬರಕ್ಕೆ ಇಲ್ಲಿನ ಪ್ರಮುಖ ಮಾರ್ಗಗಳಲ್ಲಿ ಚರಂಡಿ ನೀರು ತುಂಬಿ ರಸ್ತೆಗೆ ಆವರಿಸಿದ್ದು, ರಸ್ತೆ ನದಿಯಾಗಿ ಮಾರ್ಪಟ್ಟಿದೆ. ಇಲ್ಲಿನ ರಥಬೀದಿ, ಮಹಾಬಲೇಶ್ವರ ಮಂದಿರದ ಮೂಲಕ ಮುಖ್ಯ ಕಡಲತೀರಕ್ಕೆ ಸಾಗುವ ರಸ್ತೆ ಮತ್ತಿತರ ಕಡೆಗಳಲ್ಲಿ ನೀರು ತುಂಬಿ ಪಾದಾಚಾರಿಗಳು, ವಾಹನ ಸವಾರರು ಪರದಾಡುವಂತಾಯಿತು.

ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಸೂಚನೆ

ಉತ್ತರ ಕನ್ನಡ ಜಿಲ್ಲೆಗೆ ರೆಡ್ ಅಲರ್ಟ್

ಕಾರವಾರ: ಭಾರತೀಯ ಹವಾಮಾನ ಇಲಾಖೆ, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು ರವರ ಮುನ್ಸೂಚನೆಯಂತೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಜೂ.8 ಮಧ್ಯಾಹ್ನ 1 ಗಂಟೆಯಿಂದ ಜೂ.10ರಂದು ಬೆಳಗ್ಗೆ 8.30ರವರೆಗೆ ರೆಡ್ ಅಲರ್ಟ್ ಇದ್ದು, ಹೆಚ್ಚಿನ ಮಳೆಯಾಗುವ ಸಾಧ್ಯತೆಯಿರುವ ಬಗ್ಗೆ ಮುನ್ಸೂಚನೆ ನೀಡಲಾಗಿರುತ್ತದೆ. ಕಾರಣ ಜಿಲ್ಲಾಡಳಿತವು ಜಿಲ್ಲೆಯಲ್ಲಿ ಮುಂಗಾರು ಪೂರ್ವ ಸಿದ್ಧತೆಯನ್ನು ಈಗಾಗಲೇ ಕೈಗೊಂಡಿರುತ್ತದೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ತುರ್ತು ಕಾರ್ಯಾಚರಣೆ ಕೇಂದ್ರವನ್ನು ತೆರೆಯಲಾಗಿದ್ದು, ಸಾರ್ವಜನಿಕರು ಜಿಲ್ಲೆಯ ಹವಾಮಾನ ಪರಿಸ್ಥಿತಿಯ ಕುರಿತಂತೆ 24★7 ವರದಿಗಳನ್ನು ಜಿಲ್ಲಾಧಿಕಾರಿಗಳ ಸಾಮಾಜಿಕ ಜಾಲತಾಣ ಹಾಗೂ ಸ್ಥಳೀಯ ಸುದ್ದಿ ಪತ್ರಿಕೆಗಳನ್ನು ಪರಿಶೀಲಿಸಬಹುದಾಗಿರುತ್ತದೆ.

ಕೃಷಿಕರು ಮಳೆ, ಸಿಡಿಲಿನಂತಹ ಸಂದರ್ಭದಲ್ಲಿ ಕೃಷಿ ಚಟುವಟಿಕೆಯಿಂದ ದೂರವಿರುವುದು ಸಾರ್ವಜನಿಕರು, ಮಕ್ಕಳು, ಕಾರ್ಮಿಕರು ಮಳೆ ಬೀಳುವ ಸಂದರ್ಭದಲ್ಲಿ ಹೊರಗೆ ತಿರುಗಾಡದೆ, ಸೂಕ್ತ ಕಟ್ಟಡದಲ್ಲಿ ಆಶ್ರಯ ಪಡೆಯುವುದು. ಈ ಸಂದರ್ಭದಲ್ಲಿ ಮಕ್ಕಳು, ಸಾರ್ವಜನಿಕರು ಅಪಾಯಕಾರಿ ಮರ, ವಿದ್ಯುತ್ ಕಂಬದ ಹತ್ತಿರ ಸುಳಿಯಬಾರದು ಮತ್ತು ತುಂಡಾದ ವಿದ್ಯುತ್ ತಂತಿಗಳಿಂದ ದೂರವಿರುವುದು ದುರ್ಬಲವಾದ, ಹಳೆಯ ಕಟ್ಟಡ ಅಥವಾ ಮರಗಳ ಹತ್ತಿರ, ಮರಗಳ ಕೆಳಗೆ ನಿಲ್ಲಬಾರದು. ಈ ಅಂಶಗಳನ್ನು ಗುಡುಗು ಸಿಡಿಲು, ಮಳೆ ಗಾಳಿಯಂತಹ ಸಂದರ್ಭಗಳಲ್ಲಿ ಚಾಚೂ ತಪ್ಪದೇ ಕಡ್ಡಾಯವಾಗಿ ಪಾಲಿಸುವುದು.



ಸಾಂದರ್ಭಿಕ ಚಿತ್ರ

ಪಾಲಕರು ಜಾಗ್ರತೆವಹಿಸಿ

ಈ ಅವಧಿಯಲ್ಲಿ ಮೀನುಗಾರರು ಸಮುದ್ರ ಪ್ರದೇಶಗಳಿಗೆ ಹೋಗದಂತೆ ಸೂಚಿಸಲಾಗಿದೆ. ನೀರು ಇರುವ ತಗ್ಗು ಪ್ರದೇಶ, ಕೆರೆ, ನದಿ ತೀರ, ಸಮುದ್ರ ತೀರಕ್ಕೆ ಹೋಗದಂತೆ ಸಾರ್ವಜನಿಕರು ಹಾಗೂ ಮುಖ್ಯವಾಗಿ ಮಕ್ಕಳು ಹೋಗದಂತೆ ಪಾಲಕರು ಜಾಗ್ರತೆವಹಿಸುವುದು.

ಸಾರ್ವಜನಿಕರು ತಗ್ಗು ಪ್ರದೇಶದಲ್ಲಿ ಅಥವಾ ಮಳೆಯಿಂದ ಅಪಾಯಕ್ಕೀಡಾಗುವ ಪ್ರದೇಶದಲ್ಲಿ ವಾಸವಿದ್ದಲ್ಲಿ ಅಥವಾ ಶಿಥಿಲಾವಸ್ಥೆಯಿಂದ ಜಾರುವ ಹಂತದಲ್ಲಿರುವ ಕಂಪೌಂಡ್ ಅಥವಾ ಮನೆಯ ಗೋಡೆ, ಇಂತಹ ದುರ್ಬಲವಾದ ಕಟ್ಟಡದಲ್ಲಿ ವಾಸವಿರುವ ಸಾರ್ವಜನಿಕರು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಳ್ಳುವುದು, ಅಗತ್ಯವಿದ್ದಲ್ಲಿ ಈಗಾಗಲೇ ಸಂಬಂಧಿಸಿದ ತಹಶೀಲ್ದಾರರಿಂದ ಗುರುತಿಸಲ್ಪಟ್ಟ

ಪ್ರವಾಸಿಗರು, ಹಾಗೂ ಸಾರ್ವಜನಿಕರು ನದಿ, ನೀರಿರುವ ಪ್ರದೇಶ ಮತ್ತು ಸಮುದ್ರಕ್ಕೆ ಇಳಿಯದಂತೆ ಕಟ್ಟೆಚ್ಚರ

ಕಾಳಜಿ ಕೇಂದ್ರದಲ್ಲಿ ಕಡ್ಡಾಯವಾಗಿ ಆಶ್ರಯ ಪಡೆದುಕೊಳ್ಳುವುದು. ಗ್ರಾಮೀಣ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕಾಲುಸಂಕ, ಕಿರು ಸೇತುವೆ ಇತ್ಯಾದಿಗಳನ್ನು ದಾಟುವ ಮುನ್ನ ಎಚ್ಚರಿಕೆ ವಹಿಸುವುದು.ಈಅಂಶಗಳಂತೆಶಿಥಿಲಾವಸ್ಥೆಯಿರುವ ಅಥವಾ ಕುಸಿತದ ಹಂತದ ಕಂಪೌಂಡ್ ಅಥವಾ ಮನೆಯ ಗೋಡೆ ಕಂಡುಬಂದಲ್ಲಿ ತುರ್ತು ಸೇವೆಗೆ ಟೋಲ್ ಫ್ರೀ ಸಂಖ್ಯೆ 24-7 ಕಂಟ್ರೋಲ್ ರೂಂ 08382-229857, ವಾಟ್ಸ್ಪ್ ನಂ:9483511015 ಗೆ ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಕೆ.ಲಕ್ಷ್ಮಿಪ್ರಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಭೂತಿ ಜಲಪಾತ: ಇಂದಿನಿಂದ ಪ್ರವಾಸಿಗರಿಗೆ ತಾತ್ಕಾಲಿಕ ನಿರ್ಬಂಧ

ಅಂಕೋಲಾ: ತಾಲೂಕಿನ ಅಚವೆ ಗ್ರಾಮ ಪಂಚಾಯತ್ ವ್ಯಾಪ್ತಿಯ ತಾಲೂಕಿನ ಪ್ರಸಿದ್ಧ ಪ್ರವಾಸಿ ತಾಣ ವಿಭೂತಿ ಜಲಪಾತಕ್ಕೆ ಜೂನ್ 8 ರಿಂದ ಪ್ರವಾಸಿಗರಿಗೆ ಸುರಕ್ಷತೆ ದೃಷ್ಟಿಯಿಂದ ತಾತ್ಕಾಲಿಕ ಅವಧಿಯ ನಿರ್ಬಂಧ ಹೇರಲಾಗಿದೆ.

ಹಸಿರು ಕಾನನದ ನಡುವೆ ಭೋರ್ಗರೆಯುವ ಜಲಪಾತ ಪ್ರವಾಸಿಗರನ್ನು ಆಕರ್ಷಿಸಿ ಪ್ರತಿದಿನ ನೂರಾರು ಸಂಖ್ಯೆಯ ಪ್ರವಾಸಿಗರು ಜಲಪಾತ ವೀಕ್ಷಣೆಗೆ ಬರುತ್ತಿದ್ದರು.

ತಾಲೂಕಿನಲ್ಲಿಮಳೆಆರಂಭವಾಗಿದ್ದು ಮುಂದಿನ ದಿನಗಳಲ್ಲಿ ಮಳೆ ತೀವ್ರಗೊಳ್ಳುವ

ಸಾಧ್ಯತೆ ಇದೆ. ಮಳೆಗಾಲದಲ್ಲಿ ಜಲಪಾತದಲ್ಲಿ ನೀರು ದುಮುಕುವ ಪ್ರಮಾಣ ಹೆಚ್ಚಲಿದ್ದು, ಪ್ರವಾಸಿಗರು ಜಲಪಾತದ ನೀರಿನಲ್ಲಿ ಇಳಿಯುವುದು ಎತ್ತರಕ್ಕೆ ಏರುವುದು ಮೊದಲಾದ ಸಾಹಸಗಳಿಗೆ ಮುಂದಾಗುತ್ತಿರುವುದು



ಮಳೆಯಸಂದರ್ಭದಲ್ಲಿಅಪಾಯಕಾರಿ ಆಗಿ ಪರಿಣಮಿಸುವ ಸಾಧ್ಯತೆ ಇರುವುದರಿಂದ ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಮಳೆಯ ತೀವ್ರತೆ ಕಡಿಮೆ ಆಗುವ ವರೆಗೆ ಜಲಪಾತಕ್ಕೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲು ಸ್ಥಳೀಯ ಗ್ರಾಮ ಅರಣ್ಯ ಸಮಿತಿಯ ವತಿಯಿಂದ ನಿರ್ಧರಿಸಲಾಗಿದ್ದು ಈ ದಿಶೆಯಲ್ಲಿ ಸೋಮವಾರದಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.



ಸಿದ್ದಾಪುರ: ತಾಲೂಕಿನ ವಾಜಗದ್ದೆ ಶ್ರೀ ದುರ್ಗಾವಿನಾಯಕ ದೇವಸ್ಥಾನದ ಸಭಾಭವನದಲ್ಲಿ ಯಕ್ಷಚಂದನ ದಂಟಕಲ್ ಇದರ ವಾರ್ಷಿಕೋತ್ಸವದ ಅಂಗವಾಗಿ ಭಾನುವಾರ ಅರಮನೆಯ ಚಾಡಿ ಏಕವ್ಯಕ್ತಿ ಯಕ್ಷಗಾನ ತಾಳಮದ್ದಳೆ ಪ್ರದರ್ಶನಗೊಂಡಿತು.

ಮತದಾರರ ಪಟ್ಟಿ ಪಾರದರ್ಶಕವಾಗಿರುವಂತೆ ಜಾಗೃತಿವಹಿಸಿ

ಕಾರವಾರ: ಅರ್ಹ ಮತದಾರರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗುವಂತೆ ಹಾಗೂ ಮತದಾರರ ಪಟ್ಟಿ ಪಾರದರ್ಶಕವಾಗಿರುವಂತೆ ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ನೇಮಕ ಮಾಡಿದ ತಂಡಗಳು ಜಾಗರೂಕರಾಗಿರಬೇಕು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಮನವಿ ಮಾಡಿದರು.

ಕಾರವಾರದ ಬಿಜೆಪಿ ಕಾರ್ಯಾಲಯದಲ್ಲಿ (ಸುಭಾಷಚಂದ್ರ ಬೋಸ್ ಮತ್ತು ಚಂದ್ರಶೇಖರ ಅಜಾದ್ ಮಹಾಶಕ್ತಿ ಕೇಂದ್ರ ವ್ಯಾಪ್ತಿ) ಹಾಗೂ ನಂದನಗದ್ದಾ ಗಣಪತಿ ದೇವಾಲಯ ಸಭಾಭವನದಲ್ಲಿ (ಭಗತ್ ಸಿಂಗ್ ಮಹಾಶಕ್ತಿ ಕೇಂದ್ರ ವ್ಯಾಪ್ತಿ) ಸೋಮವಾರ ನಡೆದ ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಬಿಎಲ್ ಓ 2, ಬೂತ್ ಅಧ್ಯಕ್ಷರು, ಸದಸ್ಯರ ತಂಡಗಳು ಹಾಗೂ ಮಹಿಳಾ ಪ್ರಮುಖರ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮತದಾರರ ಪಟ್ಟಿ ಪಾರದರ್ಶಕವಾಗಿರಬೇಕು. ಈ ನಿಟ್ಟಿನಲ್ಲಿ ರಚಿಸಲಾದ ತಂಡಗಳ ಸದಸ್ಯರು, ಬಿಎಲ್ ಓ 2, ಬೂತ್ ಅಧ್ಯಕ್ಷರು ಸೇರಿದಂತೆ ಎಲ್ಲರೂ ತಮಗೆ ವಹಿಸಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು ಎಂದು ಅವರು ತಿಳಿಸಿದರು.

ನಗರ ಮಂಡಲ ಅಧ್ಯಕ್ಷ ನಾಗೇಶ ಕುರ್ಡೇಕರ, ಪ್ರಭಾರಿ ರಾಜು ಭಂಡಾರಿ, ನಗರಸಭೆ ನಿಕಟಪೂರ್ವ ಅಧ್ಯಕ್ಷ ರವಿರಾಜ ಅಂಕೋಲೆಕರ, ರಾಜ್ಯ ಪ್ರಕೋಸ್ಟದ ಸುನೀಲ ಸೋನಿ, ಮಹಾಶಕ್ತಿ ಕೇಂದ್ರ ಅಧ್ಯಕ್ಷರು, ಪದಾಧಿಕಾರಿಗಳು, ಪ್ರಧಾನಕಾರ್ಯದರ್ಶಿಗಳು ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.

ರೂಪಾಲಿ ನಾಯ್ಕಗೆ ಸನ್ಮಾನ

ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಹಾಗೂ ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಅವರನ್ನು ಶಿವಮೊಗ್ಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ಪಕ್ಷದ ಸಂಘಟನಾ ಸಂಯೋಜಕರನ್ನಾಗಿ ನಿಯುಕ್ತಿಗೊಳಿಸಿದ ಬಗ್ಗೆ ಬಿಜೆಪಿ ಕಾರ್ಯಕರ್ತರು ರೂಪಾಲಿ ಎಸ್.ನಾಯ್ಕ ಅವರನ್ನು ಸಂಭ್ರಮದಿಂದ ಸತ್ಕರಿಸಿದರು.



ಸದೃಢ ಆರೋಗ್ಯಕ್ಕೆ ಯೋಗ ಅಗತ್ಯ

ಯಲ್ಲಾಪುರ: ಮಾನಸಿಕ, ಬೌದ್ಧಿಕ ಮತ್ತು ಸದೃಢ ಶರೀರ ಬೆಳೆಸಿಕೊಳ್ಳಲು ಯೋಗಾಭ್ಯಾಸ ತೀರಾ ಅಗತ್ಯವಾಗಿದೆ. ನಮ್ಮ ಋಷಿಮುನಿಗಳು ಈಯೋಗ ಶಾಸ್ತ್ರವನ್ನು ಮನುಕುಲಕ್ಕೆ ನೀಡಿದ್ದಾರೆ ಎಂದು ವಿಶ್ವದರ್ಶನ ಶಿಕ್ಷಣ ಸಮೂಹದ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ಹೇಳಿದರು.

ಅವರು ಪಟ್ಟಣದ ಈಶ್ವರೀಯ ವಿಶ್ವವಿದ್ಯಾಲಯದ ತಪೋವನದಲ್ಲಿ ಕರ್ನಾಟಕ ರಾಜ್ಯ ಅಮೆಚೂರ್‌ಯೋಗಸ್ಪೋರ್ಟ್ಸ್ ಅಸೋಸಿಯೇಶನ್, ಉತ್ತರ ಕನ್ನಡ ಜಿಲ್ಲಾ ಯೋಗ ಫೆಡರೇಶನ್ ಹಾಗೂ ಯಲ್ಲಾಪುರ ತಾಲೂಕು ಯೋಗ ಸ್ಪೋರ್ಟ್ಸ್ ಅಸೋಸಿಯೇಶನ್‌ಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಯೋಗಾಸನ ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಆರೋಗ್ಯದಲ್ಲಿ ಸಮಸ್ಯೆ ಇದ್ದವರು ಮಾತ್ರ ಯೋಗಾಭ್ಯಾಸ ಮಾಡಬೇಕೆಂಬ ಭಾವನೆ ಸಲ್ಲ. ಸದೃಢ ಮನಸ್ಸು, ಶರೀರವನ್ನು ಪಡೆಯಲು ಯೋಗಾಭ್ಯಾಸ ಅಗತ್ಯ ಎಂದರು.

ರಾಜ್ಯ ಅಮೆಚೂರ ಯೋಗ ಅಸೋಸಿಯೇಷನ ಚೇರಮನ್ ಮತ್ತು ರಾಷ್ಟ್ರೀಯ ಯೋಗ ಫೆಡರೇಶನ ಕಾರ್ಯದರ್ಶಿ ಜಿ.ಎನ್.ಕೃಷ್ಣಮೂರ್ತಿ , ಅಧ್ಯಕ್ಷತೆವಹಿಸಿದ್ದ ಯೋಗ ಫೆಡರೇಶನ ರಾಜ್ಯ ಉಪಾಧ್ಯಕ್ಷ, ಜಿಲ್ಲಾಧ್ಯಕ್ಷ ಅನಿಲಕರಿ ಮಾತನಾಡಿದರು. ರಾಜ್ಯಅಮೆಚರ್ ಯೋಗ ಸ್ಪೋರ್ಟ್ಸ್ಅಸೋಸಿಯೇಷನ್ ಅಧ್ಯಕ್ಷ ಡಾ. ಪಿ.ಎನ್. ಗಣೇಶಕುಮಾರ್, ಪ್ರಧಾನಕಾರ್ಯದರ್ಶಿ ಕೆ.ನಟರಾಜ, ಉದ್ಯಮಿ ಬಾಲಕೃಷ್ಣನಾಯಕ, ಲಿಂಗಾಯತ ಮಹಾಸಭಾದ ರಾಜ್ಯಸಂಘಟನಾ ಕಾರ್ಯದರ್ಶಿ ಶಿವಲಿಂಗಯ್ಯ ಅಲ್ಲಯ್ಯನವರಮಠ, ಜಿಪಂ ಮಾಜಿ ಸದಸ್ಯ ರಾಘವೇಂದ್ರ ಭಟ್ಟ, ಸ್ವಾಗತ ಸಮಿತಿಯ ಅಧ್ಯಕ್ಷ ಎಂ.ಆರ್.ಹೆಗಡೆ ಕುಂಬ್ರಿಗುಡ್ಡೆ, ಈಶ್ವರೀಯ ವಿಶ್ವವಿದ್ಯಾಲಯದ ವ್ಯವಸ್ಥಾಪಕಿ ಬಿ.ಕೆ.ಲೀಲಕ್ಕ ಉಪಸ್ಥಿತರಿದ್ದರು.

ಮಾತೃಮಂಡಳಿ ಅಧ್ಯಕ್ಷೆ ಆಶಾ ಬಗನಗದ್ದೆ ಪ್ರಾರ್ಥಿಸಿದರು. ಸಮಿತಿಯ ಕಾರ್ಯಾಧ್ಯಕ್ಷ ಶಂಕರಭಟ್ಟ ತಾರಿಮಕ್ಕಿ ಸ್ವಾಗತಿಸಿದರು. ಶಿಕ್ಷಕರಾದ ಸದಾನಂದದ ಬಗಾರ, ಸೌಮ್ಯಶ್ರೀ ಹಾನಗಲ್ ನಿರ್ವಹಿಸಿದರು. ಕಾರ್ಯದರ್ಶಿ ಸುಬ್ರಾಯ ಭಟ್ಟರ್ಆನೆ ಜಡ್ಡಿ ವಂದಿಸಿದರು. ರಾಜ್ಯಮಟ್ಟದ ಯೋಗ ಸ್ಪರ್ಧೆಯಲ್ಲಿ ವಿವಿಧ17 ವಿಭಾಗಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. 350ಕ್ಕೂಹೆಚ್ಚಿನ ಸ್ಪರ್ಧಾಳುಗಳು ಭಾಗವಹಿಸಿದ್ದರು.



ಸರಣಿ ಕಳ್ಳತನ: ಆರೋಪಿಗಳ ಬಂಧನ

ಕಾರವಾರ: ತಾಲೂಕಿನ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯ ದೇವಾಲಯಗಳ ಸಾಮಗ್ರಿಗಳನ್ನು ಕಳ್ಳತನ ನಡೆಸುತ್ತಿದ್ದ ಆರೋಪಿಯನ್ನು ಕಾರವಾರ ಪೊಲೀಸರ ತಂಡ ಬಂಧಿಸಿ ಕಳ್ಳತನ ಮಾಡಿರುವ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಗಿಂಡಿವಾಡ ಬಾಡದ ನಿವಾಸಿ ವಿನಯ ಯಾನೆ ವಿನಾಯಕ ದಯಾನಂದ ಗಾಂವಕರ(40) ಬಂಧಿತ ಆರೋಪಿಯಾಗಿದ್ದು ಈತನಿಂದ ಸುಮಾರು 87 ಸಾವಿರ ರೂಪಾಯಿ ಮೌಲ್ಯದ 174 ಕೆಜಿ ತೂಕದ ಘಂಟೆ, ಆರತಿ ತಟ್ಟೆ, ದೀಪದ ಸಮೆ ಮೊದಲಾದ ತಾಮ ಮತ್ತು ಹಿತ್ತಾಳೆಯ ಪೂಜಾ ಪರಿಕರಗಳನ್ನು ವಶಕ್ಕೆ ಪಡೆಯಲಾಗಿದೆ.

ಕಾರವಾರದ ಶಹರ ಪೊಲೀಸ್ ಠಾಣೆ ವ್ಯಾಪ್ತಿಯ ದಾಸ ಮಾರುತಿ ದೇವಸ್ಥಾನದಲ್ಲಿ ಮೇ 20 ರಂದು ಹಾಡುಹಗಲಲ್ಲೇ ಕಳ್ಳತನ ನಡೆದಿತ್ತು, ಮೇ 31ರಂದು ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ಚೆಂಡಿಯಾದ ಜಯ ಮಾರುತಿ ದೇವಸ್ಥಾನ, ಜೂನ್ 4ರಂದು ಮಕೇರಿಯ ಮಹಾಸತಿ ದೇವಾಲಯ ಮತ್ತು ಚಿತ್ತಾಕುಲ ಪೊಲೀಸ್ ಠಾಣೆ ವ್ಯಾಪ್ತಿಯ ಎರಡು ದೇವಾಲಯಗಳಲ್ಲಿ ಕಳ್ಳತನದ ಕೃತ್ಯ ನಡೆದು ದೂರು ದಾಖಲಾಗಿತ್ತು.ಆರೋಪಿಯ ಪತ್ತೆಗೆ ಬಲೆ ಬೀಸಿದ ಪೊಲೀಸರು ಸಿ.ಸಿ ಟಿವಿ ದೃಶ್ಯಾವಳಿ ಮತ್ತಿತರ ತಾಂತ್ರಿಕ ನೆರವಿನಿಂದ ಆರೋಪಿತನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.ಪೊಲೀಸ್ ವರಿಷ್ಠ ದೀಪನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೃಷ್ಣಮೂರ್ತಿ, ಡಿ.ವೈ.ಎಸ್.ಪಿ ಗಿರೀಶ ಮಾರ್ಗದರ್ಶನದಲ್ಲಿ ಕಾರವಾರ ಶಹರ ಪೊಲೀಸ್ ನಿರೀಕ್ಷಕಿ ಜಯಶ್ರೀ ಮಾನೆ ನೇತೃತ್ವದಲ್ಲಿ ಪಿ.ಎಸ್.ಐ ಉದ್ದಪ್ಪ ಧರೆಪ್ಪನವರ್ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.



ಜುಲೈ 11ರಂದು ರಾಷ್ಟ್ರೀಯ ಲೋಕ್ ಅದಾಲತ್

ಅಂಕೋಲಾ: ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಜುಲೈ 11ರಂದು ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯಕ್ರಮ ನಡೆಯಲಿದ್ದು, ಅಂಕೋಲಾ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಬಹಳ ವರ್ಷಗಳಿಂದ ಬಾಕಿ ಉಳಿದಿರುವ ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಬಹುದಾದ ಹೆಚ್ಚಿನ ವ್ಯಾಜ್ಯಗಳ ಇತ್ಯರ್ಥಕ್ಕೆ ಎಲ್ಲರೂ ಕೈಜೋಡಿಸಬೇಕು ಮೂರು ನ್ಯಾಯಪೀಠಗಳು ಒಂದೇ ಸಲ ಚಾಲನೆಯಲ್ಲಿ ಬರುತ್ತಿರುವ ಕಾರಣ ಅಂಕೋಲಾ ನ್ಯಾಯಾಲಯದಲ್ಲಿ ಈ ಬಾರಿಯ ಲೋಕ್ ಅದಾಲತ್ ಹೆಚ್ಚಿನ ವ್ಯಾಜ್ಯಗಳ ಇತ್ಯರ್ಥದ ವಿಶೇಷ ಸಂಭ್ರಮವಾಗಬೇಕು ಎಂದು ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷೆ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶೆ ಪ್ರಿಯಾ ಜೋಗಳೇಕರ್ ಹೇಳಿದರು.

ತಾಲೂಕಿನ ಜೆಎಂಎಫ್‌ಸಿ ನ್ಯಾಯಾಲಯದ ಆವರಣದಲ್ಲಿ ಲೋಕಅದಾಲತ್ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಇತ್ಯರ್ಥ ಪಡಿಸಬಹುದಾದ ಪ್ರಕರಣಗಳ ಯಾದಿ ಮಾಡಿಕೊಂಡು ಆ ದಿಶೆಯಲ್ಲಿ ಹೆಚ್ಚಿನ ಪ್ರಯತ್ನಗಳನ್ನು ನಡೆಸಬೇಕಿದೆ ವ್ಯಾಜ್ಯಗಳ ಇತ್ಯರ್ಥದಿಂದ ಕಕ್ಷಿದಾರರ ಹಣ ಮತ್ತು ಸಮಯದ ಉಳಿತಾಯ ಆಗಲಿದ್ದು ವಕೀಲರು ಮತ್ತು ಎಲ್ಲಾ ಇಲಾಖೆಗಳು ಹೆಚ್ಚಿನ ಸಹಕಾರ ನೀಡಬೇಕು ಎಂದರು.

ಇತ್ಯರ್ಥವಾಗುವಂತ ಕ್ರಿಮಿನಲ್ ವ್ಯಾಜ್ಯಗಳನ್ನು ಲೋಕ ಅದಾಲತ್ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸಬೇಕು ಇದರಿಂದ ಅದೇ ವಿಷಯಕ್ಕೆ ಸಂಬಂಧಿಸಿದ ಸಿವಿಲ್ ಪ್ರಕರಣಗಳೂ ರಾಜಿಯಾಗುವ ಸಾಧ್ಯತೆ ಹೆಚ್ಚಿರುತ್ತದೆ ಸರ್ಕಾರಿ ಅಭಿಯೋಜಕರು, ಪೊಲೀಸರು ಈ ದಿಶೆಯಲ್ಲಿ ಪ್ರಯತ್ನ ಮಾಡಬೇಕು. ಹಣಕಾಸು ಸಂಸ್ಥೆಯ ಸಾಲ ಬಾಕಿ ಪ್ರಕರಣಗಳಲ್ಲಿ ಹಣಕಾಸು ಸಂಸ್ಥೆಗಳು ಒಬ್ಬ ವ್ಯಕ್ತಿಯ ಐದಾರು ವ್ಯಾಜ್ಯಗಳಿದ್ದರೆ ಕಡಿಮೆ ಹಣ ತುಂಬುವ ಒಂದೆರಡು ವ್ಯಾಜ್ಯಗಳನ್ನು ಮೊದಲು ಇತ್ಯರ್ಥಪಡಿಸಬೇಕು,ತುಂಬುವ ಹಣದಲ್ಲಿ ರಿಯಾಯಿತಿ ನೀಡಿದರೆ ಸಾಲಗಾರರು ರಾಜಿಗೆ ಬರುತ್ತಾರೆ ಆದಷ್ಟು ಹೆಚ್ಚಿನ ವ್ಯಾಜ್ಯಗಳನ್ನು ರಾಜಿ ಮೂಲಕ ಮುಗಿಸಬೇಕು ಎಂದು ನ್ಯಾಯಾಧೀಶರು ಸೂಚಿಸಿದರು. ಸರ್ಕಾರದ ಪರಿಹಾರ ಬಾಕಿ ವ್ಯಾಜ್ಯಗಳು ಬಹಳ ವರ್ಷಗಳಿಂದ ಬಾಕಿಯಿದೆ, ಭೂಸ್ವಾಧೀನ ಪಡೆದ ನಂತರ ಅದಕ್ಕೆ ತಕ್ಕ ಪರಿಹಾರ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ ಆದರೂ ಹಳೆಯ ಭೂ ಪರಿಹಾರ ಪ್ರಕರಣಗಳು ಇದ್ದ ಸ್ಥಿತಿಯಲ್ಲೇ ಇವೆ ಇದಕ್ಕೆ ಯಾರು ಹೊಣೆ ಜನರು ನ್ಯಾಯಾಲಯದಿಂದ ಪರಿಹಾರ ಬರುತ್ತಿಲ್ಲ ಎನ್ನುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಾಧೀಶೆ ಈ ಬಾರಿ ಸಹಾಯಕ ಆಯುಕ್ತರಿಗೆ ನೋಟಿಸ್ ನೀಡುವುದಾಗಿ ತಿಳಿಸಿದರು.ಕಿರಿಯ ಸಿವಿಲ್ ನ್ಯಾಯಾಧೀಶೆ ಸುನೀತಾ ಮಾತನಾಡಿದರು.ಸಹಾಯಕ ಸರ್ಕಾರಿ ಅಭಿಯೋಜಕ ಅಣ್ಣಪ್ಪ ನಾಯ್ಕ, ಶಿಲ್ಪಾ ನಾಯ್ಕ, ವಕೀಲರ ಸಂಘದ ಅಧ್ಯಕ್ಷೆ ಪ್ರತಿಭಾ ನಾಯ್ಕ, ಕಾರ್ಯದರ್ಶಿ ಮಮತಾ ಕೆರೆಮನೆ,ವಿವಿಧ ಇಲಾಖೆಗಳ ಅಧಿಕಾರಿಗಳು, ವಕೀಲರು, ಕಾನೂನು ಸೇವಾ ಸಮಿತಿ ಮತ್ತು ನ್ಯಾಯಾಲಯದ ಸಿಬ್ಬಂದಿ,ವಿವಿಧ ಹಣಕಾಸು ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.



ಅಧಿಕ ಮಾಸ: ಮಹಾವಿಷ್ಣು ಯಾಗ

ಕುಮಟಾ: ಪಟ್ಟಣದ ಹೊಸಹೆರವಟ್ಟಾದ ಶ್ರೀ ಲಕ್ಷ್ಮೀನಾರಾಯಣ ಬಗ್ಗೋಣ ಮಠದಲ್ಲಿ ಅಧಿಕ ಮಾಸದ ನಿಮಿತ್ತ ಹಮ್ಮಿಕೊಂಡ ಮಹಾವಿಷ್ಣು ಯಾಗದ 21ನೇ ದಿನದಂದು ಮಹಾವಿಷ್ಣುವಿನ ದಾಶಾವತಾರ ಪೂಜೆ ವಿಜೃಂಭಣೆಯಿಂದ ನಡೆಯಿತು.ಕುಮಟಾದ ಲಘುವಿಷ್ಣು ಯಾಗ ನಿರ್ವಹಣಾ ಸಮಿತಿಯಿಂದ ಲಕ್ಷ್ಮೀನಾರಾಯಣ ಬಗ್ಗೋಣ ಮಠದಲ್ಲಿ ಕರ್ಕಿಯ ದೈವಜ್ಞ ಬ್ರಾಹ್ಮಣ ಮಠಾಧೀಶರಾದ ಸಚ್ಚಿದಾನಂದ ಜ್ಞಾನೇಶ್ವರ ಭಾರತೀ ಶ್ರೀಗಳ ಮಾರ್ಗದರ್ಶನದಲ್ಲಿ ಹಮ್ಮಿಕೊಂಡ 28 ದಿನಗಳು ನಡೆಯುವ ಮಹಾವಿಷ್ಣು ಯಾಗವು ಮೇ 17ರಂದು ಆರಂಭವಾಗಿದ್ದು, ಪ್ರತಿನಿತ್ಯ ವಿಶೇಷ ಪೂಜೆ ನಡೆಯುತಿದೆ. ಆದರಂತೆ 21ನೇ ದಿನದಂದು ಮಹಾವಿಷ್ಣುವಿನ ದಶಾವತಾರದ ವಿಶೇಷ ಪೂಜೆ ನಡೆಯಿತು.ದೇವಸ್ಥಾನದ ಮುಖ್ಯ ಅರ್ಚಕ ಪ್ರಮೋದ ಭಟ್ ಅವರ ನೇತೃತ್ವದಲ್ಲಿ ಪ್ರತಿನಿತ್ಯ ಹೋಮ, ಹವನಗಳು ಸೇರಿದಂತೆ ವೈದಿಕ ಕಾರ್ಯಕ್ರಮಗಳು ನಡೆಯುತ್ತಿದೆ. ಸಂಜೆ ಗುರುವಂದನ ಕಾರ್ಯಕ್ರಮ ನಡೆಯಲಿದೆ. ಜೂನ್ 14 ರಂದು ಶ್ರೀಗಳ ದಿವ್ಯ ಉಪಸ್ಥಿತಿಯಲ್ಲಿ ಪೂರ್ಣಾವತಿಯೊಂದಿಗೆ ಮಹಾವಿಷ್ಣು ಯಾಗದ ಕಾರ್ಯಕ್ರಮ ಸಂಪನ್ನಗೊಳ್ಳಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಅವರು ಮನವಿ ಮಾಡಿದರು.



ಜೂ.12ರಂದು ವಿದ್ಯಾರ್ಥಿಗಳಿಗೆ ಸನ್ಮಾನ

ದಾಂಡೇಲಿ: ಪ್ರತೀ ವರ್ಷದಂತೆ ಈ ವರ್ಷ ಸಹ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ಭಾಷಾ ವಿಷಯದಲ್ಲಿ ಪ್ರತಿಶತ ನೂರರಷ್ಟು ಅಂಕ ಪಡೆದ ಜಿಲ್ಲೆಯ ಸುಮಾರು 950 ವಿದ್ಯಾರ್ಥಿಗಳನ್ನು ಅಭಿನಂದಿಸಿಗೌರವಿಸುವಸರಣಿಕಾರ್ಯಕ್ರಮ ಜಿಲ್ಲೆಯಾದ್ಯಂತ ತಾಲೂಕುವಾರು ಜೂ.12 ರಿಂದ ನಡೆಯಲಿದೆ ಎಂದು ಉತ್ತರ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎನ್. ವಾಸರೆ ತಿಳಿಸಿದ್ದಾರೆ.



ಈ ಬಗ್ಗೆ ಪ್ರಕಟಣೆ ನೀಡಿರುವ ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ಐದು ವರ್ಷಗಳಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ಭಾಷಾ ವಿಷಯದಲ್ಲಿ ಪ್ರತಿಶತ ನೂರರಷ್ಟು ಅಂಕಗಳಿಸಿದ ಜಿಲ್ಲೆಯ ವಿದ್ಯಾರ್ಥಿಗಳನ್ನು ಗೌರವಿಸುತ್ತ ಬಂದಿದೆ. ಈ ವರ್ಷ 2026 ರಲ್ಲಿಯೂ ಸುಮಾರು 950 ವಿದ್ಯಾರ್ಥಿಗಳನ್ನು ಜಿಲ್ಲೆಯಾದ್ಯಂತ ಗೌರವಿಸಲಿದ್ದೇವೆ. ಈ ಐದು ವರ್ಷಗಳಲ್ಲಿ ಸುಮಾರು 5 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಗೌರವಿಸಿದ ಹೆಮ್ಮೆ ನಮಗಿದೆ ಎಂದರು.

ತಾಲೂಕುವಾರು ಕಾರ್ಯಕ್ರಮಗಳು: ಜೂನ್ 12 ರಂದು ಬೆಳಗ್ಗೆ 10.30ಕ್ಕೆ ಮುಂಡಗೋಡದ ಸರ್ಕಾರಿ ಪಪೂ ಕಾಲೇಜಿನಲ್ಲಿ, ಮಧ್ಯಾಹ್ನ 3.30 ಕ್ಕೆ ಯಲ್ಲಾಪುರದ ಎ.ಎಮ್‌ಸಿ, ಟಿ.ಎಮ್.ಎಸ್. ಸಭಾಂಗಣದಲ್ಲಿ, ಜೂನ್ 13ರಂದು ಮಧ್ಯಾಹ್ನ 12.30 ಕ್ಕೆ ದಾಂಡೇಲಿಯ ರೋಟರಿ ಶಾಲಾ ಸಭಾಭವನದಲ್ಲಿ, ಜೂನ್ 17ರಂದು ಬೆಳಗ್ಗೆ 10.30 ಕ್ಕೆ ಅಂಕೋಲಾದ ವಿ.ಕೆ. ಗರ್ಲ್ಸ್ ಪ್ರೌಢಶಾಲೆಯಲ್ಲಿ, ಮಧ್ಯಾಹ್ನ 2.30 ಕ್ಕೆ ಕುಮಟಾದ ಚಿತ್ರಗಿಯ ಮಹಾತ್ಮಾಗಾಂಧಿ ಪ್ರೌಢಶಾಲೆಯಲ್ಲಿ, ಜೂನ್ 18 ರಂದು ಬೆಳಗ್ಗೆ 10 ಗಂಟೆಗೆ ಭಟ್ಕಳದ ಆನಂದಾಶ್ರಮ ಪ್ರೌಢಶಾಲೆಯಲ್ಲಿ, ಮಧ್ಯಾಹ್ನ 2.30 ಕ್ಕೆ ಹೊನ್ನಾವರದ ನ್ಯೂ ಇಂಗ್ಲೀಷ್ ಸ್ಕೂಲ್‌ನಲ್ಲಿ, ಜೂನ್ 20 ರಂದು ಮಧ್ಯಾಹ್ನ 1.15 ಕ್ಕೆ ಹಳಿಯಾಳದ ಹೆಣ್ಣುಮಕ್ಕಳ ಪ್ರೌಢಶಾಲೆಯಲ್ಲಿ, ಜೂನ್ 22ರಂದು ಬೆಳಗ್ಗೆ 10.30 ಕ್ಕೆ ಕಾರವಾರದ ಹಿಂದೂ ಹೈಸ್ಕೂಲ್ ಸಭಾಭವನದಲ್ಲಿ, ಜೂನ್ 24 ರಂದು ಬೆಳಗ್ಗೆ 10.30 ಕ್ಕೆ ಸಿದ್ದಾಪುರದ ಪ್ರಶಾಂತಿ ಪ್ರೌಢಶಾಲೆಯಲ್ಲಿ, ಮಧ್ಯಾಹ್ನ 2.30 ಕ್ಕೆ ಶಿರಸಿಯ ನೆಮ್ಮದಿ, ರಂಗಧಾಮದಲ್ಲಿ, ಜೂನ್ 25ರಂದು ಬೆಳಗ್ಗೆ 10.30 ಕ್ಕೆ ಜೋಯಿಡಾದ ಬಾಪೇಲಿ ಸರ್ಕಾರಿ ಪ್ರೌಢಶಾಲೆಯಲ್ಲಿ ಈ ಅಭಿನಂದನಾ ಕಾರ್ಯಕ್ರಮ ನಡೆಯಲಿವೆ ಎಂದಿದ್ದಾರೆ.

ಕಿರುಸುದ್ದಿ

ಮಹಾರಾಣಾ ಪ್ರತಾಪಸಿಂಹರ ಜಯಂತಿ ಆಚರಣೆ

ಹಾವೇರಿ : ಇಲ್ಲಿಯ ಶಿವಾಜಿ ನಗರ 4ನೇ ಕ್ರಾಸ್‌ನಲ್ಲಿರುವ ಗಣಪತಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ರಾಷ್ಟ್ರವೀರ ಮಹಾರಾಣಾ ಪ್ರತಾಪಸಿಂಹ ಅವರ 486ನೇ ಜಯಂತಿ ಕಾರ್ಯಕ್ರಮ ಅತ್ಯಂತ ವೈಭವದಿಂದ ಜರುಗಿತು. ಅದಕ್ಕೂ ಮುನ್ನ ಹಾವೇರಿಯ ಹಾನಗಲ್ ರಸ್ತೆಯಲ್ಲಿರುವ ಮಹಾರಾಣಾ ಪ್ರತಾಪ್ ಸಿಂಹ ಸರ್ಕಲ್‌ಗೆ ಪೂಜೆ ನೆರವೇರಿಸಲಾಯಿತು. ರಜಪೂತ ಸಮಾಜದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಸಮಾಜದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ.90ರಷ್ಟು ಅಂಕ ಪಡೆದ ಮಕ್ಕಳಿಗೆ ಸನ್ಮಾನಿಸಲಾಯಿತು ಹಾಗೂ ಸೇವೆಯಿಂದ ನಿವೃತ್ತಿಯಾದಂತಹ ಶಿಕ್ಷಕಿಗೆ ಸನ್ಮಾನಿಸಲಾಯಿತು.

ಸಮಾಜದ ಅಧ್ಯಕ್ಷ ಲಕ್ಷ್ಮಣಸಿಂಗ ರಜಪೂತ, ಗೌರವಾಧ್ಯಕ್ಷ ಪ್ರಸನ್ನಸಿಂಗ ಧಾರವಾಡ, ಉಪಾಧ್ಯಕ್ಷ ಸುನೀಲಸಿಂಗ, ಕಾರ್ಯದರ್ಶಿ ನವೀನಸಿಂಗ, ಖಜಾಂಚಿ ರಾಕೇಶಸಿಂಗ, ಸದಸ್ಯರಾದ ಪ್ರದೀಪಸಿಂಗ, ನಾಗರಾಜಸಿಂಗ, ಪ್ರತಾಪಸಿಂಗ, ಅಶೋಕಸಿಂಗ ಕಹಾರ, ಮಂಜುನಾಥಸಿಂಗ, ಅನಂತಸಿಂಗ ಹಾಗೂ ಚೇತಕ ರಜಪೂತ ಮಹಿಳಾ ಮಂಡಳಿ ಪದಾಧಿಕಾರಿಗಳು ಹಾಗೂ ರಜಪೂತ ಸಮುದಾಯದ ಮುಖಂಡರು, ಹಿರಿಯರು ಪಾಲ್ಗೊಂಡಿದ್ದರು.

ಪರಿಸರ ಉಳಿಸಿ-ಬೆಳೆಸಿ



ಶಿಗ್ಗಾವಿ : ಮಾನವ ಹಾಗೂ ಇತರೆ ಪ್ರಾಣಿ, ಪಕ್ಷಿಗಳು ಸೇರಿದಂತೆ ಪ್ರತಿಯೊಂದು ಜೀವ ಸಂಕುಲವು ಆಹಾರ, ಗಾಳಿ, ನೀರು ಇತರೆ ಅಗತ್ಯತೆಗಳಿಗಾಗಿ ಪರಿಸರವನ್ನ ಅವಲಂಭಿಸಿದ್ದು, ಆ ಪರಿಸರವನ್ನ ನಾವು ಉಳಿಸಿ ಬೆಳೆಸುವ ಕಡೆಗೆ ಗಮನ ಹರಿಸಬೇಕು ಎಂದು ಮಧುಸೂದನ್ ಛಬ್ಬಿ ಸೇವಾ ಸಂಸ್ಥೆಯ ಅಧ್ಯಕ್ಷೆ ಭಾರತಿ ಛಬ್ಬಿ ಹೇಳಿದರು. ಪಟ್ಟಣದ ಗಾಂಧಿ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಧುಸೂದನ್ ಛಬ್ಬಿ ಸೇವಾ ಸಂಸ್ಥೆ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಶಾಲೆಯ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಸಸಿ ವಿತರಿಸಿ ಮಾತನಾಡಿದ ಅವರು, ಮಕ್ಕಳನ್ನ ಪೋಷಿಸುವಂತೆ ಸಸಿಗಳನ್ನು ನೆಟ್ಟು ಅವುಗಳನ್ನ ಮಕ್ಕಳಂತೆ ಪೋಷಿಸಿ ಮರಗಳನ್ನಾಗಿ ಬೆಳೆಸಿದ್ದೆ ಆದರೆ ನಮ್ಮ ನಾಡು ಸಮೃದ್ಧವಾಗಿರುತ್ತದೆ ಜೊತೆಗೆ ನಮ್ಮ ಜೀವ ಸಂಕುಲವನ್ನ ಉಳಿಸಿ ಬೆಳೆಸಲು ಕಾರಣವಾಗುತ್ತದೆ ಎಂದರು. ಶಾಲೆಯ ಮುಖ್ಯ ಶಿಕ್ಷಕರಾದ ಕೆ.ಎಚ್.ಕುರುಬರ ಹಾಗೂ ಸಹ ಶಿಕ್ಷಕಿಯರಾದ ಎಂ.ಪಿ.ಮೇಗಡಿ, ನಾಗರಾಜ್ ಛಬ್ಬಿ ಹಾಗೂ ಶಾಲೆಯ ಮಕ್ಕಳು ಉಪಸ್ಥಿತರಿದ್ದರು.

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹಾವೇರಿ : ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ 2026-27ನೇ ಸಾಲಿಗೆ ಹೊಸದಾಗಿ ಪ್ರವೇಶಕ್ಕೆ ಪಿಯುಸಿ ಸಮಾನಾಂತರ ಡಿಪ್ಲೋಮಾ, ಐಟಿಐ ಕೋರ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಪ್ರವರ್ಗ-1, ಎಸ್ಸಿ, ಎಸ್ಟಿ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ.2.50 ಲಕ್ಷದೊಳಗೆ ಹಾಗೂ ಪ್ರವರ್ಗ-2ಎ, 2ಬಿ, 3ಎ, 3ಬಿ ವರ್ಗದವರ ಆದಾಯ ರೂ. ಒಂದು ಲಕ್ಷದೊಳಗಿರಬೇಕು.

ಅರ್ಹ ವಿದ್ಯಾರ್ಥಿಗಳು ಜೂ.15ರೊಳಗಾಗಿ ವೆಬ್‌ಸೈಟ್ https://shp. karnataka. gov.in/ bcwdನಲ್ಲಿ ಅರ್ಜಿ ಸಲ್ಲಿಸಬೇಕು. ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್ ಸೈಟ್ https://bcwd.karnataka.gov. inಅನ್ನು ನೋಡಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@ gmail.comC-ಮೇಲ್ ಮುಖಾಂತರ ಅಥವಾ ಜಿಲ್ಲಾ, ತಾಲೂಕು ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾವೇರಿ : ಇಲ್ಲಿಯ ಶಿವಾಜಿ ನಗರ 4ನೇ ಕ್ರಾಸ್‌ನಲ್ಲಿರುವ ಗಣಪತಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ರಾಷ್ಟ್ರವೀರ ಮಹಾರಾಣಾ ಪ್ರತಾಪಸಿಂಹ ಅವರ 486ನೇ ಜಯಂತಿ ಕಾರ್ಯಕ್ರಮ ಅತ್ಯಂತ ವೈಭವದಿಂದ ಜರುಗಿತು.

ಎಸ್ಸೆಸ್ಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಸನ್ಮಾನ

ಶಿಗ್ಗಾವಿ: ಸಹನಶೀಲತೆ ಇಲ್ಲದೇ ವಿದ್ಯೆಯ ಸಾಧನೆ ಅಸಾಧ್ಯ, ಅರಿತು ಬಾಳುವ ಜ್ಞಾನವನ್ನ ತಿಳಿದು, ವಿದ್ಯಾ ಸಾಧನೆಯ ಸಂಪತ್ತನ್ನ ವಿದ್ಯಾರ್ಥಿಗಳು ತಮ್ಮದಾಗಿಸಿಕೊಂಡು ಮುನ್ನಡೆಯಬೇಕು ಎಂದು ಶಿಗ್ಗಾವಿ ಎಸ್.ಆರ್.ಜೆ.ವಿ ಕಾಲೇಜಿನ ಉಪನ್ಯಾಸಕ ಶಿವಯ್ಯ ಪೂಜಾರ ಹೇಳಿದರು. ಪಟ್ಟಣದ ಕುಂಬಾರಗೇರಿ ಓಣಿಯ ವಿಶ್ವಭಂದು ಮರುಳಸಿದ್ದೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡ ಕರ್ನಾಟಕ ರಾಜ್ಯ ಹಿಂದೂ ಸಾದರ ಸಮಾಜ ಸಂಘಟನೆಯ ತಾಲೂಕಾ ಘಟಕದ ವತಿಯಿಂದ ಸಮುದಾಯದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಕರ್ನಾಟಕ ರಾಜ್ಯ ಹಿಂದೂ ಸಾದರ ಸಮಾಜದ ಸಂಘಟನೆಯ ಎಂ.ಎಸ್.ಪಾಟೀಲ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಶಿಗ್ಗಾವಿ ವಿರಕ್ತಮಠದ ಸಂಗನಬಸವ ಶ್ರೀಗಳು ಸಾನಿದ್ಯ ವಹಿಸಿ ಆಶೀರ್ವಚನ ನೀಡಿದರು. ಶಿಕ್ಷಕ ಬಸವರಾಜ ಬಸರೀಕಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ನಿವೃತ್ತ ಉಪನ್ಯಾಸಕ ಬಿ.ಎಂ.ಮುಳಗುಂದ, ಮುಖಂಡರಾದ ಜಗದೀಶ ಶೆಟ್ಟೆಪ್ಪನವರ, ಕರಿಯಪ್ಪ ಬೆನಕಣ್ಣವರ, ಮಂಜುನಗೌಡ ಗೊಟಗೋಡಿ, ಪ್ರಕಾಶ ಹಾದಿ, ಪ್ರವೀಣ ಕಡಕೋಳ, ಬಸವರಾಜ ಗಂಜೀಗಟ್ಟಿ, ಉಳವಪ್ಪ ಗಂಜೀಗಟ್ಟಿ, ಶಿವಾನಂದ ತೊಂಡೂರ, ಸಿದ್ದನಗೌಡ ಹುತ್ತನಗೌಡ್ರ, ಮಲ್ಲಿಕಾರ್ಜುನ ಕೋಣನವರ ಸೇರಿದಂತೆ ಸಮುದಾಯ ಮುಖಂಡರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳು ಇದ್ದರು. ಪ್ರಭುಗೌಡ ತೆಂಬದಮನಿ ಸ್ವಾಗತಿಸಿದರು. ರವಿ ಅರಗೋಳ ಪರಿಚಯಿಸಿದರು. ಸುರೇಶ ಮುದಕಣ್ಣವರ ಕಾರ್ಯಕ್ರಮ ನಿರ್ವಹಿಸಿದರು.



ಶಿಗ್ಗಾವಿ: ಪಟ್ಟಣದ ಕುಂಬಾರಗೇರಿ ಓಣಿಯ ವಿಶ್ವಭಂದು ಮರುಳಸಿದ್ದೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡ ಕರ್ನಾಟಕ ರಾಜ್ಯ ಹಿಂದೂ ಸಾದರ ಸಮಾಜ ಸಂಘಟನೆಯ ತಾಲೂಕಾ ಘಟಕದ ವತಿಯಿಂದ ಸಮುದಾಯದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮ ನಡೆಯಿತು.

ಪ್ರಗತಿ ಪರಿಶೀಲನಾ ಸಭೆ | ಸಂಸದ ಬಸವರಾಜ ಬೊಮ್ಮಾಯಿ ಹೇಳಿಕೆ

ಗ್ರಾಮೀಣದಲ್ಲಿ ಹೊಸ ಬ್ಯಾಂಕ್ ಶಾಖೆ ಸ್ಥಾಪಿಸಿ

ಹಾವೇರಿ : ಜಿಲ್ಲೆಯ ಬಡವರು, ಮಹಿಳೆಯರು ಹಾಗೂ ಸಾಮಾನ್ಯ ಜನರಿಗೆ ಆದ್ಯತಾ ವಲಯದ ಸಾಲಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡಬೇಕು., ಜೊತೆಗೆ ಮಹಿಳಾ ಸ್ವಸಹಾಯ ಸಂಘಗಳ ಸಂಖ್ಯೆಯನ್ನು ಹೆಚ್ಚಿಸುವುದರೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಬ್ಯಾಂಕ್ ಶಾಖೆಗಳನ್ನು ಆರಂಭಿಸಲು ಕ್ರಮ ವಹಿಸಬೇಕು ಎಂದು ಸಂಸದರಾದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಜಿಪಂ ಸಭಾಭವನದಲ್ಲಿ ಸೋಮವಾರ ನಡೆದ ಜಿಲ್ಲಾಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಡಿಸಿಸಿ ಬ್ಯಾಂಕ್) 2025-26ನೇ ಸಾಲಿನ ಮಾರ್ಚ್-2026 ಅಂತ್ಯದವರೆಗೆ ವಿವಿಧ ಕ್ಷೇತ್ರಗಳಿಗೆ ಸಾಲ ವಿತರಣೆ ಮಾಡುವಲ್ಲಿ ಗಮನಾರ್ಹ ಸಾಧನೆ ಮಾಡಿದೆ. ನಿಗದಿತ ಗುರಿಯನ್ನು ಮೀರಿ ಒಟ್ಟು 107 ಶೇಕಡಾ ಪ್ರಗತಿ ಸಾಧಿಸಿದೆ ಬ್ಯಾಂಕ್‌ಗೆ ಒಟ್ಟು 9,809.07 ಕೋಟಿ ಸಾಲ ವಿತರಣೆಯ ಗುರಿ ನಿಗದಿಯಾಗಿದ್ದರೆ, ಮಾರ್ಚ್-2026ರ ಅಂತ್ಯದ ವೇಳೆಗೆ 10,493.96 ಕೋಟಿ ಸಾಲ ವಿತರಣೆ ಮಾಡಿ 107 ಶೇಕಡಾ ಸಾಧನೆ ದಾಖಲಿಸಿದೆ ಎಂದು ಶ್ಲಾಘಿಸಿದರು.

ಕೃಷಿ ಕ್ಷೇತ್ರದಲ್ಲಿ 5,784.44 ಕೋಟಿ ಗುರಿಗೆ 5,925.38 ಕೋಟಿ ಸಾಲ ವಿತರಣೆ ಮಾಡಿ 102 ಶೇಕಡಾ ಸಾಧನೆ ಮಾಡಲಾಗಿದೆ. ಕೃಷಿ ಅವಧಿ ಸಾಲ ವಿಭಾಗದಲ್ಲಿ 106 ಶೇಕಡಾ ಪ್ರಗತಿ ದಾಖಲಿಸಿದೆ. ಬೆಳೆ ಸಾಲದಲ್ಲಿ ಶೇ.100ರಷ್ಟು ಸಾಧನೆ ಕಂಡುಬಂದಿದೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ (ಎಂಎಸ್‌ಎಂಇ) ಕ್ಷೇತ್ರದಲ್ಲಿ 1,790.63 ಕೋಟಿ ಸಾಲ ವಿತರಣೆ ಮೂಲಕ 104 ಶೇಕಡಾ ಸಾಧನೆ ಮಾಡಲಾಗಿದೆ. ಆದ್ಯತಾ ವಲಯದ ಒಟ್ಟು ಸಾಲ ವಿತರಣೆಯಲ್ಲಿ 8,178.48 ಕೋಟಿ ವಿತರಣೆ ಮಾಡಿ 101 ಶೇಕಡಾ ಪ್ರಗತಿ ದಾಖಲಿಸಿದೆ ಎಂದರು.

ಆದ್ಯತಾ ರಹಿತ ವಲಯದಲ್ಲಿ ಬ್ಯಾಂಕ್‌ಗಳು 2,315.48 ಕೋಟಿ ಸಾಲ ವಿತರಣೆ ಮಾಡಿ 136 ಶೇಕಡಾ ಸಾಧನೆ ಮಾಡಿವೆ. ಆದರೆ ಇತರೆ ಆದ್ಯತಾ ವಲಯ (ಒಪಿಎಸ್) ವಿಭಾಗದಲ್ಲಿ 462.47 ಕೋಟಿ ಸಾಲ ವಿತರಣೆಯಾಗಿದ್ದು, ಗುರಿಗೆ ಹೋಲಿಸಿದರೆ 77 ಶೇಕಡಾ ಸಾಧನೆಯಾಗಿದೆ. ಕೃಷಿ, ಕೈಗಾರಿಕೆ ಹಾಗೂ ಸ್ವಯಂ ಉದ್ಯೋಗ ಚಟುವಟಿಕೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಲ ಸೌಲಭ್ಯ ಒದಗಿಸುವ ಮೂಲಕ ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ಸಹಕಾರ ನೀಡುವಂತೆ ತಿಳಿಸಿದರು.

ಜಿಲ್ಲಾ ಲೀಡ್ ಬ್ಯಾಂಕಿನ ಮುಖ್ಯ ವ್ಯವಸ್ಥಾಪಕ ಸಭೆಗೆ ಮಾಹಿತಿ ನೀಡಿ, ಜಿಲ್ಲೆಯಲ್ಲಿ ಮಾರ್ಚ್ 2026ರ ಅಂತ್ಯದ ವೇಳೆಗೆ ದುರ್ಬಲ ವರ್ಗದ ಫಲಾನುಭವಿಗಳಿಗೆ ಒಟ್ಟು 4,293.80 ಕೋಟಿ, ಅಲ್ಪಸಂಖ್ಯಾತರಿಗೆ 831.06 ಕೋಟಿ ಹಾಗೂ ಮಹಿಳೆಯರಿಗೆ 3,772.22 ಕೋಟಿ ಸಾಲ ವಿತರಿಸಲಾಗಿದೆ. ಕೇಂದ್ರ ಸರ್ಕಾರದ ವಿಮಾ ಯೋಜನೆಗಳಾದ ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ ಹಾಗೂ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಉತ್ತಮ ಪ್ರಗತಿಯನ್ನು ಸಾಧಿಸಿವೆ. ಪ್ರಧಾನ ಮಂತ್ರಿ ಜನಧನ್ ಯೋಜನೆ ಅಡಿಯಲ್ಲಿ ಈಗಾಗಲೇ ಶೇ.53ರಷ್ಟು ಖಾತೆದಾರರಿಗೆ ರೂಪೇ ಡೆಬಿಟ್ ಕಾರ್ಡ್ ವಿತರಿಸಲಾಗಿದೆ ಎಂದರು.

ಸಭೆಯಲ್ಲಿ ಡಿಸಿ ವಿಜಯಮಹಾಂತೇಶ ದಾನಮ್ಮನವರ, ಜಿಪಂ ಸಿಇಒ ದಲ್ಜಿತ್ ಕುಮಾರ, ಎಲ್.ಡಿ.ಓ ಆರ್. ಪ್ರಭಾಕರನ್, ಸುಹಾಸ, ಜಿಪಂ ಉಪ ಕಾರ್ಯದರ್ಶಿ ಡಾ.ಪುನೀತ್, ವಿವಿಧ ಬ್ಯಾಂಕಿನ ಪ್ರಾದೇಶಿಕ ವ್ಯವಸ್ಥಾಪಕರು ಹಾಗೂ ಶಾಖಾ ವ್ಯವಸ್ಥಾಪಕರು ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಶ್ಲಾಘನೆ

ಸಭೆಯಲ್ಲಿ ಸಂಸದರು ಪ್ರಧಾನ ಮಂತ್ರಿ ಸ್ವನಿಧಿ ಯೋಜನೆಯ ಫಲಾನುಭವಿಗಳಿಗೆ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಿದರು. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಅಡಿಯಲ್ಲಿ 2025ರ ಮುಂಗಾರಿನಲ್ಲಿ 2,10,962, ಹಿಂಗಾರಿನಲ್ಲಿ 77,479 ಹಾಗೂ ಬೇಸಿಗೆ ಹಂಗಾಮಿನಲ್ಲಿ 7,692 ನೋಂದಣಿ ಆಗಿದ್ದು, ಈ ಸಾಧನೆಗೆ ಸಹಕರಿಸಿದ ಬ್ಯಾಂಕುಗಳು, ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹಾಗೂ ವಿಮಾ ಸಂಸ್ಥೆಗಳನ್ನು ಅಭಿನಂದಿಸಿದರು.

ಹೆಚ್ಚುವರಿ ಬಸ್ ವ್ಯವಸ್ಥೆ ಕಲ್ಪಿಸಲು ಒತ್ತಾಯ

ಹಾವೇರಿ: ಸಮರ್ಪಕ ಹಾಗೂ ಸಕಾಲಕ್ಕೆ ಬಸ್ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ತಾಲೂಕಿನ ಮರೋಳ ಗ್ರಾಮದಲ್ಲಿ ಸೋಮವಾರ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಗ್ರಾಮಸ್ಥರು, ಪ್ರಯಾಣಿಕರು ಕೆಲಹೊತ್ತು ಬಸ್ ತಡೆದು ದಿಢೀರ್ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಸ್ಥಳೀಯ ಮುಖಂಡ ಲೋಕೇಶ ಕುಬಸದ, ಹಾವೇರಿ ತಾಲೂಕಿನ ಗಡಿ ಭಾಗದ ಹಳ್ಳಿಗಳಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸುವಂತೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಮಾಡಿದ್ದರೂ ಕೂಡ ಯಾವುದೇ ಸ್ಪಂದನೆ ಸಿಗುತ್ತಿಲ್ಲ, ಕೋವಿಡ್ ಸಮಯದಲ್ಲಿ ಅನೇಕ ಮಾರ್ಗದ ಹಳ್ಳಿಗಳಿಗೆ ಸಂಜೆ ಹಾಗೂ ರಾತ್ರಿ ವೇಳೆ ಸಂಚರಿಸುವ ಬಸ್‌ಗಳನ್ನು ಸ್ಥಗಿತಗೊಳಿಸಲಾಗಿದೆ. ಇದರಿಂದ ಶಾಲಾ ಕಾಲೇಜು ಮಕ್ಕಳಿಗೆ, ಪ್ರಯಾಣಿಕರಿಗೆ, ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗಿದೆ ಎಂದರು.

ಹಾವೇರಿಯಿಂದ ಹೊಸರಿತ್ತಿ, ಹಾಲಗಿ, ಮರೋಳ, ಕಡಕೋಳ, ಬೆಳ್ಳಟ್ಟಿ ಮಾರ್ಗವಾಗಿ ಸಂಚರಿಸುವ ಬಸ್ಸು ಹಾಗೂ ಬೆಳವಿಗಿ, ಕೆರೆಕೊಪ್ಪ, ಕೊರಡೂರು ಹೀಗೆ ಸಂಚರಿಸುವ ಬಸ್‌ಗಳು ಪ್ರತಿದಿನ ಪ್ರಯಾಣಿಕರಿಂದ ತುಂಬಿ ತುಳುಕುತ್ತವೆ. ಶಾಲಾ, ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಬಸ್‌ನ ಫುಟ್‌ರೆಸ್ಟ್ ಮೇಲೆ ನೇತಾಡಿಕೊಂಡು ಸಂಚರಿಸುತ್ತಿದ್ದಾರೆ. ಬಸ್ ಸಂಚರಿಸುವಾಗ ಆಯತಪ್ಪಿ ಬಿದ್ದರೆ ಹೊಣೆ ಯಾರು..? ಎನ್ನುವ ಪ್ರಶ್ನೆ ಉದ್ಭವಿಸಿದೆ ಎಂದು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಜಿಲ್ಲಾ ಕೇಂದ್ರ ಹಾವೇರಿಯಿಂದ 30ಕಿಮೀ ದೂರ ಇರುವ ಮರೋಳ ಗ್ರಾಮದವರೆಗೆ ಪ್ರತ್ಯೇಕ ಬಸ್ ವ್ಯವಸ್ಥೆ ಕಲ್ಪಿಸಬೇಕು. ಕೆರೆಕೊಪ್ಪ, ಕಡಕೋಳ ಕಡೆಯಿಂದ ಬರುವ ಬಸ್ ಹೆಚ್ಚಿನ ಪ್ರಯಾಣಿಕರನ್ನು ತುಂಬಿಕೊಂಡು ಬರುತ್ತಿದೆ. ಮರೋಳದಿಂದ ಹಾವೇರಿವರೆಗಿನ ನಡುವಿನ ಹಳ್ಳಿಗಳ ಕಾಲೇಜು ವಿದ್ಯಾರ್ಥಿಗಳು, ಪ್ರಯಾಣಿಕರ ಪಾಡೇನು...? ಎಂದು ಪ್ರಶ್ನಿಸಿದರು. ಈ ಕೂಡಲೇ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಬೆಳಗ್ಗೆ ಹಾಗೂ ಸಂಜೆ ವೇಳೆ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಕಲ್ಪಿಸಬೇಕೆಂದು ಒತ್ತಾಯಿಸಿದರು.

ನಂತರ ದೂರವಾಣಿ ಕರೆ ಮೂಲಕ ಮಾತನಾಡಿದ ಗುತ್ತಲ ಪೊಲೀಸ್ ಠಾಣೆಯ ಆರಕ್ಷಕರು ಹಾಗೂ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಹೆಚ್ಚುವರಿಗೆ ಬಸ್ ಬಿಡುವ ಕುರಿತು ಮನವಿ ಸಲ್ಲಿಸಲು ಸೂಚಿಸಿದರು. ಬಸ್ ವ್ಯವಸ್ಥೆ ಕಲ್ಪಿಸುವ ಭರವಸೆ ನೀಡಿದ ಬಳಿಕ ಪ್ರತಿಭಟನೆ ಹಿಂಪಡೆದು ಬಸ್ ಸಂಚಾರಕ್ಕೆ ಅನುಕೂಲ ಕಲ್ಪಿಸಿದರು.



ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು: ಶ್ರೀನಿವಾಸ

ಹಾವೇರಿ: ಗುರು ಪರಂಪರೆಯು ಭಾರತದ ಅಸ್ಮಿತೆಯಾಗಿದ್ದು, ಶಿಕ್ಷಕ ವೃತ್ತಿಯು ಕೇವಲ ಒಂದು ಉದ್ಯೋಗವಲ್ಲ, ಅದು ಅತ್ಯಂತ ಪವಿತ್ರ ಮತ್ತು ರಾಷ್ಟ್ರ ನಿರ್ಮಾಣದ ಕಾರ್ಯವಾಗಿದೆ. ಕೇವಲ ಮಗುವಿಗೆ ಜ್ಞಾನವನ್ನು ಮಾತ್ರ ಹಂಚುವುದಲ್ಲ, ಅದರ ಜೊತೆಗೆ ದೇಶದ ಸತ್ಪ್ರಜೆಯನ್ನಾಗಿ ಮಾಡುವದೇ ಮಹತ್ತರ ಜವಾಬ್ದಾರಿಯಾಗಿದೆ ಎಂದು ಹಾವೇರಿ ತಾಲ್ಲೂಕಿನ ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಶ್ರೀನಿವಾಸ್ ಹೇಳಿದರು.

ನಗರದ ಹುಕ್ಕೇರಿಮಠದ ರಾಚೋಟೇಶ್ವರ ಪ.ಪೂ ವಾಣಿಜ್ಯ ಮಹಾವಿದ್ಯಾಲಯಲ್ಲಿ ಹಮ್ಮಿಕೊಂಡಿದ್ದ, ತಾಲೂಕಿನ ಅನುದಾನಿತ ಮುಖ್ಯೋಪಾಧ್ಯಾಯರ ಸಂಘದ ಉದ್ಘಾಟನೆ, ಪದಗ್ರಹಣ ಮತ್ತು ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸನ್ಮಾನ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಳೆದ ವರ್ಷದ ಎಸೆಸೆಲ್ಸಿ ಪರೀಕ್ಷೆಯಲ್ಲಿ ಹಾವೇರಿ ತಾಲೂಕು ಜಿಲ್ಲೆಯಲ್ಲಿ ಮೂರನೇ ಸ್ಥಾನ ಪಡೆದಿದೆ. ಈ ವರ್ಷದಲ್ಲಿ ಜಿಲ್ಲೆಗೆ ಮತ್ತು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆಯಲು ಎಲ್ಲರೂ ಸಾಮೂಹಿಕವಾಗಿ ಪ್ರಯತ್ನಿಸಬೇಕಾಗಿದೆ. ನೂರಕ್ಕೆ ನೂರು ಫಲಿತಾಂಶವನ್ನು ಎಲ್ಲಾ ಶಾಲೆಗಳೂ ಪಡೆಯಬೇಕು ಎಂದು ಹೇಳಿದರು.

ನೂತನ ಅಧ್ಯಕ್ಷರಾಗಿ ಕುರುಬಗೊಂಡದ ಮೃತ್ಯುಂಜಯ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಬಸವರಾಜ ಕೋರಿ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಗೌರವಾಧ್ಯಕ್ಷರಾಗಿ ಹಂದಿಗನೂರು ಪ್ರೌಢಶಾಲೆಯ ಚಂದ್ರಶೇಖರ ಮರಳಿಹಳ್ಳಿ, ಕಾರ್ಯದರ್ಶಿಯಾಗಿ ನಗರದ ಎಸ್.ಎಂ.ಎಸ್ ಶಾಲೆಯ ವಾಯ್.ಎಂ. ಓಲೇಕಾರ, ಸದಸ್ಯರಾಗಿ ಸಿ.ಎ. ದಳವಾಯಿ, ಎಸ್.ಬಿ. ಚನ್ನೂರ, ವಿ.ಎನ್. ಹಾವನೂರ, ಪುಷ್ಪಲತಾ ಕೆರೂಡಿ, ಎಸ್.ಎಂ. ಮಾಳಾಪುರ ಆಯ್ಕೆಯಾದರು.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಪ್ರೌಢಶಾಲೆ ಪರೀಕ್ಷಾ ಮಂಡಳಿಯ ಎಂ.ಎಸ್. ಕೆಂಚನಗೌಡರ ವಹಿಸಿದ್ದರು. ಮಾಧ್ಯಮಿಕ ಶಾಲಾ ನೌಕರರ ಸಂಘದ ಎಂ.ಬಿ. ರಮೇಶ, ಪತ್ತಿನ ಸಂಘದ ಅಧ್ಯಕ್ಷ ಶರಣಪ್ಪ ಇಟಗಿ, ಶೋಭಾ ಜಾಗಟಗೇರಿ, ಇಸಿಓ ಬಿ.ಕೆ. ಹನುಮಗೌಡ, ವಿನಾಯಕ ಗಡ್ಡದ, ಎಂ.ಎಸ್. ಬಿಸ್ಟನಗೌಡ್ರ, ಬಿ.ಎನ್. ಗಟ್ಟಿಮನಿ ಮತ್ತಿತರರು ಉಪಸ್ಥಿತರಿದ್ದರು. ಪುಷ್ಪಾ ಕೆರೂಡಿ ಪ್ರಾರ್ಥಿಸಿದರು. ಸಿ.ಎ. ದಳವಾಯಿ ಸ್ವಾಗತಿಸಿದರು. ಎಸ್. ಎನ್. ಮಳೆಪ್ಪನವರ ನಿರೂಪಿಸಿದರು. ಬಿ. ಝೇಂಕಾರ ವಂದಿಸಿದರು.



ಕೌಶಲ್ಯ, ನೈಪುಣ್ಯತೆಯಿಂದ ರಾಷ್ಟ್ರ ನಿರ್ಮಾಣ ಸಾಧ್ಯ

ಶಿಗ್ಗಾವಿ : ವಿಶ್ವಕರ್ಮ ಸಮಾಜಕ್ಕೆ ಹಾವೇರಿ ಜಿಲ್ಲೆಯಲ್ಲಿ ಎರಡು ಎಕರೆ ಜಾಗೆ ಹಾಗೂ ಮುಂದಿನ ಎರಡು ವರ್ಷಗಳಲ್ಲಿ ಐವತ್ತು ಲಕ್ಷ ರೂ.ಗಳ ಅನುದಾನ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಪಟ್ಟಣದ ಸಂಗನಬಸವ ಮಂಗಲ ಭವನದಲ್ಲಿ ಹಾವೇರಿ ಜಿಲ್ಲಾ ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ಜರುಗಿದ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ಮತ್ತು ಬಡ್ತಿ ನೌಕರರಿಗೆ ವಿಶ್ವಕರ್ಮ ನೌಕರ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಭರತ್ ಸೇವಾ ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ದುಂಡಿಗೌಡ್ರ, ಡಾ.ಪದ್ಮಾವತಿ ಪತ್ತಾರ, ಡಾ.ಕೆ.ಪ್ರೇಮಕುಮಾರ, ಚಾಮರಾಜ ಕಮ್ಮಾರ ಮಾತನಾಡಿದರು.

2026ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದವರನ್ನು ಸನ್ಮಾನಿಸಿಲಾಯಿತು.

ಚನ್ನಗಿರಿ ತಾಲೂಕಿನ ವಡ್ಡನಹಾಳ ಕಾಶೀಮಠದ ಅಷ್ಟೋತ್ತರ ಶತಶ್ರೀ ಶಂಕರಾತ್ಮಾನಂದ ಸರಸ್ವತಿ ಶ್ರೀಗಳು, ಶಿಗ್ಗಾವಿ ವಿರಕ್ತಮಠದ ಶ್ರೀ ಸಂಗನಬಸವ ಶ್ರೀಗಳು ಹಾಗೂ ರಾಣೆಬೆನ್ನೂರಿನ ಶ್ರೀ ವಿಶ್ವ ವಿಭುರೇಖಿ ಧ್ಯಾನಪೀಠದ ಶ್ರೀ ಮೌನೇಶ್ವರ ಆಚಾರ್ಯ ಸಾನ್ನಿಧ್ಯ ವಹಿಸಿದ್ದರು.



ಜಿಲ್ಲಾ ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಈರಪ್ಪ ಪಂಚಾನನ ಅಧ್ಯಕ್ಷತೆವಹಿಸಿದ್ದರು. ಮುಖಂಡರಾದ ರಾಮಣ್ಣ ಬಡಿಗೇರ, ತಿಪ್ಪಣ್ಣ ಸಾತಣ್ಣವರ, ಶಿವಾನಂದ ಮ್ಯಾಗೇರಿ, ಸುರೇಶ ಕಮ್ಮಾರ, ಈರಣ್ಣ ಬೆಳವಡಿ, ಗಣೇಶ ಕಮ್ಮಾರ, ಎಸ್.ಎಂ.ಬಡಿಗೇರ ಹಾಗೂ ಜಿಲ್ಲೆಯ ವಿವಿಧ ತಾಲೂಕಿನ ಸಮಾಜದವರು ಉಪಸ್ಥಿತರಿದ್ದರು. ಚಿದಾನಂದ ಬಡಿಗೇರ ಸ್ವಾಗತಿಸಿದರು. ಪಾರ್ವತಿ ಬಡಿಗೇರ ನಿರೂಪಿಸಿದರು. ಮಾಲತೇಶ ಕಮ್ಮಾರ ವಂದಿಸಿದರು.

ಶಿಕ್ಷಕ ವೃತ್ತಿ ಶ್ರೇಷ್ಠ ವೃತ್ತಿ: ರತ್ನಮ್ಮ

ರಾಣೇಬೆನ್ನೂರ: ಸಮಾಜದಲ್ಲಿ ಗುರುವಿಗೆ ಇರುವಷ್ಟು ಗೌರವ ಬೇರೆ ಯಾರಿಗೂ ಇಲ್ಲ. ಗುರುವಾಗುವುದೇ ಪೂರ್ವಜನ್ಮದ ಪುಣ್ಯದ ಫಲ. ವೃತ್ತಿಯಿಂದ ನಿವೃತ್ತಿಯಾದರೂ ತಮ್ಮ ಕೈಯಲ್ಲಿ ಕಲಿತ ಮಕ್ಕಳು ಸದಾಕಾಲ ಸ್ಮರಿಸುವಂತಹ ಏಕೈಕ ಕ್ಷೇತ್ರ ಶಿಕ್ಷಣ ಕ್ಷೇತ್ರವಾಗಿದೆ ಎಂದು ಸರ್ಕಾರಿ ಶಾಲೆಯ ನಿವೃತ್ತ ಶಿಕ್ಷಕಿ ಎ. ಬಿ. ರತ್ನಮ್ಮ ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ತು ಭವನದಲ್ಲಿ ಜಿಲ್ಲಾ ಕ.ಸಾ.ಪ. ಮತ್ತು ಹಳೆ ವಿದ್ಯಾರ್ಥಿಗಳು, ಅಭಿಮಾನಿ ಬಳಗ ಆಯೋಜಿಸಿದ್ದ ನಿವೃತ್ತರ ಅಭಿನಂದನಾ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಮಾಜಿ ಶಾಸಕ ಅರುಣಕುಮಾರ ಪೂಜಾರ ಅವರು ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕ.ಸಾ ಪ. ಜಿಲ್ಲಾಧ್ಯಕ್ಷ ಲಿಂಗಯ್ಯ ಹಿರೇಮಠ, ವಿದ್ಯ ಕಲಿಸಿದ ಗುರು ಚಂದ್ರಪ್ಪ ಹೊಸಳ್ಳಿ, ಏಕೇಶ್ವರಪ್ಪ, ಮಾಜಿ ಅಧ್ಯಕ್ಷ ವಾಸಣ್ಣ ಕುಸುಗೂರು, ವರ್ತಕರಾದ ಮಲ್ಲೇಶಪ್ಪ ಅರಿಕೇರಿ, ಜಿ.ಜಿ. ಹೊಟ್ಟಿಗೌಡ್ರ, ಏಕನಾಥ ಭಾನುವಳ್ಳಿ , ಎಚ್. ಎಲ್. ದೊಡ್ಡಗೌಡ್ರ, ವೈ. ಬಿ. ಆಲದಕಟ್ಟಿ, ಬಸವರಾಜ ಡಿ, ಬಿ.ಪಿ. ಶಿಡೆನೂರು, ಹೆಚ್. ಶಾಂತರಾಜ್, ಗಾಯಿತ್ರಮ್ಮ ಕುರುವತ್ತಿ, ನಿರ್ಮಲಾ ಲಮಾಣಿ, ವಿದ್ಯಾವತಿ ಜಂಗಿನ್ ಸೇರಿದಂತೆ ಮತ್ತಿತರ ಗಣ್ಯರು, ಕ. ಸಾ. ಪ ಪದಾಧಿಕಾರಿಗಳು, ವರ್ತಕರು ಜಂಬಗಿ ಕುಟುಂಬದ ಪರಿವಾರದವರು ಪಾಲ್ಗೊಂಡಿದ್ದರು. ಕಲಾವಿದೆ ಅನಸೂಯಾ ರಾಥೋಡ ಪ್ರಾರ್ಥಿಸಿದರು. ಪ್ರಭಾಕರ್ ಸಿಗ್ಲಿ ಸ್ವಾಗತಿಸಿ, ಜಗದೀಶ್ ಮಳಿಮಠ ನಿರೂಪಿಸಿ, ಇಂದಿರಾ ಬಾರಂಗಿ ವಂದಿಸಿದರು.



ಸಚಿವ ಸ್ಥಾನ ನೀಡಲು ಒತ್ತಾಯ

ಬ್ಯಾಡಗಿ: ಬ್ಯಾಡಗಿ ಮತಕ್ಷೇತ್ರದ ಜನಪ್ರಿಯ ಹಿರಿಯ ಶಾಸಕರಾದ ಬಸವರಾಜ ಶಿವಣ್ಣನವರ ಅವರಿಗೆ ಹಾಗೂ ಹಿರಿಯ ಅಲ್ಪಸಂಖ್ಯಾತರ ನಾಯಕ ಹಾಗೂ ಮಾಜಿ ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೆ ಮುಖ್ಯಮಂತ್ರಿಗಳಾದ ಡಿ ಕೆ.ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವ ಸ್ಥಾನ ನೀಡಲು ಕಾಂಗ್ರೆಸ್ ಮುಖಂಡ ಹಾಗೂ ಮಾಜಿ ಅಂಜುಮನ್ ಅಧ್ಯಕ್ಷ ಹಾಗೂ ಆರೋಗ್ಯ ರಕ್ಷಾ ಸಮಿತಿ ಸದಸ್ಯರು ಡಾ.ಎಂ.ಎಚ್.ಸೌದಾಗರ ಆಗ್ರಹಿಸಿದ್ದಾರೆ.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಹಾವೇರಿ ಜಿಲ್ಲೆಯ ಆರು ಜನ ಕಾಂಗ್ರೆಸ್ ಪಕ್ಷದ ಶಾಸಕರಲ್ಲಿ ಹಿರಿಯ ಶಾಸಕರು ಹಾಗೂ ನಾಲ್ಕು ಬಾರಿ ಶಾಸಕರಾಗಿ ಸಚಿವರಾಗಿ ಹಲವಾರು ಜನಪರ ಕಾರ್ಯಕ್ರಮ ನೀಡಿದ ಹಾಗೂ ಸಾವಿರಾರು ಕೋಟಿ ಅನುದಾನವನ್ನು ಬ್ಯಾಡಗಿ ಮತಕ್ಷೇತ್ರಕ್ಕೆ ತಂದು ಪಟ್ಟಣದ ಹಾಗೂ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ ಪಡಿಸಿದ್ದಾರೆ.

ಮುಖ್ಯಮಂತ್ರಿಗಳಾದ ಡಿ ಕೆ.ಶಿವಕುಮಾರ್ ಅವರು ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಹಾವೇರಿ ಜಿಲ್ಲೆಗೆ ನ್ಯಾಯ ಒದಗಿಸಬೇಕು. ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಅಲ್ಪಸಂಖ್ಯಾತರ ದೀನ ದಲಿತರ ನಾಯಕರಾಗಿ ವಸತಿ ಸಚಿವರಾಗಿ ಈ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಮಹತ್ತರ ಪಾತ್ರವಹಿಸಿದ ಜಾತಿ ಮತ ಬೇಧವೆನ್ನದೇ ನಿರ್ಗತಿಕರಿಗೆ ಬಡರೋಗಿಗಳಿಗೆ ಸಹಾಯ ಹಸ್ತ ಚಾಚುವ ಧೀಮಂತ ಅಲ್ಪಸಂಖ್ಯಾತ ನಾಯಕ ಬಿ ಜೆಡ್ ಜಮೀರ್ ಅಹಮದ್ ಖಾನ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿದರು.

ಪ್ರಕೃತಿ ಉಳಿವಿಗೆ ಕೈಜೋಡಿಸಿ



ಹಾನಗಲ್ಲ: ಪ್ರಕೃತಿಯ ಉಳಿವಿಗೆ ಗಟ್ಟಿ ಹೆಜ್ಜೆ ಇಡದಿದ್ದರೆ ಜೀವಸಂಕುಲದ ಅಸ್ತಿತ್ವಕ್ಕೆ ಧಕ್ಕೆ ಉಂಟಾಗುವ ಭೀತಿ ಸೃಷ್ಟಿಯಾಗಿದೆ. ಪ್ರಕೃತಿ ರಕ್ಷಿಸುವುದು ಎಂದರೆ ನಮ್ಮನ್ನು ನಾವೇ ರಕ್ಷಿಸಿಕೊಂಡಂತೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಅಕ್ಕಿಆಲೂರಿನ ಸಿ.ಜಿ.ಬೆಲ್ಲದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅರಣ್ಯ ಇಲಾಖೆಯ ಆಶ್ರಯದಲ್ಲಿ ಸಾಲುಮರದ ತಿಮ್ಮಕ್ಕ ವೃಕ್ಷೋಧ್ಯಾನ ಉದ್ಘಾಟಿಸಿ, ಅಶ್ವತ್ಥಮರ ನೂರು ಭಾವಗಳು ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಇಂದು ನಮ್ಮ ಕಣ್ಣೆದುರಿಗೆ ಪ್ರಕೃತಿ ಮುನಿಸಿಕೊಂಡಿದೆ. ಜಾಗತಿಕ ತಾಪಮಾನದ ತೀವ್ರತೆ ಹೆಚ್ಚುತ್ತಿದೆ. ಸಕಾಲಕ್ಕೆ ಬರಬೇಕಾದ ಮಳೆ ಮಾಯವಾಗಿದೆ. ನಮ್ಮ ಸ್ವಾರ್ಥ ಮತ್ತು ಬೇಜವಾಬ್ದಾರಿಯಿಂದ ಹಸಿರು ನಾಶ ಹೀಗೆಯೇ ಮುಂದುವರೆದರೆ ಭೂಮಿ ಬರಡಾಗಲು ಬಹಳ ದಿನಗಳು ಬೇಕಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು. ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಕೆಎಂಎಫ್ ನಿರ್ದೇಶಕ ಚಂದ್ರಪ್ಪ ಜಾಲಗಾರ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿವಾನಂದ ಪೂಜಾರ, ವಲಯ ಅರಣ್ಯಾಧಿಕಾರಿಗಳಾದ ಗಣೇಶಪ್ಪ ಶೆಟ್ಟರ, ಗಜೇಂದ್ರ ಎನ್., ಎನ್‌ಎಸ್‌ಎಸ್ ಅಧಿಕಾರಿ ಮಲ್ಲನಗೌಡ ಕುಲಕರ್ಣಿ, ಗಂಗಾಧರ ಪಿ.ಆರ್., ಭವ್ಯಶ್ರೀ, ಶಿವರಾಜ ಹೂಗಾರ, ಎಂ.ಎಂ.ಬಳಬಟ್ಟಿ, ಪ್ರವೀಣ ಎಸ್. ಸೇರಿದಂತೆ ಉಪನ್ಯಾಸಕರು, ಸಿಬ್ಬಂದಿ ಇದ್ದರು.

ವಿಶ್ವ ಪರಿಸರ ದಿನಾಚರಣೆ

ಬ್ಯಾಡಗಿ: ಪ್ರಕೃತಿಯೇ ನಮಗೆ ಜೀವನಾಡಿ. ಪರಿಸರವನ್ನು ಕೇವಲ ಒಂದು ದಿನದ ಆಚರಣೆಗೆ ಸೀಮಿತಗೊಳಿಸದೆ, ದಿನ ನಿತ್ಯದ ಜೀವನದಲ್ಲಿ ಮರ-ಗಿಡಗಳನ್ನು ಬೆಳೆಸುವ, ಪ್ಲಾಸ್ಟಿಕ್ ಮುಕ್ತ ಪರಿಸರ ನಿರ್ಮಿಸುವ, ಜಲ ಸಂರಕ್ಷಣೆಯ ಸಂಕಲ್ಪವನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ತೊಡಬೇಕು ಎಂದು ಕಾಲೇಜಿನ ಪ್ರಾ. ಮಲ್ಲಿಕಾರ್ಜುನ ಕಡ್ಡಿಪುಡಿ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಕಾಲೇಜಿನಲ್ಲಿ ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆಯ ಮತ್ತು ಜಾಗೃತಿ ಮೂಡಿಸಲು ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಾಲೇಜು ಸಿಬ್ಬಂದಿಗಳಾದ ಡಾ. ದೇವೇಂದ್ರ ಬಿ ಎಸ್. ಎಸ್‌ಜಿ ಸಣ್ಣಗೌಡ್ರ, ಚಿಕ್ಕಣ್ಣ ಬಿಎಸ್, ಡಾ. ಮಂಜುನಾಥ್ ಕಮ್ಮಾರ್, ಶಿವಪ್ಪ ಗಿಡ್ಡಣ್ಣನವರ್, ಕಾಂತೇಶ್ ತಳವಾರ್ ಇದ್ದರು.



ಗುರುವಿಗೆ ಶಿಷ್ಯನಿಂದ ಕಾರು ಕೊಡುಗೆ



ಹಾನಗಲ್ಲ: ಬಾಲ್ಯದಲ್ಲಿ ಅಭ್ಯಾಸಕ್ಕೆ ಕಷ್ಟಗಳಲ್ಲಿ ಆಸರೆ ತೋರಿದ ಗುರುವಿಗೆ ಅವರ ನಿವೃತ್ತಿ ವೇಳೆ ಹೊಸ ಸ್ವಿಫ್ಟ್ ಕಾರನ್ನು ಗುರುವಿಗೆ ಶಿಷ್ಯ ಕೊಡುಗೆಯಾಗಿ ನೀಡಿ ಅವರ ಕೃತಜ್ಞತೆಗೆ ಪಾತ್ರನಾಗಿದ್ದಾನೆ.

ಹಾನಗಲ್ಲಿನ ಕುಮಾರೇಶ್ವರ ಪ್ರೌಢಶಾಲೆಯಲ್ಲಿ ವಿಜ್ಞಾನ ಹಾಗೂ ಮುಖ್ಯ ಶಿಕ್ಷಕರಾಗಿ ಸುದೀರ್ಘ ಸೇವೆ ಸಲ್ಲಿಸಿ, ಮೇ 31ರಂದು ನಿವೃತ್ತರಾದ ಸಿ.ಎಸ್. ವಸ್ತ್ರದ ಅವರಿಗೆ ಅವರ ಹೆಮ್ಮೆಯ ಹಳೇ ವಿದ್ಯಾರ್ಥಿ ನವೀನ ಹುಲಿಹಳ್ಳಿ ಈ ಅಪೂರ್ವ ಗುರುಕಾಣಿಕೆ ನೀಡಿದ್ದಾನೆ.

ಬಡ ವಿದ್ಯಾರ್ಥಿಗಳ ಪಾಲಿನ ಆಶಾಕಿರಣ: ವೃತ್ತಿಯಲ್ಲಿದ್ದಾಗ ಸಿ.ಎಸ್. ವಸ್ತ್ರದ ಅವರು ಕೇವಲ ಶಿಕ್ಷಕರಾಗಿರದೆ, ರಜಾ ಅವಧಿಗಳಲ್ಲಿ ಬಡ ಮಕ್ಕಳಿಗೆ ಉಚಿತ ಟ್ಯೂಷನ್ ನೀಡಿ ಅವರನ್ನು ಮೇಲೆತ್ತಿ ಮುನ್ನಡೆಸಿದ್ದರು. ಪುಸ್ತಕ ಹಾಗೂ ನೋಟ್‌ಬುಕ್‌ಗಳನ್ನು ತಮ್ಮ ವೇತನದ ಹಣದಿಂದಲೇ ಭರಿಸಿ, ಮಕ್ಕಳು ಶಾಲೆಗೆ ವಿಮುಖರಾಗದಂತೆ ಕಾಳಜಿ ಮೆರೆದಿದ್ದರು.

ಈ ಅಪೂರ್ವ ಕ್ಷಣಕ್ಕೆ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಡಾ. ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಸಾಕ್ಷಿಯಾಗಿ ಆಶೀರ್ವದಿಸಿದರು.

ಕಿರುಸುದ್ದಿ

ಪಿ.ಕೆ.ಬಡಿಗೇರಗೆ ಛಾಯಾ ರತ್ನ ಪ್ರಶಸ್ತಿ



ಬೆಳಗಾವಿ: ಪತ್ರಿಕಾ ಛಾಯಾಗ್ರಹಣ ಕ್ಷೇತ್ರದಲ್ಲಿ ಕಳೆದ 25 ವರ್ಷಗಳಿಂದ ನಿರಂತರ ಸೇವೆ ಸಲ್ಲಿಸುತ್ತಿರುವ ಬೆಳಗಾವಿಯ ಹಿರಿಯ ಪತ್ರಿಕಾ ಛಾಯಾಗ್ರಾಹಕ ಪಿ.ಕೆ. ಬಡಿಗೇರ ಅವರಿಗೆ ಕರ್ನಾಟಕ ಛಾಯಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಜೂ.12 ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಮಟ್ಟದ ಫೋಟೋ ಟುಡೇ ವಸ್ತು ಪ್ರದರ್ಶನದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪತ್ರಿಕಾ ರಂಗದಲ್ಲಿ ತಮ್ಮ ಛಾಯಾಚಿತ್ರಗಳ ಮೂಲಕ ಜನಸಾಮಾನ್ಯರ ಸಮಸ್ಯೆಗಳು, ಸಾಮಾಜಿಕ ಘಟನೆಗಳು, ರಾಜಕೀಯ ಬೆಳವಣಿಗೆಗಳು ಹಾಗೂ ವಿವಿಧ ಕ್ಷೇತ್ರಗಳ ಕ್ಷಣಗಳನ್ನು ಪರಿಣಾಮಕಾರಿಯಾಗಿ ದಾಖಲಿಸಿರುವ ಪಿ.ಕೆ. ಬಡಿಗೇರ ಅವರ ಸೇವೆಯನ್ನು ಗುರುತಿಸಿ ಈ ಗೌರವ ನೀಡಲಾಗುತ್ತಿದೆ.



ಗೋಕಾಕ: ಜಯ ಕರ್ನಾಟಕ ಜನಪರ ವೇದಿಕೆ ತಾಲೂಕು ಘಟಕದಿಂದ ವಿಶ್ವ ಪರಿಸರ ದಿನ ಆಚರಿಸಲಾಯಿತು. ತಾಲೂಕಾಧ್ಯಕ್ಷ ಅಜೀಜ ಮೋಕಾಶಿ, ನಗರಾಧ್ಯಕ್ಷ ಯಾಸೀನ ಮುಲ್ಲಾ, ಕೃಷ್ಣಾ ಮಾವರಕರ, ಸಮೀವುಲ್ಲಾ ಜಮಾದಾರ, ರಶೀದ ಬಾರಗೀರ, ರವಿ ಕಂಬಿಮಠ, ಕಿಶೋರ ತೋಟಗಟ್ಟಿ, ಹನೀಫ ಅಂಡಗಿ ಇದ್ದರು.



ಬೆಳಗಾವಿ: ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೆಳಗಾವಿ ವಿಭಾಗೀಯ ಕಚೇರಿಯಲ್ಲಿ ಪರಿಸರ ದಿನ ಆಚರಣೆ ಮಾಡಲಾಯಿತು.

ನಿಧನ ಸುದ್ದಿ

ಪಾರ್ವತಿತಾಯಿ ಪಾಟೀಲ



ಕಾಗವಾಡ: ಪಟ್ಟಣದ ಪಾರ್ವತಿ ತಾಯಿ ಬಾಳಾಸಾಹೇಬ ಪಾಟೀಲ (95) ನಿಧನರಾಗಿದ್ದಾರೆ. ಮಾಜಿ ಸಚಿವ ಹಾಗೂ ಕೆಂಪುವಾಡ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾದ ಶ್ರೀಮಂತ ಬಾಳಸಾಹೇಬ್ ಪಾಟೀಲ್ ಅವರ ಮಾತೋಶ್ರೀಯಾಗಿದ್ದಾರೆ, ಇಬ್ಬರು ಪುತ್ರರು ಹಾಗೂ ನಾಲ್ಕು ಜನ ಪುತ್ರಿಯರನ್ನು ಅಗಲಿದ್ದಾರೆ. ಹಿರಿಯ ಜೀವಿ ಪಾರ್ವತಿ ತಾಯಿ ಅವರ ಅಂತ್ಯಕ್ರಿಯೆ ಶಿನಾಳದಲ್ಲಿ ನೆರವೇರಿತು.

ನಾಗಪ್ಪ ಸಾಳೊಂಕಿ



ಮೂಡಲಗಿ: ತಾಲೂಕಿನ ಕಲ್ಲೋಳಿ ಪಟ್ಟಣದ ಮರಾಠ ಸಮಾಜದ ಹಿರಿಯ,ಮಾಜಿ ಸೈನಿಕ ನಾಗಪ್ಪ ಯಲ್ಲಪ್ಪ.ಸಾಳೊಂಕಿ (97) ಭಾನುವಾರ ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಅಪಾರ ಬಂಧು ಬಳಗ ಅಗಲಿದ್ದಾರೆ.



ಬೆಳಗಾವಿ : ಬೆಳಗಾವಿಯ ಬಿಮ್ಸ್ ಅಧೀನದ ಸರ್ಕಾರಿ ನರ್ಸಿಂಗ್ ಶಾಲೆಯ 3ನೇ ವರ್ಷದ ಜಿಎನ್‌ಎಂ ವಿದ್ಯಾರ್ಥಿನಿಯರು ಹಾಗೂ ಉಪನ್ಯಾಸಕರು ಸಮುದಾಯ ಆರೋಗ್ಯ ನರ್ಸಿಂಗ್ ಕ್ಷೇತ್ರಾನುಭವ ಕಾರ್ಯಕ್ರಮದ ಅಂಗವಾಗಿ ಜಾಫರವಾಡಿ ಗ್ರಾಮದಲ್ಲಿ ವಿಶ್ವ ಪರಿಸರ ದಿನಾಚರಣೆ ಹಾಗೂ ಶಾಲಾ ಆರೋಗ್ಯ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಜೂ.16ರಿಂದ ತರಬೇತಿ ಕಾರ್ಯಾಗಾರ

ಬೆಳಗಾವಿ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ ಉನ್ನತ ಬೌದ್ಧಿಕ ಆಸ್ತಿ ಹಕ್ಕುಗಳು (ಅಡ್ವಾನ್ಸಡ್ ಇಂಟಲೆಕ್ಚುವಲ್ ಪ್ರೋಪರ್ಟಿ (IPR)ವಿಷಯದ ಮೇಲೆ ಜೂನ್ 16 ರಿಂದ ಜೂನ್ 20 ರವರೆಗೆ ಐದು ದಿನಗಳ ತರಬೇತಿ ಕಾರ್ಯಾಗಾರವನ್ನು ಅಕಾಡೆಮಿಯ ಕಛೇರಿಯಲ್ಲಿ ಆಯೋಜಿಸಲಾಗುತ್ತಿದೆ. ಈ ಕಾರ್ಯಾಗಾರದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಉಪನ್ಯಾಸಗಳನ್ನು ನೀಡಲಿದ್ದು, ಆಸಕ್ತ ವಿಜ್ಞಾನ ಪದವಿ, ಸ್ನಾತಕೋತ್ತರ ಪದವಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು-ಪ್ರಾಧ್ಯಾಪಕರು, ವಿಜ್ಞಾನಾಸಕ್ತರು ಹಾಗೂ ಕೈಗಾರಿಕೋದ್ಯಮದ ಪ್ರತಿನಿಧಿಗಳು ಭಾಗವಹಿಸಬಹುದಾಗಿದೆ. ಆಸಕ್ತರು ಜೂನ್ 12 ಒಳಗಾಗಿ https://forms.gle/iwHJD5CxnccCf-w4u5ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಗಾರದ ಸಂಯೋಜಕರಾದ ವಿ. ಜಿ. ಉಮೇಶ ವೈಜ್ಞಾನಿಕಾಧಿಕಾರಿ ಇವರನ್ನು ಸಂಪರ್ಕಿಸಬಹುದಾಗಿದೆ ಅಥವಾ ಅಕಾಡೆಮಿಯ ವೆಬ್‌ಸೈಟ್- https://kstacademy.in ವೀಕ್ಷಿಸಬಹುದಾಗಿದೆ ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಯಬಾಗ: ತಾಲೂಕಿನ ಜಲಾಲಪುರ ಗ್ರಾಮದ ಗ್ರಾಮ ಪಂಚಾಯಿತಿಯ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಅವಿರೋಧ ಆಯ್ಕೆ ನಡೆಯಿತು.ಅಧ್ಯಕ್ಷರಾಗಿ ಪಾಂಡುರಂಗ ಮಾ ಹವಾಲ್ದಾರ ಅವರನ್ನು ಆಯ್ಕೆ ಮಾಡಲಾಯಿತು .

ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ | ಡಾ. ಅಲ್ಲಮಪ್ರಭು ಶ್ರೀ ಹೇಳಿಕೆ

ಕನ್ನಡಕ್ಕಾಗಿ ಪ್ರಾಣ ತ್ಯಾಗಕ್ಕೂ ಸಿದ್ಧ

ಬೆಳಗಾವಿ: ಬೆಳಗಾವಿ ಮತ್ತು ಕನ್ನಡದ ಹಿತಾಸಕ್ತಿಗಾಗಿ ಯಾವುದೇ ರೀತಿಯ ಹೋರಾಟಕ್ಕೂ, ಅಗತ್ಯವಿದ್ದರೆ ಪ್ರಾಣತ್ಯಾಗಕ್ಕೂ ತಾವು ಸಿದ್ಧರಾಗಿರುವುದಾಗಿ ಡಾ. ಅಲ್ಲಮಪ್ರಭು ಸ್ವಾಮೀಜಿ ಹೇಳಿದರು.

ಸೋಮವಾರ ನಗರದ ನಾಗನೂರು ರುದ್ರಾಕ್ಷಿ ಮಠದಲ್ಲಿ ಕನ್ನಡ ಸಂಘಟನೆಗಳ ಮುಖಂಡರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಗಡಿ, ನೆಲ ಮತ್ತು ಜಲದ ವಿಚಾರದಲ್ಲಿ ತಮ್ಮ ನಿಲುವನ್ನು ದೃಢವಾಗಿ ವ್ಯಕ್ತಪಡಿಸಿದರು.

ಬೆಳಗಾವಿ ಕರ್ನಾಟಕದಲ್ಲಿಯೇ ಉಳಿಯಲು ಲಿಂಗೈಕ್ಯ ಶಿವಬಸವ ಮಹಾಸ್ವಾಮಿಗಳು ನಡೆಸಿದ ಹೋರಾಟವನ್ನು ಸ್ಮರಿಸಿದ ಅವರು, ಶಿವಬಸವ ಶ್ರೀಗಳು ಬೆಳಗಾವಿಗೆ ಬಾರದಿದ್ದರೆ ನಗರ ಕನ್ನಡ ನಾಡಿನಲ್ಲಿಯೇ ಉಳಿಯುತ್ತಿರಲಿಲ್ಲ, ಅವರು ಮರಾಠಿ ಗುಂಡಾಗಳಿಂದ ಅನುಭವಿಸಿದ ನೋವು ಮರೆಯಲಾಗದು. ಇಷ್ಟು ವರ್ಷಗಳ ಬಳಿಕವೂ ಮತ್ತೆ ಹೋರಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ದುರದೃಷ್ಟಕರ ಎಂದು ವಿಷಾದಿಸಿದರು.

ಕನ್ನಡದ ಹಿತಾಸಕ್ತಿಗೆ ಧಕ್ಕೆ ಬಂದಾಗಲೆಲ್ಲ ಶ್ರೀಮಠ ಹಲವು ದಶಕಗಳಿಂದ ಹೋರಾಟದ ಮುಂಚೂಣಿಯಲ್ಲಿ ನಿಂತಿದೆ ಎಂದು ತಿಳಿಸಿದ ಅವರು, ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂಬುದನ್ನು ಸೂರ್ಯ-ಚಂದ್ರರು ಇರುವವರೆಗೂ ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ, ಬೆಳಗಾವಿ ನಮ್ಮದು ಎಂದು ಸಾಬೀತುಪಡಿಸಬೇಕಾದ ಪರಿಸ್ಥಿತಿ ಎದುರಾಗಿರುವುದು ಬೇಸರದ ಸಂಗತಿ ಬೇಸರ ವ್ಯಕ್ತಪಡಿಸಿದರು.

ಕಳೆದ ಎರಡು ತಿಂಗಳಿನಿಂದ ನಡೆಯುತ್ತಿರುವ ಹೋರಾಟಕ್ಕೆ ಶ್ರೀಮಠದ ಸಂಪೂರ್ಣ ಬೆಂಬಲವಿದೆ ಎಂದು ಸ್ಪಷ್ಟಪಡಿಸಿದ ಅವರು, ಈ ಕುರಿತು ಮಹಾಪೌರ ಹಾಗೂ ಉಪ ಮಹಾಪೌರರೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದರು.

ಇದಕ್ಕೂ ಮುನ್ನ ಮಾತನಾಡಿದ ಕನ್ನಡ ಹೋರಾಟಗಾರ ಅಶೋಕ ಚಂದರಗಿ, ಕನ್ನಡ ಪರ ಹೋರಾಟಗಳು ಹಾಗೂ ಮಹಾನಗರ ಪಾಲಿಕೆಯಲ್ಲಿ ಈ ಸಂಬಂಧ ಕೈಗೊಳ್ಳಲಾದ ಕ್ರಮಗಳ ಕುರಿತು ವಿವರಿಸಿ, ಪಾಲಿಕೆಯ ಪ್ರಸ್ತುತ ನಿಲುವನ್ನು ತೀವ್ರವಾಗಿ ಖಂಡಿಸಿದರು. ಕನ್ನಡದ ಪರವಾಗಿ ಗೊತ್ತುವಳಿ ಅಂಗೀಕಾರವಾಗುವವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದು ಹೇಳಿದರು.

ಈ ವೇಳೆ ಕನ್ನಡ ಹೋರಾಟಗಾರ ಮಹಾದೇವ ತಳವಾರ, ಶ್ರೀನಿವಾಸ ತಾಳೂಕರ, ಬಲರಾಮ್ ಮಾಸೇನಟ್ಟಿ, ವಾಜೀದ್ ಹಿರೇಕೋಡಿ, ಮಹಾನಗರ ಪಾಲಿಕೆ ಸದಸ್ಯರಾದ ರಮೇಶ ಸೊಂಟಕ್ಕಿ, ದಿನೇಶ ನಾಶಿಪುಡಿ, ಸಾಹಿತಿ ನೀಲಗಂಗಾ ಚರಂತಿಮಠ ಸೇರಿದಂತೆ 20ಕ್ಕೂ ಹೆಚ್ಚು ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು.



ಹಿಂದೇಟು ಏಕೆ?

ಗಡಿ ವಿಚಾರದಲ್ಲಿ ಯಾರ ಸ್ವಾರ್ಥವೂ ಇಲ್ಲ. ಭವಿಷ್ಯದಲ್ಲಿ ಉಂಟಾಗಬಹುದಾದ ಅನಾಹುತಗಳನ್ನು ತಡೆಯುವ ನಿಟ್ಟಿನಲ್ಲಿ ಈ ಹೋರಾಟ ನಡೆಯುತ್ತಿದೆ ಎಂದು ಹೇಳಿದ ಅವರು, ಮಹಾನಗರ ಪಾಲಿಕೆಯಲ್ಲಿ ಕನ್ನಡಿಗರೇ ಅಧಿಕಾರದಲ್ಲಿದ್ದರೂ ಬೆಳಗಾವಿ ಕರ್ನಾಟಕದ್ದೆಂದು ನಿರ್ಣಯ ಅಂಗೀಕರಿಸಲು ಹಿಂದೇಟು ಹಾಕುತ್ತಿರುವುದೇಕೆ ಎಂದು ಶ್ರೀಗಳು ಪ್ರಶ್ನಿಸಿದರು.

ಕರ್ನಾಟಕ ಪರ ಗೊತ್ತುವಳಿ ಅಂಗೀಕರಿಸಲಿ

ಬೆಳಗಾವಿ:ಕರ್ನಾಟಕಪರವಾದಗೊತ್ತುವಳಿ ಅಂಗೀಕರಿಸಲು ನಿರಾಕರಿಸುತ್ತಿರುವ ಬೆಳಗಾವಿ ಮಹಾನಗರ ಪಾಲಿಕೆಯ ವಿರುದ್ಧ ಕ್ರಮಕ್ಕೆ ಆಗ್ರಹಿಸಿ, ಕನ್ನಡ ನಾಡು, ನುಡಿ, ಗಡಿ ಹಿತಾಸಕ್ತಿ ವಿರೋಧಿ ನಿಲುವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ವತಿಯಿಂದ ಸಚಿವ ಸತೀಶ ಜಾರಕಿಹೊಳಿ ಅವರಿಗೆ ಸೋಮವಾರ ಮನವಿ ಸಲ್ಲಿಸಲಾಯಿತು.

2005 ರ ಅಕ್ಟೋಬರ್ 27 ರಂದು ಬೆಳಗಾವಿ ಪಾಲಿಕೆಯಲ್ಲಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಸುಪ್ರೀಂ ಕೋರ್ಟನ್ನು ಕೋರುವ ಗೊತ್ತುವಳಿಯನ್ನು ಅಂಗೀಕರಿಸಲಾಗಿದೆ. ಈ ಗೊತ್ತುವಳಿಯನ್ನು ಮಹಾರಾಷ್ಟ್ರ ಸರಕಾರ ಸುಪ್ರೀಂ ಕೋರ್ಟಿನ ಮುಂದಿರುವ ಗಡಿ ವಿವಾದ ಪ್ರಕರಣದಲ್ಲಿ ಪೂರಕ ದಾಖಲೆಯನ್ನಾಗಿ ಬಳಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಸದ್ಯ ಕನ್ನಡಿಗರೇ ಬಹುಮತ ಹೊಂದಿರುವ ಬೆಳಗಾವಿ ಪಾಲಿಕೆಯಲ್ಲಿ ಕರ್ನಾಟಕ ಪರವಾದ ಗೊತ್ತುವಳಿಯನ್ನು ಅಂಗೀಕರಿಸಬೇಕೆಂದು ಕಳೆದ 75 ದಿನಗಳಿಂದ ಹೋರಾಟ ನಡೆಸಿದರೂ ಪಾಲಿಕೆಯಿಂದ ಯಾವುದೇ ಸ್ಪಂದನೇ ದೊರೆತ್ತಿಲ್ಲ ಎಂದು ಮನವಿಯಲ್ಲಿ ಕಳವಳ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿ ಮೋಹನ ಕಾತರಕಿ ಅವರು ತಮ್ಮ ಕಾನೂನಾತ್ಮಕ ಅಭಿಪ್ರಾಯ ನೀಡಿದ್ದು, ಬೆಳಗಾವಿ ಪಾಲಿಕೆಯಲ್ಲಿ ಕರ್ನಾಟಕ ಪರವಾದ ಗೊತ್ತುವಳಿ ಅಂಗೀಕರಿಸಲು ಯಾವುದೇ ಕಾನೂನು ತೊಡಕಿಲ್ಲವೆಂದು ಲಿಖಿತವಾಗಿ ತಿಳಿಸಿದ್ದಾರೆ. ಆದರೂ ಸಹಿತ ಮಹಾಪೌರರು ಹಾಗೂ ಉಪಮಹಾಪೌರರು ತಮ್ಮ ಮೊಂಡುವಾದವನ್ನು ಮುಂದುವರಿಸಿದ್ದಾರೆ.

ಕನ್ನಡ ಪರ ಸಂಘಟನೆಗಳು ಹೋರಾಟದ ಭಾಗವಾಗಿ ಜೂನ್ 1 ರಿಂದ ಪ್ರತಿದಿನ ಪ್ರಾದೇಶಿಕ ಆಯುಕ್ತರಿಗೆ ಮನವಿ ಸಲ್ಲಿಸುತ್ತಿವೆ. ಆದರೂ ಯಾವುದೇ ಸ್ಪಂದನೆ ದೊರೆತ್ತಿಲ್ಲ, ಈ ಮೂಲಕ ರಾಜ್ಯ ಸರಕಾರದ ಗಮನ ಸೆಳೆಯಾಗುವುದು ಎಂದು ಮನವಿ ಮಾಡಿಕೊಂಡರು.

ಈ ವೇಳೆ ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಹಾಗೂ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಸದಸ್ಯರಾದ ಅಶೋಕ ಚಂದರಗಿ, ದೀಪಕ್ ಗುಡ್ಡಗನಟ್ಟಿ, ಮಹಾದೇವ ತಳವಾರ, ಬಲರಾಮ ಮಾಸೇನಟಿ, ಶ್ರೀನಿವಾಸ ತಾಳೂರ್ಕ, ಮಲ್ಲಪ್ಪ ಗುಡಗೇನಟ್ಟಿ, ರವಿ ಜಗಮೈನ್ನವರ, ಸರ್ವಮಂಗಳಾ ಅರಳಿಕಟ್ಟಿ, ಸಿದ್ದಲಿಂಗಪ್ಪ ಸುನಕುಪ್ಪಿ ಸೇರಿದಂತೆ ಹಲವು ಕನ್ನಡಪರ ಸಂಘಟನೆಯ ಕಾರ್ಯಕರ್ತರು ಇದ್ದರು.



ಹೈನುಗಾರಿಕೆಯಿಂದ ಆರ್ಥಿಕ ಸ್ವಾವಲಂಬನೆ ಸಾಧ್ಯ



ರಾಯಬಾಗ: ಹೈನುಗಾರಿಕೆಯನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಂಡರೆ ರೈತರು ಹಾಗೂ ಪಶುಪಾಲಕರು ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದು ಎಂದು ಲೇಖಕ ಹಾಗೂ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಪ್ರಣಯ ಪಾಟೀಲ ಹೇಳಿದರು.

ಪಟ್ಟಣದ ಸ್ಟೇಷನ್ ಹಿಲ್‌ನಲ್ಲಿ ಭಾನುವಾರ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ವತಿಯಿಂದ ಪಶುಪಾಲಕರು ಮತ್ತು ರೈತರಿಗೆ ಪಶು ವಿಮೆ, ಮರುಪಾವತಿ ಹಾಗೂ ಸಹಾಯಧನದ ಚೆಕ್‌ಗಳನ್ನು ವಿತರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಹೈನುಗಾರಿಕೆ ಪ್ರಮುಖ ಪಾತ್ರ ವಹಿಸುತ್ತಿದ್ದು, ರೈತರಿಗೆ ಇದು ನಿರಂತರ ಆದಾಯದ ಮೂಲವಾಗಬಹುದು. ಸರ್ಕಾರ ಹಾಗೂ ಕೆಎಂಎಫ್ ಜಾರಿಗೊಳಿಸಿರುವ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡರೆ ಆರ್ಥಿಕ ಸ್ಥಿರತೆ ಸಾಧಿಸಲು ಸಾಧ್ಯ ಎಂದು ಹೇಳಿದರು.

ಪಶು ವಿಮೆ ಮತ್ತು ಮರುಪಾವತಿ ಯೋಜನೆಗಳು ಸಂಕಷ್ಟದ ಸಂದರ್ಭದಲ್ಲಿ ರೈತರಿಗೆ ಭದ್ರತೆ ಒದಗಿಸುತ್ತವೆ. ಹಾಲು ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಜೀವನಮಟ್ಟವನ್ನು ಸುಧಾರಿಸಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೆಎಂಎಫ್ ತಾಲೂಕು ಅಧಿಕಾರಿ ಡಾ. ಚಂದ್ರಶೇಖರ ಸಂಬಾಳ ಸೇರಿದಂತೆ ಬಸಪ್ಪ ನಾಗೌಡ, ರಾಜು ಬಾವಚೆ, ಶಿವಾಜಿ ಶೇಲಾರ, ವಿಜಯ ಗಾಯಕವಾಡ ಹಾಗೂ ಸುಭಾಸ ಗಸ್ತಿ ಉಪಸ್ಥಿತರಿದ್ದರು



ನೇಸರಗಿ: ಐಸಿಎಆರ್-ಕೆಎಲ್‌ಇ ಕೃಷಿವಿಜ್ಞಾನ ಕೇಂದ್ರ, ಮತ್ತಿಕೊಪ್ಪದಲ್ಲಿ ವಿಶ್ವ ಪರಿಸರ ದಿನವನ್ನು ಸಸಿ ನೆಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬಿಜೆಪಿಯಿಂದ ಪರಿಸರ ದಿನಾಚರಣೆ

ಯರಗಟ್ಟಿ: ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಸಮೀಪದ ಸತ್ತಿಗೇರಿ ಗ್ರಾಮದ ಮಳಿಮಲ್ಲೇಶ್ವರ ಶ್ರೀಮಠ ಆವರಣದಲ್ಲಿ ಬಿಜೆಪಿ ಪಕ್ಷದಿಂದ ಹಾಗೂ ಮಳಿಮಲ್ಲೇಶ್ವರ ಪಿಕೆಪಿಎಸ್ ನೇತೃತ್ವದಲ್ಲಿ ಸಸಿ ನೆಡಲಾಯಿತು.

ಸಕಲ ಜೀವಿಗಳ ಜೀವನಾಡಿಯಾಗಿರುವ ಪರಿಸರ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ನಾಗರಿಕನ ಪ್ರಮುಕ ಕರ್ತವ್ಯವಾಗಿದೆ ಎಂದು ಬಿಜೆಪಿ ಮಂಡಲ ಉಪಾಧ್ಯಕ್ಷ ಮಹಾಂತೇಶ ಗೋಡಿ ಹೇಳಿದರು.

ಈ ವೇಳೆ ಗುರುಪಾದಪ್ಪ ಪಾಟೀಲ, ಇಬ್ರಾಹಿಂ ಮುಲ್ಲಾ, ಬಸವರಾಜ ಕೊಟ್ರಶೆಟ್ಟಿ, ಸೋಮಪ್ಪ ರಾಯರ, ವಿಠ್ಠಲ ಭಾಂಗಿ, ವಿಠ್ಠಲ ಕುಲಗೋಡ, ಪ್ರಕಾಶ ರಾಯರ, ಪರಪ್ಪ ಶೆಟ್ಟರ, ಸಂಗಮೇಶ ಸಂಗಪ್ಪನ್ನವರ, ರಮೇಶ ತುರಮಂದಿ, ಈರಣ್ಣಾ ಕವಟಗಿ, ಪ್ರವೀಣ ಪಟ್ಟಶೆಟ್ಟಿ ಸೇರಿದಂತೆ ಇತರರಿದ್ದರು.



ವಿಶ್ವ ಪರಿಸರ ದಿನಾಚರಣೆಗೆ ಚಾಲನೆ



ಬೆಳಗಾವಿ: ಇಲ್ಲಿನ ಆರ್.ಎಲ್. ಕಾನೂನು ಮಹಾವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಎ.ಎಚ್. ಹವಾಲ್ದಾರ ಅವರು ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಹಾವಿದ್ಯಾಲಯದ ಕಾನೂನು ನೆರವು ಕೋಶವು ಎನ್‌ಎಸ್‌ಎಸ್ ವಿಭಾಗದ ಸಹಯೋಗದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಪರಿಸರ ಸಂರಕ್ಷಣೆ, ಹಸಿರು ವಾತಾವರಣದ ಮಹತ್ವ ಹಾಗೂ ಪರಿಸರ ಜಾಗೃತಿಯ ಕುರಿತು ಕಾರ್ಯಕ್ರಮದಲ್ಲಿ ಅರಿವು ಮೂಡಿಸಲಾಯಿತು. ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕರೆ ನೀಡಲಾಯಿತು. ಈ ವೇಳೆ ಪ್ರಾಧ್ಯಾಪಕ ಚೇತನ್ ಕುಮಾರ್ ಟಿ.ಎಂ. ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳು ಸೇರಿದಂತೆ ಹಲವರಿದ್ದರು.

ಉಚಿತ ನೋಟ್ ಬುಕ್ ವಿತರಣೆ

ಬೆಳಗಾವಿ: ಶೈಕ್ಷಣಿಕ ವರ್ಷದ ಆರಂಭದ ಅಂಗವಾಗಿ ಶಿವಗಿರಿ ಕೋ ಆಪ್ ಕ್ರೆಡಿಟ್ ಸೊಸೈಟಿ ವತಿಯಿಂದ ಬಿಲ್ಲವರ ಅಸೋಸಿಯೇಶನ್ ಸಹಯೋಗದೊಂದಿಗೆ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಉಚಿತ ನೋಟ್ ಬುಕ್ ಮತ್ತು ಲೇಖನ ಸಾಮಗ್ರಿ ವಿತರಿಸಲಾಯಿತು.

ಡಾ. ತೇಜಸ್ವಿನಿ ಹೊಂಗಲ್, ಶಿವಗಿರಿ ಸೊಸೈಟಿಯ ಅಧ್ಯಕ್ಷರಾದ ಸುಜನ್ ಕುಮಾರ್ , ಬಿಲ್ಲವ ಸಂಘದ ಅಧ್ಯಕ್ಷರಾದ ಸುನಿಲ್ ಆರ್ ಪೂಜಾರಿ, ಉದ್ಯಮಿ ಸುನಿಲ್ ನಾಯ್ಕ ಮಾತನಾಡಿದರು. ಡಾ. ಸುನೀತಾ ಬಂಗೇರರವರು ದೇಣಿಗೆ ನೀಡಿದರು. ವ್ಯವಸ್ಥಾಪಕರಾದ ಚಂದ್ರ ಎಚ್ .ಪೂಜಾರಿ ನಿರೂಪಿಸಿ ವಂದಿಸಿದರು.



ಗೋಲ್ಡನ್ ಆ್ಯರೋ ಪ್ರಶಸ್ತಿ ಪ್ರದಾನ



ಬೆಳಗಾವಿ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಜೈನ್ ಹೆರಿಟೇಜ್ ಶಾಲೆಯಲ್ಲಿ ಪ್ರಕೃತಿಯಿಂದ ಪ್ರೇರಣೆ ಭವಿಷ್ಯಕ್ಕಾಗಿ ಹವಾಮಾನ ಎಂಬ ಧ್ಯೇಯವಾಕ್ಯದಡಿ ಗೋಲ್ಡನ್ ಆ್ಯರೋ ಅವಾರ್ಡ್-2026 ಪ್ರಶಸ್ತಿ ಪ್ರದಾನ ಸಮಾರಂಭವನ್ನು ಅರ್ಥಪೂರ್ಣವಾಗಿ ಆಯೋಜಿಸಲಾಯಿತು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರತಿನಿಧಿ ಹಾಗೂ ಜಿಲ್ಲಾ ನ್ಯಾಯಾಧೀಶ ಕೆ.ಎನ್. ಶಿವಕುಮಾರ್ ಪಾಲ್ಗೊಂಡಿದ್ದರು. ಗೌರವ ಅತಿಥಿಗಳಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಅಧಿಕಾರಿ ಗೋಪಾಲಕೃಷ್ಣ ಸಂತಾಂಗಿ, ಪರಿಸರ ಅಧಿಕಾರಿ ಹನುಮಂತಪ್ಪ, ವಿಜ್ಞಾನಿ ಡಾ. ಪಾಟೀಲ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಬೆಳಗಾವಿ ಜಿಲ್ಲಾ ಸಂಘಟನಾ ಆಯುಕ್ತ ವಿಠ್ಠಲ್ ಎಸ್.ಬಿ. ಹಾಗೂ ರಾಜಕುಮಾರ್ ಕೆ. ಉಪಸ್ಥಿತರಿದ್ದು, ಪರಿಸರ ಜಾಗೃತಿ, ಸುಸ್ಥಿರ ಅಭಿವೃದ್ಧಿ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಯ ಅಗತ್ಯತೆಯ ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಬೆಳಗಾವಿ ಜಿಲ್ಲೆಯ 120 ಕಬ್ಸ್ ಮತ್ತು ಬುಲ್ಬುಲ್ ವಿದ್ಯಾರ್ಥಿಗಳಿಗೆ ಗೋಲ್ಡನ್ ಆ್ಯರೋ ಅವಾರ್ಡ್ -2026 ಪ್ರದಾನ ಮಾಡಲಾಯಿತು. ಶಾಲೆಯ ಪ್ರಾಂಶುಪಾಲೆ ರೋಹಿಣಿ ಕೆ.ಬಿ. ಹಾಗೂ ಮುಖ್ಯ ಆಡಳಿತಾಧಿಕಾರಿ ಆ್ಯಮಿ ದೋಶಿ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

10 ಲಕ್ಷ ರೂ. ಪರಿಹಾರದ ಚೆಕ್ ವಿತರಣೆ

ಸಂಕೇಶ್ವರ: ಪಟ್ಟಣದ ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕನಾ ಸುನೀಲ ಮಾರುತಿ ರಾಜವ್ವಗೋಳ ಅವರ ಕುಟುಂಬಕ್ಕೆ ಐಸಿಐಸಿಐ ಪ್ರುಡೆನ್ಷಿಯಲ್ ಲೈಫ್ ಇನ್ಶೂರೆನ್ಸ್ ಸಂಸ್ಥೆಯ ಗ್ರೂಪ್ ಡೆತ್ ಇನ್ಶೂರೆನ್ಸ್ ಯೋಜನೆಯಡಿ 10 ಲಕ್ಷ ರೂ. ಆರ್ಥಿಕ ನೆರವನ್ನು ವಿತರಿಸಲಾಯಿತು.

ಪರಿಹಾರ ಧನದ ಚೆಕ್ ಅನ್ನು ಕಾರ್ಖಾನೆ ಅಧ್ಯಕ್ಷ ಬಸವರಾಜ ಕಲ್ಲಟ್ಟಿ ನಿರ್ದೇಶಕರುಗಳಾದ ಶಿವನಾಯಿಕ ನಾಯಿಕ, ಪ್ರಭುದೇವ ಪಾಟೀಲ, ಬಸಪ್ಪಾ ಮರಡಿ, ಸುರೇಂದ್ರ ದೊಡ್ಡಲಿಂಗನವರ ಸೇರಿದಂತೆ ಸಂಸ್ಥೆಯ ಆಡಳಿತ ಮಂಡಳಿಯ ಪದಾಧಿಕಾರಿಗಳು ಮೃತ ಕಾರ್ಮಿಕನ ಪತ್ನಿ ಶಾಂತವ್ವಾ ಸುನೀಲ ರಾಜವ್ವಗೋಳ ಅವರಿಗೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಕಾರ್ಖಾನೆಯ ಕಾರ್ಯಾಲಯ ಅಧೀಕ್ಷಕರಾದ ಸುಭಾಷ ನಾಶಿಪುಡಿ, ಕಾರ್ಮಿಕ ಕಲ್ಯಾಣಾದಿಕಾರಿ ಕೆ. ಎಮ್. ಪಾಟೀಲ, ಸಮಯಪಾಲಕ ಎನ್. ಎಸ್. ಮರಬಸನ್ನವರ, ಸ್ಟೋರ ವಿಭಾಗದ ಶಂಕರ ನೇರ್ಲಿ ವಿವಿಧ ವಿಭಾಗಗಳ ಮುಖ್ಯಸ್ಥರು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.



ಸಂಗೀತ ಶಿಕ್ಷಣದಿಂದ ಮಕ್ಕಳ ವ್ಯಕ್ತಿತ್ವ ವಿಕಸನ



ಗೋಕಾಕ: ಸಂಗೀತವು ದೈವಿಕ ಮತ್ತು ದೇವತೆಗಳಿಗೆ ಅತ್ಯಂತ ಪ್ರಿಯವಾದುದು. ದೇವತೆಗಳೂ ಸಂಗೀತವನ್ನು ಆಲಿಸುವ ಮತ್ತು ಆನಂದಿಸುವ ಅನೇಕ ನಂಬಿಕೆಗಳಿವೆ ಎಂದು ವರ್ತಕ ಮಹಾದೇವ ಈಟಿ ಹೇಳಿದರು.

ನಗರದ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಗುಂಪು ಕಲಾವಿದರು ಅಧಿಕ ಮಾಸದ ನಿಮಿತ್ತ ಆಯೋಜಿಸಿದ್ದ 210ನೇ ಮಾಸಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಂಗೀತ ಶಿಕ್ಷಣವು ಮಕ್ಕಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಪ್ರಮುಖ ಸಾಧನವಾಗಿದೆಎಂದು ಹೇಳಿದರು.

ವೇದಿಕೆ ಮೇಲೆ ರೋಟರಿ ಸಂಸ್ಥೆಯ ಅಧ್ಯಕ್ಷ ಗಿರೀಶ್ ಝುಂವರ, ಡಾ ಸುಶ್ರುತ್ ಕಡಲಗಿಕರ, ಬಸವರಾಜ ಕ್ಯಾಸ್ತಿ, ಬಸವರಾಜ ಮಠಪತಿ, ಪ್ರದೀಪ ಯಂಟಗೌಡ್ರ, ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಂದ ಜರುಗಿದ ಸಂಗೀತಕಾರ್ಯಕ್ರಮಕ್ಕೆ ಲಿಮ್ಕಾ ವಿಶ್ವದಾಖಲೆಯ ಕಲಾವಿದ ಜಿ ಕೆ ಕಾಡೇಶಕುಮಾರ್ ವಾದ್ಯ ಸಹಕಾರ ನೀಡಿದರು.

ಸಚಿವ ಜಾರಕಿಹೊಳಿ ಅವರಿಗೆ ಸತ್ಕಾರ

ನೇಸರಗಿ: ಮುಖ್ಯಮಂತ್ರಿ ಡಿ ಕೆ ಶಿವಕುಮಾರ ಅವರ ಮಂತ್ರಿ ಮಂಡಲದಲ್ಲಿ ರಾಜ್ಯದ ಲೋಕೋಪಯೋಗಿ ಸಚಿವರಾಗಿ ಆಯ್ಕೆಯಾದ ಸತೀಶ ಜಾರಕಿಹೊಳಿ ಅವರನ್ನು ನೇಸರಗಿ ಜಿಲ್ಲಾ ಪಂಚಾಯತ ವ್ಯಾಪ್ತಿಯ ಅನೇಕ ಕಾರ್ಯಕರ್ತರು ಬೆಳಗಾವಿ ನಗರದ ಕಾಂಗ್ರೆಸ್ ಭವನದಲ್ಲಿ ಸತ್ಕರಿಸಿದರು. ಈ ಸಂದರ್ಭದಲ್ಲಿ ಮಾಜಿ ಜಿ ಪಂ ಸದಸ್ಯ ನಿಂಗಪ್ಪ ಅರಿಕೇರಿ, ಮಂಜುನಾಥ ಹುಲಮನಿ, ನಿಂಗಪ್ಪ ಕುರಗುಂದ, ಆಯುಭ ಗಣಾಚಾರಿ, ಶ್ಯಾನ ರಾಮಣ್ಣವರ, ಸುರೇಶ, ರಾಮಣ್ಣವರ,ದ್ಯಾಮಣ್ಣ ನವಲಗಟ್ಟಿ, ಶ್ರೀನೇಶ ಚಿಕರಾಯಿ, ಲಕ್ಕಪ್ಪ ತಪಲಿ, ಯಲ್ಲಪ್ಪ ಕಾಕಿ, ನಾಗಪ್ಪ ಕರಡಿಗುದ್ದಿ, ದುರ್ಗಪ್ಪ ನವಲಗಟ್ಟಿ, ಬಾಳಪ್ಪ ಮಿಜ್ಜಿ, ಬಸವಣ್ಣೆಪ್ಪ ಕರಡಿಗುದ್ದಿ, ದುರ್ಗಪ್ಪ ಆಡಿನ, ಬಸಪ್ಪ ಕಪಲಿ ಸೇರಿದಂತೆ ನೇಸರಗಿ ಭಾಗದ ಅನೇಕ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಜಾರಕಿಹೊಳಿ ಅವರನ್ನು ಸನ್ಮಾನಿಸಿದರು.



ಕಿರುಸುದ್ದಿ

ಬೆಳಗಾವಿಯ ರಸ್ತೆಗಳ ಸುಧಾರಣೆಗೆ 15 ಕೋಟಿ ರೂ. ಅನುದಾನ: ಶೆಟ್ಟರ



ಬೆಳಗಾವಿ : ಕೇಂದ್ರ ರಸ್ತೆ ಮೂಲಭೂತ ಸೌಕರ್ಯ ಯೋಜನೆ ಅಡಿಯಲ್ಲಿ ಬೆಳಗಾವಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಸುಮಾರು 22 ಕಿ.ಮೀ ಉದ್ದದ ಮೂರು ಪ್ರಮುಖ ರಸ್ತೆಗಳನ್ನು ಸುಧಾರಿಸಲು ಕೇಂದ್ರ ಸರ್ಕಾರ 15 ಕೋಟಿ ಅನುದಾನ ಮಂಜೂರು ಮಾಡಿದೆ ಎಂದು ಸಂಸದ ಜಗದೀಶ್ ಶೆಟ್ಟರ್ ಸಂತಸ ವ್ಯಕ್ತಪಡಿಸಿದರು. ಕೆಲವು ತಿಂಗಳುಗಳ ಹಿಂದೆ ಸಂಸದ ಜಗದೀಶ ಶೆಟ್ಟರ ಅವರು ನವದೆಹಲಿಯಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ಅವರನ್ನು ಭೇಟಿ ಮಾಡಿ, ಬೆಳಗಾವಿ ಲೋಕಸಭಾ ಕ್ಷೇತ್ರದ ವಿವಿಧ ಭಾಗಗಳಲ್ಲಿ ಹಾಳಾಗಿರುವ ಸುಮಾರು 80.33 ಕಿ.ಮೀ ರಸ್ತೆಗಳ ದುರಸ್ತಿಗಾಗಿ ಒಂಬತ್ತು ಕಾಮಗಾರಿಗಳಿಗೆ ಒಟ್ಟು 86.40 ಕೋಟಿ ಅನುದಾನ ನೀಡುವಂತೆ ಮನವಿ ಸಲ್ಲಿಸಿದ್ದರು.ಈ ಮನವಿಗೆ ಸ್ಪಂದಿಸಿರುವ ಕೇಂದ್ರ ಸಚಿವಾಲಯವು ಮೊದಲ ಹಂತದಲ್ಲಿ ಮೂರು ಪ್ರಮುಖ ರಸ್ತೆ ಕಾಮಗಾರಿಗಳಿಗೆ ಅನುಮೋದನೆ ನೀಡಿದೆ.ಅಭಿವೃಧಿ ಪಡಿಸಿದ ರಸ್ತೆಗಳು ಊರುಗಳು: ಬೆಳಗಾವಿ ತಾಲೂಕಿನ ದೇಸೂರುನಂದಿಹಳ್ಳಿಕುಕಡೋಳ್ಳಿ ರಸ್ತೆ (12 ಕಿ.ಮೀ) ಸುಧಾರಣೆಗೆ 8 ಕೋಟಿ. ಬಿಜಗರ್ಣಿ ಕವಳೆವಾಡಿ ಜಾನೇವಾಡಿ ಕರ್ಲೆ ಬಹದ್ದೂರ ವಾಡಿಕಿನಿಯೆ ಸಂಪರ್ಕ ರಸ್ತೆ ಮೂಲಕ ರಾಜ್ಯ ಹೆದ್ದಾರಿ-54 ಸಂಪರ್ಕ ಕಲ್ಪಿಸುವ 5 ಕಿ.ಮೀ ರಸ್ತೆಯ ಸುಧಾರಣೆಗೆ 4 ಕೋಟಿ.

ಅರ್ಜಿ ಆಹ್ವಾನ

ಬೆಳಗಾವಿ : ತೋಟಗಾರಿಕೆ ಇಲಾಖೆಯಿಂದ 2026-27ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಹನಿ ನೀರಾವರಿ ಘಟಕಗಳಿಗೆ ಸಹಾಯಧನ ಪಡೆಯಲು ಅವಕಾಶವಿದ್ದು, ಯೋಜನೆಗಳ ಪ್ರಯೋಜನ ಪಡೆಯಲು ಆಸಕ್ತ ತೋಟಗಾರಿಕೆ ಬೆಳೆಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ವಿವಿಧ ಬೆಳೆಗಳಾದ ಮಾವು, ಗೋಡಂಬಿ, ಬಾಳೆ, ರಾಮ್ ಬೂತಾನ್, ಹೈಬ್ರಿಡ್ ತರಕಾರಿ ಪ್ರದೇಶ ವಿಸ್ತರಣೆ, ಹಳೆಯ ಮರಗಳ ಪುನಶ್ಚೇತನ, ಸಮಗ್ರ ಪೋಷಕಾಂಶಗಳ ನಿರ್ವಹಣೆ, ವೈಯಕ್ತಿಕ ಕೃಷಿ ಹೊಂಡ, ಪ್ಲಾಸ್ಟಿಕ್ ಹೊದಿಕೆ, ಕಳೆ ಚಾಪೆ, ಫಾರ್ಮ್ ಗೇಟ್, ಪ್ಯಾಕ್ ಹೌಸ್, ತೋಟಗಾರಿಕೆಯಲ್ಲಿ ಯಾಂತ್ರಿಕರಣ, ಎರೆಹುಳು ಗೊಬ್ಬರ ಘಟಕಗಳಿಗೆ ಸಹಾಯ ಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.ರಾಷ್ಟ್ರೀಯ ಖಾದ್ಯ ತೈಲ ಅಭಿಯಾನದಡಿ ತಾಳೆ ಬೆಳೆ, ಪ್ರದೇಶ ವಿಸ್ತರಣೆ, ನಿರ್ವಹಣೆ, ಪಂಪಸೆಟ್, ಕೊಳವೆಬಾವಿಗಳಿಗೆ ಸಹಾಯಧನ, ಕೃಷಿ ಹೊಂಡ, ತಾಳೆ ಹಣ್ಣು ಕಟಾವು ಯಂತ್ರ, ಚಾಪ್ ಕರ್ಟ, ಟ್ರಾಕ್ಟರ್, ಟ್ರಾಲಿ, ಅಂತರ ಬೆಳೆಗಳಿಗೆ ಸಹಾಯಧನ ಪಡೆಯಲು ಅವಕಾಶವಿದೆ. ಅರ್ಜಿ ಸಲ್ಲಿಸಲು ಜೂನ್ 30 ಕೊನೆಯ ದಿನವಾಗಿರುತ್ತದೆ.ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ, ಅಥವಾ ತೋಟಗಾರಿಕೆ ತಾಲೂಕು ಕಚೇರಿಯನ್ನು ಸಂಪರ್ಕಿಸುವಂತೆ ಗೋಕಾಕ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವ ಪರಿಸರ ದಿನಾಚರಣೆ

ಬೆಳಗಾವಿ : ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಬೆಳಗಾವಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮಾಜಿ ಸೈನಿಕರ ಸಂಘಟನೆಗಳ ಮಹಾಒಕ್ಕೂಟ ಹಾಗೂ ಮಹಿಳಾ ಘಟಕದ ವತಿಯಿಂದ ಶುಕ್ರವಾರ ಸಸಿ ವಿತರಣಾ ಕಾರ್ಯಕ್ರಮ ನೆರವೇರಿಸಲಾಯಿತು.

ಡಾ. ಸತೀಶ ಚೌಲಿಗೇರ ಮಾತನಾಡಿದರು. ಅಧ್ಯಕ್ಷತೆಯನ್ನು ಜಗದೀಶ ಪೂಜೇರಿ ವಹಿಸಿದ್ದರು. ನಾಗೇಶ ಯಡಾಲ, ಚುನಪ್ಪ ಪೂಜಾರಿ ಹಾಗೂ ಪ್ರೇಮ ಚೌಗಲಾ ಭಾಗವಹಿಸಿ ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಮಾತನಾಡಿದರು. ಜಗದೀಶ ಪೂಜೇರಿ ಮಾತನಾಡಿದರು.

ಈ ಸಂದರ್ಭದಲ್ಲಿ ಗಣ್ಯರನ್ನು ಸತ್ಕರಿಸಿ, ಸಾರ್ವಜನಿಕರಿಗೆ ವಿವಿಧ ಜಾತಿಯ ಸಸಿಗಳನ್ನು ಉಚಿತವಾಗಿ ವಿತರಿಸುವ ಮೂಲಕ ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಿಧನ ಸುದ್ದಿ

ಗೌರವ್ವ ದೊಡ್ಡಬಸನ್ನವರ



ಘಟಪ್ರಭಾ: ಪಟ್ಟಣದ ಗೌರವ್ವ ಬಸವಣ್ಣೆಪ್ಪ ದೊಡ್ಡಬಸನ್ನವರ (76) ಸೋಮವಾರ ನಿಧನರಾಗಿದ್ದಾರೆ. ಮೃತರು ನಾಲ್ಕು ಜನ ಪುತ್ರರು, ಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಯರಗಟ್ಟಿ: ಸಮೀಪದ ಸತ್ತಿಗೇರಿ ಗ್ರಾಮದ ಸರ್ಕಾರಿ ಪ್ರೌಢ ಶಾಲಾ ಆವರಣದಲ್ಲಿ ಸಾಮಾಜಿಕ ಅರಣ್ಯ ವಲಯ ಸವದತ್ತಿ, ತಾಪಂ, ಯರಗಟ್ಟಿ-ಸವದತ್ತಿ, ತಾಲೂಕಾ ಆಡಳಿತ ಯರಗಟ್ಟಿ ಆಶ್ರಯದಲ್ಲಿ ವಿಶ್ವಪರಿಸರ ದಿನ ಆಚರಣೆ ಮಾಡಲಾಯಿತು.

ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ: ತಹಶೀಲ್ದಾರ್

ಯರಗಟ್ಟಿ: ನಾವು ಪರಿಸರವನ್ನು ರಕ್ಷಿಸಿದಾಗ ಮಾತ್ರ ಪರಿಸರ ನಮ್ಮನ್ನು ರಕ್ಷಿಸುತ್ತದೆ ಎಂದು ತಹಶೀಲ್ದಾರ ಎಂ. ವ್ಹಿ. ಗುಂಡಪ್ಪಗೋಳ ಅಭಿಪ್ರಾಯಪಟ್ಟರು.ಸಮೀಪದ ಸತ್ತಿಗೇರಿ ಗ್ರಾಮದ ಸರಕಾರಿ ಪ್ರೌಢ ಶಾಲಾ ಆವರಣದಲ್ಲಿ ಸಾಮಾಜಿಕ ಅರಣ್ಯ ವಲಯ ಸವದತ್ತಿ, ತಾಲೂಕ ಪಂಚಾಯತ, ಯರಗಟ್ಟಿ-ಸವದತ್ತಿ, ತಾಲೂಕಾ ಆಡಳಿತ ಯರಗಟ್ಟಿ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಸಿ ನೆಟ್ಟು ಅವರು ಮಾತನಾಡಿದರು.ಸವದತ್ತಿ ವಲಯ ಅರಣ್ಯ ಅಧಿಕಾರಿ ನೀಹಾ ತೋರಗಲ್ಲ ಮಾತನಾಡಿದರು.ಈ ಸಂದರ್ಭದಲ್ಲಿ ತಾ. ಪಂ. ಇಓ ಆನಂದ ಬಡಕುಂದ್ರಿ, ಸಿಡಿಪಿಓ ಅಮೃತ ಸಾನಿಕೊಪ್ಪ, ಬಿಇಓ ಎ. ಎ. ಖಾಜಿ, ಪಿಡಿಓ ಎ. ಬಿ. ಬಂಗಾರಿ, ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸನ್ನವರ, ಕೆಎಂಎಫ್ ನಿರ್ದೇಶಕ ಶಂಕರ ಇಟ್ನಾಳ, ಪ. ಪಂ. ಸದಸ್ಯ ನಿಖಿಲ ಪಾಟೀಲ, ಎಸ್‌ಡಿಎಂಸಿ ಉಪಾಧ್ಯಕ್ಷ ಬಸಯ್ಯ ಸಾಲಿಮಠ, ಪ್ರಕಾಶ ವಾಲಿ, ಉಮೇಶ ಮಾಗುಂಡನ್ನವರ, ಈರಣ್ಣಾ ಹೊಸಮನಿ, ತಿಮ್ಮಣ್ಣಾ ಯಡಹಳ್ಳಿ, ಮುದಕಪ್ಪ ದಳವಾಯಿ, ವಿಠ್ಠಲ ಭಾಂಗಿ, ಪ್ರಾಂಶುಪಾಲ ನಾಗರಾಜು ಕೆ. ಉಪ ಪ್ರಾಂಶುಪಾಲ ಮಂಜುಳಾ ಲೋಕನ್ನವರ, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಎಸ್. ಬಿ. ತೋರಗಲ್ಲ, ಸಿಆರ್‌ಪಿ ಬಾಳಪ್ಪ ಸಿದ್ದಬಸನ್ನವರ, ಮಹಾಂತೇಶ ಪಟ್ಟಣಶೆಟ್ಟಿ, ಕುಬ್ರಾ ದಂತಾಳಿ, ಉಪ ವಲಯ ಅರಣ್ಯ ಅಧಿಕಾರಿ ಎಸ್. ವಾಯ್ .ಸಿದ್ದರಡ್ಡಿ, ಬಿ. ಎಸ್. ಉಪ್ಪಾರ, ಗಸ್ತು ಅರಣ್ಯ ಪಾಲಕ ವಿ. ಯು. ಇಟ್ನಾಳ, ಅರಣ್ಯ ವೀಕ್ಷಕ ಶ್ರೀಶೈಲ ಯರಗಣವಿ ಸೇರಿದಂತೆ ಶಿಕ್ಷಕ-ಶಿಕ್ಷಕಿಯರ ಮತ್ತು ವಿದ್ಯಾರ್ಥಿಗಳು ಇತರರಿದ್ದರು.



ಯಮಕನಮರಡಿ : ಇಸ್ರೋ ಮಾಜಿ ಅಧ್ಯಕ್ಷ ಡಾ. ಕಿರಣ ಕುಮಾರ ಅವರು ಯಮಕನಮರಡಿ ವಿದ್ಯಾ ವರ್ಧಕ ಸಂಘದ ವಿದ್ಯಾರ್ಥಿಗಳಿಗೊಂದಿಗೆ ಬಾಹ್ಯಾಕಾಶ ಮತ್ತು ಉಪಗ್ರಹಗಳ ಬಗ್ಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ನಮ್ಮ ಸಂಸ್ಥೆಯ ಅಧ್ಯಕ್ಷರಾದ ರವೀಂದ್ರ ಹಂಜಿ ಹಾಗೂ ಸದಸ್ಯರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅಥಣಿಯಲ್ಲಿ ನದಿ ಬತ್ತಿದರೂ ಕುಡಿಯುವ ನೀರಿಗಿಲ್ಲ ಬರ

ಶಿವಾನಂದ ಪೂಜಾರಿ

ದಿಗಂತ ವಿಶೇಷ

ಅಥಣಿ: ಶತಮಾನಗಳಿಂದ ತಾಲೂಕಿನ ಪೂರ್ವ ಭಾಗದ ರೈತರ ಕೃಷಿಗೆ ಜಲ ಮೂಲವಾಗಿದ್ದ ಕೆರೆಗಳು ಬತ್ತಿ ಹೋಗಿ ಬರಪೀಡಿತವಾಗುತ್ತಿದ್ದ ಅಥಣಿ ತಾಲೂಕಿಗೆ ಕೆರೆ ತುಂಬ ಯೋಜನೆ ಈ ಭಾಗದ ಜನತೆಗೆ ವರದಾನ ಪರಿಣಮಿಸಿದೆ.18 ಕೀ.ಮೀ ಅಂತರದಲ್ಲಿರುವ ಕೃಷ್ಣಾ ನದಿ ಮೂಲದಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಿಂದ ರೈತರ ಕೃಷಿಗೆ ಮತ್ತು ಈ ಭಾಗದ ಜನರಿಗೆ ಕುಡಿಯುವ ನೀರಿನ ಸಮಸ್ಯೆಗೆ ಮುಕ್ತಿ ನೀಡಿದೆ.

ಪ್ರತಿ ವರ್ಷ ಬೀಸಿಗೆಯ ಸಂದರ್ಭದಲ್ಲಿ ಎದುರಾಗುತ್ತಿದ್ದ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ರೂಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ರೂಪಿಸಿದ್ದ ಕೆರೆ ತುಂಬುವ ಈ ಮಹತ್ವಾಕಾಂಕ್ಷೆಯ ಯೋಜನೆಯನ್ನು ಮತಕ್ಷೇತ್ರದ ಶಾಸಕ ಲಕ್ಷ್ಮಣ ಸವದಿ ಅವರು ತಾಲೂಕಿನಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದು ಮಾದರಿಯಾಗಿದೆ.

ಅಥಣಿ ತಾಲೂಕಿನ ಪೂರ್ವ ಭಾಗದ ನೀರಾವರಿ ಸೌಲಭ್ಯದಿಂದ ವಂಚಿತವಾದ ಹಳ್ಳಿಗಳಲ್ಲಿ ಇರುವ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಶಾಸಕ ಲಕ್ಷ್ಮಣ ಸವದಿ ಸರ್ಕಾರದಿಂದ 140 ಕೋಟಿ ಮಂಜೂರಾತಿ ಪಡೆದುಕೊಳ್ಳುವ ಮೂಲಕ



» ಕೆರೆ ತುಂಬುವ ಯೋಜನೆ, ಜಿ. ಜೆ ಎಂ ಯೋಜನೆ ವರದಾನ

» ಅಂತರ್ಜಲ ಮಟ್ಟವೃದ್ಧಿ

ಎಲ್ಲಮ್ಮವಾಡಿ, ಕೋಹಳ್ಳಿ, ಅಡಹಳ್ಳಿ, ಐಗಳಿ ಮತ್ತು ಬಾಡಗಿ ಗ್ರಾಮಗಳಲ್ಲಿನ ಒಟ್ಟು 9 ಕೆರೆಗಳಿಗೆ ನೀರು ತುಂಬಿಸಲಾಗಿದೆ. ಇದರಿಂದ ಈ ಭಾಗದಲ್ಲಿ ಅಂತರ್ಜಲ ಮಟ್ಟ ಹೆಚ್ಚಾಗುವ ಮೂಲಕ ತೆರೆದ ಬಾವಿ ಮತ್ತು ಕೊಳವೆ ಬಾವಿಗಳಿಗೆ ಸತತ ನೀರು ಬರುವುದರಿಂದ ನೀರಾವರಿಗೆ ಅನುಕೂಲವಾಗಲಿದೆ. ಇದಲ್ಲದೆ ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆಯಡಿ ಕೊಟ್ಟಲಗಿ, ಕಕಮರಿ, ಅರಟಾಳ, ತೆಲಸಂಗ ಮತ್ತು ಐಗಳಿ ಗ್ರಾಮಗಳ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬಿಸುವುದು ಈ ಯೋಜನೆ ಉದ್ದೇಶವಾಗಿದೆ.ಜಿಲ್ಲಾ ಅಂತರ್ಜಲ

> ಅಥಣಿ ತಾಲೂಕಿನ 88 ಗ್ರಾಮಗಳಲ್ಲಿ ಶೇ. 80 ರಷ್ಟು ಜೆ.ಜೆ ಎಂ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. 72,332 ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಒದಗಿಸುವ ಯೋಜನೆಯಲ್ಲಿ ಈಗಾಗಲೇ 58,230 ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ.
>
> ■ ರವೀಂದ್ರ ಮುರಗಾಲಿ, ಸಹಾಯಕ ಅಭಿಯಂತ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಅಥಣಿ

ಕಚೇರಿಯ ಭೂ ವಿಜ್ಞಾನಿಗಳ ಮಾಹಿತಿ ಪ್ರಕಾರ ಜಿಲ್ಲೆಯ 15 ತಾಲೂಕುಗಳಲ್ಲಿ ಕಳೆದ ವರ್ಷಕ್ಕಿಂತ ಈ ಬಾರಿ ಅಂತರ್ಜಲ ಮಟ್ಟ ಕುಸಿತ ಕಂಡು ಬಂದಿದೆ. ಆದರೆ, ಅಥಣಿ ತಾಲೂಕಿನಲ್ಲಿ 2.29 ಮೀಟರ್ ಅಂತರ್ಜಲ ಮಟ್ಟ ವೃದ್ಧಿಯಾಗಿದೆ.2025 ರ ಮೇ ತಿಂಗಳು ವರದಿಯು 28.83 ಮೀಟರ್ ಇದ್ದರೆ 2026 ರ ಮೇ ತಿಂಗಳು ವರದಿ 26.54 ಮೀಟರ್ ಎನ್ನಲಾಗಿದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮಾಹಿತಿಯ ಪ್ರಕಾರ ಅಥಣಿ ತಾಲೂಕಿನ 88 ಗ್ರಾಮಗಳಲ್ಲಿ ಶೇ. 80 ರಷ್ಟು ಜೆ.ಜೆ ಎಂ ಕಾಮಗಾರಿಯನ್ನು ಪೂರ್ಣ ಗೊಳಿಸಲಾಗಿದೆ. 72,332 ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಒದಗಿಸುವ ಯೋಜನೆಯಲ್ಲಿ ಈಗಾಗಲೇ 58,230 ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ.

ಸಹೃದಯ ಕಾವ್ಯ ಪ್ರಶಸ್ತಿ ಪಾರದರ್ಶಕತೆಗೆ ಸಾಕ್ಷಿ

» ಯುವಕವಿಗಳಿಂದ ಕವಿತಾ ವಾಚನ ನಡೆಯಿತು

» ವಿವಿಧ ಜಿಲ್ಲೆಗಳಿಂದ ಬಂದ ಕವಿಗಳು ತಮ್ಮ ಸ್ವರಚಿತ ಕವಿತೆ ವಾಚನ ಮಾಡಿದರು.

ಬೆಳಗಾವಿ: ಸತತ ನಾಲ್ಕು ವರ್ಷಗಳಿಂದ ತನ್ನದೇ ಆದ ಪಾರದರ್ಶಕತೆ, ಗುಣಮಟ್ಟದಿಂದ ಯೋಗ್ಯ ಕೃತಿಗಳಿಗೆ ಪ್ರಶಸ್ತಿ ನೀಡುವ ಮೂಲಕ ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡಿರುವ ಸಹೃದಯ ಸಾಹಿತ್ಯ ಪ್ರತಿಷ್ಠಾನದ ಕಾರ್ಯ ಅಭಿನಂದನಾರ್ಹವಾದುದು ಎಂದು ಜನಪದ ವಿದ್ವಾಂಸರು, ಹಿರಿಯ ಸಾಹಿತಿಗಳಾದ ಡಾ. ಬಸವರಾಜ ಜಗಜಂಪಿ ಹೇಳಿದರು.

ಸೋಮವಾರ ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ ಸಹೃದಯ ಕಾವ್ಯ ಪ್ರಶಸ್ತಿ ಪ್ರದಾನ ಹಾಗೂ ಕವಿಗೋಷ್ಠಿ ಸಮಾರಂಭದಲ್ಲಿ ನಾಗರೇಖಾ ಗಾಂವಕರ ಹಾಗೂ ಲಕ್ಷ್ಮಿಕಾಂತ ಮಿರಜಕರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಪ್ರತಿಷ್ಠಾನದ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರು.

ಸಹೃದಯ ಪ್ರತಿಷ್ಠಾನವು ಇಂತಹ ಯೋಗ್ಯರಿಗೆ ನೀಡುವ ಪ್ರಶಸ್ತಿಗಳು ಖುಷಿಯನ್ನು ಕೊಡುತ್ತವೆ ಎಂದರು.

ತೀರ್ಪುಗಾರರಾದ ಡಾ. ಪಿ ಜಿ. ಕೆಂಪಣ್ಣವರ ಪ್ರಶಸ್ತಿ ಪಡೆದ ಎರಡು ಕೃತಿಗಳ ಕುರಿತು ಪರಿಚಯ ಮಾಡಿ ಈ ಎರಡು ಕೃತಿಗಳ ಆಯ್ಕೆ ನನಗೆ ತೃಪ್ತಿ ತಂದಿದೆ ಎಂದರು.

ಇದೇ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಎಲ್. ಎಸ್. ಶಾಸ್ತ್ರಿ ಅವರಿಗೆ ಪ್ರತಿಷ್ಠಾನದ ಸಹೃದಯ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ಪುರಸ್ಕೃತರಾದ ನಾಗರೇಖಾ ಗಾಂವಕರ, ಲಕ್ಷ್ಮಿಕಾಂತ ಮಿರಜಕರ, ಎಲ್. ಎಸ್. ಶಾಸ್ತ್ರಿ, ಮುಖ್ಯ ಅತಿಥಿಗಳಾದ ಕಾರ್ಯಪಾಲಕ ಅಭಿಯಂತರ ವಿಠಲ ತಡಸಲೂರು ಅವರು ಮಾತನಾಡಿದರು. ಪ್ರತಿಷ್ಠಾನ ನಡೆಸಿಕೊಂಡು ಬಂದ ಕಾರ್ಯವಿಧಾನಗಳ ಬಗ್ಗೆ ಪ್ರಾಸ್ತಾವಿಕವಾಗಿ ಅಧ್ಯಕ್ಷ ನಾಗೇಶ್ ಜೆ. ನಾಯಕ ಮಾತನಾಡಿದರು.

ರಂಗಕರ್ಮಿ ಶಿರೀಷ ಜೋಶಿ ಅಧ್ಯಕ್ಷತೆ ವಹಿಸಿದ್ದರು. ಅನುಸೂಯಾ ಮೇಟ್ಯಾಲ ಪ್ರಾರ್ಥಿಸಿದರು. ಎಸ್. ಬಿ. ಗರಗದ ಸ್ವಾಗತಿಸಿದರು. ರಮೇಶ್ ತಳವಾರ ಗ್ರಂಥ ಸಮರ್ಪಿಸಿದರು. ಬವರಾಜ ಪಟ್ಟಣಶೆಟ್ಟಿ ವಂದಿಸಿದರು.



ಅಕ್ಷರಾಭ್ಯಾಸ ಜ್ಞಾನದ ದೀಪ ಬೆಳಗಿಸುವ ಪವಿತ್ರ ಕ್ಷಣ

ಕಕಮರಿ : ಅಕ್ಷರಾಭ್ಯಾಸವು ಕೇವಲ ಒಂದು ಕಾರ್ಯಕ್ರಮವಲ್ಲ, ಅದು ಮಗುವಿನ ಜೀವನದಲ್ಲಿ ಜ್ಞಾನದ ದೀಪ ಬೆಳಗಿಸುವ ಪವಿತ್ರ ಕ್ಷಣವಾಗಿದೆ. ತಾಯಿಯ ಕೈಯಿಂದ ಆರಂಭವಾದ ಈ ಜ್ಞಾನಯಾತ್ರೆ ಮಕ್ಕಳನ್ನು ಉತ್ತಮ ಸಂಸ್ಕಾರವಂತರಾಗಿ, ಜವಾಬ್ದಾರಿಯುತ ನಾಗರಿಕರಾಗಿ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಗುರುದೇವ ಆಶ್ರಮದ ಪೀಠಾಧ್ಯಕ್ಷ ಪ.ಪೂ ಆತ್ಮಾರಾಮ್ ಸ್ವಾಮೀಜಿ ಹೇಳಿದರು.

ಅವರು ಗ್ರಾಮದ ಶ್ರೀ ಗುರುದೇವ ಜ್ಞಾನಯೋಗಿ ಗುರುಕುಲ ಕನ್ನಡ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಮಗುವಿನ ಜೀವನದ ಮೊದಲ ಗುರು ತಾಯಿಯೇ ಎಂಬ ಸಂದೇಶವನ್ನು ಸಾರುವ ಹಾಗೂ ಶಿಕ್ಷಣದ ಪವಿತ್ರ ಆರಂಭವನ್ನು ಸಂಭ್ರಮಿಸುವ ಉದ್ದೇಶದಿಂದ ಅತ್ಯಂತ ಭಕ್ತಿ, ಮತ್ತು ಸಂಸ್ಕಾರಯುತವಾಗಿ ಆಚರಿಸುವದು. ಮಗುವಿನ ಮೊದಲ ತೊದಲ ನುಡಿಯು ಅ ಅಕ್ಷರದಿಂದಲೇ ಆರಂಭವಾಗುತ್ತದೆ. ಕನ್ನಡ ವರ್ಣಮಾಲೆಯ ಮೊದಲ ಅಕ್ಷರ ಅ ಜ್ಞಾನ, ಅರಿವು ಮತ್ತು ಅಸ್ತಿತ್ವದ ಸಂಕೇತವಾಗಿದೆ.

ಈ ಮಹತ್ವವನ್ನು ಮಕ್ಕಳಿಗೆ ಹಾಗೂ ಪಾಲಕರಿಗೆ ಪರಿಚಯಿಸುವ ಉದ್ದೇಶದಿಂದ ಶಾಲೆಯ ವತಿಯಿಂದ ವಿನೂತನ ಅಕ್ಷರಾಭ್ಯಾಸ ಕಾರ್ಯಕ್ರಮಹಮ್ಮಿಕೊಂಡಿದ್ದು.ಕಾರ್ಯಕ್ರಮದ ಅನ್ನದ ಮೂಲವಾದ ಅಕ್ಷತೆಯಿಂದ ತುಂಬಿದ ತಟ್ಟೆಯಲ್ಲಿ ತಾಯಿಯೂ ಮಗುವಿನ ಕೈ ಹಿಡಿದು ಮೊದಲು ಓಂ ಹಾಗೂ ನಂತರ ಅ ಅಕ್ಷರವನ್ನು ಬರೆಯಿಸುವ ಮೂಲಕ ವಿದ್ಯಾರಂಭ ಮಾಡಿಸಲಾಯಿತು. ಈ ಮೂಲಕ ಮಗುವಿನ ಶೈಕ್ಷಣಿಕ ಜೀವನದ ಮೊದಲ ಹೆಜ್ಜೆಯನ್ನು ತಾಯಿಯೇ ಇಡಿಸುವ ವಿಶಿಷ್ಟ ಪರಂಪರೆಯನ್ನು ಮರುಜೀವಂತಗೊಳಿಸಲಾಯಿತು ಎಂದರು.

ಪ್ರಶಾಂತ ವಾಲಿ ಮಾತನಾಡಿದರು. ಸಾನ್ನಿಧ್ಯವನ್ನು ಅದ್ವೈತಾನಂದ ಸ್ವಾಮೀಜಿ ವಹಿಸಿದ್ದರು, ಅಪ್ಪಾಸಾಬ ವಾಲಿ, ಈರಪ್ಪ ದಳವಾಯಿ, ಶಂಕರ ಹೂಗಾರ, ಗುರುದೇವ ಪಠಾಣೆ, ಶಾಲೆಯ ಮುಖ್ಯೋಪಾಧ್ಯಾಯ ಸಂಗಮೇಶ ಬಿಳ್ಳೂರ, ಎಂ.ಬಿ.ಕರಡಿ, ಸುಧಾಕರ ಕೋಳಿ, ಮಹಾಂತೇಶ ಮಠಪತಿ, ಹಣಮಂತ ಸಿಂದೂರ, ಮುಖ್ಯೋಪಾಧ್ಯಾಯ ಸಂಗಮೇಶ ಬಿಳ್ಳೂರ ಸ್ವಾಗತಿಸಿದರು, ಪವಿತ್ರಾ ಒಡೆಯರ ನಿರೂಪಿಸಿದರು, ಶಿಕ್ಷಕ ರಮೇಶ ಪೂಜಾರಿ ವಂದಿಸಿದರು.



ವಿಶಿಷ್ಟಚೇತನರಿಗೆ ಸಾಧನ ಸಲಕರಣೆ ವಿತರಿಸಿದ ಸಂಸದೆ ಪ್ರಿಯಾಂಕಾ

ಚಿಕ್ಕೋಡಿ: ವಿಶಿಷ್ಟಚೇತನರು ಜೀವನದಲ್ಲಿ ಹಲವಾರು ಸವಾಲುಗಳನ್ನು ಎದುರಿಸಿ ಬದುಕಿ ಕಟ್ಟಿಕೊಳ್ಳುತ್ತಾರೆ. ಅವರ ಸಮಸ್ಯೆಗಳಿಗೆ ಸ್ಪಂದಿಸಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದು, ಇವುಗಳ ಸದುಪಯೋಗವನ್ನು ಅವರು ಪಡೆದುಕೊಳ್ಳಬೇಕೆಂದು ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ವಿನಂತಿಸಿದರು.



ಪಟ್ಟಣದ ಪರಟಿ ನಾಗಲಿಂಗೇಶ್ವರ ಸಭಾ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ವಿಶಿಷ್ಟಚೇತನರು, ನಾಗರಿಕರಿಗೆ ಸಾಧನ ಸಲಕರಣೆ ಹಾಗೂ ಶಾಲೆಗಳಿಗೆ ಸ್ಮಾರ್ಟ್ ಬೋರ್ಡ್ ವಿತರಿಸಿ ಮಾತನಾಡುತ್ತಾ,ಕಲೆ, ಸಾಹಿತ್ಯ, ಕ್ರೀಡೆ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಇಚ್ಛೆ ಹೊಂದಿರುವ ಅಂಗವಿಕರಲಿಗೆ ತಾನು ಸಹಾಯ ಸಹಕಾರ ಮಾಡಲು ಸಿದ್ಧನಿದ್ದೇನೆ. ಅಲ್ಲದೇ, ಸರ್ಕಾರದ ಸೌಲಭ್ಯಗಳನ್ನು ದೊರಕಿಸಿಕೊಡುವ ಪ್ರಯತ್ನ ಮಾಡುವ ಹೊಣೆಗಾರಿಕೆ ತನ್ನದಾಗಿದೆ ಎಂದು ಹೇಳಿದರು.

ಶಾಸಕ ಗಣೇಶ ಹುಕ್ಕೇರಿ ಮಾತನಾಡಿ, ವಿಶಿಷ್ಟಚೇತನರಿಗೆ ಸ್ಮಾರ್ಟ್ ಬೋರ್ಡ, ಸ್ಮಾರ್ಟ್ ಫೋನ್, ತ್ರಿಚಕ್ರ ವಾಹನ ಮುಂತಾದವುಗಳನ್ನು ಸಂಸದೆ ಪ್ರಿಯಾಂಕಾ ಜಾರಕಿಹೊಳಿ ನೀಡಿದ್ದು ಹೆಮ್ಮೆಯ ಸಂಗತಿಯಾಗಿದೆ. ಸೌಲಭ್ಯ ವಂಚಿತ ಅಂಗವಿಕಲರನ್ನು ಗುರುತಿಸಿ ಅವರಿಗೆ ಮೂಲಭೂತ ಸೌಕರ್ಯ ಒದಗಿಸಿಕೊಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಭಾವತಿ ಪಾಟೀಲ, ಕೆಪಿಸಿಸಿ ಪ್ರದಾನ ಕಾರ್ಯದರ್ಶಿ ಮಹಾವೀರ ಮೋಹಿತೆ, ಮುಖಂಡ ಅರ್ಜುನ ನಾಯಿಕವಾಡಿ, ರಾಷ್ಟ ಮಟ್ಟದ ಅಂಗವಿಕಲ ಕ್ರೀಡಾಪಟು ರಾಘವೇಂದ್ರ ಅನ್ವೇಕರ, ಪ್ರಭಾಕರ ಐ ಕೋರೆ, ನಿರ್ಮಲಾ ಪಾಟೀಲ, ರಾಮಕೃಷ್ಣ ಪಾನಬುಡೆ, ಇರ್ಫಾನ ಬೇಪಾರಿ, ಚೇತನಕುಮಾರ ಇತರರು ಇದ್ದರು.

ವಿಶ್ವ ಪರಿಸರ ದಿನಾಚರಣೆ

ರಾಯಬಾಗ: ತಾಲೂಕಿನ ಬೆಕ್ಕೇರಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಗಿಡ ನಾಟಿ ಕಾರ್ಯಕ್ರಮ ಮಾಡಲಾಯಿತು.

ಈ ಕಾರ್ಯಕ್ರಮವನ್ನು ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷರಾದ ಜಿನೇಂದ್ರ ಖೇಮಲಾಪುರ, ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಮಹಾದೇವ್ ಕಾನಡೆ, ತಾಲೂಕು ಯೋಜನಾಧಿಕಾರಿಗಳಾದ ಹರೀಶ್ ಪಾವಸ್ಕರ್ ಅವರು ಗಿಡಕ್ಕೆ ನೀರು ಉಣಿಸುವುದರ ಮೂಲಕ ಉದ್ಘಾಟಿಸಿದರು.

ಉದ್ಘಾಟನಾ ಪರ ಮಾತನಾಡಿದ ಜಿನೇಂದ್ರ ಅವರು ಈ ಪರಿಸರ ನಮಗೆ ಏನೂ ಕೊಟ್ಟಿತ್ತು ಎನ್ನುವುದಕ್ಕಿಂತ ಪರಿಸರಕ್ಕೆ ನಮ್ಮ ಕೊಡುಗೆ ಏನು ಎಂಬುದನ್ನು ಇವತ್ತು ನಾವೆಲ್ಲ ಅವಲೋಕನ ಮಾಡಿಕೊಳ್ಳಬೇಕಾಗಿದೆ ಎಂದರು.

ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ಸಿದ್ರಾಮ ಕಾಂಬಳೆ, ತಾಲೂಕು ಯೋಜನಾಧಿಕಾರಿ ಹರೀಶ್ ಪಾವಸ್ಕರ್ ಮಾತನಾಡಿದರು.




ಶಾಲೆಯ ಮುಖ್ಯೋಪಾಧ್ಯಾಯರಾದ ರಾಜು ಗೌಡ ಪಾಟೀಲ್, ಒಕ್ಕೂಟದ ಅಧ್ಯಕ್ಷರಾದ ಜಯಶ್ರೀ ಪೂಜೇರಿ ಸಹ ಶಿಕ್ಷಕರಾದ ಎಂ ಬಿ ಹೂಗಾರ್ ವಲಯದ ಮೇಲ್ವಿಚಾರಕಿ ಸಾವಿತ್ರಿ ತಾಲೂಕಿನ ಕೃಷಿ ಅಧಿಕಾರಿ ಚೆನ್ನಪ್ಪ ಸ್ಥಳೀಯ ಸೇವಾ ಪ್ರತಿನಿಧಿ ರೂಪ ಶಾಲೆಯ ಸಹ ಶಿಕ್ಷಕರು ಹಾಗೂ ಮುದ್ದು ಮಕ್ಕಳು ಉಪಸ್ಥಿತರಿದ್ದರು ಈ ಸಂದರ್ಭದಲ್ಲಿ ಶಾಲಾ ಆವರಣದಲ್ಲಿ ಗಣ್ಯರ ಉಪಸ್ಥಿತಿಯಲ್ಲಿ ಗಿಡ ನಾಟಿ ಮಾಡಲಾಯಿತು.

ಗ್ರಾಮಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿಗೆ ಭದ್ರ ಅಡಿಪಾಯ

ತೆಲಸಂಗ: ಹಳ್ಳಿಗಳ ಸಮಗ್ರ ಅಭಿವೃದ್ಧಿಯೇ ದೇಶದ ಅಭಿವೃದ್ಧಿಗೆ ಭದ್ರ ಅಡಿಪಾಯವಾಗಿದ್ದು, ಪ್ರತಿಯೊಂದು ಗ್ರಾಮವನ್ನು ಅಭಿವೃದ್ಧಿಮಾಡುವುದೇ ನನ್ನ ಗುರಿ ಎಂದು ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಹೇಳಿದರು.

ಗ್ರಾಮದಲ್ಲಿ ಬಿವಿವಿ ಸಂಘದ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬೆಂಚ್ ಗಳನ್ನು ವಿತರಣಾ ಹಾಗೂ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿ, ಗ್ರಾಮಗಳ ಅಭಿವೃದ್ಧಿಯೇ ನನ್ನ ಪ್ರಮುಖ ಕನಸಾಗಿದೆ. ಪ್ರತಿಯೊಂದು ಗ್ರಾಮವೂ ಅಭಿವೃದ್ಧಿಯಾದರೆ ಮಾತ್ರ ನಮ್ಮ ದೇಶ ಜಗತ್ತಿನಲ್ಲಿಯೇ ನಂಬರ್ ಒನ್ ಆಗಲು ಸಾಧ್ಯ. ಹಳ್ಳಿಗಳ ಕುಡಿಯುವ ನೀರು, ಚರಂಡಿ, ರಸ್ತೆ, ಶಾಲೆ ಹಾಗೂ ಬಸ್ಸು, ವಿದ್ಯುತ್ ಸೇರಿದಂತೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ. ನಾನು ಕೇವಲ ಕಚೇರಿಗೆ ಸೀಮಿತವಾಗದೆ,



ಪ್ರತಿಯೊಂದು ಗ್ರಾಮಕ್ಕೂ ಖುದ್ದಾಗಿ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ಆಲಿಸುತ್ತಿದ್ದೇನೆ. ಅಧಿಕಾರಿಗಳಿಗೆ ಸ್ಥಳದಲ್ಲಿಯೇ ಸೂಚನೆ ನೀಡಿ, ಜನರ ಸಂಕಷ್ಟಗಳನ್ನು ಬಗೆಹರಿಸಲು ಹಗಲಿರುಳು ಶ್ರಮಿಸುತ್ತೇನೆ ಅದು ನನ್ನ ಕರ್ತವ್ಯವೂ ಹೌದು. ವಿದ್ಯಾರ್ಥಿಗಳು ಸಾಧಕರನ್ನು ತಮ್ಮ ಬದುಕಿನಮಾದರಿಯನ್ನಾಗಿಟ್ಟುಕೊಳ್ಳಬೇಕು. ಶಾಲೆಯಲ್ಲಿ ಶಿಕ್ಷಕರು ಪಾಠ ಮಾಡುವಾಗ ಅರ್ಥವಾಗದ ವಿಷಯಗಳಿದ್ದರೆ, ಮುಜುಗರವಿಲ್ಲದೆ ಶಿಕ್ಷಕರನ್ನು ಪ್ರಶ್ನಿಸಿ ತಿಳಿದುಕೊಳ್ಳಿ. ಇತ್ತೀಚೆಗೆ ಅಥಣಿ ತಾಲೂಕಿನ ವಿದ್ಯಾರ್ಥಿನಿಯೊಬ್ಬಳು ಇಡೀ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಸಾಧನೆ ಮಾಡಿದ್ದಾಳೆ. ಅವಳನ್ನು ಮಾದರಿಯಾಗಿಟ್ಟುಕೊಂಡು ನೀವೆಲ್ಲರೂ ಗಟ್ಟಿಯಾಗಿ ಓದಬೇಕು. ಆಗ ಸಾಧನೆ ಎಂಬುದು ನಿಮ್ಮ ಕಾಲಡಿಗೆ ಬಂದು ಬೀಳುತ್ತದೆ. ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದಾಗ ಶಿಕ್ಷಕರು, ಪೋಷಕರು, ಜನಪ್ರತಿನಿಧಿಗಳು ಮಾತ್ರವಲ್ಲದೆ ಇಡೀ ಸಮಾಜ ಹೆಮ್ಮೆ ಪಡುತ್ತದೆ. ಒಳ್ಳೆಯ ಕೆಲಸಕ್ಕೆ ಸದಾ ಗೌರವ ಮತ್ತು ಯಶಸ್ಸು ದೊರೆಯುತ್ತದೆ. ಸಮಾಜದಿಂದಲೂ ಅಪಾರ ಗೌರವ ಸಿಗುತ್ತದೆ.

> ಗಡಿನಾಡು ಗ್ರಾಮಗಳು ಅಭಿವೃದ್ಧಿಯಿಂದ ವಂಚಿತವಾಗಿವೆ. ಅವುಗಳನ್ನು ಅಭಿವೃದ್ಧಿಗೊಳಿಸುವ ಕಾರ್ಯ ಆಗಬೇಕು.
>
> ■ ವೀರೇಶ್ವರ ದೇವರು, ಹಿರೇಮಠ

ಹಿರೇಮಠದ ವೀರೇಶ್ವರ ದೇವರು ಮಾತನಾಡಿ, ಚಿಕ್ಕೋಡಿಗೆ ಹಿಂದೆ ಆದಹೋದ ಸಂಸದರು ಯಾವೊಂದು ಹಳ್ಳಿಯನ್ನು ನೋಡಿಲ್ಲ, ಜನರ ಸಮಸ್ಯೆಯನ್ನು ಆಲಿಸಿಲ್ಲ, ಪ್ರತಿಯೊಂದು ಹಳ್ಳಿಗೂ ಭೇಟಿ ನೀಡಿ ಅನುದಾನ ಸದ್ಬಳಕೆ ಮಾಡುವ ಮೊದಲ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರು ಎಂದರು.

ಮುಖಂಡರಾದ ರಮೇಶ ಸಿಂದಗಿ, ಗಜಾನನ ಮಂಗಸೂಳಿ, ಬಸವರಾಜ ಬುಟಾಳಿ, ಸುನಿತಾ ಐಹೊಳೆ, ರೇಖಾ ಪಾಟೀಲ ಸೇರಿದಂತೆ ಬಿವಿವಿ ಸಂಘದ ನಿರ್ದೇಶಕರು, ಉಪನ್ಯಾಸಕರು, ಶಿಕ್ಷಕರು, ಗ್ರಾಮಸ್ಥರು ಉಪಸ್ಥಿತರಿದ್ದರು.

ನಿರೀಕ್ಷೆ ಮೀರಿ ಪಕ್ಷ ನಮ್ಮನ್ನು ಪರಿಗಣಿಸಿದೆ: ಜಾರಕಿಹೊಳಿ

ಬೆಳಗಾವಿ: ಶೋಷಿತ ಸಮುದಾಯಗಳು ಹಲವು ಬಾರಿ ಟಾರ್ಗೆಟ್ ಆಗಿವೆ. ಶೋಷಿತರನ್ನು ಗುರಿಯಾಗಿಸುವುದು ಇದೇ ಮೊದಲಲ್ಲ. ವಿರೋಧಿಗಳು ಸಿಕ್ಕಾಗಲೆಲ್ಲಾ ಅಪಪ್ರಚಾರ ಮಾಡುವುದು ಸಹಜ. ಪಕ್ಷದಲ್ಲಿ ಯಾರಿಗೂ ಅನ್ಯಾಯವಾಗಿಲ್ಲ. ನಮಗೆ ಸಿಗಬೇಕಾದ ಪ್ರಾಮುಖ್ಯತೆ ಖಂಡಿತ ಸಿಕ್ಕಿದೆ. ನಿರೀಕ್ಷೆ ಮೀರಿ ಪಕ್ಷ ನಮ್ಮನ್ನು ಪರಿಗಣಿಸಿದೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ಸೋಮವಾರ ಬೆಳಗಾವಿ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇನ್ನು ಬೆಳಗಾವಿ ಫ್ಲೈಓವರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಎಲ್ಲಾ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿದ್ದು, ಮುಂದಿನ ತಿಂಗಳಿನಿಂದಲೇ ಅಧಿಕೃತವಾಗಿ ಕಾಮಗಾರಿ ಆರಂಭವಾಗಲಿದೆ ಎಂದರು. ನಿಯಮ ಉಲ್ಲಂಘನೆ ಹಿನ್ನೆಲೆಯಲ್ಲಿ ಜೈ ಕಿಸಾನ್ ಖಾಸಗಿ ತರಕಾರಿ ಮಾರುಕಟ್ಟೆ ಪರವಾನಗಿ ರದ್ದುಗೊಂಡಿತ್ತು. ಇದರಿಂದ ವರ್ತಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಂಡೇ ಮಾರುಕಟ್ಟೆಯಲ್ಲಿ



ವ್ಯಾಪಾರ ಮಾಡಲು ವರ್ತಕರಿಗೆ 3 ತಿಂಗಳು ಕಾಲಾವಕಾಶ ನೀಡಲಾಗಿತ್ತು. ಈಗ ಶಾಶ್ವತ ಪರಿಹಾರಕ್ಕಾಗಿ ಉನ್ನತ ಮಟ್ಟದ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಲಿದೆ ಎಂದು ಸಚಿವರು ತಿಳಿಸಿದರು.

ಅದ್ದೂರಿ ಸ್ವಾಗತ, ಸತ್ಕಾರ: ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿ ಮೊದಲ ಬಾರಿಗೆ ಬೆಳಗಾವಿಗೆ ಆಗಮಿಸಿದ ಸತೀಶ್ ಜಾರಕಿಹೊಳಿ ಅವರಿಗೆ ಜಿಲ್ಲೆಯ ಗಡಿಯಲ್ಲಿ ಭವ್ಯ ಸ್ವಾಗತ ಕೋರಲಾಯಿತು. ಇದೇ ವೇಳೆ ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಜಿಲ್ಲೆಯ ಪ್ರಮುಖ ಮುಖಂಡರು ಸಚಿವರನ್ನು ಭೇಟಿಯಾಗಿ ಪುಷ್ಪಗುಚ್ಛ ನೀಡಿ, ಅತ್ಯಂತ ಗೌರವಪೂರ್ವಕವಾಗಿ ಸತ್ಕರಿಸಿದರು.

ಸತ್ಕಾರ ಸ್ವೀಕರಿಸಿ ಮಾತನಾಡಿದ ಸಚಿವರು, ಮುಖಂಡರು ಮತ್ತು ಸಾರ್ವಜನಿಕರ ನಿರೀಕ್ಷೆಗೆ ತಕ್ಕಂತೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಹಾಗೂ ಕನ್ನಡ ನೆಲ, ಜಲದ ರಕ್ಷಣೆಗೆ ಸದಾ ಶ್ರಮಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳ ನಾಯಕರು, ಪ್ರಮುಖ ಮುಖಂಡರು ಹಾಗೂ ನೂರಾರು ಸಂಖ್ಯೆಯ ಅಭಿಮಾನಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಸೌಲಭ್ಯ ಕೊರತೆಯಾಗದಂತೆ ಕ್ರಮ ವಹಿಸಿ

ಜಮಖಂಡಿ: ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಗಳು ಪೂರಕವಾಗಿವೆ ಎಂದು ಪ್ರಾಧ್ಯಾಪಕ ಕೆ.ಬಿ.ಬೆಳಗಲಿ ಹೇಳಿದರು. ತಾಲೂಕಿನ ಮೈಗೂರ ಗ್ರಾಮದ ಕೆಪಿಎಸ್ ಪ್ರಾಥಮಿಕ ವಿಭಾಗದ ಶಾಲಾ ಮಕ್ಕಳು ಕ್ರೀಡಾ ಜ್ಯೋತಿಯ ಮಾದರಿಯಲ್ಲಿ ಗ್ರಾಮದ ಪ್ರಮುಖ ಗಲ್ಲಿಗಳಲ್ಲಿ ವಿದ್ಯಾ ಜ್ಯೋತಿ ದಿವಿಗೆ ಹಿಡಿದು ಹಮ್ಮಿಕೊಂಡಿದ್ದ ದಾಖಲಾತಿ ಆಂದೋಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪಬ್ಲಿಕ್ ಶಾಲೆಗಳಿಗೆ ಸರ್ಕಾರ ವಿಶೇಷ ಅನುದಾನ ನೀಡುವ ಮೂಲಕ ಮಕ್ಕಳಿಗೆ ಯಾವುದೇ ಸೌಲಭ್ಯಗಳ ಕೊರತೆಯಾಗದಂತೆ ಎಚ್ಚರ ವಹಿಸುತ್ತಿದೆ. ಮಕ್ಕಳ ಜ್ಞಾನಾರ್ಜನೆಗೆ ಪೂರಕವಾದ ವಾತಾವರಣ ಇಲ್ಲಿ ನಿರ್ಮಾಣವಾಗಿದೆ. ಆದ್ದರಿಂದ ಪೋಷಕರು ತಮ್ಮ ಮಕ್ಕಳನ್ನು ಪಬ್ಲಿಕ್ ಶಾಲೆಗಳಿಗೆ ದಾಖಲಿಸಬೇಕು ಎಂದರು. ಎಸ್‌ಡಿಎಂಸಿ ಪದಾಧಿಕಾರಿಗಳಾದ ಬಾಹುಬಲಿ ಕವಟಕೊಪ್ಪ, ಸಂಗೊಳ್ಳಿ ಮಠಪತಿ, ಬಸವರಾಜ ಹರೋಲಿ, ಮಹಾದೇವ ಬಿಮನಹಳ್ಳಿ, ಸಂಜು ಹೆಗ್ಗಳಗಿ ಹಾಗೂ ಶಿವಪ್ಪ ಶಿಂಗೆ ಅವರು ಜಂಟಿಯಾಗಿ ವಿದ್ಯಾ ಜ್ಯೋತಿ ದಿವಿಗೆಗೆ ಚಾಲನೆ ನೀಡಿದರು. ಪ್ರಾಚಾರ್ಯ ಎಂ.ಎಲ್.ಪಾಟೀಲ, ಉಪಪ್ರಾಚಾರ್ಯ ಬಿ.ಎಂ.ಬಳೋಮಟ್ಟಿ, ಮುಖ್ಯಶಿಕ್ಷಕ ಎಂ.ಡಿ.ತೆಲಸಂಗ, ಸಿಆರ್‌ಪಿ ಬಿ.ಎಸ್.ಮುಧೋಳ, ಈರಪ್ಪ ಲಕ್ಕಪ್ಪಗೋಳ, ಎ.ಎ.ಬಿರಾದಾರ, ವಿದ್ಯಾ ಕುಲಕರ್ಣಿ ಸೇರಿದಂತೆ ಇತರರು ಇದ್ದರು.

ತ್ರೈಮಾಸಿಕ ಸಭೆ



ಬಾದಾಮಿ: ಶಿವಶರಣ ಹರಳಯ್ಯ ಸಮಗಾರ ಸಮಾಜ ಬಾಂಧವರ ತ್ರೈಮಾಸಿಕ ಸಭೆ ಭಾನುವಾರ ಸಮಾಜದ ನಿವೇಶನದಲ್ಲಿ ಜರುಗಿತು. ಸಮಾಜಕ್ಕೆ ಮಂಜೂರಾದ ನಿವೇಶನ ಜಾಗೆಯ ಸ್ಥಳ ಪರಿಶೀಲನೆ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ಮಾಡಿ, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕಳುಹಿಸಿದ್ದು, ಜಿಲ್ಲಾ ಮಟ್ಟದ ಅಧಿಕಾರಿಗಳು ನಿವೇಶನ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ, ಭಾವಚಿತ್ರದೊಂದಿಗೆ ಮಂಜೂರಾತಿಗೆ ಅರ್ಜಿ ಬೆಂಗಳೂರು ಕಳಿಸಲಿದ್ದು, ಅಲ್ಲಿಂದ ಅನುದಾನ ಮಂಜೂರು ಮಾಡಿದ ಕೂಡಲೇ ನಿಯಮಾನುಸಾರ ಕಟ್ಟಡ ಪ್ರಾರಂಭಿಸಲಾಗುವದೆಂದು ಸಮಾಜದ ಅಧ್ಯಕ್ಷ ನಾಗರಾಜ ಹ ಹೊಸಮನಿ ಹೇಳಿದರು. ಸಮಾಜದ 10 ಜನ ಸದಸ್ಯರಿಗೆ ಇದೇ ಸಂದರ್ಭದಲ್ಲಿ ಅವರ ಉದ್ಯೋಗಕ್ಕೆ ಆರ್ಥಿಕ ನೆರವು ನೀಡಲಾಯಿತು. ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಮಾಜ ಬಾಂಧವರು ಉಪಸ್ಥಿತರಿದ್ದರು.

ನೋಟ್‌ಬುಕ್ ವಿತರಣೆ



ಇಳಕಲ್: ನಗರದ ಗುರುಲಿಂಗಪ್ಪ ಬಡಾವಣೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸಮಾಜ ಸೇವಕ ಹಾಗೂ ದೀಪು ದೀಕ್ಷಾ ಕ್ರೀಡಾ ಮತ್ತು ಸಾಂಸ್ಕೃತಿಕ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಮುಖಂಡ ಅಶೋಕ ಸಂಗಪ್ಪ ಚಲವಾದಿ ಜನ್ಮದಿನದ ಅಂಗವಾಗಿ ವಿವಿಧ ಸಮಾಜಮುಖಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ವಿಶ್ವ ಪರಿಸರ ದಿನಾಚರಣೆ ಹಾಗೂ ಜನ್ಮದಿನದ ಪ್ರಯುಕ್ತ ಶಾಲಾ ಮಕ್ಕಳೊಂದಿಗೆ ಸಸಿ ನೆಡುವ ಕಾರ್ಯಕ್ರಮ ನಡೆಸಲಾಯಿತು. ನಂತರ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಹಾಗೂ ಪೆನ್ನುಗಳನ್ನು ವಿತರಿಸಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಾಯಿತು.'ಂದವಾಡಗಿ ಎಬಿಟಿ ಗುರುಕುಲ ಶಾಲೆಯ ಮಕ್ಕಳಿಗೂ ನೋಟ್‌ಬುಕ್ ಹಾಗೂ ಪೆನ್ನುಗಳನ್ನು ವಿತರಿಸಲಾಯಿತು. ನಗರದ ವಿವಿಧ ವೃದ್ಧಾಶ್ರಮಗಳಾದ ಅಮ್ಮ ಸೇವಾ ಸಂಸ್ಥೆ, ಸುರಕ್ಷಾ ಸೇವಾ ಸಂಸ್ಥೆ ಹಾಗೂ ನವಜೀವನ ವೃದ್ಧಾಶ್ರಮಗಳಿಗೆ ಭೇಟಿ ನೀಡಿ ಆಶ್ರಮ ನಿವಾಸಿಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು. ಅಶೋಕ ಚಲವಾದಿ ಅವರ ಧರ್ಮಪತ್ನಿ ಸವಿತಾ ಅಶೋಕ ಚಲವಾದಿ, ಶ್ಯಾಮ್ ಮುಧೋಳ, ಶ್ರೀನಿವಾಸ್ ಬಡಿಗೇರ, ಬಸವರಾಜ ಪಾಚಾಪುರ, ಮಹಾಂತೇಶ ಚಲವಾದಿ, ಆಕಾಶ ಚಲವಾದಿ, ರಾಜು ಚಲವಾದಿ, ರಾಜು ಪತ್ತಾರ, ಶೇಖರ್ ಚಿನಿವಾಲರ, ಮಂಜುನಾಥ ಅಮರಾವತಿ, ಮಂಜುನಾಥ ಗೋನಾಳ, ಗುಂಡು ನೂರಂದಯ್ಯ, ಅಕ್ಷಯ ಹಾಗೂ ದೀಪು ದೀಕ್ಷಾ ಕ್ರೀಡಾ ಮತ್ತು ಸಾಂಸ್ಕೃತಿಕ ಶಿಕ್ಷಣ ಸಂಸ್ಥೆಯ ಸದಸ್ಯರು ಉಪಸ್ಥಿತರಿದ್ದರು.



ಕಲಾದಗಿ: ಗ್ರಾಮದ ಕುರುಹಿನಶೆಟ್ಟಿ ಸಮಾಜದ ಯುವಕ ಪ್ರಸ್ತುತ ಗದಗ ಜಿಲ್ಲೆಯ ನರಗುಂದ ತಾಪಂ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಧರ ಚೆನ್ನಪ್ಪ ಚೆನಗುಂಡಿ ಅವರನ್ನು ಗ್ರಾಮದ ಬನಶಂಕರಿ ದೇವಸ್ಥಾನದಲ್ಲಿ ಗೆಳೆಯರ ಬಳಗ ಹಾಗೂ ಕುರುಹಿನಶೆಟ್ಟಿ ಸಮಾಜದ ವತಿಯಿಂದ ಸನ್ಮಾನಿಸಲಾಯಿತು. ಶಿವಲಿಂಗಪ್ಪ ಶೆಟ್ಟೆಪ್ಪನವರ, ಪತ್ರೆಪ್ಪ ಶೆಟ್ಟೆಪ್ಪನವರ, ಅನೀಲ ಬರಗಿ, ಅಮರ ಇಂಗಳಗಿ, ಶಶಿಧರ ಚೆನಗುಂಡಿ, ಮಂಜುನಾಥ ಶೆಟ್ಟೆಪ್ಪನವರ, ವಿನಾಯಕ ಕುಂದರಗಿ, ವೆಂಕಟೇಶ ಗಾಣಿಗೇರ, ಸಂಜಯ ಗಣಾಚಾರಿ, ಗುರಯ್ಯ ಚೌಕಿಮಠ ಇದ್ದರು.

ಸಸಿ ನೆಟ್ಟು ಪಾಲನೆ ಮಾಡಿ ಬೆಳೆಸಿ: ಶಾಸಕ ಗುಡಗುಂಟಿ

ಜಮಖಂಡಿ: ಬಾಲಕರ ಸರ್ಕಾರಿ ಪ.ಭಾ ಪದವಿ ಪೂರ್ವ ಕಾಲೇಜಿನಲ್ಲಿ ಗುರುದೇವ ರಾನಡೆ ಇಕೋ ಕ್ಲಬ್, ಭಾರತೀಯ ರೆಡ್ ಕ್ರಾಸ್, ಎನ್‌ಎಸ್‌ಎಸ್ ಘಟಕ ಅರಣ್ಯ ಇಲಾಖೆ, ರೋಟರಿ ಹಾಗೂ ಲಯನ್ಸ್ ಸಂಸ್ಥೆ ಸಹಯೋಗದಲ್ಲಿ ವಿಶ್ವ ಪರಿಸರ ದಿನ ಹಾಗೂ ನೂತನವಾಗಿ ನೇಮಕವಾದ ಕಾಲೇಜು ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳಿಗೆ ಸ್ವಾಗತ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶಾಸಕ ಜಗದೀಶ ಗುಡಗುಂಟಿ ಮಾತನಾಡಿ, ಇಂದು ಪ್ರತಿಯೊಂದು ಮಗು ಕೂಡಾ ಸಸಿ ನೆಟ್ಟು ಅದರ ಪಾಲನೆ ಪೋಷಣೆ ಮಾಡುವುದರೊಂದಿಗೆ ಸಸಿ ನಡುವುದರ ಮಹತ್ವ ತಿಳಿಸಿದರು. ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಡಾ.ಎಸ್.ಎಸ್.ಸುವರ್ಣಖಂಡಿ ಮಾತನಾಡಿ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಅಭಿವೃದ್ಧಿಯಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯ ಪಾತ್ರ ಮಹತ್ವದ್ದಾಗಿದ್ದು, ನಾವೆಲ್ಲರೂ ಸೇರಿ ಕಾಲೇಜಿನಲ್ಲಿ ಅವಶ್ಯವಿರುವ ಮೂಲ ಸೌಕರ್ಯಗಳನ್ನು ಮಾಡಿ ಅಭಿವೃದ್ಧಿ ಪಥದತ್ತ ಸಾಗಲು ಪ್ರಾಮಾಣಿಕ ಪ್ರಯತ್ನ ಮಾಡೋಣ ಎಂದರು. ಉಪನ್ಯಾಸಕ ಡಾ.ಲಿಂಗಾನಂದ ಗವಿಮಠ ಪ್ರಾಚಾರ್ಯ ಸಿ.ಎಸ್.ಜನಗೊಂಡ ಮಾತನಾಡಿದರು. ಕಾಲೇಜು ಅಭಿವೃದ್ಧಿ ಸಮೀತಿಯ ಸದಸ್ಯರಾದ, ಮಹಾಲಿಂಗಪ್ಪ ರಾಮದುರ್ಗ, ಮಲ್ಲಪ್ಪ ಜೈನಾಪೂರ, ಪ್ರದೀಪ ಮೆಟ್ಟಗುಡ್ಡ, ಮಹಾನಂದಾ ಪಾಯಗೊಂಡ, ಮಲ್ಲಪ್ಪ ಇಂಡಿ ಅವರಿಗೆ ಸ್ವಾಗತಿಸಿ ಗೌರವಿಸಲಾಯಿತು. ಈಶ್ವರ ಆದೆಪ್ಪನವರ, ಮಲ್ಲು ದಾನಗೌಡರ, ಅಜೇಯ ಕಡಪಟ್ಟಿ, ಡಾ.ರಾಕೇಶ ಲಾಡ್, ರಾಜುಗೌಡ ಪಾಟೀಲ ಹಾಗೂ ಅರಣ್ಯ ಇಲಾಖೆಯ ಆನಂದ ಪೂಜಾರಿ, ಲಯನ್ಸ ಸಂಸ್ಥೆಯ ಡಾ.ಎಂ.ಪಿ.ತಾನಪ್ಪಗೋಳ, ವಿಜಯ ಕಟಗಿ ಮತ್ತು ಎನ್‌ಎಸ್‌ಎಸ್ ಅಧಿಕಾರಿ ಐ.ಎಸ್.ಹೆಬ್ಬಾಳ, ಉಪನ್ಯಾಸಕಿ ಶ್ರೀದೇವಿ ಪಾಟೀಲ, ಶ್ರೀಶೈಲ ಜೆಂಜರವಾಡ, ಉಪನ್ಯಾಸಕಿ ಬಿ.ಎಸ್.ಭಾಗೋಜಿ, ಸುನೀಲ ಕೋರೆ ಇದ್ದರು.



ಬಾಗಲಕೋಟೆ: ನಗರದ ಪ್ರತಿಷ್ಠಿತ ಬಿವಿವಿ ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದ 17ನೇ ಪದವಿ ಪ್ರದಾನ ಸಮಾರಂಭದಲ್ಲಿ ಇಂಧನ ಸಚಿವ ಪ್ರಹ್ಲಾದ ಜೋಶಿ ಸನ್ಮಾನಿಸಲಾಯಿತು. ಬೆಂಗಳೂರಿನ ಖ್ಯಾತ ಹಿರಿಯ ಹೃದ್ರೋಗ ತಜ್ಞ ಡಾ.ಗಿರೀಶ ಬಿ.ನವಸುಂದಿ, ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ, ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ, ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ ಇದ್ದರು.

ಮಹಿಳೆಯರಿಗೆ ಹೊಲಿಗೆ ಯಂತ್ರ ಸಹಕಾರಿ

ಬಾಗಲಕೋಟೆ: ಮಹಿಳೆಯರು ಸ್ವಾವಲಂಬಿ ಜೀವನ ನಡೆಸಲು ಹೊಲಿಗೆ ಯಂತ್ರಗಳು ಸಹಕಾರಿಯಾಗಲಿವೆ ಎಂದು ಬಾಗಲಕೋಟೆ ಶಾಸಕ ಉಮೇಶ ಮೇಟಿ ಹೇಳಿದರು.

ನವನಗರದ ಶಾಸಕ ಮೇಟಿ ಅವರ ಕಚೇರಿಯಲ್ಲಿ ಸೋಮವಾರ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿನ ಸ್ವಯಂ ಉದ್ಯೋಗ ಯೋಜನೆಯಡಿ 21 ಮಹಿಳೆಯರಿಗೆ ಹೊಲಿಗೆ ಯಂತ್ರವನ್ನು ವಿತರಿಸಿ ಮಾತನಾಡಿದ ಅವರು, ಮಹಿಳೆಯರು ಕುಟುಂಬದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಹೊಲಿಗೆ ತರಬೇತಿ ಹಾಗೂ ಯಂತ್ರಗಳ ನೆರವಿನಿಂದ ಸ್ವಂತ ಉದ್ಯೋಗ ಆರಂಭಿಸಿ ಆದಾಯ ಗಳಿಸಬಹುದಾಗಿದೆ. ಸರಕಾರ ಮಹಿಳೆಯರ ಸಬಲೀಕರಣಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದು, ಅವುಗಳ ಸದುಪಯೋಗವನ್ನು ಮಹಿಳೆಯರು ಪಡೆದುಕೊಳ್ಳಬೇಕು ಎಂದರು.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಜೀವನ ಪ್ರಸಾದ್, ತಾಲೂಕು ಸಹಾಯಕ ಅಭಿವೃದ್ಧಿ ಅಧಿಕಾರಿ ರಂಜಾನಬಿ ವಾಲಿಕಾರ ಸೇರಿದಂತೆ ವಿವಿಧ ಗ್ರಾಮದ ಪ್ರಮುಖರಾದ ಎಸ್.ಎನ್.ರಾಂಪುರ, ದ್ಯಾಮಣ್ಣ ಗಾಲಿ, ಸಂಗಣ್ಣ ಹಂಡಿ, ಅಕ್ಬರ್ ಮುಲ್ಲಾ, ಬಸವಂತಪ್ಪ ಅಂತಾರತಾನಿ, ಶಶಿಕಾಂತ್ ಪೂಜಾರ ಹಾಗೂ ರಜಾಕ್ ಬೆನ್ನೂರು ಉಪಸ್ಥಿತರಿದ್ದರು.



ಯೋಜನೆಯ ಫಲಾನುಭವಿಗಳಾದ ನೇತ್ರಾ ಸಾಲಿ, ಯಮನವ್ವ ಗೌಡರ, ಮಹಾದೇವಿ ತುಂಬರಮಟ್ಟಿ, ಶ್ರೀದೇವಿ ಆಡಿನ, ಸಾವಿತ್ರಿ ಮುತ್ತಗಿ, ಮುತ್ತವ್ವ ಕಡೂರು ಸೇರಿದಂತೆ ಒಟ್ಟು 21 ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ ಮಾಡಲಾಯಿತು. ಎಸ್.ಎನ್.ರಾಂಪುರ, ದ್ಯಾಮಣ್ಣ ಗಾಲಿ, ಸಂಗಣ್ಣ ಹಂಡಿ, ಅಕ್ಬರ್ ಮುಲ್ಲಾ, ಬಸವಂತಪ್ಪ ಅಂತಾರತನಿ, ಶಶಿಕಾಂತ ಪೂಜಾರ ಹಾಗೂ ರಜಾಕ್ ಬೆನ್ನೂರು ಉಪಸ್ಥಿತರಿದ್ದರು.

ಸಮ ಸಮಾಜಕ್ಕೆ ಶಿಕ್ಷಣ ಅಗತ್ಯ: ಜೆಟಿಪಾ

ಬೀಳಗಿ: ಸಮಾಜದಲ್ಲಿ ಬೇರೂರಿರುವ ಜಾತಿ ಎಂಬ ಪಿಡುಗು ನಿರ್ಮೂಲನೆಯಾಗುವವರೆಗೆ ಸಮಾನತೆಯ ಸಮಾಜ ನಿರ್ಮಾಣ ಸಾಧ್ಯವಿಲ್ಲ. ಜಾತೀಯತೆ ಹೋಗಲಾಡಿಸಲು ಶಿಕ್ಷಣ ಮತ್ತು ಆರ್ಥಿಕ ಸಬಲೀಕರಣ ಅತ್ಯಂತ ಪರಿಣಾಮಕಾರಿ ಅಸ್ತ್ರಗಳಾಗಿವೆ ಎಂದು ಶಾಸಕ ಜೆ.ಟಿ.ಪಾಟೀಲ ಹೇಳಿದರು.

ತಾಲೂಕಿನ ಕೊರ್ತಿ ಗ್ರಾಮದ ಕಾಂಗ್ರೆಸ್ ಕಾರ್ಯಾಲಯದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ(ಸಾಗರ ಬಣ) ಬಾಗಲಕೋಟೆ ಜಿಲ್ಲಾ ಸಮಿತಿ ವತಿಯಿಂದ ಬುದ್ಧ, ಬಸವ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತ್ಯುತ್ಸವ ಅಂಗವಾಗಿ ಆಯೋಜಿಸಿದ್ದ 'ಸಮ ಸಮಾಜದ ನಿರ್ಮಾಣ' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರು ದೇಶಕ್ಕೆ ಶ್ರೇಷ್ಠ ಸಂವಿಧಾನ ನೀಡುವ ಮೂಲಕ ಎಲ್ಲರಿಗೂ ಸಮಾನ ಹಕ್ಕುಗಳನ್ನು ಕಲ್ಪಿಸಿದ್ದಾರೆ ಎಂದು ಹೇಳಿದರು.

ಕಲಬುರ್ಗಿಯ ಪ್ರಗತಿಪರ ಚಿಂತಕ ರಂಜನ ದರ್ಗಾ ಮಾತನಾಡಿ, ಬಸವಣ್ಣನವರು ದುಡಿಯುವ ವರ್ಗ ಸಂಘಟಿಸಿ ಕಾಯಕ ಕ್ರಾಂತಿ ನಡೆಸಿದವರು. ಆದರೆ ಇಂದು ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ಪ್ರಗತಿಪರ ತತ್ವಗಳನ್ನು ದುರ್ಬಲಗೊಳಿಸಲು ವ್ಯವಸ್ಥಿತ ಶಕ್ತಿಗಳು ಕಾರ್ಯನಿರ್ವಹಿಸುತ್ತಿರುವುದು ಕಳವಳಕಾರಿ ಬೆಳವಣಿಗೆಯಾಗಿದೆ ಎಂದರು.

ಕೆಪಿಸಿಸಿ ಮಾಜಿ ಕಾರ್ಯದರ್ಶಿ ಬಸವಪ್ರಭು ಸರನಾಡಗೌಡರ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಆಧುನಿಕ ಬಸವಣ್ಣ ಎಂದೇ ಕರೆಯಲಾಗುತ್ತದೆ. ಅವರು ನಮಗೆ ಪ್ರಬಲವಾದ ಸಂವಿಧಾನ ನೀಡಿ ನಾವೆಲ್ಲರೂ ಒಂದೇ ಎಂಬ ಸಂದೇಶ ಸಾರಿದ್ದಾರೆ ಎಂದರು.

ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಬಸವರಾಜ ಹಳ್ಳದಮನಿ ಅಧ್ಯಕ್ಷತೆ ವಹಿಸಿದ್ದರು. ಪರಶುರಾಮ ಕಾಂಬಳೆ ಮಾತನಾಡಿದರು. ಜಿಪಂ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ, ಪಂಚ ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ಅಣವೀರಯ್ಯ ಪ್ಯಾಟಿಮಠ, ಬೀಳಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಣಮಂತ ಕಾಖಂಡಕಿ, ಮಾಜಿ ತಾಪಂ ಅಧ್ಯಕ್ಷ ಶ್ರೀಶೈಲ ಸುಳಿಕೇರಿ, ಪಪಂ ನಾಮನಿರ್ದೇಶಿತ ಮಾಜಿ ಸದಸ್ಯ ಸಿದ್ದು ಸಾರಾವರಿ, ಕಾಶಿಮ ಅಲಿ ಗೊಠೆ, ರಮೇಶ ಅನಗವಾಡಿ, ಮಂಜುನಾಥ ಜಾನಮಟ್ಟಿ, ಯಲ್ಲಪ್ಪ ಮಾದರ, ತಹಶೀಲ್ದಾರ್ ವಿನೋದ ಹತ್ತಳ್ಳಿ, ಸಿಪಿಐ ಹಣಮಂತ ಸಣಮನಿ ಉಪಸ್ಥಿತರಿದ್ದರು.



ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ರನ್ನ ಬೆಳಗಲಿ: ಸಮೀಪದ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಬನಹಟ್ಟಿಯ ಪ್ರಭುಲಿಂಗೇಶ್ವರ ಅಂತಾರಾಷ್ಟ್ರೀಯ ಶಾಲೆ ಚಿಮ್ಮಡ ಶಾಲಾ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾಧರ ಸವದಿ ಮಾತನಾಡಿ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಪಂಚ ಮಹಾಭೂತಗಳ ಒಳಗೊಂಡ ಪರಿಸರವು ನಮ್ಮ ಶರೀರದ ರಚನಾ ಕಾರ್ಯಕ್ಕೆ ಅದುವೇ ಮೂಲಾಧಾರವಾಗಿದೆ. ಆದ್ದರಿಂದ ಪರಿಸರದ ಜೀವ ರಾಶಿಯಲ್ಲಿ ಮನುಷ್ಯನು ಕೂಡಾ ಒಂದು ಜೀವಗಳ ಗುಂಪು ಎಂದರು. ಶಿವಾನಂದ ಗಾಯಕ್ವಾಡ ಮಾತನಾಡಿದರು.

ಅಶೋಕ ರಾವಳ, ಸೌಜನ್ಯ ಉರಭಿನ್ನವರ, ವಿವೇಕ ಜಂಬಗಿ, ಪೃಥ್ವಿರಾಜ ಪೂಜಾರಿ ಮಾತನಾಡಿದರು. ಹಿಪ್ಪೋ ಕ್ಯಾಂಪಸ್ ನಿರ್ದೇಶಕರು, ಸಂಯೋಜಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಶ್ರೇಷ್ಠ ಶಿಕ್ಷಕ ಶ್ರೇಷ್ಠ ಸಮಾಜ ನಿರ್ಮಿಸಬಲ್ಲ

ತೇರದಾಳ: ಬಾಲ್ಯದಿಂದ ನೌಕರಿವರೆಗೂ ಓದುತ್ತೇವೆ. ನೌಕರಿ ನಂತರ ಓದು ನಿಲ್ಲುತ್ತದೆ. ಆದರೆ ನೌಕರಿ ನಂತರವೂ ನಿವೃತ್ತಿಯವರೆಗೂ ಓದನ್ನು ಮುಂದುವರೆಸುವ ಏಕೈಕ ವ್ಯಕ್ತಿ ಎಂದರೆ ಶಿಕ್ಷಕ ಹೀಗಾಗಿ ಶಿಕ್ಷಕನನ್ನು ಗುರುವಿಗೆ ಹೋಲಿಸಿದ್ದಾರೆ. ಶಿಕ್ಷಕ ವೃತ್ತಿಯು ಅತ್ಯಂತ ಪವಿತ್ರವಾದದ್ದು, ಒಬ್ಬ ಶ್ರೇಷ್ಠ ಶಿಕ್ಷಕನಲ್ಲಿ ಶ್ರೇಷ್ಠ ಸಮಾಜ ಕಟ್ಟುವ ತಾಕತ್ತಿದೆ ಎಂದು ಗಂಗಾಧರ ಹೇಳಿದರು.

ಪಟ್ಟಣದ ಅಲ್ಲಮಪ್ರಭು ದೇವಸ್ಥಾನದ ಸಭಾಭವನದಲ್ಲಿ ಏರ್ಪಡಿಸಿದ ಬಿ.ಎಸ್.ಕಡಕೋಳ ಸೇವಾ ನಿವೃತ್ತಿ ಅಭಿನಂದನಾ ಸಮಾರಂಭದ ದಿವ್ಯಸಾನ್ನಿಧ್ಯ ಮಾತನಾಡಿದ ಅವರು, ವಿದ್ಯೆಯಿಂದ ವಿನಯತೆ ಬರಬೇಕು. ಅಹಂಕಾರ ಬಂದರೆ ಆ ವಿದ್ಯೆಗೆ ಬೆಲೆಯಿಲ್ಲ. ನಿವೃತ್ತಿ ಎಂದರೆ ವೃತ್ತಿಗೆ ನಿವೃತ್ತಿ ಮಾತ್ರ. ನಿವೃತ್ತಿ ನಂತರ ನಿಮ್ಮ ಕೆಲಸ ಮುಗಿಯುವದಿಲ್ಲ, ಸಮಾಜಕ್ಕೂ ಒಂದಿಷ್ಟು ನಿಮ್ಮ ಕೊಡುಗೆಯಿರಲಿ ಎಂದರು.

ಸುರೇಶ ಬಾಡಗಿ ಮಾತನಾಡಿ, ನಿವೃತ್ತಿ ಮುಗಿದ ಬಳಿಕ ಮತ್ತೇ ಹೊಸ ಬದುಕು ಪ್ರಾರಂಭಿಸಬಹುದು. ಸಮಾಜದಲ್ಲಿರುವ ಅಂಕುಡೊಂಕು ತಿದ್ದುವ ಶಕ್ತಿ ನಿಮ್ಮಲ್ಲಿರುತ್ತದೆ. ಈ ಸಮಾಜದಲ್ಲಿ ಸಂಕಷ್ಟಕ್ಕೊಳಗಾದ ಸಾಕಷ್ಟು ಜನರಿದ್ದಾರೆ ಅಂತವರಿಗಾಗಿ ಮಾರ್ಗದರ್ಶನ ಕೇಂದ್ರಗಳನ್ನು ತೆರೆದು ಅವರ ನೋವಿಗೆ ಸ್ಪಂದಿಸಿ ಎಂದರು.

ಬಸವರಾಜ ಬಾಳಿಕಾಯಿ ಮಾತನಾಡಿ, ಕಡಕೋಡ ಶಿಕ್ಷಕರು ಸಹೃದಯದವರು ವೃತ್ತಿಯಲ್ಲಿ ಹಾಗೂ ಸಾಮಾಜಿಕ ಸೇವೆಯಲ್ಲಿಯೂ ಹೆಸರು ಗಳಿಸಿದವರಾಗಿದ್ದಾರೆ. ಸಮಾಜಕ್ಕೂ ಸಾಕಷ್ಟು ಬಾರಿ ತನುಮನಧನದಿಂದ ಸಹಾಯ ಸಹಕಾರ ಮಾಡಿದ್ದಾರೆ ಇವರ ಬದುಕು ಇತರರಿಗೆ ಮಾದರಿಯಾಗಿದೆ ಎಂದರು.

ಸೇವಾನಿವೃತ್ತಿ ಅಭಿಮಾನ ಸ್ವಿಕರಿಸಿ ಮಾತನಾಡಿದ ಬಿ.ಎಸ್.ಕಡಕೋಳ ನಾನು ಈ ಹಂತಕ್ಕೆ ಮುಟ್ಟಲು ನನ್ನ ತಂದೆ ತಾಯಿಯ ಶ್ರಮವೇ ಕಾರಣ. ನನ್ನ ವಿದ್ಯಭ್ಯಾಸಕ್ಕಾಗಿ ಅವರು ಪಟ್ಟ ಕಷ್ಟ ಹೇಳಲು ಅಸಾಧ್ಯ ಅವರ ಋಣ ನಾನೆಂದೂ ಮರೆಯಲು ಸಾಧ್ಯವಿಲ್ಲ. ಸೇವೆಯಲ್ಲಿದ್ದಾಗ ಸಹಾಯ ಸಹಕಾರ ತೋರಿದ ಎಲ್ಲ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೂ ಧನ್ಯವಾದ ತಿಳಿಸಿದರು.

ಪ್ರವೀಣ ನಾಡಗೌಡ, ಮಲ್ಲಪ್ಪ ಜಮಖಂಡಿ, ಭುಜಬಲಿ ಕೆಂಗಾಲಿ, ಹಿಡಕಲ್, ಎಂ.ಬಿ.ಮಾಳೆದ, ಶಂಕರ ಕಬಾಡಗಿ, ಮಿನಾಕ್ಷಿ ಮಿರ್ಜಿ, ಶ್ರೀಶೈಲಬುರ್ಲಿ, ಗಂಗಾಧರ ಮೋಪಗಾರ ಸೇರಿದಂತೆ ಇನ್ನಿತರರಿದ್ದರು.



ಹೇಮರೆಡ್ಡಿ ಮಲ್ಲಮ್ಮನ ಬದುಕು ಆದರ್ಶ: ಶಾಸಕ ಜೆಟಿಪಾ

ಬೀಳಗಿ: ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನ ಆದರ್ಶ ಬದುಕು ಹಾಗೂ ಮಹಾಯೋಗಿ ವೇಮನರ ತತ್ವ ಚಿಂತನೆಗಳು ಮನುಕುಲದ ಒಳಿತಿಗೆ ಸರ್ವಕಾಲಕ್ಕೂ ಪ್ರಸ್ತುತ ಎಂದು ಶಿರೂರಿನ ಶಿಕ್ಷಕ ಸಂಜಯ ನಡುವಿನಮನಿ ಹೇಳಿದರು.

ತಾಲೂಕಿನ ಅಮಲಝುರಿ ಗ್ರಾಮದಲ್ಲಿ ಬೆನಕಟ್ಟಿಯ ಹೇಮ ವೇಮನ ಸದ್ಬೋಧನ ಪೀಠದ ವತಿಯಿಂದ ಸ್ಥಳೀಯ ಹೇಮ ವೇಮ ಸೇವಾ ಸಮಿತಿಯ ಆಶ್ರಯದಲ್ಲಿ ನಡೆದ ಹೇಮರಡ್ಡಿ ಮಲ್ಲಮ್ಮನ 604ನೇ ಜಯಂತಿ ಹಾಗೂ ಮನೆ ಮನದಲ್ಲಿ ವೇಮನರ 193ನೇ ಮಾಸಿಕ ತತ್ವ ಚಿಂತನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಕ್ಷಣ ಪ್ರತಿವ್ಯಕ್ತಿಗೂ ಅಗತ್ಯ. ಆದರೆ ವ್ಯಕ್ತಿಯಲ್ಲಿ ಪರಿವರ್ತನೆ ತರಬಲ್ಲ ಮಾನವೀಯ ಮೌಲ್ಯಗಳನ್ನು ಬೆಳೆಸಬಲ್ಲ ಮತ್ತು ಸನ್ನಡತೆ, ಸದ್ವಿಚಾರ, ಸಂಸ್ಕಾರದ ಗುಣಗಳನ್ನು ಬೆಳೆಸುವ ಶಿಕ್ಷಣದ ಅವಶ್ಯಕತೆಯಿದೆ ಎಂದ ನಡುವಿನಮನಿ, ಮಹಾಯೋಗಿ ವೇಮನರು ತಮ್ಮ ವಚನದಲ್ಲಿ ಶಿಕ್ಷಣದ ಮಹತ್ವ ತಿಳಿಸಿದ್ದು, ಅಡುಗೆಗೆ ಉಪ್ಪು ಎಷ್ಟು ಅಗತ್ಯವೋ ಮನುಷ್ಯನಿಗೆ ಶಿಕ್ಷಣದ ಅವಶ್ಯಕತೆಯೂ ಅಷ್ಟೇ ಇದೆ ಎಂದು ತಿಳಿಸಿದ್ದಾರೆ ಎಂದರು.



ನೇತೃತ್ವ ವಹಿಸಿದ್ದ ನಿವೃತ್ತ ಪ್ರಾಚಾರ್ಯ ಬಸಯ್ಯ ಹಿರೇಮಠ ಹಾಗೂ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಶಿಕ್ಷಕ ಎಸ್.ಎಚ್.ಗುರಡ್ಡಿ ಮಾತನಾಡಿ, ಹೇಮರಡ್ಡಿ ಮಲ್ಲಮ್ಮ ಸ್ತ್ರೀ ಕುಲದ ರತ್ನ. ಅವಳ ತಾಳ್ಮೆ, ಸಹನಾ ಗುಣಗಳೇ ಅವಳನ್ನು ಎತ್ತರಕ್ಕೆ ಬೆಳೆಸಿ ಪೂಜಿತಗೊಳ್ಳುವಂತೆ ಮಾಡಿದ್ದು, ಅವಳ ಆದರ್ಶಗಳನ್ನು ಮಹಿಳೆಯರು ಜೀವನದಲ್ಲಿ ಅಳವಡಿಸಿಕೊಂಡು ಆನಂದಮಯ ಜೀವನ ಪಡೆಯಬೇಕು ಎಂದು ಹೇಳಿದರು.

ಗಂಗಾ ಅಮಾತೆಪ್ಪನವರ, ಸಾನ್ನಿಧ್ಯ ವಹಿಸಿದ್ದ ಶ್ರದ್ಧಾನಂದ ಮಠದ ಜ್ಞಾನಮಯಾನಂದ ಸ್ವಾಮೀಜಿ ಮಾತನಾಡಿದರು. ಹಣಮಂತಗೌಡ ಪಾಟೀಲ, ವೆಂಕಟೇಶ ಕೇರಿ, ರಮೇಶ ಅಣ್ಣಿಗೇರಿ, ಬೆನಕಟ್ಟಿಯ ಹೇಮರಡ್ಡಿ ಮಲ್ಲಮ್ಮ ಭಜನಾ ಮಂಡಳಿ ವೇಮನ ವಚನ ಪಠಣ ಮಾಡಿದರು. ಡಿ.ಎಂ.ಬೆಣ್ಣೂರ ಮಾತನಾಡಿದರು. ಶಿವಪ್ರಸಾದ ಹಿರೇಮಠ ನಿರೂಪಿಸಿದರು.

ಗಿಡ, ಮರ ಬೆಳೆಸುವುದರಿಂದ ಉತ್ತಮ ಪರಿಸರ ನಿರ್ಮಾಣ

ಇಳಕಲ್: ನಗರಸಭೆ ಕಾರ್ಯಾಲಯದ ಅಡಿಯಲ್ಲಿ ನಗರಸಭೆ ಎದುರಿಗೆ ಇರುವ ವೀರ ರಾಣಿ ಕಿತ್ತೂರ ಚನ್ನಮ್ಮನ ನಗರ ವನದಲ್ಲಿ ಪೌರಾಯುಕ್ತ ಶ್ರೀನಿವಾಸ ಜಾಧವ ಮತ್ತು ಪೌರ ಕಾರ್ಮಿಕ ಕರೊಂದಿಗೆ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಿಸಿದರು.

ಈ ವೇಳೆ ಶ್ರೀನಿವಾಸ ಜಾದವ್ ಮಾತನಾಡಿ, ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ. ಪ್ರತಿಯೊಬ್ಬರೂ ಪರಿಸರ ರಕ್ಷಿಸಬೇಕು. ಇಳಕಲ್ ನಗರದ ಸುತ್ತಮುತ್ತಲೂ ಉತ್ತಮ ವಾತಾವರಣ ಸೃಷ್ಟಿಯಾಗಬೇಕು. ಅಂದ್ರೆ ಮೊದಲು ಸಸಿ ನೆಡುವ ಕೆಲಸ ಮಾಡಬೇಕು. ಗಿಡ, ಮರ ಬೆಳೆಸುವುದರಿಂದ ಉತ್ತಮ ಗಾಳಿ, ಉತ್ತಮ ಪರಿಸರ ನಿರ್ಮಾಣ ಮಾಡಲು ಸಾಧ್ಯ ಎಂದರು.



ಕಂದಾಯ ಅಧಿಕಾರಿಗಳಾದ ಪರಶುರಾಮ ನಾರಾಯಣಿ, ಆರೋಗ್ಯ ನಿರೀಕ್ಷಕ ಮನೋಹರ ದೊಡಮನಿ, ಹಿರಿಯ ಆರೋಗ್ಯ ನಿರೀಕ್ಷಕ ಶರಣಪ್ಪ ಹುಲಿ, ಶರಣಯ್ಯ ಸರಗಣಾಚಾರಿ, ಲೆಕ್ಕಾಧಿಕಾರಿ ಅಯ್ಯನಗೌಡ, ಶರಣಬಸಪ್ಪ ಕೊಪ್ಪಳ, ಬಸಣ್ಣ ಕಿರಗಿ ಉಪಸ್ಥಿತರಿದ್ದರು.

ರೈತರಿಗೆ ವಿವಿಧ ಬಿತ್ತನೆ ಬೀಜ ವಿತರಣೆ

ಬೀಳಗಿ: ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ರೈತರಿಗೆ ವಿವಿಧ ಬಿತ್ತನೆ ಬೀಜ ವಿತರಣೆ ಮಾಡಲಾಯಿತು.

ಸಹಾಯಕ ಕೃಷಿ ನಿರ್ದೇಶಕ ಶ್ರೀನಿವಾಸ ಪಾಟೀಲ ಮಾತನಾಡಿ, ಬೀಳಗಿ ರೈತ ಸಂಪರ್ಕ ಕೇಂದ್ರದಲ್ಲಿ ಹೆಸರು ಬೀಜ 480 ಕೆಜಿ ಬಂದಿದ್ದು, 205 ವಿತರಣೆ ಮಾಡಿದ್ದು, 275 ಕೆಜಿ ದಾಸ್ತಾನಿದೆ. ತೊಗರಿ 480 ಕೆಜಿ ಬಂದಿದ್ದು, 460 ಕೆಜಿ ವಿತರಣೆ ಮಾಡಿದ್ದು, 20 ಕೆಜಿ ದಾಸ್ತಾನಿದೆ. ಗೋವಿನಜೋಳ 12888 ಕೆಜಿ ಬಂದಿದ್ದು, 3148 ಕೆಜಿ ವಿತರಣೆ ಮಾಡಿದ್ದು, 9740 ಕೆಜಿ ದಾಸ್ತಾನಿದೆ. ಸಜ್ಜೆ 150 ಕೆಜಿ ಬಂದಿದ್ದು, 15 ಕೆಜಿ ವಿತರಿಸಿದ್ದು, 135 ದಾಸದ್ತಾನಿದೆ. ಸೂರ್ಯಕಾಂತಿ 750 ಕೆಜಿ ಬಂದಿದ್ದು, 178 ಕೆಜಿ ವಿತರಿಸಲಾಗಿದ್ದು, 572 ಕೆಜಿ ದಾಸ್ತಾನಿದೆ. ಉದ್ದು 720 ಕೆಜಿ ಬೀಜ ದಾಸ್ತಾನಿದೆ.

ಅನಗವಾಡಿ ರೈತ ಸಂಪರ್ಕ ಕೇಂದ್ರದಲ್ಲಿ ಹೆಸರು ಬೀಜ 480 ಕೆಜಿ ಬಂದಿದ್ದು, 200 ಕೆಜಿ ವಿತರಣೆ ಮಾಡಲಾಗಿದ್ದು, 275 ದಾಸ್ತಾನಿದೆ. ತೊಗರಿ 480 ಕೆಜಿ ಬಂದಿದ್ದು, 445 ವಿತರಣೆ ಮಾಡಲಾಗಿದ್ದು, 30 ಕೆಜಿ ದಾಸ್ತಾನಿದೆ. ಗೋವಿನಜೋಳ 8476 ಕೆಜಿ ಬಂದಿದ್ದು, 2228 ವಿತರಣೆ ಮಾಡಲಾಗಿದ್ದು, 6248 ದಾಸ್ತಾನಿದೆ. ಸೂರ್ಯಕಾಂತಿ 630 ಕೆಜಿ ಬಂದಿದ್ದು, 218 ಕೆಜಿ ವಿತರಣೆ ಮಾಡಲಾಗಿದ್ದು, 412 ಕೆಜಿ ದಾಸ್ತಾನಿದೆ. ಸಜ್ಜೆ 270 ಕೆಜಿ ಬಂದಿದ್ದು, 96 ಕೆಜಿ ಮಾರಾಟ ಮಾಡಲಾಗಿದ್ದು, 174 ಕೆಜಿ ದಾಸ್ತಾನಿದೆ. ಉದ್ದು 720 ಕೆಜಿ ಬೀಜ ದಾಸ್ತಾನಿದೆ ಎಂದು ತಿಳಿಸಿದರು.



ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಸದಾಶಿವ ಚಿಕ್ಕಲಕಿ, ಉಪಾಧ್ಯಕ್ಷ ರಾಜೇಂದ್ರ ದೇಸಾಯಿ, ಪ್ರಧಾನ ಕಾರ್ಯದರ್ಶಿ ರವೀಂದ್ರ ಲಕ್ಷಾಣಿ, ಜಿಲ್ಲಾ ಪ್ರತಿನಿಧಿ ಪ್ರಕಾಶ ಕಟಗೇರಿ, ಕೃಷಿ ಅಧಿಕಾರಿ ಪ್ರಕಾಶ ಬಂಡೆಪ್ಪನಹಳ್ಳಿ ಸೇರಿದಂತೆ ತಾಲೂಕು ಕೃಷಿಕ ಸಮಾಜದ ಸದಸ್ಯರು ಉಪಸ್ಥಿತರಿದ್ದರು.

ಪರಿಸರದಿಂದ ನಮ್ಮ ಉಳಿವು

ಜಮಖಂಡಿ: ನಾವು ಪರಿಸರ ಉಳಿಸಿದರೆ ಪರಿಸರ ನಮ್ಮನ್ನು ಉಳಿಸುತ್ತದೆ. ಆದ್ದರಿಂದ ಪರಿಸರ ಸಂರಕ್ಷಣೆ ನಮ್ಮೆಲ್ಲರ ಸಾಮೂಹಿಕ ಹೊಣೆಯಾಗಿದೆ ಎಂದು ಬಿಎಲ್‌ಡಿಇ ಕಾನೂನು ಕಾಲೇಜಿನ ಇತಿಹಾಸ ಪ್ರಾಧ್ಯಾಪಕಿ ಭೀಮಾಬಾಯಿ ಮಾಳಶೆಟ್ಟಿ ಹೇಳಿದರು. ಬಸವಜ್ಯೋತಿ ವಿಜ್ಞಾನ ಮತ್ತು ವಾಣಿಜ್ಯ ಪದವಿಪೂರ್ವ ಮಹಾವಿದ್ಯಾಲಯದ ಸಹಯೋಗ ಹೊಂದಿರುವ ಮೂಡಬಿದರೆಯ ವಿದ್ಯಾಶಾರದ ಅಕಾಡೆಮಿಯ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬಸವಜ್ಯೋತಿ ಶಿಕ್ಷಣ ಸಮೂಹ ಸಂಸ್ಥೆಗಳ ಆಡಳಿತಾಧಿಕಾರಿ ಪ್ರೊ.ಬಸವರಾಜ ಕಡ್ಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಠಿಣ ಪರಿಶ್ರಮಕ್ಕೆ ಮತ್ತೊಂದು ಪರ್ಯಾಯವಿಲ್ಲ. ಕೆಲಸ ಮಾಡುವವರನ್ನು ಕೆಲಸ ಕಾಪಾಡುತ್ತದೆ ಎಂದರು. ಪ್ರಾಚಾರ್ಯ ಡಾ.ಟಿ.ಪಿ.ಗಿರಡ್ಡಿ ಮಾತನಾಡಿ, ಮುಂದಿನ ಪೀಳಿಗೆ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವ ಸಾಮರ್ಥ್ಯಕ್ಕೆ ಕುಂದುಬರದಂತೆ ಇಂದಿನ ಪೀಳಿಗೆಯು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವ ಅಭಿವೃದ್ಧಿಯನ್ನು ಸುಸ್ಥಿರ ಅಭಿವೃದ್ಧಿ ಎನ್ನಲಾಗುತ್ತದೆ ಎಂದರು. ಸುದರ್ಶನ ತೇಜಸ್ವಿ, ದಾನೇಶ ಮೋಪಗಾರ ಇದ್ದರು. ಕೀರ್ತಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ರಾಹುಲ್ ಪರಿಚಯಿಸಿದರು. ವಿನಾಯಕ ನಿರೂಪಿಸಿದರು.



ಗದ್ದನಕೇರಿ ಕ್ರಾಸ್‌ನಲ್ಲಿ ಬಸ್ ನಿಲ್ದಾಣಕ್ಕೆ ಕ್ರಮ



ಬಾಗಲಕೋಟೆ: ಪ್ರಯಾಣಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಗದ್ದನಕೇರಿಕ್ರಾಸ್‌ನಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮಕೈಗೊಳ್ಳಲಾಗುವುದೆಂದು ಬೀಳಗಿ ಶಾಸಕ ಜೆ.ಟಿ.ಪಾಟೀಲ ಹೇಳಿದರು.

ಜಿಲ್ಲಾಧಿಕಾರಿ ಸಂಗಪ್ಪ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸೋಮವಾರ ಗದ್ದನಕೇರಿಕ್ರಾಸ್ ವಿಜಯಪೂರ ರಸ್ತೆ ಪಕ್ಕ ಗ್ರಾಮ ಪಂಚಾಯಿತಿಗೆ ಸೇರಿದ ಸ್ಥಳದಲ್ಲಿ ಬಸ್ ನಿಲ್ದಾಣ ಸ್ಥಳ ಪರಿಶೀಲಿಸಿ, ಮಾತನಾಡಿದ ಅವರು, ರಾಜ್ಯ ಹಾಗೂ ಹೆದ್ದಾರಿಗಳು ಕೂಡುವ ಗದ್ದನಕೇರಿ ಕ್ರಾಸ್ ದಿನೇ ದಿನೇ ಬೆಳೆಯುತ್ತಿದ್ದು, ಸಾರ್ವಜನಿಕರಿಗೆ ಮತ್ತು ಪ್ರಯಾಣಿಕರಿಗೆ ಬಸ್ ನಿಲ್ದಾಣವಿಲ್ಲದೇ ಪರಿತಪಿಸುವಂತಾಗಿದೆ. ಅಲ್ಲದೇ ಗದ್ದನಕೇರಿಕ್ರಾಸ್‌ನಲ್ಲಿ ಗ್ರಾಮೀಣ ಪ್ರದೇಶದ ಜನ, ತರಕಾರಿ ಮಾರಾಟ ಮಾಡುವವರು ಸಹ ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದರು ಎಂದರು.

ಸುಮಾರು 50ರಿಂದ 60 ಲಕ್ಷಗಳಲ್ಲಿ ಮಾರುಕಟ್ಟೆ ಮಾಡಲಾಗುತ್ತಿದೆ ಎಂದ ಅವರು 30 ಲಕ್ಷ ರೂ.ಗಳಲ್ಲಿ ಬಸ್ ನಿಲ್ದಾಣಕ್ಕೆ ಇಡಲಾಗಿದ್ದು, ಇನ್ನಷ್ಟು ಹಣ ಕ್ರೋಢಿಕರಿಸಿ ಸುಂದರ ಬಸ್ ನಿಲ್ದಾಣ ಮಾಡಲಾಗುವುದು ಎಂದರು. ಈಗಾಗಲೇ ಬಸ್ ನಿಲ್ದಾಣದ ನೀಲನಕ್ಷೆ ತಯಾರಿಸಲಾಗಿದ್ದು, ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಿ ಹೆಚ್ಚಿನ ಹಣ ಕ್ರೋಢಿಕರಿಸಿ ಬಹುದಿನದ ಕನಸಾಗಿದ್ದ ಬಸ್ ನಿಲ್ದಾಣ ನಿರ್ಮಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಬಾಗಲಕೋಟೆ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಉಪಅರಣ್ಯ ಸಂರಕ್ಷಣಾಧಿಕಾರಿ ಸ್ವಪ್ನಿಲ್ ಅಹಿರೆ, ನಗರಸಭೆ ಪೌರಾಯುಕ್ತ ವಾಸಣ್ಣ ಆರ್.ತಹಶೀಲ್ದಾರ್ ವಾಸುದೇವಸ್ವಾಮಿ, ಡಿಪೋ ಮ್ಯಾನೇಜರ್ ಚವ್ಹಾಣ, ಗದ್ದನಕೇರಿ ಗ್ರಾಮ ಪಂಚಾಯತಿ ಅಧಿಕಾರಿ ಆರತಿ ಕೊಲ್ಹಾರ ಹಾಗೂ ನಿರ್ಮಿತಿ ಕೇಂದ್ರದ ಅಧಿಕಾರಿಗಳು ಇದ್ದರು.

ಕಿರುಸುದ್ದಿ

ಜೂ.28ರಂದು ಪುಣ್ಯಸ್ಮರಣೋತ್ಸವ

ಬಸವನಬಾಗೇವಾಡಿ: ಪಟ್ಟಣದಲ್ಲಿ ಜೂ.28ರಂದು ಡಾ.ಪಂಡಿತ ಪುಟ್ಟರಾಜ ಗವಾಯಿಗಳ ಪುಣ್ಯ ಸ್ಮರಣೋತ್ಸವ, ಸ್ಮರಣ ಸಂಚಿಕೆ ಬಿಡುಗಡೆ ಹಾಗೂ ರಾಜ್ಯಮಟ್ಟದ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯಲಿದೆ ಎಂದು ಕರ್ನಾಟಕ ರಾಜ್ಯ ನಾಟಕ ಬರಹಗಾರ ಕವಿಗಳ ಜಿಲ್ಲಾಧ್ಯಕ್ಷರಾದ ವ್ಹಿ.ಎಚ್.ಅಂಗಡಗೇರಿ ಹೇಳಿದರು.

ತಾಲೂಕಿನ ಯರನಾಳ ಗ್ರಾಮದಲ್ಲಿ ಕವಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಡಾ.ಪಂಡಿತ ಪುಟ್ಟರಾಜ ಗವಾಯಿಗಳ ಪುಣ್ಯ ಸ್ಮರಣೋತ್ಸವ, ಸ್ಮರಣ ಸಂಚಿಕೆ ಬಿಡುಗಡೆ ಹಾಗೂ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಮಾಜ ಸೇವೆ, ವೈದ್ಯಕೀಯ, ಸಂಘಟನೆ, ಕಲೆ, ಸಾಹಿತ್ಯ, ಜಾನಪದ, ಭಜನೆ, ರಂಗಭೂಮಿ, ಸಂಗೀತ, ಶಿಕ್ಷಣ ಮಾಧ್ಯಮ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು, ಸಚಿವರು, ಶಾಸಕರು, ರಂಗಭೂಮಿಯ ಕಲಾವಿದರು, ನಟ, ನಟಿಯರು, ಸಂಗೀತಗಾರರು, ಕವಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಗೌರವಾಧ್ಯಕ್ಷ ಸಿದ್ದಪ್ಪ ಅಲಗೊಂಡ, ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ.ರಾಘವೇಂದ್ರ ಉಮ್ಮರಿಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುಂಡಪ್ಪ ಕುಂಬಾರ, ಕಲಾವಿದರಾದ ಕಾಂತು ಕಾಖಂಡಕಿ, ಸದಾಶಿವ ಕೋಲ್ಹಾರ, ಭೀಮು ಹೊನವಾಡ, ಶಿವಾನಂದ ಡಂಗಿ, ಎಚ್.ವಿ.ಕರಡಿ, ಅನಿಲ ಜಾಧವ, ಮಲ್ಲಿಕಾರ್ಜುನ ಆಗಸರ, ಶ್ರೀಕಾಂತ ಚನಗುಂಡಿ, ಬಸವರಾಜ ಹಾಕಾರಿ ಸೇರಿ ಇತರರು ಇದ್ದರು.

ರಾಜ್ಯ ಸರ್ಕಾರದ ದ್ವೇಷ ರಾಜಕಾರಣ ಖಂಡನೀಯ

ವಿಜಯಪುರ: ರಾಜ್ಯ ಕಾಂಗ್ರೆಸ್ ಸರ್ಕಾರದ ದ್ವೇಷದ ರಾಜಕಾರಣ ಹಾಗೂ ಪೊಲೀಸ್ ವ್ಯವಸ್ಥೆಯ ದುರ್ಬಳಕೆ ಬಿಜೆಪಿ ಜಿಲ್ಲಾ ಘಟಕ ಖಂಡಿಸಿದೆ. ಆಳಂದ ಗಲಭೆ ಪ್ರಕರಣಗಳನ್ನು ರಾಜ್ಯ ಸರ್ಕಾರ ಹಿಂಪಡೆದಿರುವುದನ್ನು ವಿರೋಧಿಸಿ ಕಲಬುರಗಿಯಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಸತ್ಯಾಸತ್ಯತೆಯನ್ನು ಹಾಗೂ ಇತಿಹಾಸದ ವಾಸ್ತವಿಕ ಸಂಗತಿಗಳನ್ನು ಮಾತನಾಡಿದ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಅವರ ವಿರುದ್ಧ ಎಫ್ಐಆರ್ ದಾಖಲಿಸಿರುವುದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ದತ್ತಾತ್ರೇಯ ಪಾಟೀಲ ರೇವೂರ ಅವರು ಕೇವಲ 30-40 ವರ್ಷಗಳ ಹಿಂದೆ ಚುನಾವಣಾ ಪ್ರಚಾರದ ವೇಳೆ ನಡೆದಿದ್ದ ಘಟನೆಯೊಂದನ್ನು ಹಾಗೂ ಅಂದಿನ ನಾಯಕರ ಹೇಳಿಕೆಯೊಂದನ್ನು ಉಲ್ಲೇಖಿಸಿದ್ದಾರೆಯೇ ಹೊರತು, ಯಾವುದೇ ಪ್ರಚೋದನಕಾರಿ ಹೇಳಿಕೆ ನೀಡಿಲ್ಲ. ಸತ್ಯವನ್ನು ಹೇಳಿದರೆ, ಅದನ್ನು ಸಹಿಸಿಕೊಳ್ಳಲಾಗದ ಕಾಂಗ್ರೆಸ್ ನಾಯಕರು ವಾಕ್ ಸ್ವಾತಂತ್ರ್ಯ ಹತ್ತಿಕ್ಕಲು ಕುತಂತ್ರ ಮಾಡುತ್ತಿದ್ದಾರೆ. ಅವರ ವಿರುದ್ಧ ದೂರು ನೀಡಿದ ತಕ್ಷಣ ಎಫ್ಐಆರ್ ದಾಖಲಿಸುವ ಪೊಲೀಸ್ ಇಲಾಖೆ, ಕಾನೂನು ಉಲ್ಲಂಘಿಸಿ ಅವರ ವಿರುದ್ಧ ಪ್ರತಿಭಟನೆ ನಡೆಸಿದ ಕಿಡಿಗೇಡಿಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಇದು ಪೊಲೀಸ್ ಇಲಾಖೆ ಆಡಳಿತ ಪಕ್ಷದ ಕೈಗೊಂಬೆಯಾಗಿ ಕಾರ್ಯನಿರ್ವಹಿಸುತ್ತಿರುವುದಕ್ಕೆ ಸ್ಪಷ್ಟ ನಿದರ್ಶನವಾಗಿದೆ. ರಾಜಕೀಯ ದುರುದ್ದೇಶದಿಂದ ದಾಖಲಾಗಿರುವ ಈ ದೂರನ್ನು ದೂರುದಾರರು ತಕ್ಷಣವೇ ವಾಪಸ್ ಪಡೆಯಬೇಕು ಹಾಗೂ ಪೊಲೀಸ್ ಇಲಾಖೆಯು ದತ್ತಾತ್ರೇಯ ಪಾಟೀಲ ರೇವೂರ ಅವರ ಮೇಲಿನ ಎಫ್ ಐಆರ್ ಅನ್ನು ಕೂಡಲೇ ವಜಾಗೊಳಿಸಬೇಕು. ಒಂದು ವೇಳೆ ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆ ತಮ್ಮ ಈ ದ್ವೇಷದ ರಾಜಕಾರಣವನ್ನು ಮುಂದುವರಿಸಿ, ಎಫ್ಐಆರ್ ವಜಾಗೊಳಿಸದೇ ಇದ್ದಲ್ಲಿ, ಕಲಬುರಗಿ ಬಿಜೆಪಿ ಘಟಕದ ಹೋರಾಟಕ್ಕೆ ವಿಜಯಪುರ ಜಿಲ್ಲಾ ಬಿಜೆಪಿಯೂ ಸಂಪೂರ್ಣ ಬೆಂಬಲ ನೀಡಲಿದೆ. ಮುಂದಿನ ದಿನಗಳಲ್ಲಿ ಕೇವಲ ಕಲಬುರಗಿ ಮಾತ್ರವಲ್ಲ, ವಿಜಯಪುರ ಸೇರಿದಂತೆ ಕಲ್ಯಾಣ ಕರ್ನಾಟಕದಾದ್ಯಂತ ಬೃಹತ್ ಜನಜಾಗೃತಿ ಹಾಗೂ ಪ್ರತಿಭಟನೆ ನಡೆಸುವುದು ಅನಿವಾರ್ಯವಾಗುತ್ತದೆ. ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರು ಇಂತಹ ಗೊಡ್ಡು ಬೆದರಿಕೆಗೆ ಜಗ್ಗುವುದಿಲ್ಲ. ಸತ್ಯದ ಪರವಾಗಿ ನಮ್ಮ ಹೋರಾಟ ನಿರಂತರವಾಗಿರಲಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಚಂದ್ರಶೇಖರ ಕವಟಗಿ, ಸಾಬು ಮಾಸ್ಯಾಳ, ಮಳುಗೌಡ ಪಾಟೀಲ, ಈರಣ್ಣ ರಾವೂರ ಜಂಟಿ ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ಶ್ರೀಶೈಲ ದಳವಾಯಿ ನಿಧನ

ಕೊಲ್ಹಾರ: ತಾಲೂಕಿನ ಕುಪಕಡ್ಡಿ ಗ್ರಾಮದ ಹಿರಿಯರು ಹಾಗೂ ಬಿಜೆಪಿ ಮುಖಂಡ ಶ್ರೀಶೈಲ ಕಲ್ಲಪ್ಪ ದಳವಾಯಿ(64)ನಿಧನರಾದರು.



ಮೃತರಿಗೆ ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ. ನಿಧನಕ್ಕೆ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಸಂತಾಪ ಸೂಚಿಸಿದ್ದಾರೆ. ದಳವಾಯಿಯವರು ಪ್ರಗತಿಪರ ರೈತರಾಗಿ, ಪಕ್ಷದ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.ಅವರ ಅಗಲಿಕೆ ಕುಟುಂಬಕ್ಕೆ ಪಕ್ಷಕ್ಕೆ ನಷ್ಟವಾಗಿದೆ ಎಂದು ಸಂತಾಪ ಸೂಚಿಸಿದ್ದಾರೆ.



ವಿಜಯಪುರ: ಅಧಿಕ ಮಾಸದ ನಿಮಿತ್ತ ನಗರದ ಹಳಕೇರಿ ಗಲ್ಲಿಯ ಗಾಯಿ ಚಾಳದ ಪ್ರಸನ್ನೇಶ್ವರ ದೇವಸ್ಥಾನದಲ್ಲಿ ಸೋಮವಾರ ಅರ್ಚಕ ಪ್ರಕಾಶಾಚಾರ್ಯ ಮದಭಾವಿಯವರ ನೇತೃತ್ವದಲ್ಲಿ ಹೋಮ ಸತ್ಯನಾರಾಯಣ ಪೂಜೆ, 33 ದಂಪತಿಗಳಿಗೆ ದಾನ ನೀಡುವ ಕಾರ್ಯಕ್ರಮಗಳು ಜರುಗಿದವು. ಮಹಿಳೆಯರ ಸಂಗೀತ ಸೇವೆ ಗಮನ ಸೆಳೆಯಿತು.

ಶಾಲೆಯಿಂದ ದಾಖಲಾತಿ ಆಂದೋಲನ


ದೇವರಹಿಪ್ಪರಗಿ: ಸ್ಥಳೀಯ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಗಂಡು ಮಕ್ಕಳ ಶಾಲೆಯ ವತಿಯಿಂದ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಾಲಾ ದಾಖಲಾತಿ ಆಂದೋಲನವು ಯಶಸ್ವಿಯಾಗಿ ಜರುಗಿತು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಶಾಲಾ ಸಿಬ್ಬಂದಿ ಸಾರ್ವಜನಿಕರಲ್ಲಿ ಹಾಗೂ ಪಾಲಕ ಪೋಷಕರಲ್ಲಿ ಶಿಕ್ಷಣದ ಕುರಿತು ಜಾಗೃತಿ ಮೂಡಿಸಿದರು. ಕ.ರಾ.ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ದೇವರಹಿಪ್ಪರಗಿ ಘಟಕದ ಅಧ್ಯಕ್ಷ ಹಾಗೂ ಶಾಲೆಯ ಮುಖ್ಯಗುರು ಪಿ.ಸಿ.ತಳಕೇರಿ ಮಾತನಾಡಿ, ಇಂದು ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವಂತೆ ಸರ್ಕಾರಿ ಶಾಲೆಗಳಲ್ಲಿಯೂ ಸುಸಜ್ಜಿತ ಮೂಲಸೌಕರ್ಯ ಹಾಗೂ ಉನ್ನತ ಗುಣಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ. ಉಚಿತ ಪಠ್ಯಪುಸ್ತಕ, ಸಮವಸ್ತ್ರ ಬಿಸಿಯೂಟ ಹಾಗೂ ಸ್ಕಾಲರ್‌ಶಿಪ್‌ಗಳಂತಹ ಹತ್ತು ಹಲವು ಉಚಿತ ಸೌಲಭ್ಯಗಳು ಸರ್ಕಾರಿ ಶಾಲೆಯಲ್ಲೇ ಲಭ್ಯವಿವೆ. ಪೋಷಕರು ಯಾವುದೇ ಖಾಸಗಿ ಸಂಸ್ಥೆಗಳ ದುಬಾರಿ ಆಮಿಷಕ್ಕೆ ಒಳಗಾಗದೆ, ತಮ್ಮ ಮಕ್ಕಳನ್ನು ಸ್ಥಳೀಯ ಸರ್ಕಾರಿ ಶಾಲೆಗಳಿಗೇ ದಾಖಲಿಸಿ, ಅವರ ಉಜ್ವಲ ಭವಿಷ್ಯಕ್ಕೆ ಮುನ್ನುಡಿ ಬರೆಯಬೇಕು ಎಂದು ಮನವಿ ಮಾಡಿಕೊಂಡರು. ಸರಕಾರಿ ಶಾಲೆಗಳಲ್ಲಿ ಸಿಗುವ ಉಚಿತ ಸೌಲಭ್ಯಗಳು ಹಾಗೂ ಗುಣಮಟ್ಟದ ಶಿಕ್ಷಣದ ಬಗ್ಗೆ ಪಾಲಕರಿಗೆ ಮನವರಿಕೆ ಮಾಡಿಕೊಟ್ಟು ಮಕ್ಕಳ ಹೆಸರನ್ನು ಸರಕಾರಿ ಶಾಲೆಯಲ್ಲಿ ನೋಂದಾಯಿಸಲು ಕೋರಲಾಯಿತು. ಶಿಕ್ಷಕರಾದ ಪಿ.ಬಿ.ಪೂಜಾರ, ಎಂ.ಎಸ್.ಶಿವಣಗಿ, ಎ.ಆರ್.ಶಿಕ್ಕೇರಿ, ಎಚ್.ಪಿ.ಮಳ್ಳಿ, ಎಸ್.ಎಸ್.ಕೆಂಗನಾಳ, ಗ್ರಾಮಸ್ಥರಾದ ಸೋಮು ಸೊನ್ನದ ಇದ್ದರು.



ದೇವರಹಿಪ್ಪರಗಿ: ಸ್ಥಳೀಯ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಗಂಡು ಮಕ್ಕಳ ಶಾಲೆಯ ವತಿಯಿಂದ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಾಲಾ ದಾಖಲಾತಿ ಆಂದೋಲನವು ಯಶಸ್ವಿಯಾಗಿ ಜರುಗಿತು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಶಾಲಾ ಸಿಬ್ಬಂದಿ ಸಾರ್ವಜನಿಕರಲ್ಲಿ ಹಾಗೂ ಪಾಲಕ ಪೋಷಕರಲ್ಲಿ ಶಿಕ್ಷಣದ ಕುರಿತು ಜಾಗೃತಿ ಮೂಡಿಸಿದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರಿಂದ ಪ್ರತಿಭಟನೆ
ಅನ್ನದಾತರಿಗೆ ಪರಿಹಾರ ದೊರೆಯಲಿ

ಆಲಮಟ್ಟಿ: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ನೇತೃತ್ವದಲ್ಲಿ ಸಾವಿರಕ್ಕೂ ಅಧಿಕ ರೈತರು ಸೋಮವಾರ ಆಲಮಟ್ಟಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು. ಮಾರುತೇಶ್ವರ ದೇವಸ್ಥಾನದಿಂದ ಬಸ್ ನಿಲ್ದಾಣ ಬಳಿಯ ರಾಮಲಿಂಗೇಶ್ವರ ದೇವಸ್ಥಾನದವರೆಗೆ ರ‍್ಯಾಲಿ ನಡೆಸಿ ತಮ್ಮ ಬೇಡಿಕೆಗಳಿಗೆ ಬೆಂಬಲ ಸೂಚಿಸಿದರು.



ಸಂಘದ ರಾಜ್ಯ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ, ರಾಜ್ಯಾಧ್ಯಕ್ಷ ಚೂನ್ನಪ್ಪ ಪೂಜಾರಿ, ರಾಜ್ಯ ಉಪಾಧ್ಯಕ್ಷ ಶಾಂತಗೌಡ ಪಾಟೀಲ, ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಹಾಗೂ ಇತರೆ ಮುಖಂಡರು ಮಾತನಾಡಿ, 2013ರ ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಕಾಯ್ದೆಯ ಅನ್ವಯ ಭೂಮಿ ಕಳೆದುಕೊಂಡ ರೈತರಿಗೆ ನ್ಯಾಯ ಸಿಗಬೇಕು. ಭೂಸ್ವಾಧೀನಗೊಂಡ ರೈತರಿಗೆ ನಿಗದಿತ ಅವಧಿಯೊಳಗೆ ಪರ್ಯಾಯ ಭೂಮಿ ಒದಗಿಸಬೇಕಾಗಿದ್ದರೂ ಅನೇಕ ಪ್ರಕರಣಗಳು ವರ್ಷಗಳಿಂದ ಬಾಕಿ ಉಳಿದಿವೆ. ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸದ ಕಾರಣ ರೈತರ ಸಮಸ್ಯೆಗಳು ಕಡತಗಳಲ್ಲೇ ಸಿಲುಕಿ ಪರಿಹಾರ ಕಾಣುತ್ತಿಲ್ಲ ಎಂದು ದೂರಿದರು.

ಇಂದಿನ ಮಾರುಕಟ್ಟೆ ಮೌಲ್ಯದ ಪ್ರಕಾರ ಎಕರೆಗೆ 50ರಿಂದ 60 ಲಕ್ಷ ರೂ. ಬೆಲೆ ಬಾಳುವ ಕೃಷಿ ಭೂಮಿಗೆ ಕೇವಲ 25ರಿಂದ 30 ಲಕ್ಷ ರೂ. ಪರಿಹಾರ ನಿಗದಿಪಡಿಸಲಾಗುತ್ತಿದ್ದು, ಇದರಿಂದ ರೈತರಿಗೆ ಭಾರೀ ಆರ್ಥಿಕ ನಷ್ಟ ಉಂಟಾಗುತ್ತಿದೆ. ಭೂಸ್ವಾಧೀನಕ್ಕೆ ಸಂಬಂಧಿಸಿದ ಎಲ್ಲಾ ಬಾಕಿ ಪ್ರಕರಣಗಳ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು. ಹಿರಿಯ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ರೈತರ ಅಹವಾಲುಗಳನ್ನು ಆಲಿಸಿ ತ್ವರಿತ ಪರಿಹಾರ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ನಾಗರಬೆಟ್ಟ ಏತ ನೀರಾವರಿ ಯೋಜನೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಬಾಕಿ ಉಳಿದ ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಬೇಕು. ಆಗಸ್ಟ್ ತಿಂಗಳೊಳಗೆ ಮುಖ್ಯ ಕಾಲುವೆಗೆ ನೀರು ಹರಿಸುವ ವ್ಯವಸ್ಥೆ ಮಾಡಬೇಕು. ಬಾಕಿ ಇರುವ ಪರ್ಯಾಯ ಭೂಮಿ ಪ್ರಕರಣಗಳನ್ನು ಮೂರು ತಿಂಗಳೊಳಗೆ ಇತ್ಯರ್ಥಗೊಳಿಸಿ, ಯೋಜನಾ ನಿರಾಶ್ರಿತರಿಗೆ ಶೇ.15ರಷ್ಟು ಉದ್ಯೋಗ ಮೀಸಲಾತಿ ಹಾಗೂ ನಿರುದ್ಯೋಗಿ ರೈತಕುಟುಂಬಗಳ ಮಕ್ಕಳಿಗೆ ಮಾಸಿಕ ಭತ್ಯೆ ನೀಡುವ ಯೋಜನೆ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಪುನರ್ವಸತಿ ಮತ್ತು ಪುನರ್ ನಿರ್ಮಾಣದ ವಿಶೇಷ ಜಿಲ್ಲಾಧಿಕಾರಿ ಮಾರುತಿ ಬ್ಯಾಕೋಡ, ಕೆಬಿಜೆಎನ್‌ಎಲ್ ಎಂಡಿ ಕಚೇರಿಯ ತಾಂತ್ರಿಕ ಅಭಿಯಂತರ ವಿ.ಆರ್.ಹಿರೇಗೌಡರ, ಮುಖ್ಯ ಅಭಿಯಂತರ ಡಿ.ಬಸವರಾಜ, ಉಪವಿಭಾಗಾಧಿಕಾರಿ ಗುರುನಾಥ ದಡ್ಡೆ, ತಹಶೀಲ್ದಾರ್ ಎ.ಡಿ.ಅಮರಾವದಗಿ, ಎಸ್‌ಎಲ್‌ಒ ನಾಗರಾಣ, ಸೇರಿದಂತೆ ನಾನಾ ಅಧಿಕಾರಿಗಳು ಗಂಟೆಗಟ್ಟಲೆ ಕುಳಿತು ಪ್ರತಿಭಟನಾಕಾರರ ಅಹವಾಲು ಆಲಿಸಿದರು. ಬೇಡಿಕೆ ಈಡೇರಿಸುವ ಕುರಿತು ಅಧಿಕಾರಿಗಳು ಭರವಸೆ ನೀಡಿದರು.

ಚಿಮ್ಮಲಗಿಯ ಅರಳೆಲೆ ಕಟ್ಟಿಮನಿ ಹಿರೇಮಠದ ಸಿದ್ಧರೇಣುಕ ಶ್ರೀಗಳು ಸಾನ್ನಿಧ್ಯ ವಹಿಸಿ ಮಾತನಾಡಿದರು. ತಾಲೂಕಾಧ್ಯಕ್ಷ ಸೀತಪ್ಪ ಗಣಿ, ಉಪಾಧ್ಯಕ್ಷ ಸಾಬಣ್ಣ ಅಂಗಡಿ, ಗೌರವಧ್ಯಕ್ಷ ರವೀಂದ್ರ ಕೋತಿನ, ಕೆ.ಎಂ.ಬಿರಾದಾರ ಗುಡ್ನಾಳ, ರಾಮನಗೌಡ ಪಾಟೀಲ, ದಯಾನಂದ ಕೋಳಿ, ಹನುಮೇಶ ಜಮಖಂಡಿ, ಶಶಿಕಾಂತ ಪಾಟೀಲ, ಸೋಮು ಬಿರಾದಾರ, ಇತರರಿದ್ದರು. ಪೊಲೀಸ್ ಇಲಾಖೆ ಅಗತ್ಯ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ನಿಗದಿತ ದರದಲ್ಲಿ ರಸಗೊಬ್ಬರ ಪೂರೈಸಿ

ಚಡಚಣ: ರೈತರಿಗೆ ಸರ್ಕಾರ ನಿಗದಿಪಡಿಸಿದ ದರದಲ್ಲಿ ರಸಗೊಬ್ಬರ ಪೂರೈಸುವಂತೆ ಹಾಗೂ ಹೆಚ್ಚಿನ ದರಕ್ಕೆ ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಚಡಚಣ ತಾಲೂಕಿನ ಹಾಗೂ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಮುಖಂಡರು ಚಡಚಣ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು. ಮನವಿಯಲ್ಲಿ ಪ್ರಸ್ತುತ ಮಳೆಗಾಲ ಆರಂಭವಾಗಿರುವಹಿನ್ನೆಲೆಯಲ್ಲಿರೈತರುಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಯೂರಿಯಾ, ಡಿಎಪಿ ಸೇರಿದಂತೆ ವಿವಿಧ ರಸಗೊಬ್ಬರಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಕೆಲ ಖಾಸಗಿ ಮಾರಾಟಗಾರರು ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಲಾಗಿದೆ.

ಇದರಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದು, ಕೃಷಿ ವೆಚ್ಚ ಹೆಚ್ಚಾಗುತ್ತಿದೆ. ರೈತರಿಗೆ ಅಗತ್ಯವಿರುವ ರಸಗೊಬ್ಬರಗಳು ಸಹಕಾರ ಸಂಘಗಳು ಹಾಗೂ ಅಧಿಕೃತ ಮಾರಾಟ ಕೇಂದ್ರಗಳಲ್ಲಿ ಸಮರ್ಪಕ ಪ್ರಮಾಣದಲ್ಲಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು. ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ರಸಗೊಬ್ಬರ ಮಾರಾಟ ಮಾಡುವ ವ್ಯಾಪಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಿ, ಅಗತ್ಯವಿದ್ದರೆ ಅವರ ಪರವಾನಗಿ ರದ್ದುಪಡಿಸಬೇಕು ಎಂದು ಒತ್ತಾಯಿಸಲಾಗಿದೆ.

ಕೆಆರ್‌ಎಸ್ ಪಕ್ಷದ ತಾಲೂಕು ಅಧ್ಯಕ್ಷ ನಾಗೇಶ ಸರಸಂಬಿ ಮಾತನಾಡಿ, ರೈತರು ದೇಶದ ಬೆನ್ನೆಲುಬು. ಬಿತ್ತನೆ ಸಮಯದಲ್ಲಿ ರಸಗೊಬ್ಬರ ಕೊರತೆ ಹಾಗೂ ಹೆಚ್ಚುವರಿ ದರ ವಸೂಲಿಯಿಂದ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ರೈತರಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು.

ಕೆಆರ್‌ಎಸ್ ಪಕ್ಷದ ಚಡಚಣ ತಾಲೂಕು ಅಧ್ಯಕ್ಷ ನಾಗೇಶ ಸರಸಂಬಿ, ತಾಲೂಕು ಉಪಾಧ್ಯಕ್ಷ ರಮಜಾನ್ ಕೊಂಕಣಿ, ತಾಲೂಕು ಪ್ರಧಾನ ಕಾರ್ಯದರ್ಶಿ ಅಮಸಿದ್ದ ತೊಳೆ, ನಗರ ಘಟಕ ಅಧ್ಯಕ್ಷ ಅಣ್ಣ ಪೂಜಾರಿ, ರಾಯಗೊಂಡ ಕೋಳಿ, ಸುನೀಲ ತೊಳೆ, ನಿಂಗಪ್ಪ ಶಿವಶರಣ, ಗೌರೇಶ ಖಿಡ್ಡೆ, ಮಲ್ಲಿಕಾರ್ಜುನ ಕಾಂಬಳೆ ಸೇರಿದಂತೆ ಕಾರ್ಯಕರ್ತರು, ರೈತರು ಇದ್ದರು.



ಸಮಾಜದ ಬದಲಾವಣೆಗೆ ಶಿಕ್ಷಕರ ಪಾತ್ರ ಹಿರಿದು

ಮುದ್ದೇಬಿಹಾಳ: ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು, ಮಗುವಿನ ಜ್ಞಾನದ ಬೆಳಕಿಗೆ ಶಿಕ್ಷಕರು ಅಡಿಪಾಯ ಹಾಕುತ್ತಾರೆ. ಶಿಕ್ಷಕರು ಮನಸ್ಸು ಮಾಡಿದರೆ ಸಮಾಜದಲ್ಲಿ ದೊಡ್ಡ ಬದಲಾವಣೆ ತರಲು ಸಾಧ್ಯ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯ ಅಧ್ಯಕ್ಷ ಹಾಗೂ ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಹೇಳಿದರು.

ತಾಲೂಕಿನ ಚವನಭಾವಿ ಗ್ರಾಮದ ರೇವಣಸಿದ್ದೇಶ್ವರ ವಿದ್ಯಾಪೀಠದಲ್ಲಿ ಭಾನುವಾರ ಆಯೋಜಿಸಿದ್ದ ಜಟ್ಟಗಿ ಎಲ್.ಟಿ.ತಾಂಡದ ಸರ್ಕಾರಿ ಶಾಲೆಯ ನಿವೃತ್ತ ಮುಖ್ಯಗುರು ವೈ.ಎಲ್.ನಾಯ್ಕೋಡಿ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಬದುಕಿನಲ್ಲಿ ಬಡವರಿಗೆ ಸಹಾಯ ಮಾಡುವುದೇ ನಿಜವಾದ ಶ್ರೀಮಂತಿಕೆ. ವೈ.ಎಲ್.ನಾಯ್ಕೋಡಿ ಅವರು ಕೇವಲ ಶಿಕ್ಷಕರಾಗಿ ಕೆಲಸ ಮಾಡಿದ್ದಲ್ಲದೆ, ಇಡೀ ಗ್ರಾಮದ ಅಭಿವೃದ್ಧಿ ಕಾರ್ಯಗಳಲ್ಲೂ ಸಕ್ರಿಯರಾಗಿದ್ದರು. ಅವರ ನಿಷ್ಕಲ್ಮಶ ಸೇವೆ ಮತ್ತು ಬದ್ಧತೆಯ ಕಾರಣದಿಂದಲೇ ಇಂದು ಸುತ್ತಮುತ್ತಲಿನ ಗ್ರಾಮಸ್ಥರು ಅವರಿಗೆ ಇಂತಹ ಅಭೂತಪೂರ್ವ ಗೌರವ ನೀಡುತ್ತಿದ್ದಾರೆ ಎಂದು ಬಣ್ಣಿಸಿದರು.

ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಎಸ್.ತುರಡಗಿ ಮಾತನಾಡಿ, ಶಿಕ್ಷಕ ವೃತ್ತಿ ಇತರ ಎಲ್ಲರ ನೌಕರರಿಗಿಂತಲೂ ಭಿನ್ನವಾದದ್ದು, ಅತ್ಯಂತ ಪವಿತ್ರವಾದ ವೃತ್ತಿಯಾಗಿದೆ. ಮಗುವಿನ ಭವಿಷ್ಯವನ್ನು ರೂಪಿಸುವ ಹೊಣೆ ಶಿಕ್ಷಕರ ಮೇಲಿದೆ. ನಾಯ್ಕೋಡಿ ಅವರು ತಮ್ಮ 28 ವರ್ಷಗಳ ಸುದೀರ್ಘ ಸೇವೆಯನ್ನು ಯಾವುದೇ ಕಪ್ಪುಚುಕ್ಕೆ ಇಲ್ಲದೆ ಪೂರೈಸಿರುವುದು ನಮಗೆಲ್ಲರಿಗೂ ಮಾದರಿ ಎಂದರು.

ಸಾನ್ನಿಧ್ಯ ವಹಿಸಿದ್ದ ಮೃತ್ಯುಂಜಯ ಗುರುವಿನ ಮಾತನಾಡಿದರು. ಶ್ರೀಶೈಲ ಗುರುವಿನ, ಬಳಬಟ್ಟಿ ಮುಖ್ಯ ಶಿಕ್ಷಕಿ ಸವಿತಾ ಒಡೆಯರ, ಮಾಜಿ ಜಿಲ್ಲಾ ಸದಸ್ಯ ನಿಂಗಪ್ಪಗೌಡ ಬಪ್ಪರಗಿ,ಮಾಜಿ ತಾಪಂ ಸದಸ್ಯ ಚಂದ್ರಕಲಾ ಲೊಟಗೇರಿ,ಮುತ್ತಣ್ಣ ಹುಂಡೆಕಾರ, ಮಾಜಿ ಶಿಕ್ಷಕರ ಸಂಘದ ಅಧ್ಯಕ್ಷ ಎಸ್.ಎಸ್.ಬಾಣಿ, ಮಾಜಿ ಡಿಡಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಪಾಟೀಲ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಜಗದೀಶ್ ಪಂಪಣ್ಣವರ, ಬಿಜೆಪಿ ಯುವ ಮುಖಂಡ ಸಂಗಮೇಶ ಗುಂಡಕನಾಳ, ನ್ಯಾಯವಾದಿಗಳಾದ ಎಸ್.ಎಚ್.ಲೊಟಗೇರಿ, ಎಂ.ಡಿ.ಕುಂಬಾರ, ರೇವಣಸಿದ್ದೇಶ್ವರ ಪ್ರೌಢಶಾಲೆಯ ಅಧ್ಯಕ್ಷ ವಿನಯ ಗುರುವಿನ, ಪ್ರಕಾಶ್ ಗುಜ್ಜಲ, ಜಿ.ಹೆಚ್. ಗೌರೋಜಿ, ನೀಲಮ್ಮ ನಾಯ್ಕೋಡಿ, ಶಿವಲಿಂಗೇಶ ಗುಂಡಕನಾಳ, ಜುಮ್ಮಣ್ಣ ಸೋಮನಾಳ ಉಪಸ್ಥಿತರಿದ್ದರು.



ಹದಗೆಟ್ಟಿರುವ ರಸ್ತೆ ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ: ಮನಗೂಳಿ

ಸಿಂದಗಿ: ಸಿಂದಗಿ ಜನತೆಗೆ ಮೂಲಭೂತ ಸೌಕರ್ಯ ಪ್ರಾಮಾಣಿಕವಾಗಿ ಒದಗಿಸುವ ಕಾರ್ಯದಲ್ಲಿ ಕಾರ್ಯಪ್ರವೃತ್ತನಾಗಿದ್ದೇನೆ. ಜೊತೆಗೆ ರೂ.25 ಕೋಟಿ ವೆಚ್ಚದ 43 ರಸ್ತೆ ಕಾಮಗಾರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅದು ಸಹ ಮಂಜೂರು ಹಂತದಲ್ಲಿದೆ. ಇನ್ನು ಒಂದೆ ತಿಂಗಳಲ್ಲಿ ಮಂಜೂರು ಮಾಡಿಸಿ ನಗರದಲ್ಲಿ ಹದಗೆಟ್ಟಿರುವ ರಸ್ತೆಗಳನ್ನು ಸರಿಪಡಿಸುವ ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ನಗರದ ಬಸವ ಮಂಟಪದ ಬಳಿ ನಗರಸಭೆ ವತಿಯಿಂದ 2025-26ನೆಯ ಸಾಲಿನ ಮುಖ್ಯಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆ ಅಡಿಯಲ್ಲಿ ರೂ.30ಲಕ್ಷದ ಅನುದಾನದ ರಸ್ತೆ ಅಭಿವೃದ್ಧಿ ಪಡಿಸುವ ಭೂಮಿಪೂಜೆಯನ್ನು ನೇರವೇರಿಸಿ ಮಾತನಾಡಿದ ಅವರು, ಸಿಂದಗಿ ನಗರಕ್ಕೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 34 ರಸ್ತೆಗಳು ಮಂಜೂರಾಗಿವೆ. 34ರಲ್ಲಿ ಮೊದಲಿಗೆ 21ನೇ ವಾರ್ಡನಿಂದಲೇ ಪ್ರಾರಂಭೋತ್ಸವ ಮಾಡಲಾಗಿದೆ ಎಂದರು.

ವಾರ್ಡ್‌ಗಳಲ್ಲಿ ಶಾಸಕರು ಸಭೆ ಮಾಡಿ ಸಮಸ್ಯೆಗಳನ್ನು ಆಲಿಸಿ ಸರಿಪಡಿಸುವಂತೆ ಶಾಸಕರೇ ಸೂಚಿಸಿದರು. ನಗರಸಭೆ ಅಧಿಕಾರಿಗಳು ಮಾತ್ರ ಸೂಚನೆ ಪಾಲನೆ ಮಾಡುತ್ತಿಲ್ಲ. ನಗರಸಭೆ ಅಧಿಕಾರಿಗಳು ಮಾತ್ರ ನಿರ್ಲಕ್ಷ್ಯ ವಹಿಸುತ್ತಾರೆ ಎಂದು ಸ್ಥಳಿಯ ನಿವಾಸಿ ನಾಗರಾಜ ಬಿರಾದಾರ ಶಾಸಕರಿಗೆ ತಿಳಿಸಿದರು.



ನಗರಸಭೆ ಪೌರಾಯುಕ್ತ ರವಿ ಶಿರಗುಪ್ಪಿ, ಅಜರ್ ನಾಟೀಕಾರ, ಯೋಜನಾ ಪ್ರಾಧಿಕಾರ ಅಧ್ಯಕ್ಷ ಹಣಮಂತ ಸುಣಗಾರ, ಸಾಯಬಣ್ಣ ಪುರದಾಳ, ಅಂಬರೀಶ ಚೌಗಲೆ, ಸುನಂದಾ ಯಂಪುರೆ, ಹಾಂಸಿಪೀರ ಆಳಂದ, ನೂರಅಹ್ಮದ ಅತ್ತಾರ, ಶಾಂತೂ ರಾಣಾಗೋಳ, ಜಯಶ್ರೀ ಹದನೂರ, ಶಶಿಕಲಾ ಅಂಗಡಿ, ರವಿ ನಾವಿ, ಎ.ಎ.ಮುಲ್ಲಾ ಸೇರಿದಂತೆ ಇಲಾಖೆಯ ಸಿಬ್ಬಂದಿಗಳು, ಪಕ್ಷದ ಕಾರ್ಯಕರ್ತರು ಹಾಗೂ ನಿವಾಸಿಗಳು ಇದ್ದರು.

ಶಿವಾನಂದ ಪಾಟೀಲಗೆ ಸಚಿವ ಸ್ಥಾನ ನೀಡಲು ಒತ್ತಾಯ

ಬಸವನಬಾಗೇವಾಡಿ: ಅಭಿವೃದ್ಧಿ ಪರ ಕೆಲಸ ಮಾಡುವಂತಹ ಬಸವನಬಾಗೇವಾಡಿ ಕ್ಷೇತ್ರದ ಶಾಸಕ ಶಿವಾನಂದ ಪಾಟೀಲಗೆ ಸಚಿವ ಸ್ಥಾನ ನೀಡುವಂತೆ ಜಿಪಂ ಮಾಜಿ ಸದಸ್ಯ ಕಲ್ಲು ದೇಸಾಯಿ ಒತ್ತಾಯಿಸಿದರು.

ಪಟ್ಟಣದ ಬಸವೇಶ್ವರ ದೇವಾಲಯದ ಆವರಣದಲ್ಲಿ ಶಾಸಕ ಶಿವಾನಂದ ಪಾಟೀಲ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಕೊಲ್ಹಾರ ಹಾಗೂ ಬಸವನಬಾಗೇವಾಡಿ ಬ್ಲಾಕ್ ಘಟಕದಿಂದ ಹಮ್ಮಿಕೊಂಡಿದ್ದ ಹಕ್ಕೋತ್ತಾಯ ಸಭೆಯಲ್ಲಿ ಮಾತನಾಡಿದರು.



ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಈರಣ್ಣ ಪಟ್ಟಣಶೆಟ್ಟಿ ಮಾತನಾಡಿ, ರಾಜ್ಯದಲ್ಲಿಯೇ ಜಾತ್ಯಾತೀತ ನಾಯಕರಾಗಿರುವಂತಹ ಶಾಸಕ ಶಿವಾನಂದ ಪಾಟೀಲರು ತಮ್ಮ ರಾಜಕೀಯ ಜೀವನದಲ್ಲಿ ಬರಿ ಅಭಿವೃದ್ಧಿ ಪರ ಕಾರ್ಯಗಳನ್ನು ಮಾಡುತ್ತಾ ರಾಜ್ಯ ರಾಜಕೀಯದಲ್ಲಿ ಗುರುತಿಸಿಕೊಂಡಿರುವ ಅವರಿಗೆ ಸಚಿವ ಸ್ಥಾನ ನೀಡಬೇಕೆಂದರು.

ಕೆಪಿಸಿಸಿ ರಾಜ್ಯ ಸಂಯೋಜಕ ಸಂಗಮೇಶ ಓಲೇಕಾರ, ಡಿಸಿಸಿ ಬ್ಯಾಂಕ್ ನಿರ್ದೇಶಕ ಚಂದ್ರಶೇಖರಗೌಡ ಪಾಟೀಲ, ಪ್ರಚಾರ ಸಮಿತಿ ಅಧ್ಯಕ್ಷ ಶಂಕರಗೌಡ ಬಿರಾದಾರ, ಸುರೇಶಗೌಡ ಪಾಟೀಲ, ಎಸ್‌ಸಿ, ಎಸ್‌ಟಿ ಘಟಕದ ಅಧ್ಯಕ್ಷ ಪರಶುರಾಮ ಜಮಖಂಡಿ, ಅಭಿಮಾನಿ ಬಳಗದ ಸಂಘದ ಅಧ್ಯಕ್ಷ ತಾನಾಜಿ ನಾಗರಾಳ, ಪುರಸಭೆ ಮಾಜಿ ಅಧಕ್ಷ ಸಂಜೀವ ಕಲ್ಯಾಣಿ, ಜಗದೇವಿ ಗುಂಡಳ್ಳಿ, ಎಸ್.ಎಸ್.ಬೀಳಗಿ, ಅಶೋಕ ಚಲವಾದಿ, ಭಾಗ್ಯರಾಜ ಸೊನ್ನದ, ಶಿವಾನಂದ ಲಗಟಗೇರಿ, ಕೊಲ್ಹಾರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಫೀಕ ಪಕಾಲಿ, ಗ್ಯಾರಂಟಿ ಯೋಜನೆ ಅಧ್ಯಕ್ಷ ಮಹಿಬೂಬ ನಾಯಕೋಡಿ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ಶಂಕರಗೌಡ ಪಾಟೀಲ, ರಾಜುಗೌಡ ಪಾಟೀಲ, ಬಸವರಾಜ ಗೊಳಸಂಗಿ, ಮಹಿಳಾ ಬ್ಲಾಕ್ ಘಟಕದ ಅಧ್ಯಕ್ಷೆ ರುಕ್ಮಿಣಿ ರಾಠೋಡ, ಶೇಖರ ದಳವಾಯಿ, ರವಿ ರಾಠೋಡ, ಡಾ.ಬಸವರಾಜ ಕೋಟಿ, ಹರೀಶ ಅಗರವಾಲ, ಭರತ ಅಗರವಾಲ, ಶೇಖರ ಗೊಳಸಂಗಿ, ರಿಹಾನ್ ಕೆರೂರ, ಟಿಎಪಿಎಂಎಸ್ ಅಧ್ಯಕ್ಷ ಶೇಖರ ಗೌಡ ಪಾಟೀಲ, ಸಂಗಮೇಶ ಬಳಗಾರ ಇದ್ದರು.

ವಕೀಲ ಖಾದ್ರಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮನವಿ

ವಿಜಯಪುರ: ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿಸುತ್ತಿರುವ ವಕೀಲ ಸೈಯದ್ ಆಸೀಫ್ ಉಲ್ಲಾ ಸೈಯದ್ ಖಾದರ್ ಭಾಷಾ ಖಾದ್ರಿ ಮೇಲೆ ಪ್ರಕರಣ ದಾಖಲಿಸಿ, ಬಂಧಿಸಿ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳುವಂತೆ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬೆಂಬಲಿಗರು ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ್ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು.



ವಿಜಯಪುರದ ವಕೀಲ ಸೈಯದ್ ಆಸೀಫ್ ಉಲ್ಲಾ ಸೈಯದ್ ಖಾದರ್ ಭಾಷಾ ಖಾದ್ರಿ ಎಂಬಾತ ಜನಪ್ರತಿನಿಧಿಯಾದ ಬಸನಗೌಡ ಪಾಟೀಲ ಯತ್ನಾಳರ ಬಗ್ಗೆ ಪದೇ ಪದೇ ಅತ್ಯಂತ ಕೀಳು ಮಟ್ಟದ ಅವಾಚ್ಯ ಶಬ್ದಗಳನ್ನು ಬಳಸಿ ಏಕವಚನದಲ್ಲಿ ಅವಹೇಳನಕಾರಿ ಮಾತನಾಡಿದ್ದು, ಎಲ್ಲ ಕಡೆ ವೈರಲ್ ಆಗಿದೆ. ಇದರಿಂದ ರಾಜ್ಯಮಟ್ಟದಲ್ಲಿ ಬಸನಗೌಡ ಪಾಟೀಲ ಯತ್ನಾಳರ ಹೆಸರಿಗೆ ಕಳಂಕವನ್ನು ಸತತವಾಗಿ ತರುತ್ತಿದ್ದಾನೆ. ಈಗಾಗಲೇ ಇತನ ವಿರುದ್ಧದ ದಲಿತ ಮಹಿಳೆ ಮೇಲೆ ಹಲ್ಲೆ ಹಾಗೂ ಕಿರುಕುಳ ನೀಡಿದ ಪ್ರಕರಣ, ಕೋರ್ಟ ಆವರಣದಲ್ಲಿಯೇ ಪೊಲೀಸ್ ಅಧಿಕಾರಿ ಮೇಲೆ ಹಲ್ಲೆ ನಡೆಸಿದ ಪ್ರಕರಣ, ಮಹಾನಗರ ಪಾಲಿಕೆ ಸದಸ್ಯೆಯ ಪತಿಯ ಹತ್ಯೆ ಪ್ರಕರಣ, ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಮಹಾನಗರ ಪಾಲಿಕೆ ಆಯುಕ್ತರ ಬಗ್ಗೆ ಕೆಟ್ಟ ಪದ ಬಳಸಿ ನಿಂಧಿಸಿದ ಪ್ರಕರಣ ಸೇರಿದಂತೆ ಹಲವಾರು ಪ್ರಕರಣಗಳಲ್ಲಿ ಭಾಗಿಯಾಗಿ ರೌಡಿಶೀಟರ್ ನಿಂದಾಗಿ ಗಡಿಪಾರು ಶಿಕ್ಷೆಗೆ ಒಳಗಾಗಿರುವ ವ್ಯಕ್ತಿ ಆಗಿದ್ದಾನೆ. ಸಮಾಜದಲ್ಲಿ ಗಲಭೆ ಸೃಷ್ಟಿಸಿ ಅಶಾಂತಿ ನಿರ್ಮಾಣ ಮಾಡುವ ದುರುದ್ದೇಶ ಹೊಂದಿದ್ದಾನೆ. ಅದಕ್ಕೆ ಅವಕಾಶ ಕಲ್ಪಿಸಬಾರದು. ಕೂಡಲೇ ಈತನ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದರು.

ವಿಕ್ರಮ ಗಾಯಕವಾಡ, ಬಾಬು ಶಿರಶ್ಯಾಡ, ಸುನೀಲ ಬೈರವಾಡಗಿ, ಅಶೋಕ ಬೆಲ್ಲದ, ಕಿರಣ ಕಾಳೆ, ಲಕ್ಷ್ಮಣ ಜಾಧವ, ಯುವರಾಜ ಚೋಳಕೆ, ರಮೇಶ ಪಡಸಲಗಿ, ಸಂಜು ಭೋಸಲೆ, ಶಿವಾನಂದ ಸಿಂದಗಿ, ಸುರೇಶ ಚವ್ಹಾಣ, ಗುಂಡೇಶ್ವರ ಹಳಕಟ್ಟಿ, ಪ್ರದೀಪ ಕಲ್ಯಾಣಶೆಟ್ಟಿ, ಪ್ರಸಾದ ಶಿವಸಿಂಪಿ,

ಜೂ.11, 12ರಂದು ಸಮಾವೇಶ

ವಿಜಯಪುರ: ನಗರದ ರಿಂಗ್ ರಸ್ತೆಯ ಚಿದಂಬರೇಶ್ವರ ಸಾಂಸ್ಕೃತಿಕ ಭವನದಲ್ಲಿ ಜೂ.11, 12ರಂದು ಸಮಸ್ತ ಬ್ರಾಹ್ಮಣ ಸಂಘಟನೆ, ಚಿದಂಬರ ಸೇವಾ ಸಮಿತಿ, ಮಂಗಳಸೂತ್ರ ಫೌಂಡೇಶನ್ ಆಶ್ರಯದಲ್ಲಿ 68ನೇ ರಾಜ್ಯಮಟ್ಟದ ತ್ರಿಮತಸ್ಥ ಬ್ರಾಹ್ಮಣ ವಧು-ವರಾನ್ವೇಷಣಾ ಸಮಾವೇಶ ಹಮ್ಮಿಕೊಂಡ ಹಿನ್ನೆಲೆ ರಾಜ್ಯ ಮಟ್ಟದ ತ್ರಿಮತಸ್ಥ ಬ್ರಾಹ್ಮಣ ವಧು-ವರ ಅನ್ವೇಷಣಾ ಸಮಾವೇಶದ ಬ್ಯಾನರ್ ಅನ್ನು ಅನಾವರಣಗೊಳಿಸಲಾಯಿತು.

ಅಂದು ಎರಡು ದಿನ ಕಾಲ ನಡೆಯುವ ಕಾರ್ಯಕ್ರಮದಲ್ಲಿ ಕಲ್ಯಾಣ ಪ್ರಾಪ್ತಿಗಾಗಿ ಗಿರಿಜಾ ಕಲ್ಯಾಣೋತ್ಸವ ಮಹಾಸಂಕಲ್ಪ ಕಾರ್ಯಕ್ರಮವನ್ನು ಸಹ ಆಯೋಜಿಸಲಾಗಿದೆ. ಚಿದಂಬರ ಸೇವಾ ಸಮಿತಿ ಅಧ್ಯಕ್ಷ ಲಕ್ಷ್ಮಿಕಾಂತ್ ಕುಲಕರ್ಣಿ, ವೆಂಕಟೇಶ ಜೋಶಿ, ಡಾ.ವಿ.ಶ್ರೀನಿವಾಸನ್ ಗುರೂಜಿ (ಬೆಂಗಳೂರು), ಶಂಕರ ಭಟ್ಟ ಜೋಶಿ, ಪ್ರಕಾಶ್ ಅಕ್ಕಲಕೋಟ, ಸುಧೀರ್ ಕುಲಕರ್ಣಿ, ವಿಜಯ ಜೋಶಿ, ಗೋವಿಂದ ದೇಶಪಾಂಡೆ, ಆನಂದ ಕುಲಕರ್ಣಿ, ಕೃಷ್ಣ ಕುಲಕರ್ಣಿ, ದತ್ತಾತ್ರೇಯ ಜೋಶಿ ಹಾಗೂ ಸಂಚಾಲಕ ಶ್ರೀನಿವಾಸ ಭಾರದ್ವಾಜ್ (ಮೈಸೂರು) ಸೇರಿದಂತೆ ಇದ್ದರು.



ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆ ಅಪಾರ

ವಿಜಯಪುರ: ನಾಲ್ವಡಿ ಕೃಷ್ಣರಾಜ ಒಡೆಯರ್ ಅವರೊಬ್ಬ ದೂರದೃಷ್ಟಿಯ ಆಡಳಿತಗಾರರಾಗಿ ನಮಗೆ ದೊರೆತಿದ್ದು ನಮ್ಮ ನಾಡಿನ ಸೌಭಾಗ್ಯ ನಾಡಿನ ಅಭಿವೃದ್ಧಿಯಲ್ಲಿ ಅವರ ಕೊಡುಗೆ ಅಪಾರ ಎಂದು ಖ್ಯಾತ ವೈದ್ಯ ಡಾ.ದೀಪಮಾಲಾ ಪಾಟೀಲ ಹೇಳಿದರು.



ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಲ್ಲಿ ಹಾಗೂ ಕನ್ನಡದ ನೆಲ, ಜಲ, ಭಾಷೆ ಉಳಿಸುವ ನಿಟ್ಟಿನಲ್ಲಿ ಅಹರ್ನಿಶಿ ದುಡಿದ ಒಬ್ಬ ಮಹಾನ್ ಮೇಧಾವಿಯಾಗಿದ್ದರು ಎಂದರು.

ಬಸವನಬಾಗೇವಾಡಿ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನ್ಯಾ.ವಿ.ಬಿ.ಮರ್ತೂರ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ. ಇಂತಹ ಸಂಸ್ಥೆ ಹುಟ್ಟುಹಾಕುವಲ್ಲಿ ಶ್ರಮಿಸಿದ ಮಹಾನ್ ಆಡಳಿತಗಾರ ಕೃಷ್ಣರಾಜ ಒಡೆಯರಾಗಿದ್ದರು ಎಂದರು.

ಕಸಾಪ ತಾಲೂಕು ಅಧ್ಯಕ್ಷ ಡಾ.ಆನಂದ ಕುಲಕರ್ಣಿ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ದೂರದೃಷ್ಟಿ ಹೊಂದಿದ್ದು, ಶಿಕ್ಷಣ, ಕೃಷಿ, ಸಾಹಿತ್ಯ ಮತ್ತು ಸಂಸ್ಕೃತಿ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅವರ ದೂರದೃಷ್ಟಿಯ ಕನಸುಗಳು ಪ್ರಸ್ತುತ ಎಂದರು.

ಬಿ.ಎಂ.ಆಜೂರ, ಡಾ. ಶುಭಾಂಗಿಣಿ ಕುಲಕರ್ಣಿ, ಡಾ.ಅನುರಾಧಾ ಕಂಗೋಣಿ, ಪ್ರತಿಭಾ ಪಾಟೀಲ, ಶಕುಂತಲಾ ಹಿರೇಮಠ, ಡಾ.ರಾಜಕುಮಾರ ಜೊಲ್ಲೆ, ಡಾ.ರೇಖಾ ಪಾಟೀಲ, ಆರ್.ಜಿ.ಅಳ್ಳಗಿ, ಡಾ.ಜಿ.ಡಿ.ಕೊಟ್ನಾಳ, ರಜಿಯಾಬೇಗಂ ಕೊಟ್ನಾಳ, ನಿಂಗಪ್ಪ ಬೊಮ್ಮನಹಳ್ಳಿ, ಈರಪ್ಪ ಸರೂರ, ಆನಂದ ಕೆಂಭಾವಿ, ವಿಜಯಾ ಬಿರಾದಾರ, ಸಿದ್ರಾಮಯ್ಯ ಲಕ್ಕುಂಡಿಮಠ, ಗೌರವಕಾರ್ಯದರ್ಶಿ ಡಾ.ಮಾಧವ ಗುಡಿ, ಶಶಿಕಲಾ ನಾಯ್ಕೋಡಿ, ಶಿಲ್ಪಾ ಭಸ್ಮೆ, ಜಯಶ್ರೀ ಹಿರೇಮಠ, ಶೆಟ್ಟೆವ್ವ ಹರಿಜನ, ಮುತ್ತವ್ವ ಹರಿಜನ, ಮಹಾನಂದಾ ಕಾಂಬಳೆ, ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ಬಸವರಾಜ ಇಜೇರಿ, ಬಸವರಾಜ ಬಿರಾದಾರ, ಜಿ.ಎಸ್.ಬಳ್ಳೂರ, ಅರ್ಜುನ ಶಿರೂರ, ಶಾಂತಾ ವಿಭೂತಿ, ಪ್ರದೀಪ ನಾಯ್ಕೋಡಿ, ವಿಜಯಲಕ್ಷ್ಮೀ ಹಳಕಟ್ಟಿ, ಶ್ರೀಕಾಂತ ನಾಡಗೌಡ, ಕೆ.ಎಸ್.ಹಣಮಾಣಿ, ಮಲ್ಲಿಕಾರ್ಜುನ ಕೆಳಗಡೆ, ಮಹಾದೇವ ಮೋಪಗಾರ ಇದ್ದರು.

ಕಿರುಸುದ್ದಿ

ಉಚಿತ ಸಸಿಗಳ ವಿತರಣೆ ಕಾರ್ಯಕ್ರಮ

• **ಮಾನ್ವಿ:** ಪಟ್ಟಣದ ಶ್ರೀರಂಗನಾಥ ಪ್ರೌಢಶಾಲೆಯ ಅವರಣದಲ್ಲಿ ಆರ್‌ವಿಎನ್ ಗ್ರೂಪ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಹಾಗೂ ದಿ.ರಾಜಾ ವಸಂತ ನಾಯಕ ಜನ್ಮದಿನದ ಅಂಗವಾಗಿ ನಡೆದ ಉಚಿತ ಸಸಿಗಳ ವಿತರಣೆ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮವನ್ನು ದಿ.ರಾಜಾ ವಸಂತ ನಾಯಕ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸುವ ಮೂಲಕ ತಾಲೂಕು ಖಾಸಗಿ ಶಾಲೆಗಳ ಒಕ್ಕೂಟದ ಅಧ್ಯಕ್ಷರಾದ ರಾಜಾ ಸುಭಾಷಚಂದ್ರನಾಯಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ದಿ.ರಾಜಾ ವಸಂತ ನಾಯಕರವರು ತಮ್ಮ ಜೀವನವನ್ನು ಸಮಾಜಕ್ಕಾಗಿ ಸಮರ್ಪಿಸಿಕೊಂಡಿದ್ದರು. ಪ್ರತಿ ವಿಶ್ವ ಪರಿಸರ ದಿನಾಚರಣೆಯಂದು ಅವರು ಸಾರ್ವಜನಿಕರಿಗೆ ಉಚಿತವಾಗಿ ಸಸಿಗಳನ್ನು ನೀಡುವ ಮೂಲಕ ಹಸಿರೀಕರಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರು ಎಂದು ತಿಳಿಸಿದರು.ಟಿಎಪಿಸಿಎಂಎಸ್ ಅಧ್ಯಕ್ಷರಾದ ತಿಮ್ಮಾರೆಡ್ಡಿ ಭೋಗಾವತಿ ಮಾತನಾಡಿದರು. ಸಾರ್ವಜನಿಕರಿಗೆ ಉಚಿತವಾಗಿ ಸಾವಿರಾರು ಸಸಿಗಳನ್ನು ವಿತರಣೆ ಮಾಡಲಾಯಿತು.ಮುಸ್ಲಿಂ ಸಮುದಾಯದ ಧರ್ಮಗುರುಗಳಾದ ಸೈಯಾದ್ ಸಜ್ಜಾದ್ ಹುಸೇನಿ ಮಶಾಯಕ್, ಶಿವರಾಜ ನಾಯಕ, ಹರಿಹರಪಾಟೀಲ್, ಮರಿಸ್ವಾಮಿ ರೌಡೂರು, ತನ್ವೀರ್ ಹಾಸನ್, ನೇತಾಜಿ ಶಿಕ್ಷಣಸಂಸ್ಥೆಯ ಅಧ್ಯಕ್ಷರಾದ ಕೆ.ಈ., ನರಸಿಂಹ, ಸೈಯದ್ ಖಾಲಿದ್ ಖಾದ್ರಿ, ನೀಲಪ್ಪ ಜಾನೆಕಲ್, ಚಂದ್ರಶೇಖರ ಕುರ್ಡಿ,ಸುರಾಜ್ ವಕೀಲರು, ಡಾ.ವಸಂತ,ರಾಜಾ ಶಾಮಸುಂದರ್ ನಾಯಕ,ರಾಜಾ ಇಂದ್ರಜೀತ್ ನಾಯಕ, ಲಕ್ಷ್ಮೀದೇವಿ ನಾಯಕ, ಜಿ.ನಾಗರಾಜ, ಸತ್ಯರ ಬಂಗ್ಲೆಯವರ ಇತರರಿದ್ದರು.

ಅಧ್ಯಕ್ಷರಾಗಿ ಬಿ.ರವಿಕುಮಾರ ನೇಮಕ

• **ಸಿಂಧನೂರು:** ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಸ್ಕೃತಿ ಮತ್ತು ಸಾಹಿತ್ಯ ಪರಿಷತ್ತಿನ ರಾಯಚೂರು ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ಬಿ.ರವಿಕುಮಾರ ಸಾಸಲಮರಿ ಅವರನ್ನು ನೇಮಕ ಮಾಡಲಾಗಿದೆ ಎಂದು ಪರಿಷತ್ತಿನ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪರ್ವೀನ್ ಬಾನು ಬುಳ್ಳಣ್ಣನವರ ತಿಳಿಸಿದ್ದಾರೆ.



ಸರ್ಕಾರಿ ನೌಕರರಲ್ಲಿರುವ ವಿವಿಧ ಕಲೆ,ಸಾಹಿತ್ಯವನ್ನು ಅನಾವರಣಗೊಳಿಸುವುದರ ಜೊತೆಗೆ ಕನ್ನಡ ಸಾಹಿತ್ಯವನ್ನು ಇನ್ನಷ್ಟು ಶ್ರೀಮಂತಗೊಳಿಸಿ ಪರಿಷತ್ತನ್ನು ರಾಯಚೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಸಂಘಟಿಸುವ ಕೆಲಸ ಹಾಗೂ ಸಂಸ್ಥೆಯನ್ನು ಉಳಿಸಿ ಬೆಳೆಸುವ ಕೆಲಸ ಮಾಡಬೇಕೆಂದು ತಿಳಿಸಿದ್ದಾರೆ.

ಹಾಗೂ ಕನ್ನಡದ ನಾಡು ನುಡಿಯ ಅಭಿಮಾನವನ್ನು ಹೆಚ್ಚಿಸಿ,ಭಾರತದ ಇತಿಹಾಸ,ಪರಂಪರೆ ಹಾಗೂ ಕಲೆಗಳನ್ನು ಉಳಿಸಿ ಬೆಳೆಸುವುದರ ಜೊತೆ ಪರಿಸರವನ್ನು ಸಂರಕ್ಷಿಸುವ ಕಾಯಕದಲ್ಲಿ ನಿರತರಾಗಬೇಕು ಎಂದು ಪರಿಷತ್‌ನ ರಾಜ್ಯ ಘಟಕದ ಅಧ್ಯಕ್ಷ ರಮಾ ಆರ್. ಹಾಗೂ ಗೌರವಾಧ್ಯಕ್ಷ ಎಲ್.ಎಲ್.ಲಕ್ಕಮ್ಮ ನವರು ಆದೇಶ ಪತ್ರದಲ್ಲಿ ಸೂಚಿಸಿದ್ದಾರೆ.

ಜೂ.10ರಂದು ಉದ್ಯೋಗ, ಶಿಶುಕ್ಷು ಮೇಳ

• **ಬಳ್ಳಾರಿ:** ಇಲ್ಲಿನ ರೇಡಿಯೋ ಪಾರ್ಕ್‌ನಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ವತಿಯಿಂದ ಜೂ.10ರಂದು ಬೆ.10ಕ್ಕೆ ಸಂಸ್ಥೆಯ ಆವರಣದಲ್ಲಿ ಉದ್ಯೋಗ/ಶಿಶುಕ್ಷು ಮೇಳ ಹಮ್ಮಿಕೊಳ್ಳಲಾಗಿದೆ. ಈ ಮೇಳದಲ್ಲಿ ಬಳ್ಳಾರಿ ಜಿಲ್ಲೆಯ ಪ್ರತಿಷ್ಠಿತ ಕೈಗಾರಿಕೆಗಳು ಹಾಗೂ ಬೆಂಗಳೂರಿನ ಪ್ರಮುಖ ಕಂಪನಿಗಳು ಭಾಗವಹಿಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಿವೆ. ಐಟಿಐ ತೇರ್ಗಡೆಯಾದ ಹಾಗೂ ಪ್ರಸಕ್ತ ಸಾಲಿನ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.9741183501 ಸಂಪರ್ಕಿಸಬಹುದಾಗಿದೆ ಎಂದು ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ನಿಧನ ಸುದ್ದಿ

ಶಿವಲಿಂಗಯ್ಯ ಶಿರೂರಮಠ

• **ಕುಕನೂರು:** ದ್ಯಾಂಪುರ ಗ್ರಾಮದ ಸಮಾಜ ಸೇವಕ ಶಿವಲಿಂಗಯ್ಯ ಶಿರೂರಮಠ (60) ಸೋಮವಾರ ಮಧ್ಯಾಹ್ನ ನಿಧನರಾಗಿದ್ದಾರೆ. ಮೃತರು ಪುತ್ರ, ಪುತ್ರಿಯರು ಅಪಾರ ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಬೆಳಗ್ಗೆ 10 ಗಂಟೆಗೆ ಸ್ವಗ್ರಾಮದಲ್ಲಿ ಅಂತ್ಯ ಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.





ಮಾನ್ವಿ: ಪಟ್ಟಣದ ಶ್ರೀರಂಗನಾಥ ಪ್ರೌಢಶಾಲೆಯ ಅವರಣದಲ್ಲಿ ಆರ್‌ವಿಎನ್ ಗ್ರೂಪ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಹಾಗೂ ದಿ.ರಾಜಾ ವಸಂತ ನಾಯಕ ಜನ್ಮದಿನದ ಅಂಗವಾಗಿ ನಡೆದ ಉಚಿತ ಸಸಿಗಳ ವಿತರಣೆ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮವನ್ನು ದಿ.ರಾಜಾ ವಸಂತ ನಾಯಕ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸುವ ಮೂಲಕ ತಾಲೂಕು ಖಾಸಗಿ ಶಾಲೆಗಳ ಒಕ್ಕೂಟದ ಅಧ್ಯಕ್ಷರಾದ ರಾಜಾ ಸುಭಾಷಚಂದ್ರನಾಯಕ ಚಾಲನೆ ನೀಡಿದರು.

ಪತ್ರಿಕಾ ವಿತರಕರ ಸೇವೆಗೆ ಗೌರವ

• **ಹನುಮಸಾಗರ:** ಸಮಾಜಕ್ಕೆ ದಿನನಿತ್ಯದ ಸುದ್ದಿ ಮತ್ತು ಮಾಹಿತಿಯನ್ನು ತಲುಪಿಸುವಲ್ಲಿ ಮಹತ್ವದ ಪಾತ್ರ ವಹಿಸುವ ಪತ್ರಿಕಾ ವಿತರಕರನ್ನು ಗೌರವಿಸುವ ಉದ್ದೇಶದಿಂದ ಪಟ್ಟಣದ ಹಳೆ ಬಸ್ ನಿಲ್ದಾಣದ ಸಮೀಪ ಬೆಂಗಳೂರು ಬೇಕರಿ ಹತ್ತಿರ ಪೆನ್ನು ಹಾಗೂ ನೋಟ್‌ಬುಕ್ ವಿತರಣೆ ಕಾರ್ಯಕ್ರಮ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕ ಪ್ರಭು ಡಿಪೋ ಅವರು ಪತ್ರಿಕಾ ವಿತರಕರಿಗೆ ಪೆನ್ನು ಮತ್ತು ನೋಟ್‌ಬುಕ್ ವಿತರಿಸಿ ಮಾತನಾಡಿ, ಪತ್ರಿಕಾ ವಿತರಕರು ಯಾವುದೇ ಹವಮಾನವನ್ನು ಲೆಕ್ಕಿಸದೆ ಪ್ರತಿದಿನ ಬೆಳಗ್ಗಿನ ಜಾವ ಪತ್ರಿಕೆಗಳನ್ನು ಮನೆ ಮನೆಗೆ ತಲುಪಿಸುವ ಮೂಲಕ ಸಮಾಜದ ಜ್ಞಾನ ವಿಸ್ತರಣೆಗೆ ಕೊಡುಗೆ ನೀಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಶ್ರೀನಿವಾಸ ಜಹಗೀರದಾರ ಮಾತನಾಡಿ,ಪ್ರತಿದಿನ ಬೆಳಗ್ಗಿನ ಜಾವ ಮನೆ ಮನೆಗೆ ಸುದ್ದಿ ತಲುಪಿಸುವ ಪತ್ರಿಕಾ ವಿತರಕರು ಸಮಾಜದ ಜಾಗೃತಿಯ ನಿಜವಾದ ಸೈನಿಕರಾಗಿದ್ದಾರೆ. ಮಳೆ, ಗಾಳಿ, ಚಳಿ ಎನ್ನದೆ ಜನರಿಗೆ ನಿಖರ ಮಾಹಿತಿ ತಲುಪಿಸುವ ಕಾರ್ಯವನ್ನು ಅವರು ನಿಷ್ಠೆಯಿಂದ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು.

ವಸಂತ ಸಿನ್ನೂರ ಮಾತನಾಡಿ, ಇಂತಹ ಗೌರವ ಕಾರ್ಯಕ್ರಮಗಳು ಪತ್ರಿಕಾ ವಿತರಕರಲ್ಲಿ ಹೊಸ ಉತ್ಸಾಹ ತುಂಬುತ್ತವೆ. ಅವರ ಸೇವೆಯನ್ನು ಪ್ರತಿಯೊಬ್ಬರೂ ಕೃತಜ್ಞತೆಯಿಂದ ಸ್ಮರಿಸಬೇಕು ಎಂದು ಅಭಿಪ್ರಾಯಪಟ್ಟರು. ಹುಸೇನಸಾಬ ಕಟಗಿ, ತಿಪ್ಪಣ್ಣ ಕಬ್ಬರಗಿ, ವೆಂಕಟೇಶ ಹೊಸಮನಿ ಸೇರಿದಂತೆ ಹಲವಾರು ಪತ್ರಿಕಾ ವಿತರಕರು ಉಪಸ್ಥಿತರಿದ್ದರು.



ಹನುಮಸಾಗರ: ಸಮಾಜಕ್ಕೆ ದಿನನಿತ್ಯದ ಸುದ್ದಿ ಮತ್ತು ಮಾಹಿತಿಯನ್ನು ತಲುಪಿಸುವಲ್ಲಿ ಮಹತ್ವದ ಪಾತ್ರ ವಹಿಸುವ ಪತ್ರಿಕಾ ವಿತರಕರನ್ನು ಗೌರವಿಸುವ ಉದ್ದೇಶದಿಂದ ಪಟ್ಟಣದ ಹಳೆ ಬಸ್ ನಿಲ್ದಾಣದ ಸಮೀಪ ಬೆಂಗಳೂರು ಬೇಕರಿ ಹತ್ತಿರ ಪೆನ್ನು ಹಾಗೂ ನೋಟ್‌ಬುಕ್ ವಿತರಣೆ ಕಾರ್ಯಕ್ರಮ ಆಯೋಜಿಸಲಾಯಿತು. ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕ ಪ್ರಭು ಡಿಪೋ, ಶ್ರೀನಿವಾಸ ಜಹಗೀರದಾರ, ವಸಂತ ಸಿನ್ನೂರ,ಹುಸೇನಸಾಬ ಕಟಗಿ, ತಿಪ್ಪಣ್ಣ ಕಬ್ಬರಗಿ, ವೆಂಕಟೇಶ ಹೊಸಮನಿ ಸೇರಿದಂತೆ ಹಲವಾರು ಪತ್ರಿಕಾ ವಿತರಕರು ಉಪಸ್ಥಿತರಿದ್ದರು.

ನರಿಬೋಳ್-ಚಾಮನೂರು ಸೇತುವೆಗೆ ಹೆಚ್ಚುವರಿ 32 ಕೋಟಿ ರೂ. ಬಿಡುಗಡೆ

ಶೀಘ್ರ ಟೆಂಡರ್ ಪ್ರಕ್ರಿಯೆ: ಡಾ.ಅಜಯ್ ಸಿಂಗ್

• **ಕಲಬುರಗಿ:** ಜಿಲ್ಲೆಯ ಜೇವರ್ಗಿ ಮತ್ತು ಚಿತ್ತಾಪುರ ತಾಲ್ಲೂಕಿನ ಗಡಿ ಗ್ರಾಮಗಳ ಮಧ್ಯೆ ಸಂಪರ್ಕ ಕಲ್ಪಿಸುವ ಭೀಮಾ ನದಿಗೆ ಅಡ್ಡಲಾಗಿರುವ ನಿರ್ಮಾಣ ಹಂತದಲ್ಲಿರುವ ಸೇತುವೆಯ ಬಾಕಿ ಕಾಮಗಾರಿ ಮಾಡಿ ಮುಗಿಸಲು 32 ಕೋಟಿ ರುಹೆಚ್ಚುವರಿ ಅನುದಾನ ಬಿಡುಗಡೆಯಾಗಿದೆ ಎಂದು ಕೆಕೆಆರ್‌ಡಿಬಿ ಅಧ್ಯಕ್ಷ, ಶಾಸಕ ಡಾ.ಅಜಯ್ ಸಿಂಗ್ ಹೇಳಿದ್ದಾರೆ.

ಚಿತ್ತಾಪುರ ಹಾಗೂ ಜೇವರ್ಗಿ ತಾಲೂಕಿನ ನಡುವಿನ ಸಂಪರ್ಕ ಕೊಂಡಿಯಾಗಿರುವ ಹಾಗೂ ಈ ಭಾಗದ ಜನರ ಬಹು ದಶಕದ ಕನಸಿನ 'ನರಿಬೋಳ್ -ಚಾಮನೂರು ಸೇತುವೆ' ಕಾಮಗಾರಿ ಆರಂಭವಾಗಿ ಕಾರಣಾಂತರಗಳಿಂದ ಬಾಕಿ ಉಳಿದುಕೊಂಡಿತ್ತು. ಇದೀಗ ಈ ವಿಚಾರವಾಗಿ ಸದನದಲ್ಲಿ ಅನೇಕ ಬಾರಿ ಡಾ. ಅಜಯ್‌ಸಿಂಗ್ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆದಿದ್ದರು.

ಹೀಗಾಗಿ ಕಾಮಗಾರಿ ಬಾಕಿ ಕೆಲಸ ಪೂರ್ಣಗೊಳಿಸಲು ಅಗತ್ಯವಿರುವ ಹೆಚ್ಚುವರಿ ಅನುದಾನ ಬಿಡುಗಡೆಗೆ ಲೋಕೋಪಯೋಗಿ ಇಲಾಖೆಯು ಮಂಜೂರಾತಿ ನೀಡಿದ್ದು, ಸದರಿ ಬಾಕಿ ಕಾಮಗಾರಿ 6 ರಿಂದ 9 ತಿಂಗಳಲ್ಲಿ ಮಾಡಿ ಮುಗಿಸಲಾಗುತ್ತದೆ.ಅದಕ್ಕೆ ತಕ್ಕಂತೆ ಟೆಂಡರ್ ಪ್ರಕ್ರಿಯೆ ಕೂಡಾ ಶೀಘ್ರ ನಡೆಯಲಿದೆ ಎಂದರು.

ವಿಳಂಬಕ್ಕೆ ಕಾರಣವಾಗಿದ್ದ ಭೂಸ್ವಾಧೀನ ಪ್ರಕ್ರಿಯೆ ಚುರುಕು: ಈ ಹಿಂದೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಉಂಟಾಗಿದ್ದ ತಾಂತ್ರಿಕ ಹಾಗೂ ಕಾನೂನಾತ್ಮಕ ವಿಳಂಬದಿಂದಾಗಿ ನರಿಬೋಳ್ -ಚಾಮನೂರು ಸೇತುವೆ ಕಾಮಗಾರಿಯು ಅರ್ಧಕ್ಕೆ ಸ್ಥಗಿತಗೊಂಡು ಸಾರ್ವಜನಿಕರ ಸಂಚಾರಕ್ಕೆ ತೀವ್ರ ತೊಂದರೆಯಾಗಿತ್ತು. ಕ್ಷೇತ್ರದ ಜನರ ಸಂಕಷ್ಟಕ್ಕೆ ಸ್ಪಂದಿಸಿದ ಶಾಸಕ ಡಾ.ಅಜಯ್ ಸಿಂಗ್ ಅವರು



> **ನರಿಬೋಳ್-ಚಾಮನೂರು ಸೇತುವೆಯು ಎರಡು ತಾಲೂಕುಗಳ ದಶಕಗಳ ಸಂಪರ್ಕ ಕೊಂಡಿಯಾಗಿದೆ. ಭೂಸ್ವಾಧೀನದ ಸಮಸ್ಯೆಯಿಂದ ಕಾಮಗಾರಿ ತಡವಾಗಿತ್ತು. ಈಗ ಆ ತಾಂತ್ರಿಕ ಸಮಸ್ಯೆ ಸಂಪೂರ್ಣ ಬಗೆಹರಿದಿದೆ. ನಮ್ಮ ಮನವಿಗೆ ತಕ್ಷಣ ಸ್ಪಂದಿಸಿ ಕಾಮಗಾರಿ ಪ್ರಾರಂಭಿಸಲು ಅಗತ್ಯವಿರುವ ಹೆಚ್ಚುವರಿ ಅನುದಾನ ಅನುದಾನ ಬಿಡುಗಡೆ ಮಾಡಿರುವ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಜೇವರ್ಗಿ ಮತ್ತು ಚಿತ್ತಾಪುರ ಕ್ಷೇತ್ರದ ಸಮಸ್ತ ಜನತೆಯ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ.**
>
> ■ **ಡಾ.ಅಜಯ್ ಸಿಂಗ್, ಶಾಸಕ**

ವಿಶೇಷ ಆಸಕ್ತಿ ವಹಿಸಿ ತಾಂತ್ರಿಕ ಅಡೆತಡೆಗಳನ್ನು ನಿವಾರಿಸಿದ್ದಾರೆ. ಸದ್ಯ ಭೂಸ್ವಾಧೀನ ಪ್ರಕ್ರಿಯೆಯು ಅಂತಿಮ ಹಂತದಲ್ಲಿದ್ದು, ಇನ್ನು ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಯುದ್ಧೋಪಾದಿಯಲ್ಲಿ ಪುನಾರಂಭಿಸಲು ಅಗತ್ಯವಿರುವ ಹೆಚ್ಚುವರಿ ಮೊತ್ತಕ್ಕೆ ಸರಕಾರವು ಅನುಮೋದನೆ ನೀಡಿರುವುದು ಪ್ರಮುಖ ಪಾತ್ರ ವಹಿಸಲಿದೆ ಎಂದರು.

ಮನವಿಗೆ ಸ್ಪಂದಿಸಿದ ಸಚಿವ ಜಾರಕಿಹೊಳಿ

ಜೇವರ್ಗಿಯ ಸಂಪರ್ಕ ಸೇತುವೆಯ ಆರ್ಥಿಕ ಹಾಗೂ ಸಾಮಾಜಿಕ ಮಹತ್ವವನ್ನು ಅರಿತ ಶಾಸಕ ಡಾ.ಅಜಯ್ ಸಿಂಗ್ ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಖುದ್ದಾಗಿ ಭೇಟಿಯಾಗಿ, ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟು ಹೆಚ್ಚುವರಿ ಅನುದಾನ ಬಿಡುಗಡೆಗೆ ಅಧಿಕೃತ ಮನವಿ ಸಲ್ಲಿಸಿದ್ದರು. ಶಾಸಕರ ದೂರದೃಷ್ಟಿಯ ಮನವಿಗೆ ತಕ್ಷಣ ಸ್ಪಂದಿಸಿದ ಸಚಿವರು, ಹೆಚ್ಚುವರಿ ಅನುದಾನ ಬಿಡುಗಡೆಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದಲ್ಲದೆ, ಶೀಘ್ರದಲ್ಲೇ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಕಾಮಗಾರಿಯ ಪ್ರಗತಿ ಪರಿಶೀಲನೆ ನಡೆಸುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ರಾಘವೇಂದ್ರ ಹಿಟ್ನಾಳಗೆ ಸಚಿವ ಸ್ಥಾನ ನೀಡಿ

• **ಕೊಪ್ಪಳ:** ವಿಧಾನಸಭಾ ಕ್ಷೇತ್ರದಿಂದ ಸತತ ಮೂರು ಬಾರಿ ಶಾಸಕರಾಗಿರುವ ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಬೆಂಬಲಿಗರು ನಗರದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಅಪಾರ ಸಂಖ್ಯೆಯಲ್ಲಿ ಜನ ನಗರದ ಗೌರಿಶಂಕರ ದೇವಸ್ಥಾನದ ಬಳಿ ಜಮಾಯಿಸಿ ಅಲ್ಲಿಂದ ಅಶೋಕ ವೃತ್ತದ ತನಕ ಪ್ರತಿಭಟನಾ ಮೆರವಣಿಗೆ ಮಾಡಿದರು. ಕೇಂದ್ರಿಯ ಬಸ್ ನಿಲ್ದಾಣದ ಮುಂಭಾಗದಲ್ಲಿ ಟೈಯರ್ ಸುಟ್ಟು ಅಶೋಕ ವೃತ್ತದಲ್ಲಿ ಬೈಕ್‌ಗೆ ಬೆಂಕಿ ಹಚ್ಚಿ ಕಾಂಗ್ರೆಸ್ ಪಕ್ಷದ ವರಿಷ್ಠರು ಹಾಗೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಮ್ಮ ಮನದಾಸೆಯನ್ನು ಅರ್ಥಮಾಡಿಕೊಂಡು ರಾಘವೇಂದ್ರ ಹಿಟ್ನಾಳ ಅವರನ್ನು ಸಚಿವರನ್ನಾಗಿ ಮಾಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯ ಮಾರ್ಗದುದ್ದಕ್ಕೂ ಹಿಟ್ನಾಳ ಪರ ಘೋಷಣೆಗಳನ್ನು ಕೂಗಿದರು. ಭಿತ್ತಿಚಿತ್ರಗಳನ್ನು ಪ್ರದರ್ಶಿಸಿದರು. ಮಧ್ಯಪ್ರವೇಶಿಸಿದ ಪೊಲೀಸರು ಅರೆಬರೆ ಸುಟ್ಟ ಬೈಕ್ ತೆರವು ಮಾಡಿದರು.

ಕಾಂಗ್ರೆಸ್ ಮುಖಂಡರಾದ ಕೆ.ಎಂ. ಸೈಯದ್, ಗೂಳಪ್ಪ ಹಲಗೇರಿ, ಜ್ಯೋತಿ ಗೊಂಡಬಾಳ, ಕೃಷ್ಣ ಇಟ್ಟಂಗಿ ಸೇರಿದಂತೆ ಇತರರು ಮಾತನಾಡಿ, ಕೊಪ್ಪಳ ವಿಧಾನಸಭಾ ಕ್ಷೇತ್ರದಿಂದಗೆದ್ದವರಿಗೆಒಮ್ಮೆಯೂಸಚಿವಸ್ಥಾನ ಲಭಿಸಿಲ್ಲ, ರಾಘವೇಂದ್ರ ಹಿಟ್ನಾಳ ಮೂರು ಬಾರಿ ಶಾಸಕರಾಗಿದ್ದಾರೆ. ಅವರನ್ನು ಈ ಬಾರಿ ಸಚಿವರನ್ನಾಗಿ ಮಾಡಿದರೆ ಕ್ಷೇತ್ರದ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು. ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವೆಲ್ಲರೂ ಬದ್ಧರಿದ್ದೇವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಿಂದುಳಿದ ವರ್ಗದ ನಾಯಕ ರಾಘವೇಂದ್ರ ಹಿಟ್ನಾಳ ಅವರಿಗೆ ಸಚಿವ ಸ್ಥಾನ ನೀಡಿದರೆ ಪಕ್ಷದ ಸಂಘಟನೆಗೂ ಅನುಕೂಲವಾಗುತ್ತದೆ ಎಂದರು. ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಸನ್ನ ಗಡಾದ, ಮಾಜಿ ಅಧ್ಯಕ್ಷ ಶ್ರೀನಿವಾಸ ಗುಪ್ತಾ, ನಗರಸಭೆ ಮಾಜಿ ಅಧ್ಯಕ್ಷ ಅಮ್ಜದ್ ಪಟೇಲ್, ಮುಖಂಡರಾದ ಮಲ್ಲಿಕಾರ್ಜುನ ಪೂಜಾರ, ಕಾಟನ್ ಪಾಷಾ, ಕೃಷ್ಣ ಗಲಬಿ, ಗವಿಸಿದ್ದಗೌಡ ಗೌಡ, ದೇವೇಂದ್ರಪ್ಪ ಪೂಜಾರ, ಪದ್ಮಾ ಕಂಬಳಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.



ನಿವೃತ್ತಿ ಜೀವನ ಸುಖಕರವಾಗಿರಲಿ



• **ಯಲಬುರ್ಗಾ:** ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿ ಕೆ.ಎಚ್.ಛತ್ರದ ಅವರು ಸುದೀರ್ಘವಾಗಿ ಸೇವೆ ಸಲ್ಲಿಸಿ ತಮ್ಮ ಸೇವಾ ವಯೋನಿವೃತ್ತಿ ಹೊಂದಿರುವುದು ನೋವು ತರಿಸಿದ್ದು ಅವರ ನಿವೃತ್ತ ಜೀವನ ಸುಖಕರವಾಗಿರಲಿ ಎಂದು ಹಾಲುಮತ ಸಮಾಜದ ತಾಲೂಕಾಧ್ಯಕ್ಷ ವೀರನಗೌಡ ಬಳೂಟಗಿ ಹೇಳಿದರು.

ತಾಲೂಕಿನ ಹುಲೆಗುಡ್ಡ ಗ್ರಾಮದಲ್ಲಿ ಸೋಮವಾರ ಹಳೆ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರ ಸಹಯೋಗದಲ್ಲಿ ಸ್ಥಳೀಯ ಸ.ಪ್ರ.ದ.ಕಾಲೇಜಿನಲ್ಲಿ ವೃತ್ತಿಯಿಂದ ಸೇವಾ ವಯೋನಿವೃತ್ತಿ ಹೊಂದಿರುವ ನಿವೃತ್ತ ಪ್ರಾಂಶುಪಾಲ ಕೆ.ಎಚ್.ಛತ್ರದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ಕೆ.ಎಚ್.ಛತ್ರದವರು ತಮ್ಮ ವೃತ್ತಿ ಬದುಕಿನೊಂದಿಗೆ ಸ್ನೇಹ ಜೀವಿಯಾಗಿ ಎಲ್ಲರ ಪ್ರೀತಿ,ವಿಶ್ವಾಸ ಗಳಿಸಿಕೊಂಡಿದ್ದಾರೆ ಎಂದರು.

ಅಧಿಕಾರಿ ಗ್ಯಾನಪ್ಪ ಹುಡೇದ, ವರ್ತಕರಾದ ಸಂಗಣ್ಣ ಟೆಂಗಿನಕಾಯಿ,ಅಮರಪ್ಪ ಕಲಬುರ್ಗಿ ಹಾಗೂ ರಾಜಕೀಯ ಮುಖಂಡರಾದ ಎಂ.ಎಫ್ .ನದಾಫ,ಹುಲಗಪ್ಪ ಬಂಡಿವಡ್ಡರ ಮಾತನಾಡಿ ಛತ್ರದವರು ಸಮಾಜಕ್ಕೆ ಮಾದರಿಯಾಗುವ ರೀತಿಯಲ್ಲಿ ಸೇವೆ ನೀಡಿದ್ದಾರೆಂದರು.

ನಿವೃತ್ತ ಪ್ರಾಂಶುಪಾಲ ಕೆ.ಹೆಚ್. ಛತ್ರದ ಸನ್ಮಾನ ಸ್ವೀಕರಿಸಿ ಮಾತನಾಡಿ ನನ್ನ ಸೇವಾವಧಿಯಲ್ಲಿ ಇದುವರೆಗೂ ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆಯಿಂದ ಕೆಲಸ ನಿರ್ವಹಿಸಿ ಯಾವ ಕಪ್ಪುಚುಕ್ಕೆಯಿಲ್ಲದೆದೀರ್ಘಕಾಲಸೇವೆಸಲ್ಲಿಸಲು ಶಾಸಕರು, ಸಂಸದರು, ಜನಪ್ರತಿನಿಧಿಗಳು ಸೇರಿದಂತೆ ಕಾಲೇಜಿನ ಉಪನ್ಯಾಸಕರು, ಸಿಬ್ಬಂದಿಗಳು,ವಿದ್ಯಾರ್ಥಿಗಳು,ನನ್ನ ಸ್ವಗ್ರಾಮ ಹುಲೆಗುಡ್ಡ ಗ್ರಾಮದ ಎಲ್ಲ ವರ್ಗದ ಜನರ ಸಹಕಾರ ಕಾರಣವಾಗಿದೆ. ಎಲ್ಲರ ಪ್ರಸಂಸೆ ಗಳಿಸಿ ನೆಮ್ಮದಿಯಿಂದ ಸೇವಾ ವಯೋನಿವೃತಿ ಹೊಂದಿರುವುದು ನನಗೆ ಸಾಕಷ್ಟು ಖುಷಿ ತಂದಿದೆ ಎಂದು ಹೇಳಿದರು.

ಗ್ರಾಪಂ ಮಾಜಿ ಅಧ್ಯಕ್ಷ ಬಾಳಪ್ಪ ಬಂಡ್ಲಿ,ಶರಣಪ್ಪ ಇಟಗಿ, ಲಿಂಗರಾಜ, ಯಮನೂರಪ್ಪ, ಡಾ.ಯಂಕಪ್ಪ ಗೊಲ್ಲರ್, ರೇವಣೆಪ್ಪ ಹಿರೇಕುರಬರ, ಹನಮಂತ ಭಜೇಂತ್ರಿ, ಸಾವಿತ್ರಿ ಗೊಲ್ಲರ,ಮಹಾಂತೇಶ ಬೂದಗುಂಪಾ, ಕರಿಯಪ್ಪ ಗುರಿಕಾರ, ಶೀನಪ್ಪ ಪೂಜಾರ, ಪರಸಪ್ಪ ನಾಯಕ, ರಮೇಶ ಚಿಕ್ಕ ಗೌಡ್ರ ಮತ್ತಿತರರು ಇದ್ದರು. ಬಳಿಕ ಛತ್ರದವರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ದಲಿತರ, ಶೋಷಿತ ವರ್ಗಗಳ ಪರ ಹೋರಾಟಕ್ಕೆ ಸಂಘಟನೆ ಬದ್ಧ

• **ಗಂಗಾವತಿ:** ಕರ್ನಾಟಕದಲಿತಸಂಘರ್ಷಸಮಿತಿ (ಮಹಾತ್ಮ ಪ್ರೊ.ಬಿ.ಕೃಷ್ಣಪ್ಪ) ಸಂಘಟನೆಯನ್ನು ಜಿಲ್ಲೆಯಲ್ಲಿ ಬಲಪಡಿಸುವ ಉದ್ದೇಶದಿಂದ ಸಂಘಟನೆಯ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಸಂಘಟನೆಯ ರಾಜ್ಯ ಸಂಚಾಲಕರ ಡಿ.ಆರ್.ಪಾಂಡುರಂಗಸ್ವಾಮಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸಂಘಟನೆಯ ವತಿಯಿಂದ ಹಮ್ಮಿಕೊಂಡ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದರು.

ಯಾವುದೇ ರಾಜಕೀಯ ಪಕ್ಷವನ್ನು ಬೆಂಬಲಿಸದೆ ದಲಿತರು ಹಾಗೂ ಅನ್ಯಾಯ ಮತ್ತು ಶೋಷಣೆಗೆ ಒಳಗಾದವರ ಪರವಾಗಿ ಕಾರ್ಯನಿರ್ವಹಿಸುವ ಉದ್ದೇಶದಿಂದ ಸಂಘಟನೆಯನ್ನು ಜಿಲ್ಲೆಯಲ್ಲಿ ಮತ್ತಷ್ಟು ವಿಸ್ತರಿಸಲಾಗುತ್ತಿದೆ.

ಅದಕ್ಕಾಗಿಯೇ ಸಂಘಟನೆಯ ರಾಜ್ಯ ಸಂಘಟನಾ ಸಂಚಾಲಕರಾಗಿ ಹಂಪೇಶ ಹರಿಗೋಲ ಅವರನ್ನು ಆಯ್ಕೆ ಮಾಡಲಾಗಿದೆ. ಅವರ ನೇತೃತ್ವದಲ್ಲಿ ಸಂಘಟನೆಯನ್ನು ಬಲಪಡಿಸಿ, ಸ್ಥಳೀಯ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸುವುದರ ಜೊತೆಗೆ ಜನರ ಒಳಿತಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ದಲಿತ ಎಂಬ ಪದವು ಶೋಷಣೆಗೆ ಒಳಗಾದವರನ್ನು ಪ್ರತಿನಿಧಿಸುತ್ತದೆ. ಯಾವುದೇ ವ್ಯಕ್ತಿ ಶೋಷಣೆಗೆ ಒಳಗಾಗಬಾರದು ಎಂಬುದು ಸಂಘಟನೆಯ ಮೂಲ ಆಶಯವಾಗಿದೆ. ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯ ಸ್ಥಾಪನೆಗಾಗಿ ನಿರಂತರ ಹೋರಾಟ ನಡೆಸಲಾಗುವುದು ಎಂದು ಹೇಳಿದರು.



ಸಂಘಟನೆಯು ವರ್ಗೀಕರಣದ ವಿರುದ್ಧ ತನ್ನ ನಿಲುವನ್ನು ಪುನರುಚ್ಚರಿಸಿ, ಸಮಾಜದ ಎಲ್ಲ ಶೋಷಿತ ವರ್ಗಗಳ ಹಕ್ಕುಗಳ ರಕ್ಷಣೆಗಾಗಿ ಕೆಲಸ ಮಾಡುವುದಾಗಿ ತಿಳಿಸಿತು.

ಸಂಘಟನೆಯ ರಾಜ್ಯ ಸಂಘಟನಾ ಸಂಚಾಲಕ ಗೋವಿಂದ ಸಣ್ಣಕ್ಕಿ ಪ್ರಮುಖರಾದ ಹಂಪೇಶ ಹರಿಗೋಲ, ಯಮನೂರ ನಾಯಕ, ಗುರುಬಾಯಿ ಎನ್ ಕಟ್ಟಿಮನಿ, ರಂಗಪ್ಪ ಹಾಗೂ ಇತರರಿದ್ದರು.

ಗೊಬ್ಬರ ವಿತರಣೆ ವೇಳೆ ತೊಂದರೆಯಾಗದಂತೆ ನೋಡಿಕೊಳ್ಳಿ

• **ರಾಯಚೂರು:** ಮುಂಗಾರು ಮಳೆ ಉತ್ತಮವಾಗಿದ್ದು, ಬರುವ ದಿನಗಳಲ್ಲಿ ರೈತರು ಬಿತ್ತನೆ ಬೀಜ ಹಾಗೂ ರಸಗೊಬ್ಬರ ಖರೀದಿಗೆ ರೈತ ಸಂಪರ್ಕ ಕೇಂದ್ರಗಳು ಸೇರಿದಂತೆ ಗೊಬ್ಬರ ವಿತರಣಾ ಕೇಂದ್ರಗಳ ಮುಂದೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಸಾಧ್ಯತೆ ಇದ್ದು ರೈತರಿಗೆ ಯಾವುದೇ ತೊಂದರೆ ಆಗುವಂತೆ ಕ್ರಮ ಕೈಗೊಳ್ಳಬೇಕೆಂದು ರಾಯಚೂರು ಗ್ರಾಮೀಣ ಕ್ಷೇತ್ರ ಶಾಸಕ ಬಸನಗೌಡ ದದ್ದಲ ತಿಳಿಸಿದರು.

ಸೋಮವಾರ ನಗರದಲ್ಲಿನ ಶಾಸಕರ ಕಾರ್ಯಾಲಯದಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳೊಂದಿಗೆ ಮಾತನಾಡಿದ ಸಂದರ್ಭದಲ್ಲಿ, ಮುಂಗಾರು ಹಂಗಾಮಿನ ಬಿತ್ತನೆಗೆ ಮೂಲಗೊಬ್ಬರ ನೀಡುವುದಕ್ಕೆ ಮೊದಲ ಹಂತದಲ್ಲಿ ರೈತರು ಕಾಂಪ್ಲೆಕ್ಸ್ ಗೊಬ್ಬರವನ್ನು ತಗೆದುಕೊಳ್ಳುತ್ತಾರೆ. ಈ ಗೊಬ್ಬರ ಕೊರತೆಯಾಗದಂತೆ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ದೇಶದಲ್ಲಿ ಕೆಲ ರಾಸಾಯನಿಕ ಗೊಬ್ಬರದ ಅಭಾವ ವಿದ್ದರೂ ಪ್ರಸಕ್ತ ಮುಂಗಾರು ಹಂಗಾಮಿಗೆ ಜಿಲ್ಲೆಯ ರೈತರಿಗೆ ಅಗತ್ಯವಿರುವ ಕಾಂಪ್ಲೆಕ್ಸ್ ಗೊಬ್ಬರ ಸಂಗ್ರಹವಿದೆ ಎಂಬ ಮಾಹಿತಿ ಇದ್ದರೂ ಕೊರತೆ ಕಂಡುಬಂದರೆ ಸಕಾಲದಲ್ಲಿ ಪೂರೈಕೆಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ತಿಳಿಸಿದರು.



ಪ್ರಸಕ್ತ ಎಲ್‌ನೀನೋ ಪರಿಣಾಮದಿಂದಾಗಿ ಮುಂಗಾರು ಮಳೆ ಪ್ರಮಾಣ ಕಡಿಮೆ ಆಗುತ್ತದೆ ಎಂದು ಹವಾಮಾನ ಇಲಾಖೆ ಇಗಾಗಲೇ ಎಚ್ಚರಿಸಿದೆ. ಈ ಕುರಿತು ರೈತರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಜಯಂತ್ರಯಾವ್ ಪತಂಗಿ, ನಾಗೇಂದ್ರಪ್ಪ ಮಟಮಾರಿ, ಸೋಮಶೇಖರ ಪಾಟೀಲ, ಎಪಿಎಂಸಿ ಉಪಾಧ್ಯಕ್ಷ ಬಶೀರ, ಬಸವರಾಜ, ಕೃಷಿ ಉಪನಿರ್ದೇಶಕಿ ದೀಪಾ.ಎಲ್., ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಸೇರಿದಂತೆ ಇತರರಿದ್ದರು.

ಯುವ ಜನತೆ ದುಶ್ಚಟಕ್ಕೆ ತುತ್ತಾಗದಿರಲಿ: ಶ್ರೀಗಳು

• **ಕುಷ್ಟಗಿ:** ಇಂದಿನ ಯುವ ಜನತೆ ದುಶ್ಚಟಕ್ಕೆ ಮಾರು ಹೋಗುತ್ತಿದ್ದು, ಇದರಿಂದ ಸಮಾಜದ ಸ್ವಾಸ್ಥ್ಯ ಹಾಳುಗುತ್ತದೆ. ಯುವಕರು ಅದರಿಂದ ದೂರ ಇರಬೇಕು ಎಂದು ಕುಷ್ಟಗಿ ಮದ್ದಾನೇಶ್ವರ ಮಠದ ಶ್ರೀಕರಿಬಸವ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ಡಾ.ಬಾಬು ಜಗಜೀವನರಾಂ ಭವನದಲ್ಲಿ ಪೊಲೀಸ್ ಇಲಾಖೆಯ ಹಾಗೂ ಪರಿವಾರ ಸಮೃದ್ಧಿ ಸೇವಾ ಟ್ರಸ್ಟ್‌ನ ಸಂಯುಕ್ತಾಶ್ರಯದಲ್ಲಿಮದ್ಯ ವ್ಯರ್ಜನ ಶಿಬಿರದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕುಷ್ಟಗಿಯಲ್ಲಿ ನಶೆ ಮುಕ್ತ ಕೇಂದ್ರವನ್ನು ಖಾಸಗಿ ಸಹಭಾಗಿತ್ವದಲ್ಲಿ ತೆರೆದಿದ್ದು, ಇದರಿಂದ ಕುಡಿತದ ಚಟಕ್ಕೆ ಬಲಿಯಾಗುತ್ತದ್ದವರನ್ನು ಸರಂಕ್ಷಿಸಿ. ಉತ್ತಮ ಜೀವ ನಿರ್ವಹಣೆಗೆ ಅನುಕೂಲ ಮಾಡಿ ಕೊಡಲು ತಿರ್ಮಾನಿಸಿದ್ದು, ಜನರು ಇದರ ಸದುಪಯೋಗ ಪಡಿಸಿಕೊಂಡು ಕುಟುಂಬದಲ್ಲಿ ನೆಮ್ಮದಿ ಜೀವನ ಕಂಡು ಕೊಳ್ಳಲು ಸಹಕಾರಿಯಾಗಲಿದೆ ಎಂದರು.



ನಿಡಶೇಸಿ ಮಠದ ಅಭಿನವ ಶ್ರೀಕರಿಬಸವ ಶಿವಚಾರ್ಯ ಮಾತನಾಡಿ, ಯುವಕರು ಬಹುಷ್ಯದ ಬಗ್ಗೆ ಅಲೋಚನೆ ಮಾಡದೆ ಬೇಗನೆ ದುಶ್ಚಟದ ಕಡೆ ಗಮನ ಹರಿಸುತ್ತಿದ್ದು ಇದು ಒಳ್ಳೆಯ ಬೆಳವಣಿಗೆ ಅಲ್ಲ. ಕುಡಿತದಿಂದ ಸಾಮಾಜಿಕ ಸಾಮರಸ್ಯ ಕುಟುಂಬ ನೆಮ್ಮದಿ ಹಾಳಾಗುತ್ತಿದ್ದು, ಯುವಕರು ಎಲ್ಲ ದುಶ್ಚಟಗಳನ್ನು ಬಿಟ್ಟು ನಮ್ಮ ಜೋಳಿಗೆಗೆ ಹಾಕಿ ಉತ್ತಮ ಜೀವನ ನಡೆಸಬೇಕು. ಪೊಲೀಸ್ ಇಲಾಖೆಯ ಮಾನವೀಯ ಕಾರ್ಯ ಚಟುವಟಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಸಿಪಿಐ ವಿಶ್ವನಾಥ ಹಿರೇಗೌಡ್ರು ಮಾತನಾಡಿ, ತಾಲೂಕಿನಲ್ಲಿ ಯುವಕರು ಬಿಡಿ, ಸಿಗರೇಟ್, ತಂಬಾಕು, ಮದ್ಯ ಸೇವನೆ, ಗಾಂಜಾ ಸೇವನೆಗೆ ಬಲಿಯಾಗುತ್ತಿರುವುದು ಕಳವಳದ ಸಂಗತಿಯಾಗಿದ್ದು, ಇದನ್ನು ಹೊಗಲಾಡಿಸಲು ಜನರಲ್ಲಿ ನೆಮ್ಮದಿಯ ಜೀವನ ಕಂಡು ಕೊಳ್ಳಲು ನಶೆ ಮುಕ್ತ ಕೇಂದ್ರವನ್ನು ಆರಂಭಿಸಿದ್ದು, ಇದರ ಸದುಪಯೋಗ ಪಡಿಸಿಕೊಳ್ಳಲು ತಿಳಿಸಿದರು. ಸಮಾಜ ಸೇವಕರಾದ ನಾಗರಾಜ ಮೇಲಿನಮನಿ, ಮುಖಂಡ ಸುಖರಾಜ ತಾಳಕೇರಿ, ಪರಿವಾರ ಸೇವಾ ಟ್ರಸ್ಟ್‌ನ ಹನಮಂತಪ್ಪ ಪೂಜಾರ ಮಾತನಾಡಿದರು. ಕುಷ್ಟಗಿ ಪಿಎಸ್‌ಐ ಹನಮಂತಪ್ಪ ತಳವಾರ, ಜಿಪಂ ಮಾಜಿ ಸದಸ್ಯ ದೊಡ್ಡಯ್ಯ ಗದ್ದಡಕಿ ಹಾಗೂ ಪೊಲೀಸ್ ಸಿಬ್ಬಂದಿ ಮಾರುತಿ ಪೂಜಾರ ಸೇರಿದಂತೆ ಇತರರಿದ್ದರು.

ವಜ್ರಬಂಡಿ ಶಾಲೆಯಲ್ಲಿ ಪರಿಸರ ದಿನಾಚರಣೆ

• **ಯಲಬುರ್ಗಾ:** ತಾಲೂಕಿನ ವಜ್ರಬಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿಶ್ವ ಪರಿಸರ ದಿನಾಚರಣೆಯನ್ನು ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ಹಣಮಂತಪ್ಪ ಯಂಕಂಚಿ, ಶಾಲೆಯ ಮುಖ್ಯ ಗುರುಗಳಾದ ಚಿನ್ನಭಾಷಾ ಅತ್ತಾರ, ಶಿಕ್ಷಕರಾದ ರಾಘವೇಂದ್ರ ಗೋನಾಳ, ಮಲ್ಲಿಕಾರ್ಜುನ ಇಟಗಿ, ತಾಹೇರಾ ಬೇಗಮ್, ಹನೀಫಾ ಬೇಗಮ್, ಐಶ್ವರ್ಯ ಅಕ್ಕಸಾಲಿಗರ, ಗ್ರಂಥಾಲಯ ಪಾಲಕರಾದ ರಂಗಪ್ಪ, ಪಂಚಾಯತಿ ಬಿಲ್ ಕಲೆಕ್ಟರ್, ದುರಗಪ್ಪ, ಕಂಪ್ಯೂಟರ್ ಆಪರೇಟರ್, ನೀಲಪ್ಪ ಹಾಗೂ ಅಂಗನವಾಡಿ ಕಾರ್ಯಕರ್ತೆಯರಾದ ಶಿವಮ್ಮ ಪೊಲೀಸ್‌ಪಾಟೀಲ, ವೇಧಾ ದೇಸಾಯಿ, ಪತ್ರಕರ್ತರ ಮೌನೇಶ್ ಮದ್ಲೂರ, ಮಂಜುನಾಥ ಪೂಜಾರ್, ರಾಮಪ್ಪ ಶ್ಯಾಡ್ಲಗೇರಿ ಇದ್ದರು.



ಅವಹೇಳನಕಾರಿ ಹೇಳಿಕೆ: ಕ್ರಮಕ್ಕೆ ಆಗ್ರಹಿಸಿ ಮನವಿ

• **ಕಲಬುರಗಿ:** ಬಿಜೆಪಿ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಪೋಸ್ಟ್‌ಗಳು ಹಾಗೂ ಹೇಳಿಕೆಗಳನ್ನು ನೀಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದಿಂದ ನಗರದ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಅವರಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಮುಖಂಡರು, ರೇವೂರ ಕುಟುಂಬವು ಹಲವು ದಶಕಗಳಿಂದ ಸಾಮಾಜಿಕ, ಧಾರ್ಮಿಕ ಹಾಗೂ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಜಿಲ್ಲೆಯ ಜನರ ವಿಶ್ವಾಸ ಗಳಿಸಿರುವ ಕುಟುಂಬವಾಗಿದ್ದು, ಇತ್ತೀಚೆಗೆ ದತ್ತಾತ್ರೇಯ ಪಾಟೀಲ್ ರೇವೂರ ಅವರ ವಿರುದ್ಧ ದಾಖಲಾದ ಎಫ್‌ಐಆರ್ ಹಿನ್ನೆಲೆ ಕೆಲವರು ರಾಜಕೀಯ ದುರುದ್ದೇಶದಿಂದ ಸಾಮಾಜಿಕ ಜಾಲತಾಣಗಳಲ್ಲಿ ಕೀಳುಮಟ್ಟದ ಪದಗಳನ್ನು ಬಳಸಿ ಕುಟುಂಬದ ಗೌರವಕ್ಕೆ ಧಕ್ಕೆ ತರುವ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಯಾವುದೇ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿದ್ದರೆ ಕಾನೂನು ಹಾಗೂ ಸಾರ್ವಜನಿಕ ಚರ್ಚೆಯ ಮೂಲಕ ಪ್ರಶ್ನಿಸಬಹುದು ಹೊರತು ವೈಯಕ್ತಿಕ ನಿಂದನೆ ಮಾಡುವುದು ಸರಿಯಲ್ಲ,ರೇವೂರ ಕುಟುಂಬದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿರುವ ಅವಹೇಳನಕಾರಿ



ಪ್ರಚಾರವನ್ನು ಜಿಲ್ಲೆಯ ವೀರಶೈವ-ಲಿಂಗಾಯತ ಸಮುದಾಯ ತೀವ್ರವಾಗಿ ಖಂಡಿಸಿದ್ದು, ಇಂತಹ ಪೋಸ್ಟ್‌ಗಳನ್ನು ಹಾಕುತ್ತಿರುವವರನ್ನು ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಮನವಿ ಮಾಡಿ,ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಕಾಪಾಡುವ ನಿಟ್ಟಿನಲ್ಲಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಮನವಿಯಲ್ಲಿ ಒತ್ತಾಯಿಸಿದರು.

ಅರುಣಕುಮಾರ ಪಾಟೀಲ್ ಕೊಡಲಹಂಗರಗಾ, ಮಲ್ಲಿಕಾರ್ಜುನ ಖೇಮಜಿ, ನಾಗಲಿಂಗಯ್ಯ ಹಿರೇಮಠ, ಚನ್ನಪ್ಪ ಡಿಗ್ಗಾವಿ, ಮಹೇಶ್ ಪಟ್ಟಣ, ಪ್ರಕಾಶ್ ಪಾಟೀಲ, ಶರಣು ಟೆಂಗಳಿ, ಶರಣು ಸಜ್ಜನ್, ಮಹೇಶ್ ರೆಡ್ಡಿ, ವೀರಣ್ಣ ಗೊಳೆದ, ಚಂದ್ರಕಾಂತ ಬೆಣ್ಣೂರ, ಗೌರಿ ಚಿಚಕೋಟಿ, ಮಾಲಾ ಕಣ್ಣಿ, ಶೋಭಾ ಬಾಗೇವಾಡಿ, ಸಪ್ನಾ ಮಂಗಲಗಿ, ವಿಜಯಕುಮಾರ ಬಿರಾದಾರ, ಚಂದ್ರಕಾಂತ ಸಂತಪೂರ, ವಿಜಯಲಕ್ಷ್ಮಿ, ಶರಣಗೌಡ ಪಾಟೀಲ, ಚಂದ್ರಕಾಂತ ಡೆಂಗಿ ಸೇರಿದಂತೆ ನೂರಾರು ಮುಖಂಡರು ಉಪಸ್ಥಿತರಿದ್ದರು.

ಕಿರುಸುದ್ದಿ

ಬಾಲಕ-ಬಾಲಕಿಯರ ಉಚಿತ ವಸತಿ ನಿಲಯ ಆರಂಭ



◆ **ಹುಣಸಗಿ:** ತಾಲೂಕಿನ ಮುದನೂರು ಗ್ರಾಮದಲ್ಲಿ ಶ್ರೀಶಿವಯೋಗಿ ಸ್ವಾಮಿ ಸ್ಮಾರಕ ವಿದ್ಯಾವರ್ಧಕ ಸಂಸ್ಥೆ ವತಿಯಿಂದ ಬಾಲಕಿಯರ ಮತ್ತು ಬಾಲಕರಿಗಾಗಿ ಉಚಿತ ವಸತಿ ನಿಲಯ ಆರಂಭಿಸಲಾಗಿದ್ದು, ಹಿಂದುಳಿದ ವಿದ್ಯಾರ್ಥಿಗಳಿಗೆ ಶಿಕ್ಷಣದ ಅವಕಾಶ ಕಲ್ಪಿಸಲಾಗಿದೆ ಎಂದು ಉಪಾಧ್ಯಕ್ಷ ಶಂಕರ ಕೊಡ್ಲಾ ಹೇಳಿದರು.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯೊಂದಿಗೆ ಮಾತನಾಡಿ, ಶ್ರೀಉರಲಿಂಗ ಪೆದ್ದಿ ಮಹಾಸಂಸ್ಥಾನ ಮಠ ಆಶ್ರಯದಲ್ಲಿ ನಡೆಯುತ್ತಿರುವ ಈ ಯೋಜನೆಗೆ ಸಮಾಜ ಕಲ್ಯಾಣ ಇಲಾಖೆಯಿಂದ ತಲಾ 25 ವಿದ್ಯಾರ್ಥಿಗಳ ಸಾಮರ್ಥ್ಯದ ಬಾಲಕಿಯರ ಹಾಗೂ ಬಾಲಕರ ವಸತಿ ನಿಲಯಗಳಿಗೆ ಅನುಮೋದನೆ ದೊರೆತಿದೆ. ಹೀಗಾಗಿ ಗ್ರಾಮೀಣ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳ ಮಕ್ಕಳಿಗೆ ಉತ್ತಮ ಶಿಕ್ಷಣ ಸೌಲಭ್ಯ ಒದಗಿಸುವ ಉದ್ದೇಶದಿಂದ ಈ ವ್ಯವಸ್ಥೆ ಮಾಡಲಾಗಿದೆ ಎಂದರು.

ವಸತಿ ನಿಲಯದಲ್ಲಿ 5ನೇ ತರಗತಿಯಿಂದ 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಹಾಗೂ ಶಿಕ್ಷಣ ಸೌಲಭ್ಯ ನೀಡಲಾಗುವುದು. ವಿದ್ಯಾರ್ಥಿಗಳ ಆಯ್ಕೆಯನ್ನು ಮೆರಿಟ್ ಆಧಾರದ ಮೇಲೆ ಮಾಡದೇ, ಆಯ್ಕೆ ಸಮಿತಿಯ ಸದಸ್ಯರು ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರವೇ ಅಂತಿಮಗೊಳಿಸಲಾಗುತ್ತದೆ ಎಂದು ತಿಳಿಸಿದರು.

ಜೂ.30ರೊಳಗೆ ಆಸಕ್ತರು ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಆಯ್ಕೆ ಸಮಿತಿಯ ನಿರ್ಣಯವೇ ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ. 9448146227 ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಮಹಾಂತಪ್ಪ ಸಂಗಾವಿ, ಗುರುಪುತ್ರ ಹೊಸಮನಿ, ಶಿವರೆಡ್ಡಿ, ಪ್ರಭುಗೌಡ ಮೊತರೆಡ್ಡಿ, ಎ.ಬಿ.ಹೊಸಮನಿ, ನಾಗಾರ್ಜುನ ನಾಟೇಕರ ಇತರರಿದ್ದರು.

ಬಾಗಿರುವ ವಿದ್ಯುತ್ ಕಂಬಗಳ ದುರಸ್ತಿಗೆ ಒತ್ತಾಯ



◆ **ಬಳ್ಳಾರಿ:** ನಗರದ ವಾರ್ಡ್ ನಂ.35ರ ಇಂದಿರಾ ನಗರದ ಹುಲಿಗೆಮ್ಮ ದೇವಸ್ಥಾನದ ಬಳಿಯ ಕೆಎಚ್‌ಬಿ ಕಾಲೋನಿಗೆ ಹೋಗುವ ದಾರಿಯಲ್ಲಿ ಅಪಾಯಕಾರಿಯಾಗಿ ಬಾಗಿರುವ ವಿದ್ಯುತ್ ಕಂಬವನ್ನು ಕೂಡಲೇ ದುರಸ್ತಿ ಮಾಡಬೇಕು ಎಂದು ಒತ್ತಾಯಿಸಿ ಇಲ್ಲಿನ

ಕರ್ನಾಟಕ ಯುವ ಜಾಗೃತಿ ವೇದಿಕೆಯ ಪದಾಧಿಕಾರಿಗಳು ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರ ಶೈಲೇಂದ್ರ ರೆಡ್ಡಿ ಅವರಿಗೆ ಮನವಿ ಪತ್ರ ಸಲ್ಲಿಸಿದರು. ವಿದ್ಯುತ್ ಕಂಬ ಯಾವುದೇ ಕ್ಷಣದಲ್ಲಿ ಬೀಳುವ ಹಂತದಲ್ಲಿದ್ದು, ಸಾರ್ವಜನಿಕರಿಗೆ ಜೀವಹಾನಿಯಾಗುವ ಅಪಾಯವಿದೆ. ಕೂಡಲೇ ತೆರವುಗೊಳಿಸಿ ಎದುರಾಗುವ ಅಪಾಯವನ್ನು ತಡೆಗಟ್ಟಬೇಕು. ಈ ಕುರಿತು ಸಾಕಷ್ಟು ಬಾರಿ ಇಲಾಖೆ ಮೇಲಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಇಲ್ಲಿವರೆಗೆ ಕ್ರಮವಿಲ್ಲ. ಕೂಡಲೇ ಸಂಬಂಧಿಸಿದ ಇಲಾಖೆ ಮೇಲಾಧಿಕಾರಿಗಳು ದುರಸ್ತಿಗೊಳಿಸಬೇಕು, ನಿರ್ಲಕ್ಷ್ಯ ವಹಿಸಿದರೆ ಬರುವ ದಿನಗಳಲ್ಲಿ ಹೋರಾಟದ ಸ್ವರೂಪ ಬದಲಾಗಲಿದೆ ಎಂದು ಎಚ್ಚರಿಸಿದರು.

ನಗರ ಗೌರವ ಅಧ್ಯಕ್ಷ ಚಂದ್ರಶೇಖರ್, ನಗರ ಅಧ್ಯಕ್ಷ ಬಿ.ಪ್ರಸಾದ್, ನಗರ ಉಪಾಧ್ಯಕ್ಷ ರಾಮು, ಪ್ರಧಾನ ಕಾರ್ಯದರ್ಶಿ ರಜಾಕ್ ಮತ್ತು ಜಡೇಶ ಸೇರಿದಂತೆ ಇತರರಿದ್ದರು.

ನಿಧನ ಸುದ್ದಿ

ಶಾರದಮ್ಮ ಸಿಂಗಾಪುರ



◆ **ಕುರುಗೋಡು:** ಸಮೀಪದ ಎಮ್ಮಿಗನೂರು ಗ್ರಾಮದ ಶಾರದಮ್ಮ ಸಿಂಗಾಪುರ (69) ಭಾನುವಾರ ನಿಧನರಾಗಿದ್ದಾರೆ. ಮೃತರಿಗೆ ಓರ್ವ ಪುತ್ರ ಹಾಗೂ ಪುತ್ರಿ ಇದ್ದಾರೆ.



ಗಾದಿಗನೂರು: ಗ್ರಾಮದ ಶ್ರೀನಂಜುಂಡೇಶ್ವರ ದೇವಸ್ಥಾನದಲ್ಲಿ ಭಾನುವಾರ ಬೆಳಿಗ್ಗೆ ವೃಕ್ಷೋತ್ಸವ ಕಾರ್ಯಕ್ರಮಕ್ಕೆ ಗಿಡ ನೆಡುವ ಮೂಲಕ ಚಾಲನೆ ನೀಡಲಾಯಿತು. ಊರಿನ ಮುಖಂಡ ಮಾಜಿ ಗ್ರಾಪಂ ಅಧ್ಯಕ್ಷ ಎನ್.ದೇವೇಂದ್ರಪ್ಪ, ಧರ್ಮ ಜಾಗರಣ ಸಮನ್ವಯ ಉತ್ತರ ಪ್ರಾಂತ ಸಹ ಸಂಯೋಜಕ ಸೋಮಶೇಖರ ಹಿರೇಮಠ, ಊರಿನ ಮುಖಂಡರು ಸಜ್ಜನರು ಭಾಗವಹಿಸಿದ್ದರು.

ಕರಾಟೆ ಕಲಿಕೆಯಿಂದ ಆತ್ಮವಿಶ್ವಾಸ ಹೆಚ್ಚಳ

◆ **ಕುರುಗೋಡು:** ಕರಾಟೆ ಕಲಿಯುವುದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಯುವುದರ ಜೊತೆಗೆ ಆತ್ಮರಕ್ಷಣೆ ಮಾಡಿಕೊಳ್ಳಬಹುದು ಎಂದು ಕರಾಟೆ ಮಾಸ್ಟರ್ ವಿ.ಸತೀಶ್ ತಿಳಿಸಿದರು.

ಅವರು ಪಟ್ಟಣದ ಕ್ರೀಡಾಂಗಣದಲ್ಲಿ ನಂದಿ ಕರಾಟೆ ಸೆಂಟರ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಕರಾಟೆ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಮತ್ತು ಬೆಲ್ಟ್ ವಿತರಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬ ಮಕ್ಕಳಿಗೂ ವಿದ್ಯಾಭ್ಯಾಸದ ಜೊತೆಗೆ ಕರಾಟೆ ಅವಶ್ಯಕವಾಗಿದೆ. ಇದರಿಂದ ಶಿಸ್ತು, ಸಂಯಮ, ದೈಹಿಕ ಮತ್ತು ಮಾನಸಿಕವಾಗಿ ಸದೃಢರಾಗುತ್ತಾರೆ. ಪೋಷಕರು ಇಂತಹ ಕ್ರೀಡೆಯ ತರಬೇತಿಯನ್ನು ಮಕ್ಕಳಿಗೆ ನೀಡಿಸಲು ಮುಂದಾಗಬೇಕು. ನಿಮ್ಮ ಮಕ್ಕಳಿಗೆ ಧೈರ್ಯ ಜೊತೆಗೆ ಜೀವನದಲ್ಲಿ ಹೇಗೆ ಬದುಕು ಕಟ್ಟಿಕೊಳ್ಳಬೇಕು ಎಂಬ ಅರಿವು ಮೂಡುತ್ತದೆ ಎಂದರು.

ನಂತರ ಇತಿಹಾಸ ಸಂಶೋಧಕರಾದ ಕೆ ವೀರಭದ್ರ ಗೌಡ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಮೊಬೈಲ್ ಉಪಯೋಗಿಸಿ ಮಾನಸಿಕ ಒತ್ತಡದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಹಾಗಾಗಿ ಪ್ರತಿಯೊಬ್ಬ ಪೋಷಕರು ಮಕ್ಕಳಿಗೆ ಮೊಬೈಲ್ ಅಭ್ಯಾಸ ಬಿಡಿಸಿ, ಮಕ್ಕಳಲ್ಲಿ ದೈಹಿಕ ಹಾಗೂ ಮಾನಸಿಕ ಆರೋಗ್ಯ ಸಂರಕ್ಷಣೆಗೆ ಮತ್ತು ಸ್ವಯಂ ರಕ್ಷಣೆಗಾಗಿ ಕರಾಟೆ ಕಲಿಸಲು ಮುಂದಾಗಬೇಕು. ಇನ್ನೂ ಹೆಣ್ಣು ಮಕ್ಕಳಿಗೆ ಅತ್ಯವಶ್ಯಕವಾಗಿ ಕರಾಟೆ ಕಲಿಕೆ ಬೇಕಾಗಿದೆ ಎಂದರು. ಭವಾನಿ ಸಿಂಗ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿದ್ಯಾರ್ಥಿಗಳು, ಪೋಷಕರು ಇತರರಿದ್ದರು.



ಕುರುಗೋಡು: ಪಟ್ಟಣದ ಕ್ರೀಡಾಂಗಣದಲ್ಲಿ ನಂದಿ ಕರಾಟೆ ಸೆಂಟರ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಕರಾಟೆ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಮತ್ತು ಬೆಲ್ಟ್ ವಿತರಿಸುವ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಪ್ರಕೃತಿ ಚಿಕಿತ್ಸಾ ಶಿಬಿರ ಉದ್ಘಾಟನೆ | ಆಶಾಲತಾ ಅಭಿಮತ

ಯೋಗದಿಂದ ರೋಗಮುಕ್ತ ಜೀವನ

◆ **ಸಂಡೂರು:** ಯೋಗ ಸನಾತನ ಋಷಿ ಪರಂಪರೆ ಮನುಕುಲಕ್ಕೆ ನೀಡಿದ ಅತ್ಯಮೂಲ್ಯ ಕೊಡುಗೆಯಾಗಿದ್ದು, ಜೀವನದಲ್ಲಿ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಅಳವಡಿಸಿಕೊಳ್ಳುವುದರಿಂದ ರೋಗಮುಕ್ತ ಜೀವನ ಸಾಗಿಸಲು ಸಾಧ್ಯ ಎಂದು ಬಳ್ಳಾರಿ ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಆಶಾಲತಾ ಸೋಮಪ್ಪ ಅಭಿಪ್ರಾಯಪಟ್ಟರು.

ಸಮೀಪದ ವಿಜಯನಗರ ಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಹರಪನಹಳ್ಳಿಯ ಜನನಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಯೋಗ ಮತ್ತು ಸಹಜ ಜೀವನದ ಮಹತ್ವವನ್ನು ನಾವಿಂದು ಮರೆತಿದ್ದೇವೆ. ಆದರೆ, ಪಾಶ್ಚಾತ್ಯರು ಇದನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿಯೇ ಯೋಗ ಇಂದು ವಿಶ್ವಮಾನ್ಯತೆ ಪಡೆದು ಎಲ್ಲೆಡೆ ಜನಪ್ರಿಯವಾಗುತ್ತಿದೆ. ನಾವು ಇನ್ನಾದರೂ ಎಚ್ಚೆತ್ತುಕೊಂಡು ಒತ್ತಡದ ಜೀವನದಲ್ಲಿ ದಿನಕ್ಕೆ ಒಂದು ಗಂಟೆಯನ್ನಾದರೂ ಯೋಗ-ಧ್ಯಾನಕ್ಕೆ ಮೀಸಲಿಡಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆವಹಿಸಿದ್ದ ಕೇಂದ್ರದ ನಿರ್ದೇಶಕ ಪ್ರೊ.ಎಚ್.ತಿಪ್ಪೇಸ್ವಾಮಿ ಮಾತನಾಡಿ, ಭಾರತ ಜ್ಞಾನಪರಂಪರೆಗೆ ಹೆಸರಾದ ದೇಶ. ಚರಕ, ಸುಶ್ರುತರಂಥ ಮಹಾಯೋಗಿಗಳು ಇಡೀ ವಿಶ್ವಕ್ಕೇ ಅಪೂರ್ವ ಆಯುರ್ವೇದ ವೈದ್ಯವಿಜ್ಞಾನವನ್ನು ಪರಿಚಯಿಸಿದ್ದಾರೆ. ಆದರೆ, ಪ್ರಕೃತಿ ಚಿಕಿತ್ಸೆ ನಮ್ಮ ಆರೋಗ್ಯವನ್ನು ನಾವೇ ಅರ್ಥ ಮಾಡಿಕೊಂಡು ಜೀವನಶೈಲಿಯನ್ನು ಮಾರ್ಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ್ದು, ಉತ್ತಮ ಆಹಾರ-ವಿಹಾರ, ಆಚಾರ-ವಿಚಾರದೊಂದಿಗೆ ಶಿಸ್ತುಬದ್ಧ ಜೀವನಶೈಲಿಯನ್ನು ಅಳವಡಿಸಿಕೊಂಡು ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದು ಹೇಳಿದರು.



> ತಕ್ಷಣಕ್ಕೆ ಶಮನ ನೀಡುವ ಅಲೋಪತಿ ವೈದ್ಯಪದ್ಧತಿಯ ಅಡ್ಡ ಪರಿಣಾಮಗಳ ಹಿನ್ನೆಲೆಯಲ್ಲಿ ಜನ ಇಂದು ಕೈಗೆಟುಕುವ ಮತ್ತು ಸಹಜ ಚಿಕಿತ್ಸಾ ವಿಧಾನವಾದ ಪ್ರಕೃತಿ ಚಿಕಿತ್ಸೆಯತ್ತ ವಾಲುತ್ತಿದ್ದಾರೆ. ಮಧ್ಯ ಕರ್ನಾಟಕದಲ್ಲೇ ಅತ್ಯುತ್ತಮ ಪ್ರಕೃತಿ ಸೌಲಭವನ್ನು ಇದೀಗ ಜನನಿ ಆಸ್ಪತ್ರೆ ಕಲ್ಪಿಸಿಕೊಟ್ಟಿದ್ದು, ಈ ಭಾಗದ ಜನತೆ ಇದರ ಪ್ರಯೋಜನ ಪಡೆಯಬೇಕು.
> ■ ಡಾ.ಶಶಿಧರ ಕೆಲ್ಲೂರ್, ವಿವಿ ಕ್ರೀಡಾ ನಿರ್ದೇಶಕ

ಆಸ್ಪತ್ರೆಯ ನಿರ್ದೇಶಕ ಮತ್ತು ಮುಖ್ಯ ವೈದ್ಯಾಧಿಕಾರಿ ಡಾ.ರಾಜೇಶ್ ಪಾದೇಕಲ್ ಮಾತನಾಡಿ, ಪಾಶ್ಚಾತ್ಯ ಜೀವನಶೈಲಿನ ಅಂಧಾನುಕರಣೆಯಿಂದ ಭಾರತದಲ್ಲಿ ಜೀವನಶೈಲಿ ರೋಗಗಳು ಅಪಾಯಕಾರಿ ಪ್ರಮಾಣದಲ್ಲಿ ಹೆಚ್ಚುತ್ತಿವೆ. ನಮ್ಮ ಆರೋಗ್ಯ ಕಾಪಾಡಿಕೊಳ್ಳಲು ಪ್ರಕೃತಿ ನಮಗೆ ನೀಡಿದ ಅನೇಕ ಅಂಶಗಳನ್ನು ನಾವಿಂದು ಮರೆತಿದ್ದೇವೆ. ಔಷಧ ರಹಿತವಾಗಿ ನಮ್ಮ ಜೀವನಶೈಲಿ ಮಾರ್ಪಡಿಸಿಕೊಳ್ಳುವ ಮೂಲಕ ಮರೆತ ಅಂಶಗಳನ್ನು ನಮಗೆ ಪ್ರಕೃತಿ ಚಿಕಿತ್ಸಾ ಪದ್ಧತಿ ನೆನಪಿಸುತ್ತಿದೆ. ಈ ಬಗ್ಗೆ ಸಮಾಜದಲ್ಲಿ ಹೆಚ್ಚಿನ ಜಾಗೃತಿ ಮೂಡಿದಾಗ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ ಎಂದು ಪ್ರತಿಪಾದಿಸಿದರು.

ಭಾರತೀಯ ಆಹಾರ- ವಿಹಾರ, ಆಚಾರ-ವಿಚಾರಗಳು ಮನೋದೈಹಿಕ ಆರೋಗ್ಯಕ್ಕೆ ಪೂರಕ. ಮನಸ್ಸು ಮತ್ತು ದೇಹದ ಸಮತೋಲನ ಕಾಪಾಡಿಕೊಳ್ಳುವುದೇ ಉತ್ತಮ ಆರೋಗ್ಯದ ಗುಟ್ಟು ಎಂದು ಆಧುನಿಕ ವಿಜ್ಞಾನವೂ ಒಪ್ಪಿಕೊಳ್ಳುತ್ತದೆ ಎಂದರು.

ಜನನಿ ಸಮೂಹ ಸಂಸ್ಥೆಗಳ ಸಾರ್ವಜನಿಕ ಸಂಪರ್ಕ ಮುಖ್ಯಸ್ಥ ಉದಯಶಂಕರ ಭಟ್, ಸ್ನಾತಕೋತ್ತರ ಕೇಂದ್ರದ ಸಹಾಯಕ ಕ್ರೀಡಾ ನಿರ್ದೇಶಕ ಶಿವರಾಮಪ್ಪ ರಾಗಿ, ಕ್ರೀಡಾ ಸಹಾಯಕ ಪಾಪಯ್ಯ ಕಣಿವೆಹಳ್ಳಿ ಉಪಸ್ಥಿತರಿದ್ದರು. ಡಾ.ಮಲ್ಲಯ್ಯ ಕಾರ್ಯಕ್ರಮ ನಿರೂಪಿಸಿದರು.

ಆತ್ಮ ಶುದ್ಧೀಕರಣಕ್ಕೆ ಭಗವಂತನನ್ನ ಸ್ಮರಿಸಿ

◆ **ಯಾದಗಿರಿ:** ಅಧಿಕ ಮಾಸ ದಿನಗಳಲ್ಲಿ ಮಾಡುವ ಪುಣ್ಯ ಕಾರ್ಯಗಳಿಂತ ಅಧೀಕ ಮಾಸದಲ್ಲಿ ಭಕ್ತಿಯಿಂದ ಮಾಡುವ ದೇವರ ಪೂಜಾ ಕಾರ್ಯಗಳಿಗೆ ಮತ್ತು ದಾನ ಧರ್ಮ ಕಾರ್ಯಕ್ಕೆ ಸಹಸ್ರಾರು ಪಟ್ಟು ಅಧಿಕ ಫಲ ದೊರೆಯುತ್ತದೆ ಎಂದು ಪಂಡಿತ್ ನರಸಿಂಹಾಚಾರ್ ಪುರಾಣಿಕ ಹೇಳಿದರು.

ನಗರದ ಶ್ರೀರಾಘವೇಂದ್ರ ಸ್ವಾಮಿಗಳ ಪರಿಮಳ ಮಂಟಪದಲ್ಲಿ ಒಂದು ವಾರಗಳ ಕಾಲ ಉತ್ತರಾದಿ ಮಠ ಹಾಗೂ ವಿಶ್ವಮಧ್ವ ಮಹಾಪರಿಷತ್ ಯಾದಗಿರಿ ಘಟಕದ ವತಿಯಿಂದ ನಡೆಯುತ್ತಿರುವ ಅಧಿಕ ಮಾಸದ ಧಾರ್ಮಿಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸನಾತನ ಧರ್ಮದ ಪಂಚಾಂಗ ವ್ಯವಸ್ಥೆಯಲ್ಲಿ ಪುರುಷೋತ್ತಮ ಮಾಸ ಅಥವಾ ಅಧೀಕ ಮಾಸವು ಅತ್ಯಂತ ವಿಶಿಷ್ಟ ಹಾಗೂ ಅದ್ಯಾತ್ಮಿಕವಾಗಿ ಮಹತ್ವಪೂರ್ಣವಾದ ಕಾಲಘಟ್ಟವಾಗಿದೆ. ಈ ಪ್ರಯುಕ್ತ ಪ್ರಾಪಂಚಿಕ ಸುಖಗಳಿಗಿಂತ ಹೆಚ್ಚಾಗಿ ಆತ್ಮದ ಶುದ್ಧೀಕರಣಕ್ಕೆ ಈ ತಿಂಗಳು ಮೀಸಲಾಗಿದ್ದು, ಪ್ರತಿಯೊಬ್ಬರು ಹಾರಿ ಸ್ಮರಣೆ, ಗ್ರಂಥ ಪಠಣ, ಹಾಗೂ ಶ್ರೀಮದ್ ಭಾಗವತದ ಕಥೆಗಳನ್ನು ಕೇಳುವುದು ಅಥವಾ ಓದುವುದು ಮಾಡಿದಲ್ಲಿ ಜನ್ಮಾಂತರದ ಪಾಪಗಳು ಕಳೆದುಹೋಗುತ್ತದೆ ಜೊತೆಗೆ ದಾನ ಧರ್ಮ ಮಾಡುವುದರಿಂದ ಆ ದೇವರು ಸದಾ ನಮ್ಮನ್ನು ಸಂರಕ್ಷಣೆ ಮಾಡುತ್ತಾನೆ ಕಾರಣ ಈ ಪುಣ್ಯಕಾಲದ ಮಾಸದಲ್ಲಿ ದೇವರ ನಾಮಸ್ಮರಣೆ ಮಾಡಬೇಕು ಎಂದು ಆಶೀರ್ವಚನ ನೀಡಿದರು.

> ಸೌರಮಾನ ಹಾಗೂ ಚಾಂದ್ರಮಾನ ಎರಡನ್ನೂ ಸಮನ್ವಯಗೊಳಿಸುವ ಉದ್ದೇಶದಿಂದ ಈ ಮಾಸವು ಪ್ರತಿ 32 ತಿಂಗಳಿಗೊಮ್ಮೆ ಅಂದರೆ ಪ್ರತಿ ಮೂರು ವರ್ಷಗಳಿಗೊಮ್ಮೆ ಬರುತ್ತದೆ.
> ■ ಪಂ.ನರಸಿಂಹಾಚಾರ್ ಪುರಾಣಿಕ್

ಉತ್ತರಾದಿ ಮಠದ ವ್ಯವಸ್ಥಾಪಕರಾದ ಪಂಡಿತ್ ರಾಘವೇಂದ್ರ ಜೋಶಿ ಅವರು ಈ ಎಲ್ಲ ಕಾರ್ಯಕ್ರಮಗಳಲ್ಲಿ ಉಪಸ್ಥಿತರಿದ್ದು, ಧಾರ್ಮಿಕ ಕಾರ್ಯಗಳಿಗೆ ಎಲ್ಲ ರೀತಿಯ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಜಿಲ್ಲೆಯ ವಿಪ್ರ ಬಾಂದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀಹರಿಯ ಅನುಗ್ರಹಕ್ಕೆ ಪಾತ್ರರಾದರು.



ಹೆಚ್ಚುವರಿ ಸಿಬ್ಬಂದಿ ನೇಮಕಕ್ಕೆ ಆಗ್ರಹ



◆ **ಕೆಂಭಾವಿ:** ಸುರಪುರ ತಾಲೂಕಿನ ಗೊಗಡಿಹಾಳ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ತಕ್ಷಣವೇ ಹೆಚ್ಚುವರಿ ಶಿಕ್ಷಕರನ್ನು ನೇಮಿಸಬೇಕು ಮತ್ತು ಮೂಲಸೌಕರ್ಯ ಕಲ್ಪಿಸಬೇಕೆಂದು ಆಗ್ರಹಿಸಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ (ಡಿಡಿಪಿಐ) ಕಚೇರಿ ಮುಂದೆ ಇಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ನೇತೃತ್ವದಲ್ಲಿ ಶಾಲಾ ಮಕ್ಕಳು ಹಾಗೂ ಪೋಷಕರು ಪ್ರತಿಭಟನೆ ನಡೆಸಿದರು.

ಗೊಗಡಿಹಾಳದ ಈ ಶಾಲೆಯಲ್ಲಿ 1 ರಿಂದ 5ನೇ ತರಗತಿಯವರೆಗೆ ಒಟ್ಟು 75ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಆದರೆ, ಇಡೀ ಶಾಲೆಗೆ ಕೇವಲ ಒಬ್ಬರೇ ಖಾಯಂ ಶಿಕ್ಷಕರಿದ್ದಾರೆ. ಇಲ್ಲಿನ ಏಕೈಕ ಶಿಕ್ಷಕರು ಐದೂ ತರಗತಿಗಳನ್ನು ಒಟ್ಟಿಗೆ ನಿಭಾಯಿಸುತ್ತಿರುವುದರಿಂದ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಬೋಧಕ ಸಿಬ್ಬಂದಿಯ ಕೊರತೆಯಷ್ಟೇ ಅಲ್ಲದೆ, ಶಾಲೆಗೆ ಕನಿಷ್ಠ ಮೂಲಸೌಕರ್ಯಗಳೂ ಇಲ್ಲ. ಶುದ್ಧ ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಸುಸಜ್ಜಿತ ಶೌಚಾಲಯ ಹಾಗೂ ಆಟದ ಮೈದಾನದ ಸೌಲಭ್ಯವಿಲ್ಲದೆ ಮಕ್ಕಳು ಪ್ರತಿದಿನ ಪರದಾಡುವಂತಾಗಿದೆ ಎಂದು ಪೋಷಕರು ದೂರಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಎಐಡಿಎಸ್‌ಒ ಜಿಲ್ಲಾ ಸಂಚಾಲಕರಾದ ಶಿಲ್ಪಾ ಬಿ.ಕೆ. ಮಾತನಾಡಿ, ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳನ್ನು ಮತ್ತು ಅಲ್ಲಿನ ವಿದ್ಯಾರ್ಥಿಗಳ ಭವಿಷ್ಯವನ್ನು ಉಳಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಅಧಿಕಾರಿಗಳು ಕೇವಲ ಭರವಸೆ ನೀಡದೆ, ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಗೊಗಡಿಹಾಳ ಗ್ರಾಮದ ಲಕ್ಷ್ಮೀಬಾಯಿ, ದೇವಮ್ಮ, ರೇಣುಕಾ, ಶಾಂತಮ್ಮ, ಶೋಭಾ, ಮಲ್ಲಮ್ಮ, ಯಲ್ಲಮ್ಮ, ಭೀಮಣ್ಣ, ರಾಯಪ್ಪ, ವೆಂಕಟೇಶ, ದೇವಿಂದ್ರ, ಸುಭಾಷ್ ಪೂಜಾರಿ, ಜಮಾಲಸಾಬ್, ಶರಣಗೌಡ, ಸೋಮಣಗೌಡ ಇತರರಿದ್ದರು.

ಕೊಟ್ಟೂರೇಶ್ವರ ಕಾಲೇಜಿನ ಎನ್‌ಸಿಸಿ ಕೆಡೆಟ್ ಅಗ್ನಿವೀರ್‌ಗೆ ಆಯ್ಕೆ

◆ **ಕೊಟ್ಟೂರು:** ಭಾರತ ಸರ್ಕಾರವು ಭಾರತೀಯ ಸೇನೆಗೆ ನೇಮಕ ಮಾಡುವ ಅಗ್ನಿವೀರ್ ಪರೀಕ್ಷೆಯಲ್ಲಿ ಕೊಟ್ಟೂರಿನ ಹೆಮ್ಮೆಯ ಮಹಾವಿದ್ಯಾಲಯದ ಕೊಟ್ಟೂರೇಶ್ವರ ಮಹಾವಿದ್ಯಾಲಯದ ಐದು ಜನ ಎನ್‌ಸಿಸಿ ಕೆಡೆಟ್‌ಗಳು ಆಯ್ಕೆಯಾಗುವ ಮೂಲಕ ಮಹಾವಿದ್ಯಾಲಯಕ್ಕೆ ಕೀರ್ತಿಯನ್ನು ತಂದಿದ್ದಾರೆ ಎಂದು ಕೊಟ್ಟೂರೇಶ್ವರ ಮಹಾವಿದ್ಯಾಲಯದ ಪದವಿ ಪ್ರಾಚಾರ್ಯ ಡಾ.ಎಂ. ರವಿಕುಮಾರ್ ಅವರು ಅಭಿನಂದನೆಗಳನ್ನು ತಿಳಿಸಿದ್ದಾರೆ.

2026-27ನೇ ಸಾಲಿನಲ್ಲಿ ನಮ್ಮ ಮಹಾವಿದ್ಯಾಲಯದ ಅನೇಕ ಎನ್‌ಸಿಸಿ ಕೆಡೆಟ್‌ಗಳು ಅಗ್ನಿವೀರ್ ಪರೀಕ್ಷೆಯಲ್ಲಿ ಭಾಗವಹಿಸಿದ್ದರು. ಅದರಲ್ಲಿ 5 ಎನ್‌ಸಿಸಿ ಕೆಡೆಟ್‌ಗಳು ಭಾರತೀಯ ಸೇನೆಯ ಅಗ್ನಿವೀರ್ ಹುದ್ದೆಗೆ ಆಯ್ಕೆಯಾಗಿರುವುದು ಮಹಾವಿದ್ಯಾಲಯಕ್ಕೆ ಹೆಮ್ಮೆಯ ವಿಷಯವಾಗಿದ್ದು, ನಮ್ಮ ಮಹಾವಿದ್ಯಾಲಯದ ಇತರೆ ಎನ್‌ಸಿಸಿ ಕೆಡೆಟ್‌ಗಳಿಗೆ ಪ್ರೇರಣೆಯಾಗಿದ್ದಾರೆ ಎಂದು ತಿಳಿಸಿದರು. ಆಯ್ಕೆಯಾದ ಎಲ್ಲ ವಿದ್ಯಾರ್ಥಿಗಳು ಭಾರತಮಾತೆಯ ಸೇವೆ ಸಲ್ಲಿಸಲು ಹೊರಟಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದ್ದು, ಭಾರತೀಯ ಸೇನೆಯಲ್ಲಿ



ಯಶಸ್ವಿಯಾಗಿ ಕಾರ್ಯನಿರ್ವಹಿಸಲಿ ಎಂದು ಹಾರೈಸಿದರು.

ಆಯ್ಕೆಯಾದ ಎಲ್ಲ ಕೆಡೆಟ್‌ಗಳಿಗೆ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ಸಿ.ಮೋಹನ ರೆಡ್ಡಿ, ಅವರು ಹೃತ್ಪೂರ್ವಕ ಅಭಿನಂದನೆಗಳು ಸಲ್ಲಿಸಿದ್ದಾರೆ. ಮಹಾವಿದ್ಯಾಲಯದ ಪಿಯುಸಿ ಪ್ರಾಚಾರ್ಯ ಪ್ರಶಾಂತ್‌ಕುಮಾರ್ ಎಂ.ಎಚ್., ಎನ್‌ಸಿಸಿ ಅಧಿಕಾರಿಯಾದ ಲೆಫ್ಟಿನೆಂಟ್ ಬಸವರಾಜ ಬಣಕಾರ ಹಾಗೂ ಮಹಾವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಆಯ್ಕೆಯಾದ ಕೆಡೆಟ್‌ಗಳಿಗೆ ಶುಭ ಹಾರೈಸಿ ಅವರ ಉಜ್ವಲ ಭವಿಷ್ಯಕ್ಕಾಗಿ ಶುಭಾಶಯಗಳನ್ನು ಕೋರಿದ್ದಾರೆ.

5 ತಿಂಗಳ ಬಾಕಿ ಇನ್ಸೆಂಟಿವ್ ಬಿಡುಗಡೆಗೆ ಒತ್ತಾಯಿಸಿ ಪ್ರತಿಭಟನೆ

◆ **ವಿಜಯನಗರ:** ಬಾಕಿ ಇರುವ 5 ತಿಂಗಳ ಇನ್ಸೆಂಟಿವ್ ಹಾಗೂ 1 ತಿಂಗಳ ನಿಶ್ಚಿತ ಗೌರವ ಧನವನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಒತ್ತಾಯಿಸಿ ಎಐಯುಟಿಯುಸಿ ಸಂಯೋಜಿತ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದಿಂದ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಸಂಘದ ಜಿಲ್ಲಾ ಗೌರವ ಅಧ್ಯಕ್ಷ ಡಾ. ಪ್ರಮೋದ್ ಪ್ರತಿಭಟನಾಕರರನ್ನು ಉದ್ದೇಶಿಸಿ ಮಾತನಾಡಿದ ಅವರು, ಒಂದು ತಿಂಗಳ ಹಿಂದೆಯೇ ಈ ಸಮಸ್ಯೆ ಪರಿಹರಿಸುವಂತೆ ಮನವಿ ನೀಡಲಾಗಿತ್ತು. ಪರಿಣಾಮ 20 ದಿನಗಳ ಹಿಂದೆಯೇ ಆಶಾಗಳ ಇನ್ಸೆಂಟಿವ್ ಗಾಗಿ 260 ಕೋಟಿ ರೂ. ಬಿಡುಗಡೆಯಾಗಿದೆ. ಇದರಲ್ಲಿ ವಿಜಯನಗರ ಜಿಲ್ಲೆಗೆ 5.6 ಕೋಟಿ ರೂ. ನಿಗದಿಯಾಗಿದ್ದರೂ, ತಾಂತ್ರಿಕ ಸಮಸ್ಯೆಯ ನೆಪವೊಡ್ಡಿ ಆಶಾ ಕಾರ್ಯಕರ್ತೆಯರು ದುಡಿದ ಹಣವನ್ನು ಕೈಗೆ ತಲುಪಿಸಿಲ್ಲ. ಈಗಾಗಲೇ ಶಾಲೆಗಳು ಆರಂಭವಾಗಿದ್ದು, ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಇಂತಹ ಸಂದರ್ಭದಲ್ಲಿ ಆಶಾಗಳ ಬದುಕಿನ ಜೊತೆ ಚೆಲ್ಲಾಟ ಆಡುತ್ತಿದೆ ಎಂದು ಖಂಡಿಸಿದರು.

ಕೂಡಲೇ ಗೌರವಧನ ಹಾಗೂ ಇನ್ಸೆಂಟಿವ್ ಹಣ ಬಿಡುಗಡೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾ ಕಾರ್ಯದರ್ಶಿ ಗೌರಮ್ಮ ಕೆ.ಎಸ್. ಮಾತನಾಡಿ, ಕೇಂದ್ರ ಸರ್ಕಾರ ಅನುಮೋದನೆ ನೀಡಿಲ್ಲ ಎಂಬ ಕಾರಣಕ್ಕಾಗಿ ಆಶಾ ಪೋರ್ಟಲ್ ನಲ್ಲಿ ವಾರದ ಲಸಿಕಾ ಕಾರ್ಯಕ್ರಮ ಸೇರಿದಂತೆ 9 ಪ್ರಮುಖ ಕಾಂಪೋನೆಂಟ್‌ಗಳನ್ನು ನಿಷ್ಕ್ರಿಯಗೊಳಿಸಿದೆ. ಈ ಚಟುವಟಿಕೆಗಳಿಗೆ ಇನ್ಸೆಂಟಿವ್ ಹಣ ನೀಡಲಾಗುವುದಿಲ್ಲ ಎಂದು ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇನ್ಸೆಟಿವ್ ನೀಡುವ ಆದೇಶ ಬರುವವರೆಗೂ ಆಶಾ ಕಾರ್ಯಕರ್ತೆಯರು ಈ 9 ಚಟುವಟಿಕೆಗಳನ್ನು ಸ್ಥಗಿತಗೊಳಿಸಬೇಕು ಎಂದು ಕರೆ ನೀಡಿದರು.

2 ದಿನಗಳಲ್ಲಿ ಹಣ ಬಿಡುಗಡೆಗೆ ಭರವಸೆ: ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಂಕರ್ ನಾಯಕ್ ಅವರು, ಇನ್ನು 2 ದಿನಗಳಲ್ಲಿ 2 ತಿಂಗಳ ಇನ್ಸೆಂಟಿವ್ ಹಣವನ್ನು ಬಿಡುಗಡೆ ಮಾಡಲಾಗುವುದು. ಇನ್ನುಳಿದ ಬಾಕಿ ಮೊತ್ತವನ್ನು 15-20 ದಿನಗಳ ಒಳಗಾಗಿ ಪಾವತಿಸಲಾಗುವುದು ಎಂದು ಭರವಸೆ ನೀಡಿದರು.

ಸಂಘಟನೆಯ ಪ್ರಮುಖರಾದ ಮಂಗಳಾ, ಮಹೇಶ್ವರಿ, ಚೆನ್ನಮ್ಮ, ನಾಗಮ್ಮ, ಸ್ಫೂರ್ತಿ, ಗೌರಿ, ರುಕ್ಮಿಣಿ, ಲಕ್ಷ್ಮೀ ದೇವಿ ಇತರರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸರ್ಕಾರಕ್ಕೆ ಮನವಿ

◆ **ಕೂಡ್ಲಿಗಿ:** ತಾಲೂಕಿನ ಪರಿಶಿಷ್ಟ ಜಾತಿಯ ಸಮುದಾಯದವರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಸೋಮವಾರದಂದು ತಹಶೀಲ್ದಾರ್ ಕಚೇರಿಗೆ ತೆರಳಿ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಸಮಾಜದ ಹಿಂದುಳಿದ ವರ್ಗದವರ ಕಲ್ಯಾಣಕ್ಕಾಗಿ ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.



ಭೂಮಿ ಹಕ್ಕುಸರ್ಕಾರಿ ಪರಂಪೋಕು ಜಮೀನುಗಳಲ್ಲಿ ದಶಕಗಳಿಂದ ಸಾಗುವಳಿ ಮಾಡುತ್ತಿರುವ ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ಕೂಡಲೇ ಜಮೀನಿನ ಪಟ್ಟಾ ನೀಡಬೇಕು. ಶಿಕ್ಷಣ ಸೌಲಭ್ಯವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ವಿದ್ಯಾರ್ಥಿ ವೇತನ ಹಾಗೂ ಅಗತ್ಯವಿರುವ ವಸತಿ ನಿಲಯ ಸೌಲಭ್ಯಗಳನ್ನು ಕಲ್ಪಿಸಬೇಕು ಸೇರಿದಂತೆ ಇತರ ಬೇಡಿಕೆಗಳನ್ನು ಈಡರಿಸಬೇಕು. ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ, ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ನಡೆಸಲಾಗುವುದು ಎಂದು ಜಿಲ್ಲಾ ಸಂಘಟನೆ ಸಂಚಾಲಕರಾದ ಡಿ.ಎಸ್. ದುರುಗೇಶ್ ಹಾಗೂ ಸಮುದಾಯದ ಮುಖಂಡರು ಎಚ್ಚರಿಸಿದ್ದಾರೆ.

ಪ್ರೊಫೆಸರ್ ಬಿ.ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಕೂಡ್ಲಿಗಿ ತಾಲ್ಲೂಕು ಘಟಕ ನೇತೃತ್ವದಲ್ಲಿ ತಾಲೂಕು ಆಡಳಿತದ ವಿರುದ್ಧ ತಾಲೂಕು ತಹಶೀಲ್ದಾರ್ ಕಚೇರಿ ಮುಂದೆ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಗಾಂಧೀಜಿ ಚಿತಾಭಸ್ಮದಿಂದ ಅಂಬೇಡ್ಕರ್ ಸರ್ಕಲ್. ವಾಲ್ಮೀಕಿ ಸರ್ಕಲ್ ಮುಖಾಂತರ ತಾಲೂಕು ತಹಶೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ಮಾಡಲಾಯಿತು. ಅಧ್ಯಕ್ಷತೆಯನ್ನು ಕೂಡ್ಲಿಗಿ ತಾಲ್ಲೂಕು ಸಂಚಾಲಕ ಬಡೇಲಡಕು ದುರುಗೇಶ್ ವಹಿಸಿಕೊಂಡಿದ್ದರು. ಜಿಲ್ಲಾ ಸಂಘಟನೆ ಸಂಚಾಲಕರಾದ ಡಿ.ಎಸ್.ದುರುಗೇಶ್ ಬಿ.ಟಿ.ಗುದ್ದಿ, ಕಂದಗಲ್ಲು ಪರಶುರಾಮ್, ತೆಗ್ಗಿನಕೆರೆ ಕೊಟ್ರೇಶ್ ಕೊಟ್ಟೂರು ತಾಲೂಕು ಸಂಘಟನಾ ಸಂಚಾಲಕ ಚೌಡಾಪುರ ಬಸವರಾಜ್, ಕಾನಾಮಡುಗು ಎನ್.ಫಕೀರಪ್ಪ, ಕೂಡ್ಲಿಗಿ ಮಹೇಶ್, ಹ.ಬೊಮ್ಮನಹಳ್ಳಿ ತಾಲೂಕು ಸಂಚಾಲಕ ಪರಶುರಾಮ್, ಜಿಲ್ಲಾ ಮುಖಂಡರು ಪ್ರಭಾಕರ್, ಕಲ್ಲಳ್ಳಿ ನಾಗರಾಜ್, ಅಲಗುರು ಗಣೇಶ್, ವಿರುಪಾಕ್ಷಿ, ನಾಗರಾಜು, ಮಲ್ಲೇಶ್ ಹೊಸಹಳ್ಳಿ ಇತರರಿದ್ದರು.

ಶಾಸಕ ಡಾ.ಕಾಶಪ್ಪನವರಗೆ ಸಚಿವ ಸ್ಥಾನ ನೀಡಲು ವಿಶೇಷ ಪೂಜೆ

◆ **ವಿಜಯನಗರ:** ಬಾಗಲಕೋಟೆ ಜಿಲ್ಲೆಯ ಹುನಗುಂದ ಕ್ಷೇತ್ರದ ಶಾಸಕರಾದ ಡಾ.ವಿಜಯಾನಂದ ಕಾಶಪ್ಪನವರ ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕೆಂದು ಆಗ್ರಹಿಸಿ, ಅವರ ಅಭಿಮಾನಿಗಳು ಜಿಲ್ಲೆಯ ಐತಿಹಾಸಿಕ ಕ್ಷೇತ್ರಗಳಾದ ಹಂಪಿ ಮತ್ತು ಕೊಟ್ಟೂರಿನಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ವಿಶ್ವವಿಖ್ಯಾತ ಹಂಪಿಯ ಶ್ರೀವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ಶಾಸಕರ ಹೆಸರಿನಲ್ಲಿ ವಿಶೇಷ ರುದ್ರಾಭಿಷೇಕ ಹಾಗೂ ಕೊಟ್ಟೂರಿನ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಅಭಿಷೇಕ ನೆರವೇರಿಸುವ ಮೂಲಕ ಅಭಿಮಾನಿಗಳು ಹರಕೆ ಹೊತ್ತಿದ್ದಾರೆ.

ಮಾತನಾಡಿದ ಬೆಂಬಲಿಗರು, ಡಾ.ವಿಜಯಾನಂದ ಕಾಶಪ್ಪನವರು ಕಾಂಗ್ರೆಸ್ ಪಕ್ಷದ ಪ್ರಮುಖ ಆಸ್ತಿಯಾಗಿದ್ದಾರೆ. ಮುಂಬರುವ ಸಚಿವ ಸಂಪುಟ ವಿಸ್ತರಣೆಯ ವೇಳೆ ಕಾಶಪ್ಪನವರ್ ಅವರಿಗೆ ಸಚಿವ ಸ್ಥಾನ ನೀಡಬೇಕು. ಇದರಿಂದ ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂದು ಒತ್ತಾಯಿಸಿದರು.



ಅಧಿಕ ಮಾಸ: ಉಡಿ ತುಂಬುವ ಕಾರ್ಯಕ್ರಮ

◆ **ಹಗರಿಬೊಮ್ಮನಹಳ್ಳಿ:** ಪಟ್ಟಣದ ಶ್ರೀನೀಲಕಂಠೇಶ್ವರ ದೇವಸ್ಥಾನದಲ್ಲಿ ಅಧಿಕ ಮಾಸದ ಅಂಗವಾಗಿ ಕುರುಹಿನ ಶೆಟ್ಟಿ ಸಮಾಜದ ಮಹಿಳೆಯರಿಂದ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.



ಸೋಮವಾರ ಪಟ್ಟಣದ ಹಳೆ ಊರಿನ ಶ್ರೀನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಉಡಿ ತುಂಬುವ ಕಾರ್ಯಕ್ರಮದ ಅಂಗವಾಗಿ ಶ್ರೀನೀಲಕಂಠೇಶ್ವರ ಸ್ವಾಮಿಗೆ ವಿಶೇಷ ಪೂಜೆ ಮಹಾ ಮಂಗಳಾರತಿ ಗಂಟೆನಾದ ಮೊಳಗಿದವು. ಈ ವೇಳೆ ನೆರೆದಿದ್ದ ನೂರಾರು ಮಹಿಳೆಯರಿಗೆ ಅರಿಶಿಣ ಕುಂಕುಮ ಹಸಿರು ಬಳೆ ಹೂವು ಹಣ್ಣು ನೀಡುವ ಮೂಲಕ ಉಡಿ ತುಂಬಲಾಯಿತು.

ಕುರುಹಿನ ಶೆಟ್ಟಿ ಸಮಾಜದ ಶಾರದಮ್ಮ ಭೀಮಪ್ಪ ಕಲ್ಗೋಡೆ, ಸಮಗಂಡಿ ಜಯಶ್ರೀ ನಾಗರಾಜ ಮಾತನಾಡಿ, ಈ ನಾಡಿನ ರೈತರಿಗೆ ಮಳೆ ಬೆಳೆ ಚೆನ್ನಾಗಿ ಆಗಲಿ ಈ ಊರಿನ ಸಮಸ್ತ ನಾಗರಿಕರಿಗೂ ಸರ್ವ ರೀತಿಯಂದಲೂ ಒಳಿತಾಗಲಿ ಈ ಅಧಿಕ ಮಾಸದಿಂದ ಎಲ್ಲಾ ಜನರಿಗೂ ಅಧಿಕ ಸುಖ ಶಾಂತಿ ಸಮೃದ್ಧಿ ಆರೋಗ್ಯಕರ ಮತ್ತು ನೆಮ್ಮದಿ ಜೀವನವನ್ನು ಕರುಣಿಸಲಿ ಎಂದು ಶ್ರೀನೀಲಕಂಠೇಶ್ವರ ಸ್ವಾಮಿಯನ್ನು ಪ್ರಾರ್ಥಿಸುತ್ತಾ ಅಧಿಕಮಾಸದಲ್ಲಿ ಮುತ್ತೈದಾರಿಗೆ ಉಡಿ ತುಂಬುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ನೀಲಕಂಠೇಶ್ವರ ಸ್ವಾಮಿಯು ಎಲ್ಲಾರಿಗೂ ಒಳಿತು ಮಾಡಲಿ ಎಂದರು.

ಕುರುವಿನ ಶೆಟ್ಟಿ ಸಮಾಜದ ಮುಖಂಡರಾದ ಸೋಡಾ ನಿಂಬಣ್ಣ, ಮಾಲವಿ ಮಲ್ಲಣ್ಣ, ಕೆ.ತೋಟಪ್ಪ ಹಿರಾಳು ವಾಸಣ್ಣ, ಮಾಚಾಲಿ ನಾರಾಯಣಪ್ಪ ಹಿರಾಳು ಶರಣಪ್ಪ, ಫೋಟೋಗ್ರಾಫರ್ ವಿಶ್ವನಾಥ್, ದೇವಸ್ಥಾನದ ಅರ್ಚಕ ಸಂಗಪ್ಪ, ಆಡೂರ್ ಶ್ಯಾಮಲಾ, ಸುಮ, ವಿಜಯಲಕ್ಷ್ಮಿ, ನಾಗಮ್ಮ, ಪಾರ್ವತಿ, ಜ್ಯೋತಿ, ನಿರ್ಮಲ ಸೋಡಾ ಗೀತಾ ಸೋಡಾ, ಅಕ್ಕಂಡಿ ಕವಿತಾ ಬಸವರಾಜ್ ಸೇರಿದಂತೆ ಕುರುವಿನ ಶೆಟ್ಟಿ ಸಮಾಜದ ಹಾಗೂ ಬೇರೆ ಬೇರೆ ಸಮಾಜದ ಮಹಿಳೆಯರು ಉಡಿ ತುಂಬುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ನೆರೆದಿದ್ದ ನೂರಾರು ಮಹಿಳೆಯರಿಗೆ ಕೇಸರಿಬಾತ್ ಉಪ್ಪಿಟ್ಟು ಪ್ರಸಾದ ವಿತರಿಸಲಾಯಿತು.